ರಂಜನೆ ಬೋಧನೆ ಪ್ರಬೋಧನೆ

ಲಂಕೇಶ್

ಜೂನ್ 27, 2012 ಪುಟ 20 ರೂ. 14/-




ಏಣಗಿ ಬಗ್ಗೆ ಜಂಬೆ




ಕಳ್ಳನ ವಿರುದ್ಧ ಸುಳ್ಳನ ಕದನ

ಆರ್ಟ್ ಆಫ್ ಅರೆಸ್ಟ್!



ಶಾಸಕ ಶ್ರೀನಿವಾಸನ

200 ಕೋಟಿ ಭ್ರಷ್ಟ ಸಾಮ್ರಾಜ್ಯ



ಚಿತ್ರದುರ್ಗ ಮಂಜುನಾಥನ

'ಕೈ'ವಾಡ




ಉಗ್ರ ಸಿದ್ದಿಕಿಯ

ಕೊಲೆ ರಹಸ್ಯ



ಕಿಲ್ಲರ್ ಲೇಡಿ ಮತ್ತು ಕಿಲಾಡಿ ಹುಡುಗಿ



ಹಿಂದೂತ್ವ ಮತ್ತು ದಲಿತರು

ಚಾರ್ವಾಕ



• ಶಿವಸುಂದ

ಇಂದು ಭಾರತದ ಜನತೆ ಎದುರಿಸುತ್ತಿರುವ ಅತಿದೊಡ್ಡ ಆಂತರಿಕ ಶತ್ರು "ಹಿಂದೂತ್ವ". ಹಿಂದೂತ್ವವೆಂದರೆ ಹಿಂದೂ ಧರ್ಮವೂ ಅಲ್ಲ, ಬಹುಸಂಖ್ಯಾತ ಹಿಂದೂಗಳು "ಹಿಂದೂತ್ವವಾದಿಗಳೂ" ಅಲ್ಲ. ಹಿಂದೂತ್ವವೆಂದರೆ ಜನರನ್ನು ಧರ್ಮದ ಆಧಾರದಲ್ಲಿ ಒಡೆದು ಆಳುವ, ಮೇಲು-ಕೀಳು ಎಂಬ ಬ್ರಾಹ್ಮಣೀಯ ಶ್ರೇಣೀಕರಣವನ್ನು ಶಾಶ್ವತಗೊಳಿಸುವ ರಾಜಕಾರಣ. ಪ್ರಜಾತಾಂತ್ರಿಕತೆ ಮತ್ತು ಸಮಾನತೆಯ ಮೌಲ್ಯಗಳು ಸರ್ವಮಾನ್ಯವಾಗುತ್ತಿರುವ ಈ ಆಧುನಿಕ ಯುಗದಲ್ಲಿ ದಲಿತರ ಮತ್ತು ಶೂದ್ರರ ದಾಸ್ಯವನ್ನು ಪುನರುಜ್ಜೀವನಗೊಳಿಸುವ ಮತ್ತು ಅದನ್ನು ದಾಸ್ಯಕ್ಕೊಳಗಾದವರೇ ಒಪ್ಪಿಕೊಳ್ಳುವಂತೆ ಮಾಡುವ ಅತಿಕ್ರೂರ ರಾಜಕೀಯ ಆಕ್ರಮಣವೇ "ಹಿಂದೂತ್ವ". ಅದಕ್ಕೆ ಸಾಂಸ್ಕೃತಿಕ ರಾಜಕಾರಣದ ಮುಸುಕಿದ್ದರೂ ಹಿಂದೂತ್ವವೆಂಬುದು ಆಧುನಿಕ ಯುಗದಲ್ಲಿ ಬ್ರಾಹ್ಮಣೀಯ ಮೌಲ್ಯಗಳನ್ನು - ಅಂದರೆ ಸಾಮಾಜಿಕ ತಾರತಮ್ಯ, ಆರ್ಥಿಕ ಶೋಷಣೆ ಮತ್ತು ಸಾಂಸ್ಕೃತಿಕ ಗುಲಾಮಗಿರಿಯನ್ನು - ಮರುಸ್ಥಾಪಿಸ ಬಯಸುವ ಫ್ಯಾಸಿಸ್ಟ್ ರಾಜಕಾರಣವೇ ಆಗಿದೆ. ಹಿಂದೂತ್ವವಾದಿಗಳು ಮುಸ್ಲಿಮರ ಮತ್ತು ಕ್ರಿಶ್ಚಿಯನ್ನರ ಭೌತಿಕ ಅಸ್ತಿತ್ವದ ಮೇಲೆ ದಾಳಿ ನಡೆಸಿ ಅವರನ್ನು ನಿರ್ನಾಮ ಮಾಡುವ ಪ್ರಯತ್ನವನ್ನು ಸಾವರ್ಕರ್ ಕಾಲದಿಂದಲೂ ಬಹಿರಂಗ ವಾಗಿಯೇ ಮಾಡಿಕೊಂಡು ಬರುತ್ತಿದ್ದಾರೆ. ಹಿಂದೂತ್ವವಾದಿಗಳ ಈ ಅಜೆಂಡಾವನ್ನು ಅರ್ಥಮಾಡಿಕೊಳ್ಳುವುದು ಸುಲಭ. ಆದರೆ ಅದೇ ಸಮಯದಲ್ಲಿ ಅದು ದಲಿತ ಮತ್ತು ಅತಿಶೂದ್ರರ ಸಾಮಾಜಿಕ, ರಾಜಕೀಯ ಮತ್ತು ಸಾಂಸ್ಕೃತಿಕ ಅಸ್ತಿತ್ವಗಳ ಮೇಲೆ ನಡೆಸುತ್ತಿರುವ ದಾಳಿಯನ್ನು ಅರ್ಥಮಾಡಿಕೊಳ್ಳುವುದು ಅಷ್ಟು ಸುಲಭವಲ್ಲ. ಆದ್ದರಿಂದಲೇ ಈ ಹಿಂದೂತ್ವ ಮುಸ್ಲಿಮರಿಗೆ ಹಾಗೂ ಕ್ರಿಶ್ಚಿಯನ್ನರಿಗೆ ಎಷ್ಟು ದೊಡ್ಡ ಶತ್ರುವೋ ಅಷ್ಟೇ ಮಟ್ಟಿಗೆ ಎಲ್ಲಾ ದಲಿತ ಹಾಗೂ ಶೂದ್ರ ಜನಸಾಮಾನ್ಯರಿಗೂ ದೊಡ್ಡ ಶತ್ರುವಾಗಿದೆ. ಹೀಗಾಗಿಯೇ ಇದು ಭಾರತದ ಅತಿದೊಡ್ಡ ಆಂತರಿಕ ಶತ್ರುವಾಗಿದೆ.

ಭಾರತದ ಈ ಆಂತರಿಕ ಶತ್ರುವಾದ 'ಹಿಂದೂತ್ವ'ಕ್ಕೆ ಭಾರತದ ಜನತೆ ಎದುರಿಸುತ್ತಿರುವ ಅತಿದೊಡ್ಡ ಬಾಹ್ಯ ಶತ್ರುವಾಗಿರುವ ಅಮೆರಿಕ ನೇತೃತ್ವದ ನವಸಾಹತುವಾದಿ ಶಕ್ತಿಗಳೊಂದಿಗೆ ಮತ್ತು ಅವರು ವಿಶ್ವದ ಜನತೆಯ ಮೇಲೆ ಹೇರಿರುವ ಜಾಗತೀಕರಣವೆಂಬ ಆಕ್ರಮಣದ ಜೊತೆ ಸ್ನೇಹಸಂಬಂಧವಿದೆ. ಅದು ಆರ್ಥಿಕ ದಾಸ್ಯವನ್ನು ಬಣ್ಣದ ಮಾತುಗಳಿಂದ ಹೇರುತ್ತಿದ್ದರೆ 'ಹಿಂದೂತ್ವ'ವು ಅದನ್ನು ಮರುಮಾತಿಲ್ಲದೆ ಒಪ್ಪಿಕೊಳ್ಳಲು ಬೇಕಾದ ದಾಸ್ಯದ ಮನಸ್ಥಿತಿಯನ್ನು ಪುನರುಜ್ಜೀವಗೊಳಿಸುತ್ತಿದೆ. ಈ ನವಸಾಹತುವಾದಿ ಶಕ್ತಿಗಳು ಪ್ರಾಣಿಲೋಕದಲ್ಲಿ ಸಂಭವಿಸುವಂತೆ ಇಂದಿನ ಸ್ಪರ್ಧಾತ್ಮಕ ಜಗತ್ತಿನಲ್ಲೂ ಬಲವಿದ್ದವನು ಮಾತ್ರ ಬದುಕಬೇಕೆಂಬ **Social Darwinism** ಸಿದ್ಧಾಂತವನ್ನು ಎತ್ತಿಹಿಡಿಯುತ್ತಿದ್ದರೆ, ಹಿಂದೂತ್ವವಾದಿ ಶಕ್ತಿಗಳು "ಸಾಮಾಜಿಕ ತಾರತಮ್ಯ ಸಹಜ ಮತ್ತು ಅನಿವಾರ್ಯ" ಎಂಬ ಮನುವಾದಿ ಸಿದ್ಧಾಂತವನ್ನು ಎತ್ತಿ ಹಿಡಿದು ಶೋಷಣೆಗೆ ಮತ್ತು ದಮನಕ್ಕೆ ಸಮರ್ಥನೆ ಒದಗಿಸುತ್ತದೆ. ಆದ್ದರಿಂದಲೇ ಪ್ರಖ್ಯಾತ ಚಿಂತಕ ಪ್ರೊ. ಕೆ. ಎನ್. ಪಣಿಕ್ಕರ್‌ರವರು "ಹಿಂದೂತ್ವದ ಷಡ್ಯಂತ್ರಕ್ಕೆ ದಲಿತರು ಸುಲಭವಾಗಿ ಬಲಿಯಾಗಲು ಇರುವ ಇತರ ಕಾರಣಗಳಲ್ಲಿ ಜಾಗತೀಕರಣವೂ ಒಂದು" ಎಂದು ಅಭಿಪ್ರಾಯ ಪಡುತ್ತಾರೆ. ಹೀಗಾಗಿ ಪ್ರಾಯಶಃ ಆಧುನಿಕ ಜಗತ್ತಿನಲ್ಲಿ ಹುಟ್ಟಿಕೊಂಡ ಅತ್ಯಂತ ಪ್ರತಿಗಾಮಿ, ಅತ್ಯಂತ ಬರ್ಬರ ರಾಜಕೀಯ ಸಿದ್ಧಾಂತವಾದ 'ಫ್ಯಾಸಿಸಂ' ಎಂಬ ಪರಿಕಲ್ಪನೆಯ ಭಾರತೀಕರಣವೇ 'ಹಿಂದೂತ್ವ' ಎಂದರೆ ತಪ್ಪಾಗಲಾರದು.

ಫ್ಯಾಸಿಸಂ ಎಂದರೆ ಕೇವಲ ಕ್ರೌರ್ಯವಲ್ಲ, ಕೇವಲ ಬರ್ಬರತೆಯಲ್ಲ. ಫ್ಯಾಸಿಸಂನ ಅಪಾಯವಿರುವುದು ಅದು ತನ್ನ ಈ ಎಲ್ಲಾ ಬರ್ಬರ ಕಾರ್ಯಾಚರಣೆಗೆ ಸಾಮಾಜಿಕ ಸಮ್ಮತಿಯನ್ನು ರೂಢಿಸಿಕೊಂಡಿರುವುದರಲ್ಲಿ ಮತ್ತು ಆ ಪ್ರಕ್ರಿಯೆಯಲ್ಲಿ ಇಡೀ ಸಮಾಜವನ್ನು ಬರ್ಬರಗೊಳಿಸುವುದರಲ್ಲಿ. ಗುಜರಾತ್‌ನಲ್ಲಿ ನಡೆದ ಹತ್ಯಾಕಾಂಡದ ಪ್ರಮಾಣ ದೊಡ್ಡದಾಗಿದ್ದರೂ, ದಲಿತರ ಮೇಲೆ ಮತ್ತು ಮಹಿಳೆಯರ ಮೇಲೆ ದೇಶದ ವಿವಿಧ ಭಾಗಗಳಲ್ಲಿ ಸಣ್ಣ ಪ್ರಮಾಣದಲ್ಲಿ ಈ ಬಗೆಯ ಹತ್ಯಾಕಾಂಡಗಳು ಮತ್ತು ದೌರ್ಜನ್ಯಗಳು ನಡೆದುಕೊಂಡೇ ಬರುತ್ತಿದೆ. ಆದರೆ ಗುಜರಾತ್ ಹತ್ಯಾಕಾಂಡಕ್ಕೂ ಮತ್ತು ಇತರ ಪ್ರಕರಣಗಳಿಗೂ ಇರುವ ಪ್ರಮುಖ ವ್ಯತ್ಯಾಸವೆಂದರೆ ಗುಜರಾತ್ ಹತ್ಯಾಕಾಂಡದಲ್ಲಿ ಪ್ರತ್ಯಕ್ಷವಾಗಿಯೂ ಸಾವಿರಾರು ಜನ- ಅದರಲ್ಲಿ ದಲಿತರು, ಆದಿವಾಸಿಗಳು ಮತ್ತು ಮಹಿಳೆಯರೂ ಇದ್ದರು! - ಭಾಗವಹಿಸಿದರೆ ಅದನ್ನು ಪರೋಕ್ಷವಾಗಿ ಸಮರ್ಥಿಸಿಕೊಂಡಿದ್ದು ಕೋಟ್ಯಾಂತರ ಮಂದಿ. ಹೀಗಾಗಿಯೇ ಮನುಕುಲವೇ ತಲೆತಗ್ಗಿಸುವಂತ ಹತ್ಯಾಕಾಂಡ ನಡೆಸಿದ ನಂತರವೂ ನರೇಂದ್ರ ಮೋದಿ ಹಿಂದಿಗಿಂತಲೂ ಹೆಚ್ಚಿನ ಜನಬೆಂಬಲದೊಂದಿಗೆ ಅಧಿಕಾರಕ್ಕೆ ಬರಲು ಸಾಧ್ಯವಾಯಿತು. ಇದು ಮೋದಿಯ ರಾಜಕಾರಣ ಇಡೀ ಸಮಾಜದ ನ್ಯಾಯ ಪ್ರಜ್ಞೆಯನ್ನು ಅಳಿಸಿಹಾಕಿ ಸಮಾಜವನ್ನು ಬರ್ಬರಗೊಳಿಸಿರುವುದನ್ನು ಸೂಚಿಸುತ್ತದೆ.

ಫ್ಯಾಸಿಸಂನ ಅತಿದೊಡ್ಡ ಅಪಾಯವಿದು. ಇತಿಹಾಸದಲ್ಲಿ ಇಂದಿರಾ ಗಾಂಧಿಯ ಎಮರ್ಜೆನ್ಸಿ ಕಾಲದ ನಿರಂಕುಶ ಆಡಳಿತ, ಪೊಲೀಸ್ ದೌರ್ಜನ್ಯ, ದೆಹಲಿಯ ಸಿಖ್ ಹತ್ಯಾಕಾಂಡ ಅಥವಾ ಕಾಶ್ಮೀರ ಹಾಗೂ ಈಶಾನ್ಯ ಭಾರತದಲ್ಲಿ ನಡೆಯುತ್ತಿರುವ ಸಶಸ್ತ್ರ ಪಡೆಗಳ ದೌರ್ಜನ್ಯ ಕೆಲವು ಮಾನದಂಡಗಳಲ್ಲಿ ಗುಜರಾತ್ ಅನ್ನು ಮೀರಿಸಬಹುದು. ಆದರೆ ಅವೆಲ್ಲದರ ಬಗ್ಗೆ ಸರ್ಕಾರ ಏನೇ ಹೇಳಿದರು ಸಮಾಜದಲ್ಲಿ ಅದರ ಬಗ್ಗೆ ಖಂಡನೆಯಿತ್ತು. ಆದರೆ ಗುಜರಾತ್ ಹತ್ಯಾಕಾಂಡ ಸಮಾಜವನ್ನೇ ಛಿದ್ರಗೊಳಿಸಿದೆ. ಸಮಾಜದಲ್ಲಿ ಪರಸ್ಪರರಲ್ಲಿ ಇದ್ದ ವಿಶ್ವಾಸವನ್ನು ವಿಧ್ವಂಸಗೊಳಿಸಿ ಸಮಾಜವನ್ನು ಮತಧರ್ಮಗಳ ಆಧಾರದಲ್ಲಿ ಧ್ರುವೀಕರಣಗೊಳಿಸಿದೆ. ಹೀಗಾಗಿಯೇ ಹಿಂದೂತ್ವದ ತ್ರಿಶೂಲದಿಂದ ಮುಸ್ಲಿಮರು ಅಥವಾ ಕ್ರಿಶ್ಚಿಯನ್ನರು ಮಾತ್ರ ಸಾಯುತ್ತಿಲ್ಲ, ಬದಲಿಗೆ ಸಮಾಜದ ನ್ಯಾಯಪ್ರಜ್ಞೆ ಮತ್ತು ನೈತಿಕ ಮೌಲ್ಯಗಳೂ ಸಾಯುತ್ತವೆ. ಒಂದು ಸಮಾಜದಲ್ಲಿ ನ್ಯಾಯಪ್ರಜ್ಞೆ ಸತ್ತು ಅನ್ಯಾಯವೇ ರಾಜ್ಯಭಾರ ಮಾಡುತ್ತಿದ್ದರೆ ಬಲಿಯಾಗುವುದು ಕೇವಲ ಅಲ್ಪಸಂಖ್ಯಾತರು ಮಾತ್ರವಲ್ಲ, ಸಾಮಾಜಿಕ ನ್ಯಾಯಕ್ಕಾಗಿ ಹಂಬಲಿಸುತ್ತಿರುವ ಎಲ್ಲಾ ದುರ್ಬಲ, ಶೋಷಿತ ಮತ್ತು ದಮನಿತ ವರ್ಗಗಳು ಈ ಅನ್ಯಾಯದ ರಾಜ್ಯಭಾರದಲ್ಲಿ ಬಲಿಯಾಗುತ್ತಲೇ ಹೋಗುತ್ತವೆ. ಈವರೆಗೆ ಹೋರಾಟದಿಂದ ಗಳಿಸಿಕೊಂಡಿದ್ದೆಲ್ಲವನ್ನೂ ಕಳೆದುಕೊಳ್ಳುತ್ತಾ ತಮಗೇ ಗೊತ್ತಿಲ್ಲದಂತೆ ಗುಲಾಮಗಿರಿಯತ್ತ ಸರಿಯುತ್ತ ಹೋಗುತ್ತವೆ.

ಆದ್ದರಿಂದಲೇ ಹಿಂದೂತ್ವ ರಾಜಕಾರಣ ಉಚ್ಛ್ರಾಯದೆಸೆಗೆ ಹೋದ ಕಾಲಘಟ್ಟದಲ್ಲೇ ಜಾಗತೀಕರಣ, ಉದಾರೀಕರಣದ ಆಕ್ರಮಣಗಳು ಜನಸಾಮಾನ್ಯರ ಮೇಲೆ ನಡೆಯುತ್ತಲಿದೆ. ಸ್ವಾತಂತ್ರ್ಯ ಹೋರಾಟದ ಕಾಲದಿಂದಲೂ ಈ ದೇಶದ ಶೋಷಿತ ಜನತೆ ಪಡೆದುಕೊಂಡಿದ್ದ ಆಹಾರ, ಶಿಕ್ಷಣ, ಆರೋಗ್ಯ, ವಸತಿಯಂತ ಎಲ್ಲಾ ಹಕ್ಕುಗಳನ್ನು ಮತ್ತು ಸೌಲಭ್ಯಗಳನ್ನು ಕಳೆದುಕೊಳ್ಳುತ್ತಾ ಬರುತ್ತಿದ್ದಾರೆ. ಎಲ್ಲಕ್ಕಿಂತ ಹೆಚ್ಚಾಗಿ ತಮ್ಮ ಮೇಲೆ ಆಗುತ್ತಿರುವ ಈ ಅನ್ಯಾಯವನ್ನು ಅರ್ಥಮಾಡಿಕೊಳ್ಳುವ, ಅದನ್ನು ತಮ್ಮ ಮೇಲೆ ಹೇರುತ್ತಿರುವ ಶಕ್ತಿಗಳನ್ನು ಗುರುತಿಸುವ ಹಾಗೂ ಅದರ ವಿರುದ್ಧ ಹೋರಾಡುವ ಪ್ರಜ್ಞೆಯನ್ನೇ ಇಂದು ಜಾಗತೀಕರಣ ಮತ್ತು ಹಿಂದೂತ್ವವಾದಿ ಶಕ್ತಿಗಳು ಭ್ರಷ್ಟಗೊಳಿಸಿಬಿಟ್ಟಿದೆ. ಇದು ಈ ಭಾರತೀಯ ಫ್ಯಾಸಿಸಂ ಭಾರತದ ಜನತೆಗೆ ಮತ್ತು ಪ್ರಜಾತಂತ್ರಕ್ಕೆ ಒಡ್ಡಿರುವ ಅತಿದೊಡ್ಡ ಅಪಾಯ.

ಈ ಅಪಾಯವು ಹಿಂದೂತ್ವದ ಪ್ರಭಾವಕ್ಕೆ ದಲಿತರು ಹೆಚ್ಚೆಚ್ಚು ಒಳಗಾಗುತ್ತಿರುವುದರಲ್ಲಿ ಎದ್ದುಕಾಣುತ್ತಿದೆ. ಅನ್ಯಾ[ಯ,] ಸಾಮಾಜಿಕ ತಾರತಮ್ಯ, ಶೋಷಣೆ ಮತ್ತು ದಮನಗಳ[ನ್ನು] ಮುಂದುವರೆಸಲು ಹಿಂದೂತ್ವವು ನ್ಯಾಯ, ಸಾಮಾ[ಜಿಕ] ನ್ಯಾಯ, ಸಮಾನತೆ ಇನ್ನಿತರ ಮೌಲ್ಯಗಳ ವಿರು[ದ್ಧ] ನಡೆಸುತ್ತಿರುವ ಯುದ್ಧದಲ್ಲಿ ಹಿಂದೂತ್ವದ ವಿರುದ್ಧ ಸಮಾ[...] ನಾಯಕತ್ವ ಕೊಟ್ಟು ಯಾವ ದಲಿತ ಶಕ್ತಿಗಳು ಈ ನ್ಯಾ[...] ಸಂಗ್ರಾಮದ ದಂಡನಾಯಕರಾಗಬೇಕಿತ್ತೋ ಅಂಥಾ ಶಕ್ತಿ[...] ಇಂದು ಹಿಂದೂತ್ವದ ಪಡೆಗಳ ಕಾಲಾಳುಗಳಾಗಿರುವು[...] ಸಂದರ್ಭದ ಗಂಭೀರತೆಯನ್ನೂ, ಅಪಾಯವನ[್ನೂ] ವಿಪರ್ಯಾಸವನ್ನೂ ಸೂಚಿಸುತ್ತಿದೆ. ಗುಜರಾತಿನಲ್ಲಿ ಹಾ[...] ಇತ್ತೀಚೆಗೆ ದೇಶದ ಇತರೆಡೆಗಳಲ್ಲಿ ಮುಸ್ಲಿಮರ ಮೆ[...] ಹಿಂದೂತ್ವವಾದಿಗಳು ನಡೆಸುತ್ತಿರುವ ಹಲವು ಹತ್ಯಾಕಾ[ಂಡ]ಗಳಲ್ಲಿ ದಲಿತರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸುತ್ತಿದ್ದ[...] ಬಹಳಷ್ಟು ಕಡೆ ತಾವೇ ನೇರವಾಗಿ ಮುಸ್ಲಿಂ ವಿರೋ[ಧಿ] ಗಲಭೆಗಳಲ್ಲಿ ಭಾಗವಹಿಸದಿದ್ದರೂ ಪರೋಕ್ಷವಾಗಿ ಮುಸ್ಲಿ[ಮರ] ಮೇಲಿನ ದಾಳಿಯ ಹಿಂದೂತ್ವದ ರಾಜಕಾರಣ[ಕ್ಕೆ] ಸಮರ್ಥನೆಯನ್ನು ಭಿಡೆಯಿಲ್ಲದೆ ಮಾಡುತ್ತಿದ್ದಾರೆ. ಕೆಲ[ವು] ಕಡೆ ಹಿಂದೂತ್ವವಾದಿಗಳ ಬರ್ಬರ ಆಕ್ರಮಣದ [...] ದಲಿತಶಕ್ತಿಗಳು ಮೌನವಾಗುಳಿದು ಹಿಂದೂತ್ವವಾದಿ[...] ದೌರ್ಜನ್ಯಕ್ಕೆ ಮೌನ ಸಮ್ಮತಿ ವ್ಯಕ್ತಪಡಿಸುತ್ತಿದ್ದರೆ 200[...] ಚುನಾವಣೆಯಲ್ಲಿ ಉತ್ತರ ಪ್ರದೇಶದ ಮುಖ್ಯಮಂತ್ರಿ ದ[...] ನಾಯಕಿ ಮಾಯಾವತಿ ಮಾಡಿದಂತೆ ಬಹಿರಂಗವಾಗಿ[...] ನರೇಂದ್ರ ಮೋದಿ ನಿರಪರಾಧಿ ಎಂಬ ಪ್ರಚಾರಕ್ಕೆ ತ[...] ಧ್ವನಿಯನ್ನೂ ಸೇರಿಸುತ್ತಿದ್ದಾರೆ. ಮಹಾರಾಷ್ಟ್ರ[...] ಹಿಂದೂತ್ವವಾದಿಗಳ ಜೂನಿಯರ್ ಪಾರ್ಟ್‌ನರ್ [...] ಶಿವಸೇನೆಯ ಜೊತೆ ಭೀಮಶಕ್ತಿ+ಶಿವಶಕ್ತಿ=ರಾಷ್ಟ್ರ[...] ಎಂಬ ಸಮೀಕರಣಕ್ಕೂ ಮುಂದಾಗಿದ್ದಾರೆ.

ಕರ್ನಾಟಕ ಭಿನ್ನವಾಗಿಲ್ಲ

ಕರ್ನಾಟಕದಲ್ಲಿ ದಲಿತ ರಾಜಕಾರಣ ಈ ಪ್ರಮಾಣ[...] ಹಿಂದೂತ್ವದ ಸೈದ್ಧಾಂತಿಕ ಪ್ರಭಾವಕ್ಕೆ ಒಳಗಾ[...] ಎಂಬುದು ನಿಜವಾದರೂ ಆರೆಸ್ಸೆಸ್‌ನ ಶಾಖೆಗಳು [...] ವಿಶೇಷವಾಗಿ ಸ್ಲಂಗಳಲ್ಲೇ ಹೆಚ್ಚಿನ ಸಂಖ್ಯೆಯ[ಲ್ಲಿ] ಪ್ರಾರಂಭವಾಗುತ್ತಿವೆ. ಒಟ್ಟಾರೆ ಶೋಷಣೆಯ ವಿರು[ದ್ಧ] ಹೋರಾಟವೇ ಕಾವು ಕಳೆದುಕೊಳ್ಳುತ್ತಿರುವ ಇಂ[ದಿನ] ಸಂದರ್ಭದಲ್ಲಿ ದಲಿತ ಪ್ರಜ್ಞೆಯ ಹರಿತ ಕಡಿಮೆ ಆಗು[...] ಹಿಂದೊಮ್ಮೆ ನ್ಯಾಯಪ್ರಜ್ಞೆ ಮತ್ತು ದಲಿತಪ್ರಜ್ಞೆ[ಯ] ಹರಿಕಾರರಾಗಿದ್ದ ಮೊದಲ ತಲೆಮಾರಿನ ದಲಿತ ಮಧ್ಯಮ ವರ್ಗ ಬದುಕಿನ ಅನಿವಾರ್ಯತೆ, ರಾಜಕೀಯ ಅವಕಾಶ[...]ಗಳಿಂದಾಗಿ "ಬದುಕು" ಮಾಡುತ್ತಿದ್ದರೆ ಇಂದಿನ ದ[...] ಮಧ್ಯಮ ವರ್ಗದ ಬಹುದೊಡ್ಡ ಭಾಗ ಬ್ರಾಹ್ಮಣೀಕ[ರಣ]ಗೊಳ್ಳುತ್ತಿದ್ದಾರೆ. ಹಿಂದೊಮ್ಮೆ ಜಾಗೃತ ದಲಿತ ಶ[ಕ್ತಿಯ] ಪ್ರತೀಕಗಳಾಗಿದ್ದ ವ್ಯಕ್ತಿಗಳು ಮತ್ತು ಶಕ್ತಿಗಳು ಇ[...] ಹಿಂದೂತ್ವವಾದಿ ಶಕ್ತಿಗಳೆಡೆ ಸಾಂಸ್ಕೃತಿಕ ವಲಸೆ ಪ್ರಾರಂ[ಭಿಸಿ]ದ್ದಾರೆ. ಮಹಾರಾಷ್ಟ್ರ ಮತ್ತು ಉತ್ತರ ಪ್ರದೇಶ ಸ್ವರೂ[ಪದ] ರಾಜಕೀಯ ಅಧಿಕಾರದ ಮಾಯಾ ಮರೀಚಿಕೆಯ ಮೋ[...] ನಿಧಾನವಾಗಿ ಬಹುಬಗೆಯ ರಾಜೀಕೋರತನವನ್ನು ಕರ್ನಾ[ಟಕ]ದಲ್ಲೂ ಹುಟ್ಟುಹಾಕುತ್ತಿದೆ. ಅದರಲ್ಲೂ ಚುನಾವಣಾ ದೃಷ್ಟಿಯಿಂದ ಭ್ರಷ್ಟಾತಿಭ್ರಷ್ಟ ರಾಜಕಾರಣವನ್ನೂ ಜಾತಿ[...]

▶



ನೋ ಕಾಮೆಂಟ್ಸ್


"2008ರ ಸಾರ್ವತ್ರಿಕ ಚುನಾವಣೆಯಲ್ಲಿ ರೆಡ್ಡಿ ಬ್ರದರ್ಸ್ ಬಿಜೆಪಿಯನ್ನು ಗೆಲ್ಲಿಸಲು ಸಾಕಷ್ಟು ಹಣ ಹೂಡಿಕೆ ಮಾಡಿದರು. 2008ರ ಚುನಾವಣೆಯಲ್ಲಿ ಶಕುಂತಲಾ ಶೆಟ್ಟಿಯವರನ್ನು ಸ್ಪರ್ಧೆಯಿಂದ ಹಿಂದೆ ಸರಿಯುವಂತೆ ಮಾಡಲು 10 ಕೋಟಿ ರೂ. ಆಮಿಷ ಒಡ್ಡಲಾಗಿತ್ತು, ಬೆಂಗಳೂರಿನಲ್ಲಿ ಯಡಿಯೂರಪ್ಪನವರ ಆಪ್ತ ಅಭ್ಯರ್ಥಿಗೆ 60 ಲಕ್ಷ ರೂ. ನೀಡಲಾಗಿತ್ತು, ರೆಡ್ಡಿ ಬ್ರದರ್ಸ್ ಆಪರೇಷನ್ ಕಮಲಕ್ಕೆ ಸಾಕಷ್ಟು ಹಣ ಸುರಿದಿದ್ದಾರೆ. ಬಿಜೆಪಿ ಮತ್ತು ಪಕ್ಷೇತರ ಶಾಸಕರು ಬಳ್ಳಾರಿ 'ಗಣಿ ಹಣ'ದ ಫಲಾನುಭವಿಗಳಾಗಿದ್ದಾರೆ. ಹೀಗಾಗಿ ರೆಡ್ಡಿ ವಿರುದ್ಧದ ತನಿಖೆ ವ್ಯಾಪ್ತಿಗೆ 36 ಶಾಸಕರನ್ನು ಒಳಪಡಿಸಬೇಕು."

-ಟಿ.ಜೆ. ಅಬ್ರಹಾಂ, ಸಾಮಾಜಿಕ ಕಾರ್ಯಕರ್ತ

"2008-11ರ ನಡುವೆ ದೇಶದಲ್ಲಿ ಬಿಡುಗಡೆಯಾದ 32 ಔಷಧಗಳನ್ನು ಭಾರತೀಯರ ಮೇಲೆ ವೈದ್ಯಕೀಯ ಪ್ರಯೋಗ ನಡೆಸದೆಯೇ ಮಾರಾಟಕ್ಕೆ ಬಿಡಲಾಗಿದೆ. ಹಾಗೆ ಕ್ಲಿನಿಕಲ್ ಟ್ರಯಲ್ ನಡೆಸದೆ ಮಾರಾಟ ನಡೆಸಲು ಕೆಲವು ತುರ್ತು ಸಂದರ್ಭದಲ್ಲಿ ಮಾತ್ರ ಭಾರತ ಔಷಧ ಮಹಾ ನಿರೀಕ್ಷಕರು ಪರವಾನಗಿ ಕೊಡಬಹುದು. ಆದರೆ ಇವು ಯಾವುವೂ ಜೀವರಕ್ಷಕ ಔಷಧಗಳಲ್ಲ, ಇವುಗಳಲ್ಲಿ 12 ಔಷಧಿಗಳು ಶ್ರೀಮಂತ ದೇಶಗಳಲ್ಲಿ ನಿಷೇಧಕ್ಕೊಳಗಾಗಿರುವಂಥವು. ಇವಲ್ಲದೆ ಈಗಾಗಲೇ ಮಾರುಕಟ್ಟೆಯಲ್ಲಿರುವ ಔಷಧಿಗಳಲ್ಲಿ ಸುಮ್ಮನೆ ಪರಿಶೀಲನೆಗೆ ಆಯ್ದುಕೊಂಡ 42 ಔಷಧಿಗಳಲ್ಲಿ 13 ಔಷಧಿಗಳು ಶ್ರೀಮಂತ ರಾಷ್ಟ್ರಗಳು ಬ್ಯಾನ್ ಮಾಡಿದ ಔಷಧಿಗಳಾಗಿದ್ದವು"

-ಜಂಟಿ ಸಂಸದೀಯ ಸಮಿತಿ

ನಂಬಿದ್ರೆನಂಬಿ ಬಿಟ್ರೆಬಿಡಿ




"ಸರಡಗಿ ಸೋಲು ವೈಯಕ್ತಿಕ ಸೋಲಲ್ಲ, ಕಾಂಗ್ರೆಸ್ ಪಕ್ಷದ ನೈತಿಕ ಸೋಲು. ಸರಡಗಿಗೆ ಆಗಿರುವಷ್ಟೇ ನೋವು ನನಗೂ ಆಗಿದೆ. ಅವರ ಬದಲು ನಾಲ್ಕನೇ ಅಭ್ಯರ್ಥಿ ಸೀತಾರಾಂ ಸೋತಿದ್ದರೆ ಇಷ್ಟು ನೋವು ಆಗುತ್ತಿರಲಿಲ್ಲ, ಅವರ ಗೆಲುವಿಗೆ ಅಗತ್ಯವಾದ ಮತಗಳೂ ಇರಲಿಲ್ಲ ಎಂಬ ಸಮಾಧಾನವಾದರೂ ಇರುತ್ತಿತ್ತು, ಕುದುರೆ ವ್ಯಾಪಾರ ಜೋರಾಗಿ ನಡೆದಿದೆ. ಈ ಮಟ್ಟಕ್ಕೆ ಅಡ್ಡ ಮತದಾನ ನಡೆಯುತ್ತದೆ ಅಂತ ನಾವು ನಿರೀಕ್ಷಿಸಿರಲಿಲ್ಲ, ಪಕ್ಷದ ಯಾವ ಶಾಸಕರ ಮೇಲೂ ಸಂಶಯ ಇರಲಿಲ್ಲ."

-ಸಿದ್ದರಾಮಯ್ಯ

"ಬೃಹತ್ ಕೈಗಾರಿಕಾ ಸಚಿವನಾಗಿ ರಾಜ್ಯಕ್ಕೆ ಹಲವು ಯೋಜನೆಗಳನ್ನು ತರುವಲ್ಲಿ ಬಹಳಷ್ಟು ಶ್ರಮಿಸುತ್ತಿದ್ದು ಇದರಲ್ಲಿ ರಾಜಕೀಯ ದುರುದ್ದೇಶವಿಲ್ಲ, ಎಲ್ಲ ಜನಪ್ರತಿನಿಧಿಗಳು ಶ್ರಮಿಸಬೇಕು ಮತ್ತು ಜನರ ಋಣ ತೀರಿಸಬೇಕು."


-ಮುರುಗೇಶ್ ನಿರಾಣಿ



"ರಾಜ್ಯದಲ್ಲಿ ಸಂಪೂರ್ಣ ಅನಕ್ಷರತೆ ಮತ್ತು ಬಾಲಕಾರ್ಮಿಕ ಪದ್ಧತಿಯನ್ನು ನಿವಾರಣೆ ಮಾಡುವುದಕ್ಕಾಗಿ 2012-13ನೇ ಸಾಲಿನ ಮುಂಗಡ ಪತ್ರದಲ್ಲಿ ಶಿಕ್ಷಣಕ್ಕೆ 554 ಕೋಟಿ ರೂ.ಗಳನ್ನು ಮೀಸಲಿಡಲಾಗಿದೆ. ಈ ನಿಟ್ಟಿನಲ್ಲಿ 4780 ಬಾಲಕಾರ್ಮಿಕರನ್ನು ವಿವಿಧ ವಸತಿಶಾಲೆಗಳಿಗೆ ಸೇರಿಸಿ ಶಿಕ್ಷಣ ನೀಡಲಾಗುತ್ತಿದೆ. ರಾಜ್ಯದಲ್ಲಿ 2012 ಅಂತ್ಯದ ವೇಳೆಗೆ ಬಾಲ ಕಾಮಿ[ಕ] ಪದ್ಧತಿಯನ್ನು ಸಂಪೂರ್ಣ ನಿಷೇಧ ಮಾಡಲು ಸರ್ಕಾರ ಕ್ರಮಕೈಗೊಂಡಿದ[ೆ"]

-ಸದಾನಂದ ಗ[ೌಡ]

ಕೊಳದ ಮಠದ ಕೊಳಕು ಮಾತು



"ನಿತ್ಯಾನಂದ ಸ್ವಾಮಿಗಳು ಆರೋಪಿಯಷ್ಟೇ ಹೊರ[ತು] ಅಪರಾಧಿಯಲ್ಲ. ಅವರು ಮಧುರೈನ ಅಧೀನಂ ಪೀ[ಠದ] ಅಧಿಕಾರ ವಹಿಸಿಕೊಂಡ ನಂತರ ಸ್ವಾಮೀಜಿ ಆಗಿದ[್ದಾರೆ.] ಅವರು ವೈದ್ಯರಿದ್ದ ಹಾಗೆ. ಬಿಡದಿಯ ಧ್ಯಾನಪೀಠ[ದಲ್ಲಿ] ಹಲವರ ಕಾಯಿಲೆಗಳನ್ನು ವಾಸಿ ಮಾಡಿ ತಮ್ಮ [...] ಏನು ಎಂಬುದನ್ನು ತೋರಿಸಿದ್ದಾರೆ. ಸಮಾಜಕ್ಕೆ ಅ[ವರು] ನೀಡಿರುವ ಕೊಡುಗೆಗಳೇನು ಎಂಬುದು ಮುಂದಿನ ದಿನಗಳಲ್ಲಿ ತಿಳಿಯುತ್ತ[ದೆ."]

-ಕೊಳದ ಮಠದ ಶಾಂತವೀರಸ್ವಾ[ಮಿ]

...ಅವತಾರ್ ಸಿಂಗ್‌ನೊಂದಿಗೆ ಸತ್ತ ಸತ್ಯಗಳು...

ನಾಲ್ಕು ದಿನಗಳ ಹಿಂದೆ ದೂರದ ಅಮೆರಿಕಾದಲ್ಲಿ ...ರತ ಸೈನ್ಯದ ಮಾಜಿ ಅಧಿಕಾರಿ ಮೇಜರ್ ಅವತಾರ್ ...ಗ್ ಎಂಬಾತ ತನ್ನ ಪತ್ನಿ ಮತ್ತು ಮೂವರು ಪುತ್ರರ ...ಗೆ ಗುಂಡಿಟ್ಟು ಅವರನ್ನೆಲ್ಲ ಕೊಂದ ನಂತರ ತನ್ನ ...ಗೂ ಗುಂಡು ಹಾರಿಸಿಕೊಂಡು ಆತ್ಮಹತ್ಯೆ ಮಾಡಿಕೊಂಡಿ... ಕುರಿತ ವರದಿಯನ್ನು ಕನ್ನಡ ಪತ್ರಿಕೆಗಳು ತಮ್ಮ ...ಪುಟಗಳಲ್ಲಿ ಪುಟ್ಟದಾಗಿ ಪ್ರಕಟಿಸಿದ್ದವು.

...ಮೇಲುನೋಟಕ್ಕೆ ಇದೊಂದು ಸಂಸಾರದ ಖಾಸಗಿ ...ರ್ಘಟನೆ ಎಂಬಂತೆಯೂ, ತಲೆ ಕೆಟ್ಟ ವ್ಯಕ್ತಿಯೊಬ್ಬ ತನ್ನ ...ಂ ವಂಶವನ್ನೇ ನಿರ್ನಾಮ ಮಾಡಿದ ದುರಂತದಂತೆಯೂ ...ಸಿಸುತ್ತದೆ.

...ಆದರೆ ವಾಸ್ತವವಾಗಿ ಅವತಾರ್ ಸಿಂಗ್‌ನ ಆತ್ಮಹತ್ಯೆಯ ...ದೆ ನಮ್ಮ ಪ್ರಜಾಪ್ರಭುತ್ವ ಭಾರತದಲ್ಲಾಗುತ್ತಿರುವ ...ನವಹಕ್ಕುಗಳ ಕಗ್ಗೊಲೆ ಮತ್ತು ಕಾಶ್ಮೀರ, ಈಶಾನ್ಯ ...ಜ್ಯಗಳ ಮತ್ತು ಆದಿವಾಸಿಗಳೇ ಹೆಚ್ಚಿನ ಸಂಖ್ಯೆಯಲ್ಲಿ ...ುವ ಅರಣ್ಯ ಪ್ರದೇಶಗಳಲ್ಲಿ ಜನಸಾಮಾನ್ಯರ ಮೇಲೆ ...ರತದ ಸರ್ಕಾರ ಮತ್ತು ಭಾರತದ ಸೈನ್ಯ ನಡೆಸುತ್ತಿರುವ ...ರ್ಜನ್ಯದ ಕತೆಗಳೂ ಅಡಗಿವೆ.

...ಅಮೆರಿಕದ ಕ್ಯಾಲಿಫೋರ್ನಿಯಾದಲ್ಲಿ ಕಳೆದ ಶನಿವಾರ ...ಗ್ಗೆ ತನ್ನವರ ಮತ್ತು ತನ್ನ ಪ್ರಾಣವನ್ನೂ ತೆಗೆದುಕೊಂಡ ...ವತಾರ್ ಸಿಂಗ್ ಭಾರತದಲ್ಲಿ ಐದಾರು ಕೊಲೆಗಳನ್ನು ...ಡಿದ್ದವನು. ಇಲ್ಲಿನ ಪೊಲೀಸರಿಗೆ 'ವಾಂಟೆಡ್' ...ದ್ದ ಕ್ರಿಮಿನಲ್. ಆತನ ವಿರುದ್ಧ ಕಾಶ್ಮೀರದ ...ಯಾಲಯ ಅರೆಸ್ಟ್ ವಾರೆಂಟ್‌ಅನ್ನು ಹದಿನಾರು ...ರ್ಷಗಳ ಹಿಂದೆಯೇ ಜಾರಿಗೊಳಿಸಿತ್ತು. ಆದರೂ ...ನನ್ನು ಭಾರತಕ್ಕೆ ಕರೆತಂದು ಇಲ್ಲಿನ ನ್ಯಾಯವ್ಯವಸ್ಥೆಗೆ ...ನನ್ನು ಗುರಿ ಮಾಡಲು ನಮ್ಮ ಪ್ರಜಾಪ್ರಭುತ್ವ ...ರ್ಕಾರ ತನ್ನ ಕಿರುಬೆರಳನ್ನೂ ಎತ್ತಲಿಲ್ಲ. ಬದಲಾಗಿ ...ಕೊಲೆಗಡುಕನಿಗೆ ನೆರವು ಮತ್ತು ರಕ್ಷಣೆ ನೀಡಿ ...ೀಡಿಸಿತ್ತು. ಯಾಕೆ ಗೊತ್ತಾ? ಅಕಸ್ಮಾತ್ ಅವತಾರ್ ...ಗ್‌ನನ್ನು ಭಾರತಕ್ಕೆ ಕರೆತಂದಿದ್ದರೆ ಆತ ನಮ್ಮ ಸರ್ಕಾರ ...ತ್ತು ಸೈನ್ಯ ನಮ್ಮ ದೇಶದ ವಿವಿಧ ಕಡೆ ನಡೆಸುತ್ತಿರುವ ...ಚಾರ, ಅಕ್ರಮ, ದಬ್ಬಾಳಿಕೆ, ದೌರ್ಜನ್ಯ ಕೊಲೆ, ...ಸೆ, ಎಲ್ಲವೂ ಹೊರಬೀಳುತ್ತಿತ್ತು! ಆಗ ನಮ್ಮ ...ಜಾಪ್ರಭುತ್ವ ಸರ್ಕಾರದ ನಿಜ ಬಣ್ಣ ಬಯಲಾಗುತ್ತಿತ್ತು!!


...ಮೂಲತಃ ಹರ್ಯಾಣದವನಾದ ಅವತಾರ್ ಸಿಂಗ್ ...ರ ದಶಕದಲ್ಲಿ ಕಾಶ್ಮೀರಕ್ಕೆ ನಿಯೋಜನೆಗೊಂಡಿದ್ದ ...ನ್ಯಾಧಿಕಾರಿ. ಆಗ ಆತನ ಪರಿಚಯವಿದ್ದ ಪತ್ರಕರ್ತರು ...ನನ್ನು 'ಸರ್ವಾಧಿಕಾರಿ' ಮತ್ತು 'ಅಧಿಕಾರದ ಮದವನ್ನೇರಿಸಿ ...ಂಡಿದ್ದ ವ್ಯಕ್ತಿ' ಎಂದೇ ಕರೆಯುತ್ತಿದ್ದರು. ಅದಕ್ಕೆ ಕಾರಣವೂ ...ತ್ತು. ಅವತಾರ್ ಸಿಂಗ್ ಎಂತಹ ವ್ಯಕ್ತಿ ಎಂದರೆ ತಾನು ...ರನ್ನು ಬೇಕಾದರೂ ಕೊಂದು ಅದನ್ನು ದಕ್ಕಿಸಿಕೊಳ್ಳಬಲ್ಲೆ ...ಬ ಅಹಂಕಾರ ತುಂಬಿದ್ದವನು. ಅವನ ಇಂತಹ ಪ್ರವೃತ್ತಿಗೆ ...ಲಿಯಾಗಿದ್ದು ಕಾಶ್ಮೀರದಲ್ಲಿ ಮಾನವಹಕ್ಕುಗಳಿಗಾಗಿ ...ೋರಾಡುತ್ತಿದ್ದ ಜಲೀಲ್ ಅಂದ್ರಾಬಿ ಎಂಬ ವಕೀಲ.

...ಕಾಶ್ಮೀರದಲ್ಲಿ 90ರ ದಶಕದಲ್ಲಿ ಪ್ರತ್ಯೇಕತಾ ...ೋರಾಟ ಉಚ್ಛ್ರಾಯ ಸ್ಥಿತಿಯಲ್ಲಿತ್ತು. ಆಗ ...ವನ್ನು ದಮನ ಮಾಡಲು ಭಾರತದ ಸೈನ್ಯ ...ವಿರಾರು ಜನರನ್ನು ಕೊಂದುಹಾಕಿತು. ಆದರೆ ...ನ್ಯಕ್ಕೆ ಬಲಿಯಾದ ಸಾವಿರಾರು ಜನರಲ್ಲಿ ...ಹುತೇಕರು ಅಮಾಯಕರಾಗಿದ್ದರು. ...ಂತಹವರ ಕಗ್ಗೊಲೆಯ ವಿರುದ್ಧ ವಕೀಲ ...ಂದ್ರಾಬಿ ವಿವಿಧ ವಲಯಗಳಲ್ಲಿ ಹೋರಾಟ ...ಡೆಸುತ್ತಿದ್ದರು. ವಿಶ್ವಸಂಸ್ಥೆಯ ಮಾನವಹಕ್ಕು ...ಯಾಲಯದಲ್ಲೂ ಭಾರತ ಸೈನ್ಯದ ...ರ್ಜನ್ಯದ ವಿರುದ್ಧ ದನಿ ಎತ್ತುವ ಮೂಲಕ ...ಶ್ಮೀರದಲ್ಲಿ ಸೈನ್ಯ ನಡೆಸುತ್ತಿರುವ ...ಮಾನವೀಯತೆಯತ್ತ ಅಂತರರಾಷ್ಟ್ರೀಯ ...ಗಮನ ಸೆಳೆದಿದ್ದರು. ಇದೆಲ್ಲದರಿಂದಾಗಿ ...ಂದ್ರಾಬಿ ಭಾರತ ಸರ್ಕಾರ ಮತ್ತು ಸೈನ್ಯದ ಕೆಂಗಣ್ಣಿಗೆ ...ರಿಯಾಗಿದ್ದರು. ತಾವು ಕಾಶ್ಮೀರದಲ್ಲಿದ್ದರೆ ತಮ್ಮ ಪ್ರಾಣಕ್ಕೆ ...ಾಯ ಇದೆ ಎಂಬುದು ಅಂದ್ರಾಬಿ ಅವರಿಗೆ ಗೊತ್ತಿತ್ತು. ...ಹಾಗಾಗಿಯೇ ಅವರು ಕಾಶ್ಮೀರದಿಂದ ದೂರ ಇದ್ದರು. ...ರೆ 1996ರಲ್ಲಿ ಈದ್ ಹಬ್ಬವನ್ನು ತನ್ನವರೊಂದಿಗೆ ...ಚರಿಸಲು ಅಂದ್ರಾಬಿ ಶ್ರೀನಗರಕ್ಕೆ ಹೋದರು.

...ಮಾರ್ಚ್ 8, 1996ರಂದು ಅಂದ್ರಾಬಿ ಅವರು ...ನ್ನಿ ಪತ್ನಿ ರಿಫಾತ್ ಜೊತೆ ಮಾರುತಿ ಕಾರಿನಲ್ಲಿ ...ಕೋರ್ಟಿನಿಂದ ಮನೆಗೆ ವಾಪಸ್ ಬರುತ್ತಿದ್ದಾಗ ರಸ್ತೆ ...ಯಲ್ಲಿ ಸೈನ್ಯದ ಲಾರಿ ಒಂದು ತಡೆ ಒಡ್ಡಿತು. ಲಾರಿಯಿಂದ ...ದ ಕೆಲವು ಸೈನಿಕರು ಅಂದ್ರಾಬಿ ಅವರನ್ನು ...ಬಲವಂತವಾಗಿ ತಮ್ಮೊಂದಿಗೆ ಕರೆದುಕೊಂಡು ಹೋದರು. ...ತಮ್ಮ ಪತಿಯನ್ನು ಸೈನ್ಯಾಧಿಕಾರಿಗಳು ಅಪಹರಿಸಿದ್ದಾರೆಂದು ...ಫಾತ್ ದೂರು ಕೊಟ್ಟರೂ ಪೊಲೀಸರು ಅದನ್ನು ಸ್ವೀಕರಿಸಲಿಲ್ಲ. ಆಗ ಕಾಶ್ಮೀರದ ವಕೀಲರೆಲ್ಲರೂ ಪ್ರತಿಭಟಿಸಿ ನ್ಯಾಯಾಲಯದ ಮೊರೆ ಹೊಕ್ಕರು. ಆಗ ವಿಧಿ ಇಲ್ಲದೆ ಅಂದ್ರಾಬಿ ನಾಪತ್ತೆ ಆಗಿರುವ ಬಗ್ಗೆ ಶ್ರೀನಗರದ ಪೊಲೀಸರು ದೂರನ್ನು ದಾಖಲಿಸಿಕೊಂಡರು.

ಅಂದ್ರಾಬಿಯವರನ್ನು ಸೈನ್ಯಾಧಿಕಾರಿಗಳು ಅಪಹರಿಸಿದ ಇಪ್ಪತ್ತು ದಿನಗಳ ನಂತರ ಅವರ ಶವ ಜೇಲುಮ್ ನದಿಯಲ್ಲಿ ಪತ್ತೆ ಆಯಿತು. ಅಂದ್ರಾಬಿ ಅವರ ಕೈಗಳನ್ನು ಹಿಂದಕ್ಕೆ ಹಗ್ಗಗಳಿಂದ ಕಟ್ಟಲಾಗಿತ್ತಲ್ಲದೆ, ಅವರ ಕಣ್ಣುಗಳನ್ನು ಕಿತ್ತುಹಾಕಲಾಗಿತ್ತು. ಅವರ ದೇಹದ ಮೇಲೆ ಚಿತ್ರಹಿಂಸೆ ಕೊಟ್ಟ ಗುರುತುಗಳಿದ್ದವು ಮತ್ತು ಅವರ ಶವ ಪತ್ತೆ ಆಗದಂತೆ ಒಂದು ಕಲ್ಲನ್ನೂ ಬಿಗಿಯಲಾಗಿತ್ತು. ಮರಣೋತ್ತರ ಪರೀಕ್ಷೆಯಲ್ಲಿ ಅಂದ್ರಾಬಿ ಅವರನ್ನು ಅಪಹರಿಸಿದ ಮಾರನೆ ದಿನವೇ ಅವರನ್ನು ಕೊಲ್ಲಲಾಗಿತ್ತು ಎಂದು ಸಾಬೀತಾಯಿತು.

ಅಂದ್ರಾಬಿ ಅವರ ಕೊಲೆ ಕಾಶ್ಮೀರದ ಜನಸಾಮಾನ್ಯರಲ್ಲಿ ತೀವ್ರ ಆಕ್ರೋಶವನ್ನು ಹುಟ್ಟುಹಾಕಿತು. ರಿಫಾತ್ ಅವರ ದೂರು ನ್ಯಾಯಾಲಯದ ಮೆಟ್ಟಿಲನ್ನು ಏರಿತು. ಆಗ ಅಂದ್ರಾಬಿ ಅವರ ಸಾವನ್ನು ಕುರಿತು ತನಿಖೆ ಮಾಡಲು ಜಸ್ಟೀಸ್ ನಾಜ್ಕಿ ಮತ್ತು ಗಾಂಧಿ ವಿಶೇಷ ತನಿಖಾ ತಂಡವನ್ನು ರಚಿಸಿದರು. ಆ ತಂಡದೊಂದಿಗೆ ಸಹಕರಿಸಲು ಸೈನ್ಯ ನಿರಾಕರಿಸಿತಲ್ಲದೆ ಅಂದ್ರಾಬಿ ಕೊಲೆ ಆದ ಮಾರನೆ ತಿಂಗಳು



ಸೈನ್ಯಾಧಿಕಾರಿಯಾಗಿದ್ದಾಗ ಕೊಲೆಗಡುಕ ಮೇಜರ್ ಅವತಾರ್ ಸಿಂಗ್ ಮತ್ತು ಆತ ಅಮೆರಿಕದಲ್ಲಿ ತಲೆ ಮರೆಸಿಕೊಂಡಿದ್ದಾಗ

ಮೇಜರ್ ಅವತಾರ್ ಸಿಂಗ್ ಈಗ ಸೈನ್ಯದಲ್ಲಿ ಇಲ್ಲವೆಂದು ನ್ಯಾಯಾಲಯದ ಮುಂದೆ ಸುಳ್ಳು ಹೇಳಿಕೆ ನೀಡಿತು. ಸೈನ್ಯದೊಂದಿಗೆ ಎಲ್ಲ ರೀತಿಯಲ್ಲೂ ಸಹಕರಿಸಿದ ಆಗಿನ ಜಮ್ಮು ಮತ್ತು ಕಾಶ್ಮೀರದ ಸರ್ಕಾರ ವಿಶೇಷ ತನಿಖಾ ತಂಡದ ನೇತೃತ್ವವನ್ನು ವಹಿಸಿದ್ದ ನಿಷ್ಠುರಿ ಐಪಿಎಸ್ ಅಧಿಕಾರಿ ಮಿಶ್ರಾ ಅವರ ಜಾಗಕ್ಕೆ ತನ್ನ ಭಟ್ಟಂಗಿ ಪೊಲೀಸ್ ಅಧಿಕಾರಿಯನ್ನು ನೇಮಿಸಲು ಮಸಲತ್ತು ನಡೆಸಿತ್ತು. ಆಗ ಜಸ್ಟೀಸ್ ನಾಜ್ಕಿ ಮತ್ತು ಗಾಂಧಿ ಅವರು ಸರ್ಕಾರಕ್ಕೆ ಛೀಮಾರಿ ಹಾಕಿ ಮಿಶ್ರಾ ಅವರನ್ನು ಉಳಿಸಿಕೊಂಡಿದ್ದರು.

ಮಿಶ್ರಾ ಅವರ ತಂಡ ತನಿಖೆ ಮುಂದುವರೆಸಿದಂತೆ



ಅವತಾರ್ ಸಿಂಗ್ ಮತ್ತು ಕುಟುಂಬ ವಾಸಿಸುತ್ತಿದ್ದ ಮನೆ

ಅಂದ್ರಾಬಿ ಅವರ ಕೊಲೆಯಲ್ಲಿ ಮೇಜರ್ ಅವತಾರ್ ಸಿಂಗ್‌ನ ಪಾತ್ರ ದೃಢವಾಗುತ್ತಾ ಹೋಯಿತು. ಆಗ ಈ ಅವತಾರ್ ಸಿಂಗ್ ಏನು ಮಾಡಿದ ಗೊತ್ತೆ? ತಾನು ಅಂದ್ರಾಬಿಯನ್ನು ಕೊಂದದ್ದಕ್ಕೆ ಸಾಕ್ಷಿಯಾಗಿದ್ದ ಐವರು ಬಾತ್ಮಿದಾರರನ್ನೂ ಕೊಂದು ಹಾಕಿದ. ಇದನ್ನೂ ಮಿಶ್ರಾ ಅವರ ತಂಡ ಪತ್ತೆ ಹಚ್ಚಿತು. ಅಷ್ಟೇ ಅಲ್ಲ, ತನ್ನ ಸಂಬಂಧಿ ಒಬ್ಬಳನ್ನು ಚುಡಾಯಿಸಿದನೆಂದು ಒಬ್ಬನನ್ನು, ತನ್ನ ಕುಟುಂಬ ಪಡೆದಿದ್ದ ಸಾಲವನ್ನು ಹಿಂದಿರುಗಿಸಬೇಕೆಂದು ಒತ್ತಾಯ ಮಾಡುತ್ತಿದ್ದ ಮತ್ತೊಬ್ಬನನ್ನೂ ಮೇಜರ್ ಅವತಾರ್ ಸಿಂಗ್ ಕೊಂದಿದ್ದನ್ನೂ ತನಿಖಾ ತಂಡ ಪತ್ತೆ ಹಚ್ಚಿತ್ತು. ಇದೆಲ್ಲದರ ಅರ್ಥ ಅವತಾರ್ ಸಿಂಗ್ ತಾನೊರ್ವ ಸೈನ್ಯಾಧಿಕಾರಿ ಎಂಬ ಮದದಿಂದ ಅಪಾಯಕಾರಿ ಕೊಲೆಗಡುಕನಾಗಿ ಪರಿವರ್ತನೆಗೊಂಡಿದ್ದ, ಆದರೂ ನಮ್ಮ ಸರ್ಕಾರ ಮತ್ತು ಸೈನ್ಯ ಆತನ ರಕ್ಷಣೆಗೆ ನಿಂತಿತು, ನ್ಯಾಯಾಲಯಕ್ಕೂ ಸುಳ್ಳು ಹೇಳಿತು.

1997ರಲ್ಲೇ ಜಸ್ಟೀಸ್ ನಾಜ್ಕಿ ಮತ್ತು ಗಾಂಧಿ ಅವರಿದ್ದ ನ್ಯಾಯಾಲಯದ ಪೀಠವು ಮೇಜರ್ ಅವತಾರ್ ಸಿಂಗ್‌ನನ್ನು ಬಂಧಿಸುವಂತೆ ತೀರ್ಪು ನೀಡಿತು. ಮಾತ್ರವಲ್ಲ ಆತನ ಪಾಸ್‌ಪೋರ್ಟನ್ನು ವಶಪಡಿಸಿಕೊಂಡು ಆತ ದೇಶದಿಂದ ಪರಾರಿ ಆಗದಂತೆ ಎಚ್ಚರ ವಹಿಸಬೇಕೆಂದೂ, ಆತನ ಪತ್ತೆಗೆ ಸರ್ಕಾರವೇ ತನ್ನ ವೆಚ್ಚದಲ್ಲಿ ದೇಶದಾದ್ಯಂತ ಪತ್ರಿಕೆಗಳಲ್ಲಿ ಮತ್ತು ದೂರದರ್ಶನದಲ್ಲಿ ಜಾಹೀರಾತುಗಳನ್ನು ನೀಡಬೇಕೆಂದೂ ಹೇಳಿತು.

ಆದರೆ ಸರ್ಕಾರ ಇದ್ಯಾವುದನ್ನೂ ಮಾಡಲಿಲ್ಲ. ಬದಲಾಗಿ ಜಸ್ಟೀಸ್ ನಾಜ್ಕಿ ಮತ್ತು ಗಾಂಧಿ ಅವರನ್ನು ಕಾಶ್ಮೀರದ ನ್ಯಾಯಾಲಯದಿಂದ ಬೇರೆ ಕಡೆಗೆ ವರ್ಗ ಮಾಡಿತು. ಅಲ್ಲಿಗೆ ಅಂದ್ರಾಬಿ ಕೊಲೆ ಪ್ರಕರಣ ಮತ್ತು ಅವತಾರ್ ಸಿಂಗ್‌ನನ್ನು ಬಂಧಿಸುವ ಪ್ರಕ್ರಿಯೆ ಎರಡೂ ನೆನೆಗುದಿಗೆ ಬಿದ್ದವು.

1996ರಲ್ಲೇ ಮೇಜರ್ ಅವತಾರ್ ಸಿಂಗ್ ಸೈನ್ಯದಿಂದ ನಿವೃತ್ತಿ ಹೊಂದಿದ್ದಾನೆಂದು ನಮ್ಮ ಸೈನ್ಯ ನ್ಯಾಯಾಲಯಕ್ಕೆ ಹೇಳಿದ್ದರೂ 2001ರಲ್ಲಿ ಇಂಡಿಯನ್ ಎಕ್ಸ್‌ಪ್ರೆಸ್ ಪತ್ರಿಕೆಯ ವರದಿಗಾರರೊಬ್ಬರು ಆತನನ್ನು ಪಂಜಾಬಿನ ಲುಧಿಯಾನಾದಲ್ಲಿ ಪತ್ತೆ ಹಚ್ಚಿದರು. ಆಗಲೂ ಆತ ಸೈನ್ಯದಲ್ಲೇ ಇದ್ದ. ಈ ವಿಷಯ ಗೊತ್ತಾಗಿದ್ದೇ ತಡ, ಅವತಾರ್ ಸಿಂಗ್ ತನ್ನ ಕುಟುಂಬದೊಂದಿಗೆ ನಾಪತ್ತೆಯಾದ. ಮಾನವಹಕ್ಕು ಹೋರಾಟಗಾರರು ಆತನಿಗಾಗಿ ಎಷ್ಟೇ ಹುಡುಕಿದರೂ ಆತ ಎಲ್ಲಿಗೆ ಹೋದ ಎಂಬ ಸುಳಿವು ಯಾರಿಗೂ ಸಿಗಲಿಲ್ಲ. ಕೊಲೆ ಆರೋಪವನ್ನು ಹೊತ್ತಿದ್ದ ಸೈನ್ಯಾಧಿಕಾರಿಯೊಬ್ಬ ಹೀಗೆ ಒಂದಿಷ್ಟೂ ಸುಳಿವು ನೀಡದೆ ನಾಪತ್ತೆಯಾಗಿದ್ದರ ಹಿಂದೆ ನಮ್ಮ ಸರ್ಕಾರ ಮತ್ತು ಸೈನ್ಯದ ಕೈವಾಡ ಇದೆ ಎಂಬುದು ಅವರೆಲ್ಲರಿಗೂ ಆಗ ಗೊತ್ತಾಗಿತ್ತು.

ಶ್ರೀನಗರದಲ್ಲಿ ಅಂದ್ರಾಬಿಯ ಕುಟುಂಬ ನ್ಯಾಯಕ್ಕೆ ತನ್ನ ಹೋರಾಟವನ್ನು ಮುಂದುವರೆಸಿತ್ತು. ಅದರ ಫಲವಾಗಿಯೇ 2009ರಲ್ಲಿ ಕಾಶ್ಮೀರದ ನ್ಯಾಯಾಲಯ ಇಂಟರ್‌ಪೋಲ್‌ಗೆ ಮೇಜರ್ ಅವತಾರ್ ಸಿಂಗ್ ಬಗ್ಗೆ ಮಾಹಿತಿ ನೀಡಿ ಆತ ಪತ್ತೆಯಾದರೆ ಆತನನ್ನು ಬಂಧಿಸಬೇಕೆಂದು ಆದೇಶಿಸಿತ್ತು. ಆದರೆ ಅವತಾರ್ ಸಿಂಗ್ ಸಿಕ್ಕಿದ್ದರಲ್ಲವೆ ಆತನನ್ನು ಬಂಧಿಸುವ ಮಾತು ಉದ್ಭವಿಸುವುದು?

ಹೀಗೆ ಹತ್ತು ವರ್ಷಗಳ ಹಿಂದೆ ಕಣ್ಮರೆಯಾಗಿದ್ದ ಅವತಾರ್ ಸಿಂಗ್‌ನ ಸುಳಿವು ಮಾನವ ಹಕ್ಕುಗಳ ಹೋರಾಟಗಾರರಿಗೆ ಸಿಕ್ಕಿದ್ದು ಕಳೆದ ವರ್ಷ.

ಅಮೆರಿಕದ ಕ್ಯಾಲಿಫೋರ್ನಿಯಾ ರಾಜ್ಯದ ಸೆಲ್ಮಾ ಎಂಬ ಪುಟ್ಟ ನಗರದಲ್ಲಿ ಓರ್ವ ಮಹಿಳೆ ತನ್ನ ಗಂಡ ತನ್ನ ಕತ್ತು ಹಿಸುಕಿ ಸಾಯಿಸಲು ಪ್ರಯತ್ನಿಸಿದ ಎಂದು ಸ್ಥಳೀಯ ಪೊಲೀಸರಿಗೆ ದೂರು ನೀಡಿದಳು. ಆಗ ಆಕೆಯ ಗಂಡನನ್ನು ಬಂಧಿಸಿದ ಪೊಲೀಸರಿಗೆ ಅಚ್ಚರಿಯೊಂದು ಕಾದಿತ್ತು. ಆ ಗಂಡನ ಹೆಸರು ಅವತಾರ್ ಸಿಂಗ್ ಎಂದೂ, ಆತನ ಬೆರಳಚ್ಚುಗಳು ಕಾಶ್ಮೀರದಲ್ಲಿ ಕೊಲೆ ಮಾಡಿದ್ದ ಸೈನ್ಯಾಧಿಕಾರಿ ಅವತಾರ್ ಸಿಂಗ್‌ನ ಬೆರಳಚ್ಚನ್ನು ಹೋಲುತ್ತದೆಂದೂ, ಆತನನ್ನು ಬಂಧಿಸಬೇಕೆಂದು ಇಂಟರ್‌ಪೋಲ್‌ಗೆ ಆದೇಶ ಇದೆ ಎಂದೂ ಸೆಲ್ಮಾ ನಗರದ ಪೊಲೀಸರಿಗೆ ಗೊತ್ತಾಯಿತು. ಅವರು ಕೂಡಲೇ ಈ ವಿಷಯವನ್ನು ಭಾರತ ಸರ್ಕಾರಕ್ಕೆ ತಿಳಿಸಿದರು. ಆದರೆ ನಮ್ಮ ಸರ್ಕಾರ ಆತನನ್ನು ಬಂಧಿಸಲು ಆದೇಶಿಸುವ ಬದಲು ಆತನನ್ನು ಬಿಡುಗಡೆ ಮಾಡಿ ಎಂದಿತು! ಅವತಾರ್ ಸಿಂಗ್ ಕೂಡ ತಾನು ಅಮೆರಿಕದಲ್ಲಿರುವುದು ಬಹಿರಂಗಗೊಂಡರೆ ತನ್ನನ್ನು ಅಲ್ ಖಯಿದಾದ ಉಗ್ರರು ಸಾಯಿಸುತ್ತಾರೆಂದು ಅಮೆರಿಕದ ಪೊಲೀಸರಿಗೆ ಹೇಳಿದ!!

ಹೀಗೆ ಕೆಲ ಗಂಟೆಗಳ ಕಾಲ ಅಮೆರಿಕದ ಪೊಲೀಸರ ವಶದಲ್ಲಿದ್ದ ಅವತಾರ್ ಸಿಂಗ್‌ನ ವಿರುದ್ಧ ಆತನ ಪತ್ನಿ ತನ್ನ ದೂರನ್ನು ವಾಪಸ್ಸು ಪಡೆದಿದ್ದರಿಂದ ಮತ್ತು ಭಾರತದ ಸರ್ಕಾರ ಆತನನ್ನು ಬಂಧಿಸುವ ಅವಶ್ಯಕತೆ ಇಲ್ಲ ಎಂದಿದ್ದರಿಂದ ಆತ ಬಿಡುಗಡೆಯಾದ. ಆದರೆ ಆ ಒಂದು ಪ್ರಕರಣವು ಅವತಾರ್ ಸಿಂಗ್ ಅಮೆರಿಕದಲ್ಲಿ ವಾಸಿಸುತ್ತಿದ್ದಾನೆಂದೂ, ಅಲ್ಲಿ ಹಲವು ಲಾರಿಗಳನ್ನು ಖರೀದಿಸಿ ಜೀವನ ನಡೆಸುತ್ತಿದ್ದಾನೆಂದೂ, ಭಾರತದಿಂದ ನಾಪತ್ತೆ ಆಗಿದ್ದ ಆತ ಮೊದಲು ಕೆಲಕಾಲ ಕೆನಡಾ ದೇಶದಲ್ಲಿದ್ದು ಆನಂತರ ಅಮೆರಿಕೆಯಲ್ಲಿ ನೆಲೆಸಿದ್ದಾನೆಂದು ಕೆನಡಾದ ಮಾನವ ಹಕ್ಕುಗಳ ಸಂಘಟನೆಗೆ ಗೊತ್ತಾಯಿತು. ಈ ಸುದ್ದಿಯನ್ನು ಆ ಸಂಘಟನೆ ಕಾಶ್ಮೀರದಲ್ಲಿರುವ ಅಂದ್ರಾಬಿ ಅವರ ಕುಟುಂಬಕ್ಕೆ ತಿಳಿಸಿತು. ಆಗ ಆತನನ್ನು ಭಾರತಕ್ಕೆ ಕರೆಸಬೇಕೆಂದು ಅಂದ್ರಾಬಿ ಅವರ ಕುಟುಂಬ ಎಷ್ಟೇ ಕೇಳಿಕೊಂಡರೂ ಭಾರತದ ಸರ್ಕಾರ ಸುಮ್ಮನಿತ್ತು.

ತನ್ನ ಗುಟ್ಟು ರಟ್ಟಾದ ನಂತರ 'ಓಪನ್' ಪತ್ರಿಕೆಗೆ ಒಂದು ಸಂದರ್ಶನವನ್ನು ನೀಡಿದ್ದ ಅವತಾರ್ ಸಿಂಗ್ "ನನ್ನನ್ನು ಇಲ್ಲಿಂದ ಬಲವಂತವಾಗಿ ಭಾರತಕ್ಕೆ ಕಳುಹಿಸಿದರೆ ನಾನು

ಕಂಡಹಾಗೆ



• ಗೌರಿ ಲಂಕೇಶ್

ಸುಮ್ಮನಿರುವುದಿಲ್ಲ. ನಾನು ಬಾಯಿ ಬಿಟ್ಟರೆ ಯಾರಿಗೂ ಸರಿಯಾಗುವುದಿಲ್ಲ" ಎಂದು ಹೇಳಿದ್ದ. ಅದರ ಅರ್ಥ ಆತ ಎಸಗಿದ್ದ ಅಪರಾಧದಲ್ಲಿ ಆತನೊಬ್ಬರ ಪಾತ್ರ ಮಾತ್ರ ಇರಲಿಲ್ಲ, ಬದಲಾಗಿ ನಮ್ಮ ಸೈನ್ಯ ಮತ್ತು ಸರ್ಕಾರದ ಉನ್ನತ ಸ್ಥಾನದಲ್ಲಿರುವವರ ಪಾತ್ರವೂ ಇತ್ತು. ಅಷ್ಟೇ ಅಲ್ಲ, ಆತ ಭಾರತದಿಂದ ತಪ್ಪಿಸಿಕೊಳ್ಳಲು ಮತ್ತು ಅಮೆರಿಕದಲ್ಲಿ ಹೊಸ ಬದುಕನ್ನು ಕಟ್ಟಿಕೊಳ್ಳಲು ನೆರವು ನೀಡಿದ್ದ ನಮ್ಮ ವ್ಯವಸ್ಥೆಯ ಪಾತ್ರವೂ ಇತ್ತು. ಇವನ್ನೆಲ್ಲ ಬಹಿರಂಗಗೊಳಿಸುವುದಾಗಿ ಅವತಾರ್ ಸಿಂಗ್ ಆ ಸಂದರ್ಶನದಲ್ಲಿ ಧಮಕಿ ಹಾಕಿದ್ದ.

ಆದರೆ ಕಳೆದ ವರ್ಷ ಭಾರತದಲ್ಲಿ ಮತ್ತೊಂದು ಬೆಳವಣಿಗೆ ಸಂಭವಿಸಿತ್ತು. ಅವತಾರ್ ಸಿಂಗ್ ಎಲ್ಲಿದ್ದಾನೆ ಎಂದು ಗೊತ್ತಾಗಿರುವುದರಿಂದ ಆತನನ್ನು ಬಂಧಿಸ ಬೇಕೆಂದು ಅಂದ್ರಾಬಿ ಅವರ ಕುಟುಂಬ ನ್ಯಾಯಾಲಯಕ್ಕೆ ಮನವಿ ಸಲ್ಲಿಸಿತ್ತು. 2011ರ ಏಪ್ರಿಲ್ ತಿಂಗಳಲ್ಲಿ ಕಾಶ್ಮೀರದ ನ್ಯಾಯಾಧೀಶ ರಾಜೀವ್ ಗುಪ್ತ ಅವರು ಅವತಾರ್ ಸಿಂಗ್‌ನನ್ನು ಬಂಧಿಸಿ ಭಾರತಕ್ಕೆ ಕರೆತರಬೇಕೆಂದು ತೀರ್ಪನ್ನು ನೀಡಿ ಅದನ್ನು ಭಾರತ ಸರ್ಕಾರದ ವಿದೇಶಾಂಗ ಸಚಿವಾಲಯಕ್ಕೆ ಕಳುಹಿಸಿದ್ದರು.

ಎರಡು ತಿಂಗಳ ಹಿಂದೆ ಮತ್ತೊಂದು ಘಟನೆ ಸಂಭವಿಸಿತು. ಕಾಶ್ಮೀರದವರಾದ ಜಾಹಿದ್ ರಫೀಕ್ ಎಂಬ ಪತ್ರಕರ್ತ ಅವತಾರ್ ಸಿಂಗ್ ಬಗ್ಗೆ ಅಮೆರಿಕದಲ್ಲಿ ತನಿಖೆ ಮಾಡಲಾರಂಭಿಸಿದರು. ಭಾರತದಲ್ಲಿ ಕೊಲೆ ಮಾಡಿದ್ದ ಅವತಾರ್ ಸಿಂಗ್‌ನನ್ನು ಯಾಕೆ ಭಾರತಕ್ಕೆ ಒಪ್ಪಿಸಲಿಲ್ಲ ಎಂದು ರಫೀಕ್ ಕೇಳಿದ್ದಕ್ಕೆ ಸೆಲ್ಮಾ ಪೊಲೀಸರು "ಆತ ಭಾರತ ಸರ್ಕಾರಕ್ಕೆ ಬೇಕಿರಲಿಲ್ಲ" ಎಂದು ಉತ್ತರ ಕೊಟ್ಟರು. "ಹೋಗಲಿ ಆತ ನಿಮ್ಮ ದೇಶದಲ್ಲಿ ಅಕ್ರಮವಾಗಿ ನೆಲೆಸಿದ್ದಾನೆ. ಆದ್ದರಿಂದ ಆತನನ್ನು ನಿಮ್ಮ ಸರ್ಕಾರ ಯಾಕೆ ಗಡಿಪಾರು ಮಾಡಲಿಲ್ಲ" ಎಂದು ಕೇಳಿದ್ದಕ್ಕೆ ಅಲ್ಲಿನ ಪೊಲೀಸರು "ಆ ಪ್ರಕ್ರಿಯ ಪ್ರಾರಂಭವಾಗಿದೆ" ಎಂದಿದ್ದರು. ತನ್ನನ್ನು ಕುರಿತು ಕಾಶ್ಮೀರದ ಪತ್ರಕರ್ತ ಸೆಲ್ಮಾದಲ್ಲಿ ವಿಚಾರಿಸುತ್ತಿದ್ದನೆಂದು ಅವತಾರ್ ಸಿಂಗ್‌ಗೆ ಗೊತ್ತಾದಾಗ ಆತ ಕೆರಳಿದ. ರಫೀಕ್ ಅವರಿಗೆ ಫೋನ್ ಮಾಡಿ "ಇದೇನು ನಿನ್ನ ಅಪ್ಪನ ಕಾಶ್ಮೀರ ಎಂದು ಕೊಂಡಿದ್ದೀಯೇನೋ? ಸೆಲ್ಮಾಗೆ ಬಾ, ನಿನ್ನನ್ನು ಕೊಂದು ಹಾಕುತ್ತೇನೆ" ಎಂದು ಅವತಾರ್ ಸಿಂಗ್ ಧಮಕಿ ಹಾಕಿದ್ದ. ಅಷ್ಟೇ ಅಲ್ಲ, ರಫೀಕ್ ತನ್ನ ಹತ್ತಿರವಾಗಲಿ, ತನ್ನ ಮನೆಯ ಹತ್ತಿರವಾಗಲಿ ಸುಳಿಯದಂತೆ ಪೊಲೀಸರಿಗೆ ದೂರು ಕೊಟ್ಟಿದ್ದ.

ಆದರೆ ನ್ಯಾಯದ ಚಕ್ರವನ್ನು ಆತನಿಂದಾಗಲಿ, ಭಾರತದ ಸರ್ಕಾರ ಅಥವಾ ಸೈನ್ಯದಿಂದಾಗಲಿ ತಡೆಯಲಾಗಲಿಲ್ಲ.

ಅತ್ತ ಅಮೆರಿಕದಿಂದ ಗಡಿಪಾರಾಗುವ ಸಾಧ್ಯತೆ, ಇತ್ತ ಭಾರತದ ವಶಕ್ಕೆ ಅವತಾರ್ ಸಿಂಗ್‌ನನ್ನು ಒಪ್ಪಿಸಬೇಕೆಂದು ನ್ಯಾಯಾಲಯದ ತೀರ್ಪು ಎರಡೂ ಒಟ್ಟೊಟ್ಟಿಗೆ ಬಂದವು. ಇದರಿಂದ ತನಗೆ ಭವಿಷ್ಯ ಇಲ್ಲವೆಂದು, ತನಗೆ ಜೈಲು ಶಿಕ್ಷೆ ಗ್ಯಾರಂಟಿ ಎಂದು ಮಾಜಿ ಸೈನ್ಯಾಧಿಕಾರಿ ಅವತಾರ್ ಸಿಂಗ್‌ಗೆ ಅರ್ಥವಾಗಿರಬೇಕು. ಅದರಿಂದ ತಪ್ಪಿಸಿಕೊಳ್ಳಲು ನಿರ್ಧರಿಸಿದ ಆತ ಕಳೆದ ಶನಿವಾರ ಬೆಳಗ್ಗೆ ತನ್ನ 35 ವರ್ಷ ವಯಸ್ಸಿನ ಪತ್ನಿ, 17, 15 ಮತ್ತು ಮೂರು ವರ್ಷ ವಯಸ್ಸಿನ ಅಮಾಯಕ ಮಕ್ಕಳನ್ನೂ ಕೊಂದನಲ್ಲದೆ ತನ್ನ ಪ್ರಾಣವನ್ನೇ ತಗೆದುಕೊಂಡಿದ್ದಾನೆ.

ನಮ್ಮ ಸರ್ಕಾರ ನ್ಯಾಯಬದ್ಧವಾಗಿದಿದ್ದರೆ ಅವತಾರ್ ಸಿಂಗ್‌ಗೆ ಎಂದೋ ಶಿಕ್ಷೆಯಾಗಿ ವಕೀಲ ಅಂದ್ರಾಬಿಯವರ ಕುಟುಂಬಕ್ಕೆ ನ್ಯಾಯ ಸಿಗುತ್ತಿತ್ತು. ಅಷ್ಟೇ ಮುಖ್ಯವಾಗಿ ಆತನ ಅಮಾಯಕ ಪತ್ನಿ ಮತ್ತು ಮಕ್ಕಳ ಪ್ರಾಣವೂ ಉಳಿಯುತ್ತಿತ್ತು. ದೇಶದಾದ್ಯಂತ ಸಾವಿರಾರು ಅಮಾಯಕ ಜನರನ್ನು ಕೊಂದಿರುವ ನಮ್ಮ ಸರ್ಕಾರ ಮತ್ತು ಸೈನ್ಯದ ಕೈಗಳು ಮತ್ತಷ್ಟು ರಕ್ತಸಿಕ್ತವಾಗಿವೆ.....

ಆಟ ಮುಗಿಸಿದ ನಟ



ಬಾಲಕ ನಟರಾಜ್

ಮೊನ್ನೆ ಜೂನ್ ಆರರ ಶನಿವಾರ ಬೆಳಗ್ಗಿನ ಜಾವ ಸುಮಾರು 7.15ಕ್ಕೆ ಗೆಳೆಯ ಏಣಗಿ ನಟರಾಜ ತೀರಿಕೊಂಡ ಸುದ್ದಿ ನನಗೆ ತಲುಪಿತು. ರಂಗಭೂಮಿಯಲ್ಲಿ - ಅಷ್ಟೇ ಏಕೆ ಆದರಾಚೆಗೂ - ನಮ್ಮ ಜೊತೆ ಒಡನಾಡುತ್ತಾ ಜಗಳವಾಡುತ್ತಾ ನಮ್ಮನ್ನೂ ತಮ್ಮನ್ನೂ ಬದುಕಿನ ಅರ್ಥಕ್ಕೆ ಒಡ್ಡಿಕೊಳ್ಳುವಂತೆ ಪ್ರಚೋದಿಸುವ ಗೆಳೆಯರು - ಅದರಲ್ಲೂ ಜಗಳಗಂಟ ಗೆಳೆಯರು - ನಮ್ಮ ಜೊತೆ "ಇನ್ನಿಲ್ಲ" ಅಂದಾಗ ಉಂಟಾಗುವ ವಿಷಾದದ ಭಾವಸ್ಥಿತಿಯನ್ನು ಅರ್ಥೈಸಿಕೊಂಡು ನಿಭಾಯಿಸುವುದು ಬಹಳ ಕಷ್ಟ. ಗೆಳೆಯ ಏಣಗಿ ನಟರಾಜನ ಅಂತ್ಯ ಹೇಗೆ ಕಾಡುತ್ತದೋ ಅದೇ ರೀತಿಯಲ್ಲಿ ತಮ್ಮ ಚರಮಗೀತೆ ಹಾಡಿಕೊಂಡ ರಂಗಭೂಮಿಯ ಇನ್ನೊಬ್ಬ ಉತ್ತಮ ನಟ ಧ್ರುವರಾಜ ದೇಶಪಾಂಡೆ ಹಾಗೂ ನಿರ್ದೇಶಕ ಜಯತೀರ್ಥ ಜೋಶಿಯಂತಹ ಪ್ರತಿಭಾವಂತ ರಂಗಕರ್ಮಿಗಳ/ಗೆಳೆಯರ ನೆನಪು ಯಾವಾಗಲೂ ಕಾಡುತ್ತದೆ.

ಧ್ರುವ ಹಾಗೂ ಜಯತೀರ್ಥರಿಗೆ ಹೋಲಿಸಿದರೆ ಏಣಗಿ ನಟರಾಜನಲ್ಲಿ ವಿಗಡತ್ವ ಸ್ವಲ್ಪ ಅಧಿಕವಾಗೇ ಇತ್ತು, ಆತ ನನಗೆ ಹತ್ತಿರವಾದ ಗೆಳೆಯನೂ ಆಗಿದ್ದ. ಇದಕ್ಕೆ ಕಾರಣ ನಮ್ಮಿಬ್ಬರಿಗೂ ಇರುವ ವೃತ್ತಿ ರಂಗಭೂಮಿಯ ಹಿನ್ನೆಲೆಯ ಜೊತೆಗೆ ನನ್ನ ತಂದೆ ಹಾಗೂ ನಟರಾಜನ ತಂದೆ ಶ್ರೀ ಏಣಗಿ ಬಾಳಪ್ಪನವರು ಆತ್ಮೀಯ ಗೆಳೆಯರಾಗಿದ್ದು ಪರೋಕ್ಷವಾದ ಕಾರಣವೂ ಇರಬಹುದು. ನಮ್ಮ ತಂದೆ ನಟರಾಗಿ ಕೆಲಸ ಮಾಡುತ್ತಿದ್ದ ಶ್ರೀ ಗಜಾನನ ನಾಟಕ ಮಂಡಳಿ ಜಮಖಂಡಿ ಕಂಪನಿ ಸಂಕೇಶ್ವರದಲ್ಲಿ ಕ್ಯಾಂಪ ಮಾಡಿದ್ದಾಗ (ಸುಮಾರು 1969-1970) ಕನ್ನಡದ ಖ್ಯಾತ ಚಲನಚಿತ್ರನಟ ವಿಷ್ಣುವರ್ಧನ್ ಅವರ ತಂದೆ ಎಚ್.ಎಲ್. ನಾರಾಯಣ ರಾವ್ ಅವರು ತಾವು ಬರೆದ 'ಶ್ರೀ ಸತ್ಯನಾರಾಯಣ ವ್ರತಮಹಾತ್ಮೆ' ನಾಟಕವನ್ನು ಅದ್ದೂರಿ ರಂಗಸಜ್ಜಿಕೆಯೊಂದಿಗೆ ಆಡುತ್ತಿದ್ದರು. ಆ ನಾಟಕವನ್ನು ನಟರಾಜ ನೋಡಲು ಬಂದಿದ್ದು ನನಗೆ ನೆನಪು. ಆಗ ಶ್ರೀ ಏಣಗಿ ಬಾಳಪ್ಪನವರ ಶ್ರೀ ಕಲಾ ವೈಭವ ನಾಟ್ಯಸಂಘ ಹುಕ್ಕೇರಿಯಲ್ಲಿ ಕ್ಯಾಂಪು ಮಾಡಿತ್ತು, 'ಜಗಜ್ಯೋತಿ ಬಸವೇಶ್ವರ', 'ಮಾವಬಂದ್ಮ ಪೋಮಾವ', 'ದೇವರ ಮಗು' ನಾಟಕಗಳನ್ನು ಅಂತಹ ಭವ್ಯ ರಂಗಸಜ್ಜಿಕೆ ಇಲ್ಲದೆ ತುಂಬಾ ಸರಳ ರಂಗಸಜ್ಜಿಕೆಯಲ್ಲಿ ಸುಂದರ ಪ್ರಯೋಗಗಳನ್ನು ಕೊಡುತ್ತಿದ್ದರು. ನಾನು ನನ್ನ ತಂದೆ ಜೊತೆ ಹುಕ್ಕೇರಿಗೆ ಹೋಗಿ ಏಣಗಿ ಕಂಪನಿ ನಾಟಕಗಳನ್ನು ನೋಡಿದ ನೆನಪು.

ಅವುಗಳಲ್ಲಿ ಚಿಕ್ಕಮಟ್ಟ ಪಾತ್ರಗಳನ್ನು ನಟರಾಜ ಮಾಡುತ್ತಿದ್ದ. ಆಗ ಆತನಿಗೆ ಸುಮಾರು 11-12 ವರ್ಷ ವಯಸ್ಸಿರಬಹುದು. ಆರ್.ಡಿ.ಕಾಮತ್ ವಿರಚಿತ 'ದೇವರ ಮಗು' ನಾಟಕದಲ್ಲಿ ನಟರಾಜನ ತಂಗಿ ಭಾಗ್ಯಮ್ಮ ಮೂಲಾನಕ್ಷತ್ರದಲ್ಲಿ ಹುಟ್ಟಿದ್ದಕ್ಕೆ ಸಮಾಜದಿಂದ ಉಪೇಕ್ಷಿತಗೊಂಡ ಮಗುವಿನ ಪಾತ್ರವನ್ನು ತುಂಬಾ ಮನೋಜ್ಞವಾಗಿ ಅಭಿನಯಿಸಿದ್ದಳು. ಭಾಗ್ಯಮ್ಮ ಕೂಡ ಉತ್ತಮ ನಟಿ. ಆ ಮುಗ್ಧ ಮಗುವಿನ ಪಾತ್ರವನ್ನು ನಟರಾಜ ಕೂಡಾ ಮಾಡುತ್ತಿದ್ದನಂತೆ. ನನ್ನ ತಂದೆ ಕೆಲದಿನ ಶ್ರೀ ಏಣಗಿ ಬಾಳಪ್ಪನವರ ಕಂಪನಿಯಲ್ಲಿ ನಟರಾಗಿದ್ದರು. ಅಭಿನಯದ ಕೆಲ ಪ್ರಾಥಮಿಕ ಪಾಠಗಳು ನನ್ನ ತಂದೆ ಹಾಗೂ ಸಿರ್ಸಿ ಪೇಂಟರ್ ಎಂಬ ನಟರಿಂದ ಕಲಿತದ್ದಾಗಿ ನಟರಾಜ ನನ್ನಲ್ಲಿ ಹೇಳಿಕೊಂಡಿದ್ದ. ಹೀಗೆ ನನ್ನ ಅವನ ಸ್ನೇಹ ಕಂಪನಿ ನಾಟಕದ ಹಿನ್ನೆಲೆಯಲ್ಲಿ ಬೆಳೆಯಿತು. ಈಗಲೂ ಎಷ್ಟೋ ಸಂದರ್ಭಗಳಲ್ಲಿ ಕೆಲವರು "ಏನ್ರಿಪಾ ನೀವು ಎಷ್ಟಂದ್ರೂ ನಾಟಕ ಕಂಪನಿಯವರು" ಎಂದು ವ್ಯಂಗ್ಯದಿಂದಲೇ ಹೇಳುತ್ತಾರೆ.

ಮುಂದೆ ಸಮಕಾಲೀನ ರಂಗಭೂಮಿಯಲ್ಲಿ ಕೆಲಸ ಮಾಡುತ್ತಿದ್ದಾಗ 2000ರಲ್ಲಿ - ಅಂದರೆ ಆತ ತಿರುಗಾಟ ನಾಟಕಗಳಲ್ಲಿ ಅಭಿನಯಿಸಿದ 8-10 ವರ್ಷಗಳ ನಂತರ - ನಮ್ಮೀರ್ವರ ಕಂಪನಿ ಹಿನ್ನೆಲೆಯ ಸ್ನೇಹದ ಸ್ಥಾಯಿ ನೆಲೆಯನ್ನು ಒರೆಗಲ್ಲಿಗೆ ಹಚ್ಚಲು 'ಜಗಜ್ಯೋತಿ ಬಸವೇಶ್ವರ', 'ಸಾಗ್ರಸಂಗೀತ ಮೃಚ್ಛಕಟಿಕ', 'ಬತ್ತಲೆ ವೇಷ' (ದಾರಿಯೋ ಫೋನ 'One Was Nude and One wore Tails' ನಾಟಕದ ಕನ್ನಡ ರೂಪಾಂತರ) ಹಾಗೂ 'ದೊರೆ ಈಡಿಪಸ್' ನಾಟಕಗಳನ್ನು ಕೂಡಿ ಮಾಡಿಯೂ ಆಯ್ತು. ಆದರೆ ಈ joint venture ಬಹಳ ದಿನ ಮುಂದುವರೆಯಲಿಲ್ಲ.

80ರ ದಶಕದಲ್ಲಿ ಹವ್ಯಾಸಿ ರಂಗಭೂಮಿಯು ಹೊಸ ವೃತ್ತಿಪರತೆಯ ಅನ್ವೇಷಣೆಯಲ್ಲಿ ತೊಡಗಿತ್ತು. ರೆಪರ್ಟರಿಯ ಪರಿಕಲ್ಪನೆಯಿಂದಾಗಿ ಆ ರಂಗಭೂಮಿಯಲ್ಲಿ ವೃತ್ತಿಪರತೆಯ ಸಾಧ್ಯತೆಗಳು ತೆರೆದುಕೊಂಡಿದ್ದವು. ಏಣಗಿ ನಟರಾಜ ನೀನಾಸಂ ರಂಗ ಶಿಕ್ಷಣ ಕೇಂದ್ರದ ಮೊದಲ ಬ್ಯಾಚಿನ ವಿದ್ಯಾರ್ಥಿಯಾಗಿದ್ದು ಮುಂದೆ 1984-85 ರಲ್ಲಿ ನೀನಾಸಂ ಪ್ರಾರಂಭಿಸಿದ ತಿರುಗಾಟ ರೆಪರ್ಟರಿ ತಂಡದ ಎಲ್ಲ ರಂಗಪ್ರಯೋಗಗಳ ಮುಖ್ಯ ನಟನಾದ. ಸಿಕ್ಕ ಪಾತ್ರಗಳನ್ನು ಸಮರ್ಥವಾಗಿ ನಿಭಾಯಿಸಿ ಅದ್ಭುತ ನಟನಾಗಿ ಹೊರಹೊಮ್ಮಿದ.



ದಾರಿಯೋ ಫೋನ 'ಬೆತ್ತಲೆ ವೇಷ' ನಾಟಕದಲ್ಲಿ ನಟರಾಜ್

ಉತ್ತರ ಕರ್ನಾಟಕದ ವೃತ್ತಿ ರಂಗಭೂಮಿಯಲ್ಲಿ ಡಿ.ದುರ್ಗಾದಾಸ, ಜಿ.ಶಾಂತಕುಮಾರ ಎಲಿವಾಳಸಿದ್ದಯ್ಯ, ಅಮೀನಸಾಬ್, ರಾಮರಾವ್ ಒಡೆಯರ್ ಸಿರ್ಸಿ ಪೇಂಟರ್ ಮುಂತಾದ ಪ್ರತಿಭಾನ್ವಿತ ನಟರ ಅಭಿನಯ ನೋಡಿ ಬೆರಗುಗೊಂಡ ನನಗೆ ಆಗಿನ ಹವ್ಯಾಸಿ ರಂಗನಟರ ಅಭಿನಯ ಸಪ್ಪೆ ಅನ್ನಿಸಿತು. ಈಗಲೂ ಆ ಭಾವನೆ ಹೋಗಿಲ್ಲ, ಹಾಗೆ ಇದೆ. ಈ ಸಂದರ್ಭದಲ್ಲಿ ತಿರುಗಾಟದಲ್ಲಿ ನಟರಾಜ ಅಭಿನಯಿಸಿದ 'ಮ್ಯಾಕಬೆತ್', 'ತದ್ರೂಪಿ', 'ವಿಗಡವಿಕ್ರಮರಾಯ', 'ಹುಂಟಿಲಾ ಲೋಕಶಾಕುಂತಲಾ', 'ಮಿಸ್ ಸದಾರಮೆ' ನಾಟಕಗಳಲ್ಲಿಯ ಅಭಿನಯ ಅದೇ ಬೆರಗನ್ನು ಮತ್ತೆ ಹುಟ್ಟಿಸಿತು. ವೃತ್ತಿ ರಂಗಭೂಮಿ ನಟರಲ್ಲಿರುವ ಮೋಡಿ ಮಾಡ ಬಲ್ಲ ಸಂಭಾಷಣೆಯ ಸ್ವಾರಸ್ಯಪೂರ್ಣ ಅಭಿವ್ಯಕ್ತಿ ನಟರಾಜನ ಅಭಿನಯದಲ್ಲೂ ಇತ್ತು, ಅವನ ವಾಚಿಕ ಅಭಿನಯ ತುಂಬಾ ಕರಾರುವಾಕ್ಕಾಗಿ ರುತ್ತಿತ್ತು, ಇದಕ್ಕೆ ಕಾರಣ ಆತನಿಗಿದ್ದ ವೃತ್ತಿ ರಂಗಭೂಮಿಯ ವಾಚಿಕ ಅಭಿನಯ ಸಂಸ್ಕಾರದ ಹಿನ್ನೆಲೆ. ಅಷ್ಟೇ ಅಲ್ಲ, ಆತ ಆಗಿನ ಹೊಸ ರಂಗಭೂಮಿಯ ಸಾಧ್ಯತೆಗಳನ್ನು ಬಹುಬೇಗ ಅರಿತುಕೊಂಡ. ಒಂದರ್ಥದಲ್ಲಿ ವೃತ್ತಿ ಮತ್ತು ಹವ್ಯಾಸಿ ರಂಗಭೂಮಿಗೆ ಆತ ತನ್ನ ಅಭಿನಯದ ಮೂಲಕ ಕೊಂಡಿಯಾ ಅಂತೆಯೇ ನಟನಾಗಿ ಗೆದ್ದ. ಈ ನಾಡಿನ ಮಹಾನ್ ರಂಗ ನಿರ್ದೇಶಕರಾ ಬಿ.ವಿ.ಕಾರಂತ, ಪ್ರಸನ್ನ, ಜಂಬೆ, ಅಕ್ಷರ, ಇವರು ಆಗ ತಮ್ಮ ಸೃಜನಶೀ ನಾಟಕ ಕಟ್ಟುವಿಕೆಯಿಂದಾಗಿಯೂ ನಟರಾಜನ ಗೆಲುವಿಗೆ ಕಾರಣರಾ ದ್ದರೆಂಬುದನ್ನು ನಾವು ಮರೆಯುವ ಹಾಗಿಲ್ಲ. ನಟರಾಜ ತನ್ನ ಉಚ್ಛ್ರಾಯ ಕಾಲದಲ್ಲಿ ನಟಿಸಿದ ಬಹುತೇಕ ನಾಟಕಗಳನ್ನು ಈ ನಿರ್ದೇಶಕರೇ ನಿರ್ದೇಶಿ ದ್ದಾರೆ. ಹಾಗೆ ಹುಲಿಗೆಪ್ಪಾ ಕಟ್ಟಿಮನಿ, ಮಂಡ್ಯ ರಮೇಶ, ಕೆ.ಜಿ.ಕೃಷ್ಣಮೂರ್ತಿ ಸರೋಜಾ ಹೆಗಡೆ, ಗಣಪತಿ ಹೆಗಡೆ ಮುಂತಾದ ಪ್ರತಿಭಾನ್ವಿತ ನಟರಿರು 'ಟೀಂ-ತಿರುಗಾಟ'ದ ಮಧ್ಯದಲ್ಲಿ ನಟನಾಗಿ ನಟರಾಜ ಇದ್ದ ಅನ್ನುವುದ ಅಷ್ಟೇ ಮುಖ್ಯ. "ನಟರಾಜ ಅದ್ಭುತ ನಟನಾಗಿದ್ದ" ಎಂದು ರಂಗಭೂಮಿಯ ಆ ಕಾಲ ಸಂದರ್ಭದ ಹಿನ್ನೆಲೆಯಲ್ಲಿ ಹೇಳಬಹುದು.

90ರ ದಶಕದ ನಂತರ ರಂಗನಟನೆ ಹಾಗೂ ರಂಗಪ್ರಯೋಗಗಳ ಸಾಕಷ್ಟು ಬದಲಾವಣೆ ಕಾಣಿಸಿಕೊಳ್ಳುತ್ತಾ, 80 ರ ದಶಕಕ್ಕಿಂತ ತೀರಾ ಭಿನ್ನವಾ ರಂಗ ವ್ಯಾಕರಣಗಳು ಈಗಿನವರೆಗೆ ಸೃಷ್ಟಿಗೊಳ್ಳುತ್ತಾ ರಂಗಭೂಮಿ ತ ಜೀವಂತಿಕೆಯನ್ನು ಉಳಿಸಿಕೊಳ್ಳಲು ಹೋರಾಡುತ್ತಿದೆ. ಅಭಿನಯದ ಪರಿಕಲ್ಪ ಕೂಡಾ ಬದಲಾಗುತ್ತಾ ಸಾಗಿದೆ. ಬದಲಾವಣೆ ಕಾಣುತ್ತಾ ಹೋಗುವುದು ಆಧುನಿಕ ರಂಗಭೂಮಿಗೆ ಅನಿವಾರ್ಯ ಮತ್ತು ಜರೂರು ಕೂಡ. ಬದಲಾವಣೆಯ ಪ್ರಕ್ರಿಯೆಯನ್ನು ಸಮಕಾಲೀನ ರಂಗಭೂಮಿಯಲ್ಲಿ ಕೆಲ ಮಾಡುವವರು ಗ್ರಹಿಸಿ ತಮ್ಮನ್ನು upgrade ಮಾಡಿಕೊಳ್ಳುತ್ತ ಇರಬೇಕಾಗುತ್ತದೆ. ಇಲ್ಲವಾದರೆ ವೃತ್ತ ರಂಗಭೂಮಿಯವರಂತೆ ಅಥವಾ ಎಪ್ಪ ದಶಕದ ಹವ್ಯಾಸಿ ರಂಗಭೂಮಿಯವರಂತೆ ಕಳೆದ ವೈಭವವನ್ನೇ ಮೆಲು ಹಾಕುತ್ತ ಕುಳಿತರೆ ಸದ್ಯ ತನ್ನೆದುರಿಗಿರುವ ರಂಗಭೂಮಿಯಲ್ಲಿ ತಾ ಪರಕೀಯನಾಗಿಬಿಡುತ್ತಾನೆ. ನಟರಾಜನಿಗಾದದ್ದು ಇದೆ. ತನ್ನ ಉಚ್ಛ್ರಾಯ ಕಾಲ ನಂತರ ನಟರಾಜ ಬಹಳ ವರ್ಷ ಟಿ.ವಿ. ಮಾಧ್ಯಮದಲ್ಲಿ ನಟನಾಗಿ ಕಳೆ

ಆತ ಬದಲಾಗುತ್ತಿರುವ ರಂಗನಟನೆ, ರಂಗಪ್ರಯೋಗಗಳಿಗೆ ಪ್ರತಿಕ್ರಿಯಿಸ ಇಲ್ಲ, ಹೊಸ ರಂಗಪ್ರಯೋಗಗಳನ್ನು ನೋಡುವ, ಹೊಸ ನಟರ ಅಭಿನಯವ ಅರ್ಥಮಾಡಿಕೊಳ್ಳಲು ಆತನಿಗೊಂದು ತರಹದ ಉದಾಸೀನತೆ ಇದ್ದದ್ದು ನ ಅನುಭವಕ್ಕೆ ಬಂದಿದೆ. ರಾಷ್ಟ್ರೀಯ ಹಾಗು ಜಾಗತಿಕ ಮಟ್ಟದ ರಂಗಭೂಮಿಯಲ್ಲಿ ಆಗುತ್ತಿರುವ ಬದಲಾವಣೆಗಳ ಬಗ್ಗೆಯೂ ಅವನಿಗೆ ಆ ಇರಲಿಲ್ಲ, ಒಂದು ಅರ್ಥದಲ್ಲಿ ಆತ ಪಕ್ಕಾನಟ. ಅದರೆ ರಂಗದ ಮೇ ತನ್ನಲ್ಲಿಯ ನಟನನ್ನು ನಿರಂತರವಾಗಿ ಜೀವಂತವಾಗಿಡಲು ಮಾನಸಿಕ ಹಾ ದೈಹಿಕ ಪ್ರಯತ್ನವನ್ನೂ ತಿರುಗಾಟದ ನಂತರದ ದಿನಗಳಲ್ಲಿ ಮಾಡಲಿ ಮತ್ತು ಆತನ ಪ್ರತಿಭೆಯನ್ನು ದುಡಿಸಿಕೊಂಡು ಆರ್ಥಿಕ ಭದ್ರತೆ ಕೊಡಬಲ್ಲಂತ ಕಂಪನಿ ಮಾದರಿಯ ರಂಗಸಂಸ್ಥೆಗಳೂ ಇರಲಿಲ್ಲ, ಟಿ.ವಿ. ಧಾರಾವಾಹಿಯ ಭದ್ರತೆಯೇನೋ ಸಿಕ್ಕಿತು. ಆದರೆ ಅದಾಗಲೇ ಆತನಲ್ಲಿಯ ರಂಗನಟ ಬಸವಳಿದ 90ರ ದಶಕದ ನಂತರ ರಂಗಭೂಮಿಯಲ್ಲಿ ಕೆಲಸ ಮಾಡಲು ಆತ ಹಲವಾರು ಅವಕಾಶಗಳು ಬಂದಾಗ್ಯೂ ಅಲ್ಲಿ ಕೆಲಸ ಮಾಡುವಷ್ಟು ಮಾನ ಹಾಗೂ ದೈಹಿಕ ಸಿದ್ಧತೆ ಕೂಡಾ ಆತನಿಗೆ ಅಸಾಧ್ಯವಾಗಿತ್ತು, ಆದಾಗ ಕನ್ನಡನಾಡಿನ ಪ್ರತಿಭಾವಂತ ರಂಗನಟರ ಪಟ್ಟಿಯಲ್ಲಿ ನಟರಾಜ ಕೂ ಅಜರಾಮರವಾಗಿ ಉಳಿಯುತ್ತಾನೆ. ಗೆಳೆಯ ನಟರಾಜ - "ನಟ ತೆರೆ ಮರೆಯಾದ ಆಟ ತೀರಿಸಿಕೊಂಡ."

ಆತನ ಆತ್ಮಕ್ಕೆ ಶಾಂತಿ ಸಿಗಲಿ.

- ಡಾ. ಪ್ರಕಾಶ್ ಗರು

ಏಣಗಿಯ ಸಂಜೆಯಲ್ಲಿ ಮರೆಯಾದ ವಿಕ್ರಮರಾಯ

ಗೆಳೆಯ ಏಣಗಿ ನಟರಾಜನ ಸಾವು, ಅವನನ್ನ ಬಲ್ಲ ಎಲ್ಲರಿಗೂ ನೋವುಂಟು ಮಾಡಿದೆ ನಿಜ, ಆದರೆ ಯಾರಿಗೂ ಆಶ್ಚರ್ಯವಾಗಿರಲಿಕ್ಕಿಲ್ಲ, ತನ್ನನ್ನು ಪ್ರೀತಿಸುವ, ತನ್ನ ಶ್ರೇಯೋಭಿವೃದ್ಧಿ ಬಯಸುವ ದೀರ್ಘಾಯುಷಿ ತಂದೆ ತಾಯಿ, ಕುಟುಂಬ, ಜನ ಇದ್ದಾರೆ ಎಂಬುದ್ಯಾವುದನ್ನೂ ಲೆಕ್ಕಿಸದೆ, ಕೊನೆಗೆ ತನ್ನನ್ನೂ ತಾನು ನೋಡಿಕೊಳ್ಳದೆ ದೂರದೂರ ಹೋಗಿಬಿಟ್ಟ. ಮಧ್ಯರಾತ್ರಿಯಲ್ಲಿ ನಮ್ಮ ಮನೆಗೆ ಬಂದು 'ತಾಳಿಪಟ್ಟು ತಿನ್ನಬೇಕು' ಅಂತ ಎಬ್ಬಿಸಿ ತಿಂದು ಗದ್ದಲ ಮಾಡಿಹೋಗುತ್ತಿದ್ದ ಮನುಷ್ಯ ಹೀಗೆ, ಇಷ್ಟು ಬೇಗ ನಮ್ಮನ್ನೆಲ್ಲಾ ಅಗಲುತ್ತಾನೆಂದು ನಾನೆಣಿಸಿರಲಿಲ್ಲ, ಆಸ್ಪತ್ರೆಗೆ ಹೋಗುವುದು ಬರುವುದು ನಡೆದಿತ್ತು. ಈ ಸಾರೆ ಆಸ್ಪತ್ರೆಯಿಂದ ಬಂದಮೇಲೆ, ನಾನೇ ಖುದ್ದು ಹೋಗಿ ಮಾತಾಡಬೇಕೆಂದಿದ್ದ, ಆದರೆ ತಿರುಗಿಯೂ ನೋಡದೆ ಹೋಗಿಬಿಟ್ಟ ಮಾರಾಯ.

ಅಂತಿಮಯಾತ್ರೆಗಾಗಿ ಅಂದು ಬೆಳಗ್ಗೆ ಇಕ್ಬಾಲ್ ಸಾರಥ್ಯದಲ್ಲಿ ನನ್ನ ಹೆಂಡತಿಯೊಂದಿಗೆ ಧಾರವಾಡದ ಕಡೆ ಹೊರಟೆ. ದಾರಿಯುದ್ದಕ್ಕೂ ಮೂವರೂ ಅವನೊಂದಿಗಿನ ಒಡನಾಟದ ಮೆಲುಕು ಹಾಕುತ್ತಿದ್ದೆವು.

1985ರಲ್ಲಿ ನೀನಾಸಂ ತಿರುಗಾಟದ ಮೊದಲ ವರ್ಷ-ಲೋಕ ಶಾಕುಂತಲದ ವಿದೂಷಕನ ಪಾತ್ರದೊಂದಿಗೆ ನಟರಾಜನ ರಂಗಭೂಮಿ ಸಂಬಂಧ ಆರಂಭವಾಯಿತು. ಆನಂತರದಲ್ಲಿ ವಿಗಡವಿಕ್ರಮಚರಿತೆಯಲ್ಲಿನ ವಿಕ್ರಮ, ಈ ಕೆಳಗಿನವರು ನಾಟಕದಲ್ಲಿನ ಲಕ್ಕಪ್ಪ ಬ್ರೆಕ್ಟನ ಪುಂಟಿಲ ನಾಟಕದಲ್ಲಿನ ಪುಂಟಿಲ ಪಾತ್ರಗಳು ಅವಿಸ್ಮರಣೀಯವಾದದ್ದು, ಎಲ್ಲವೂ ವಿಭಿನ್ನವಾದ ಪಾತ್ರಗಳು. ಅದಕ್ಕೆ ತಕ್ಕ ಪ್ರಬುದ್ಧ ಅಭಿನಯ. ನಮ್ಮ ದಾರಿಯುದ್ದಕ್ಕೂ ಅಲಿಬಾಬಾ ನಾಟಕದ ಹಕೀಮನ ಪಾತ್ರದ ಮಾತನ್ನೇ ಬಳಸುತ್ತ ಇಕ್ಬಾಲ್‌ಗೆ ಎಡಕ್ಕೆ-ಬಲಕ್ಕೆ ಅಂತ ದಾರಿ ಹೇಳುತ್ತಿದ್ದೆ, ಆ ಹಕೀಮನ



ಪಾತ್ರ ಇನ್ನೂ ಕಣ್ಣಿಗೆ ಕಟ್ಟಿದಂತಿದೆ. ನಟರಾಜ ಅಪ್ಪಟ ರಂಗಭೂಮಿಗಾಗಿಯೇ ಮಾಡಿದ ನಟ. ಅವನು ಯಾವತ್ತೂ ಹಣಕ್ಕಾಗಿಯೇ ನಟಿಸಿದ್ದು ನಾನು ಕೇಳಿಲ್ಲ. ತಂಡದಲ್ಲಿ ಹಿರಿಯ ಮತ್ತು ಜನಪ್ರಿಯ ನಟನಾಗಿ ಎಂದೂ ತಾನೇ ಬೇರೆ, ಹೆಚ್ಚಿನ ವೇತನ ಬೇಕು ಎಂದು ಕೇಳಿದವನಲ್ಲ. ಯಾವ ಸಂದರ್ಭದಲ್ಲಿಯೂ ಬ್ಲಾಕ್‌ಮೇಲ್ ತಂತ್ರ ಮಾಡಿದ ನಟನಲ್ಲ, ತಂಡದ ಕಷ್ಟಸುಖದಲ್ಲಿ ಸಮನಾಗಿ ಭಾಗವಹಿಸುತ್ತಿದ್ದ ಪ್ರದರ್ಶನದ ಹೊತ್ತಿಗೆ ಒಬ್ಬ ನಟ ಇಲ್ಲ ಎಂದರೆ, ತಕ್ಷಣದಲ್ಲಿ ಆ ಪಾತ್ರಕ್ಕೆ ಸಿದ್ಧವಾಗಿರುತ್ತಿದ್ದ.

ಒಮ್ಮೆ ಸಂಸರ 'ಬೆಟ್ಟದರಸು' ನಾಟಕ - 'ಇದೇನೋ ಮೈಸೂರು ಅರಸರ ಚರಿತ್ರೆ ಬೋರು' ಎಂದು ನಾನು ಓದಿರಲಿಲ್ಲ, ಇಳಕಲ್ ತಿರುಗಾಟದ ಮೊಕ್ಕಾಂನಲ್ಲಿ ಅಯೋಧ್ಯಾ ಗಲಾಟೆಯಿಂದಾಗಿ ಐದು ದಿನ ಖಾಲಿ ಕೂರಬೇಕಾಯಿತು. ಆಗ ಎಷ್ಟು ಅದ್ಭುತವಾಗಿ ಆ ನಾಟಕ ಓದಿ ಅರ್ಥೈಸಿದ. ಆಮೇಲೆಯೇ ನನಗೆ ಸಂಸರ ನಾಟಕ ಮಾಡುವ ಧೈರ್ಯ ಬಂದಿದ್ದು, ಹಾಗೇ ಇನ್ನೊಮ್ಮೆ ಜಿ.ಬಿ.ಜೋಷಿಯವರ ನಾಟಕ 'ಆ ಊರು-ಈ ಊರು' ಓದಿ ಚಿತ್ರ ಕಟ್ಟಿಕೊಟ್ಟಿದ್ದ, ಅವನ ಕರಾರುವಾಕ್ಕಾದ ಮಾತು, ಆ ಮಾತಿಗೆ ತಕ್ಕನಾಗಿ ಬಳಸುತಿದ್ದ ಕೈ ಭಾಷೆ ಅವನ ಅಭಿನಯದ ಜೀವಾಳ. ವಾಚಿಕ ಅವನ ಅಭಿನಯದ ವೈಶಿಷ್ಟ್ಯ. ಆದಕ್ಕಾಗಿಯೇ ಬಿ.ವಿ.ಕಾರಂತರು ಅವನನ್ನು ರಂಗಾಯಣದಲ್ಲಿ ಅಭಿನಯ ಶಿಕ್ಷಕನನ್ನಾಗಿ ನೇಮಿಸಿಕೊಂಡಿದ್ದರು. ಪಕ್ಕಾ ನಟನಾಗಿದ್ದ ನಟರಾಜನಿಗೆ ಅಲ್ಲಿ



ಹೆಚ್ಚು ದಿನ ಆ ಕೆಲಸ ರುಚಿಸ ಅವನ ಇನ್ನೊಂದು ನಾಟಕ ನ ನೋಡಿದ್ದು 'ಬೆತ್ತಲೆ ಮನುಷ್ಯ ಅದ್ಭುತವಾಗಿ ಮಾಡಿದ್ದ. ಆ ತ ಕೂಡ ಪಳಗಿದ ನಟನಟಿಂ ತಂಡವಾಗಿತ್ತು.

ಹೀಗೇ ಮಾತಾಡುತ್ತ ನ ದಾರಿ ಏಣಗಿವರೆಗೆ ಸಾಗಿತ್ತು. ಸುಮಾರು ನಾಲ್ಕು ಗಂಟೆಯಾಗಿ ಊರ ಗುಡಿಯೊಳಗೆ ಸಿದಿಗೆ ಇವನನ್ನು ಕೂರಿಸಿದ್ದರು. ತಲೆ ಬಿಳಿ ಟೋಪಿ, ಕೈ ಮುಗಿದಿದ್ದ, ನೋಡಿದರೆ ಯಾವುದ ನಾಟಕದ ಪಾತ್ರದಂತೆ ಕಾಣುತ್ತಿದ್ದ ಪತ್ರೆ ಹಾಕಿ ಕೈ ಮುಗಿ ಪಕ್ಕದಲ್ಲಿದ್ದ ವಿಶ್ವೇಶ್ವರಿ ಯಾರಿಗೊ 'ಜಂಬೆಯವರು' ಎ ಪರಿಚಯಿಸಿದಳು. ಆ ಕ್ಷಣಕ್ಕೆ ನಟರಾಜನನ್ನೇ ನೋಡ ಇಕ್ಬಾಲ್‌ಗೆ ನನ್ನ ಕಡೆಗೆ ತಿರುಗಿದಂತೆ ಭಾಸವಾಯಿತ ಆಮೇಲೆ ದಾರಿಯಲ್ಲಿ ಬರುತ್ತ ಹೇಳಿದ. ತಾ ಲಕ್ಷ್ಮೀಬಾಯಿಯವರನ್ನು ಕಂಡು ಸಂತೈಸಿದೆವು. ನಟರ ಹಿರಿಯ ಹೆಂಡತಿ ಉಮಾ ನನ್ನ ವಿದ್ಯಾರ್ಥಿನಿಯಾಗಿ ಲಕ್ಷ್ಮೀಬಾಯಿಯವರು ನಮ್ಮ ಮನೆಗೆ ಬಂದಿದ್ದರು. ವ ಬದುಕಿನ ಬಗ್ಗೆ ತುಂಬಾ ಕನಸನ್ನು ಕಂಡವರು. ಬಾಳಪ್ಪನವರೂ ಕೂಡ. ನೊಂದು ಬೆಂದ ಜೀವ, ದ ಅವರ ಮುಖವನ್ನು ಆವರಿಸಿತ್ತು, "ನಟರಾಜನಿಗಾಗಿ ಮಾಡಿದೆ, ಉಳಿಸಿಕೊಳ್ಳಲಿಕ್ಕೆ ಆಗಲಿಲ್ಲ" ಎಂದರು. ನಟ ಲಕ್ಷ್ಮೀಬಾಯಿ ಬಾಳಪ್ಪನವರ ರಂಗಭೂಮಿಯ ಕನಸ ಆ ಕನಸೇ ಇಂದು ಕರಗಿಹೋಗಿತ್ತು, ಇನ್ನೆಲ್ಲಿ ಆ ತದ

- ಚಿದಂಬರ ರಾವ್ ಜಂಬೆ,

ಕಿಲ್ಲರ್ ಲೇಡಿ ಮತ್ತು ಕಿಲಾಡಿ ಹುಡುಗಿ

ಹುಡುಗಿಯರದ್ದೇ ಮೇಲುಗೈ!

ಎಸ್ಸೆಸ್ಸೆಲ್ಸಿ, ಪಿಯುಸಿ, ಸಿಇಟಿ ಫಲಿತಾಂಶಗಳ ಬೆನ್ನಿಗೆ ತದ್ದೊಂದು ಸಿಂಥೆಟಿಕ್ ಉದ್ಗಾರ ಸಿದ್ಧವಾಗೇ ಇರುತ್ತೆ. ಣಿಕ ಕ್ಷೇತ್ರ ಅಂತಲ್ಲ ಎಲ್ಲ ಕ್ಷೇತ್ರದಲ್ಲೂ ಮಹಿಳೆಯರೀಗ ಲುಗೈ ಸಾಧಿಸಲು ನಿಂತಿರೋದು ತೀರಾ ಸಾಮಾನ್ಯ ೀ ಅಗತ್ಯವೂ ಕೂಡ. ಇಲ್ಲಿಬ್ಬರು 'ಮಿಸ್'ಗಳ ಮಿಸ್ಟರಿ ದರೆ ಮಿಸ್ಟೇಕ್ ಕ್ಷೇತ್ರಗಳಲ್ಲೂ ಮಿಸ್ಟರ್‌ಗಳಿಗೆ ಕೋಕ್ ಲು ತಯಾರಿ ನಡೆಸಿ ದ್ದಾರೇನೋ ಎನ್ನುವ ಅನುಮಾನ ಡದಿರದು.

ಒಬ್ಬಳು ಸುಷ್ಮಾ ಮತ್ತೊಬ್ಬಳು ಸ್ಮಿತಾ ಅಲಿಯಾಸ್ ಣಾಶ್ರೀ. ಪ್ರತ್ಯೇಕ ಪ್ರಕರಣಗಳ ಈ ಇಬ್ಬರೂ ಕ್ರೈಮ್ ಯುಕಿಯರು ಈಗಷ್ಟೆ ಯೌವನಕ್ಕೆ ಕಾಲಿರಿಸಿದ ಕನ್ಯಾಮಣಿ ರು. ಆದರೆ ಆಗಲೇ ಪೊಲೀಸ್ ಅತಿಥಿಗಳಾಗಿ ಕಂಬಿ ಕೌಂಟ್ ಮಾಡುತ್ತಿದ್ದಾರೆ. ಅಷ್ಟಕ್ಕೂ ಒಬ್ಬಳಿಗೆ ಬಡತನ ತ್ತು ಐಷಾರಾಮಿಯ ಖಯಾಲಿ ಜೈಲು ದರ್ಶನ ಮಾಡಿಸಿ ಮತ್ತೊಬ್ಬಳಿಗೆ ಖುದ್ದು ಶ್ರೀಮಂತಿಕೆಯೇ ಹಾದಿ ಸಿದೆ.

ಸುಷ್ಮಾ ಪ್ರೇಮ ಪ್ರಸಂಗ

ಎಲ್ಲಾ ಸರಿಯಾಗಿದ್ದಿದ್ದರೆ ಸುಷ್ಮಾ ಪ್ರಥಮ ವರ್ಷದ ಎಂ ಪರೀಕ್ಷೆಗೆ ಪ್ರಿಪೇರ್ ಆಗಬೇಕಿತ್ತು. ಆದರೆ ತನ್ನ ಜಿ ಪ್ರಿಯಕರ ಮತ್ತಾತನ ಸ್ನೇಹಿತನ ಕೊಲೆಗೆ ಬರೋಬ್ಬರಿ ಲಕ್ಷದ ಸುಪಾರಿ ನೀಡಿದ ಕೇಸ್‌ನಲ್ಲಿ ತಗುಲಿಕೊಂಡು ್ ಗಿರಾಕಿಯಾಗಿದ್ದಾಳೆ. ಈ ಮಿಸ್ ಇಟ್ಟ ಮಹೂರ್ತಕ್ಕೆ ಯಕರ ಮಂಜುನಾಥ್ ಜಸ್ಟ್ ಮಿಸ್ಸಾಗಿದ್ದರೆ, ಆತನ ತ ಅಲಿ ಹುಸೇನ್ ಡೆಡ್‌ಬಾಡಿಯಾಗಿ ಮಣ್ಣು ಸೇರಿದ್ದ.

ವೆಲ್ಲೂರು ಮೂಲದ ಜೆ. ಶ್ರೀನಿವಾಸನ್ ಎಂಬ ಂಡ್‌ಲಾರ್ಡ್‌ನ ಮಗಳು ಈಕೆ. ಸದ್ಯ ಇಡೀ ಟುಂಬ ಬೆಂಗಳೂರಿನ ಜಾಲಹಳ್ಳಿಯಲ್ಲಿ ವಾಸ ಿ. ರಿಯಲ್ ಎಸ್ಟೇಟ್‌ನಲ್ಲಿ ಒಂದಷ್ಟು ರೊಕ್ಕ ಡಿಕೊಂಡಿದ್ದ ಶ್ರೀನಿವಾಸನ್ ಮಗಳನ್ನು ಅತಿ ದ ಮುದ್ದಿನಿಂದಲೇ ಬೆಳೆಸಿದ್ದ. ಸೆಕೆಂಡ್ ಮುಸಿಯಲ್ಲಿ ಸೆಕೆಂಡ್ ಕ್ಲಾಸ್‌ನಲ್ಲಿ ತನ್ನ ಮಗಳು ಾಗಿದ್ದೇ ಆತನಿಗೆ ದೊಡ್ಡ ಸಾಧನೆಯೆನಿಸಿತ್ತೇನೋ ನಕ್ಕೆಂದೇ ಬೊಲೆರೋ ಕಾರನ್ನೇ ಸುಷ್ಮಾಗೆ ಗಿಫ್ಟು ಟ್ಟಿದ್ದ. ಈಗ ಅದೇ ಕಾರು ಆಕೆಯ ಭವಿಷ್ಯಕ್ಕೆ ಡ್ಡದೊಂದು ಬ್ರೇಕ್ ಹಾಕಿದೆ.

ಮಲ್ಲೇಶ್ವರಂನ ಎಂ.ಇ.ಎಸ್ ಕಾಲೇಜಿನಲ್ಲಿ ಎಂ ಕೋರ್ಸ್ ಸೇರಿಕೊಂಡ ಮಗಳನ್ನು ಡಿಸಲು ಡ್ರೈವರ್ ಕಮ್ ಬಾಡಿಗಾರ್ಡ್ ಸಕ್ಕೆಂದು ಮನೆಯ ಹತ್ತಿರವೇ ಇದ್ದ ಮಂಜುನಾಥ್ ಗೆಲ್ಲಪ್ಪನನ್ನು ಶ್ರೀನಿವಾಸನ್ ನೇಮಿಸಿದ್ದ. ಜೋಡಿ ಸುತ್ತಾಟ, ್ ಚಾಟ್‌ಚೀಟ್, ಕಾರ್ ಒಳಗಿನ ಪ್ರೈವೆಸಿಗಳು ಅವರನ್ನು ಭದಲ್ಲಿ ಪ್ರೇಮಿಗಳನ್ನಾಗಿಸಿದ್ದವು. ಕೈಗೆ ಸಿಗುತ್ತಿದ್ದ ಬೇಕಾ ಿ ದುಡ್ಡು, ಬಿಂದಾಸ್ ಜೀವನಶೈಲಿಗಳು ಸುಷ್ಮಾಳ ್‌ಸ್ಟೋರಿಗೆ ಸಾಥ್ ನೀಡಿದ್ದವು. ಡ್ರೈವರ್ ಮಂಜುನಾಥ ಂತು ಬೆಂಜ್ ಕಾರು ಬಟ್ಟಿಯಾಗಿ ಸಿಕ್ಕಷ್ಟೇ ಖುಷಿ ಆಗಿತ್ತು.

ಕಾಲೇಜ್ ಹಾದಿಯನ್ನೇ ಮರೆತ ಜೋಡಿ ಹನಿ ೂನ್‌ಗೆ ಬಂದ ನವದಂಪತಿಗಳಷ್ಟೇ ಸಲೀಸಾಗಿ ಂಗಳೂರು, ಗೋವಾ, ದೆಹಲಿ ಟ್ರಿಪ್ ಮಾಡುತ್ತಾ ಾರಿ ಹೋಟೆಲುಗಳಲ್ಲಿ ಮಿಂದೆದ್ದು ಬರಲು ಶುರುವಿಟ್ಟು ಂಡಿದ್ದರು. ಇತ್ತ ಇವರ ಪ್ರಿಪೇಯ್ಡ್ ದಾಂಪತ್ಯ ದೇಶ ಚರಿಸುತ್ತಿದ್ದರೆ ಅತ್ತ ಸುಷ್ಮಾಳ ಮನೆಯವರಿಗೆ ವಿಷಯ ದು ದೊಡ್ಡ ರಾದ್ಧಾಂತವೇ ಆಗಿತ್ತು.

'ಮಂಜು ವೆಡ್ಸ್ ಸುಷ್ಮಾ' ಗುಂಗಿನಲ್ಲಿದ್ದ ಪ್ರೇಮಿಗಳನ್ನು ರ್ಪಡಿಸಲು ಮಂಜುನಾಥನನ್ನು ಕೆಲಸದಿಂದ ಕಿತ್ತೆಸೆದ ನೆಯವರು ಮಗಳಿಗೆ ಪ್ರಾಕ್ಟಿಕಲ್ ಬದುಕಿನ ಬುದ್ಧಿ ಳಿದ್ದರು. ಇಂತಹ ವಿಷಯದಲ್ಲಿ ಸುಷ್ಮಾ ಭಾರೀ ಶಾರ್ಪ್ ಹುಡುಗಿ. ಮನೆಯವರ ಮಾತಿಗೆ ಬೆಲೆಕೊಟ್ಟು ತನ್ನ ್ ಸ್ಕ್ರೀನ್ ಲವ್‌ಸ್ಟೋರಿಗೆ ಕ್ಲೈಮ್ಯಾಕ್ಸ್ ಹೇಳಲು ಸಮ್ಮತಿಸಿದ್ದಳು. ರಿಂದ ಭಾರೀ ಆಘಾತವಾಗಿದ್ದು ಡ್ರೈವರ್ ಸಾಹೇಬರಿಗೆ. ಲಸ ಒಳ ಒಪ್ಪಂದವಾಯಿತೋ ಏಕಾಏಕಿ ಮಡಿಕೇರಿ ಳಿದ ಮಂಜುನಾಥ ಅಲ್ಲಿ 108 ಆಂಬ್ಯುಲೆನ್ಸ್‌ನ ವರ್ ಕೆಲಸಕ್ಕೆ ಸೇರಿಕೊಂಡರೂ ಸುಷ್ಮಾಳ ಸಾಂಗತ್ಯಕ್ಕೆ ಹಾತೊರೆಯುತ್ತಿದ್ದ.

ಕಿಡ್ನ್ಯಾಪ್ ಕಮ್ ಕಿಲ್ಲಿಂಗ್

'ಗಯಾ ತೋ ಗಯಾ ನಯಾ ಆಗಯಾ' ಎನ್ನುವಂತೆ ಹೊಸ ಪ್ರೇಮ ಪರ್ವದಲ್ಲಿ ಸುಷ್ಮಾ ಬಿಜಿಯಾಗಿದ್ದಳು. ಆದರೆ ಹಠಾತ್ತನೆ ಸಂಭವಿಸಿದ ತಂದೆ ಶ್ರೀನಿವಾಸನ್ ಸಾವು ಕಥೆಗೆ ಹೊಸ ಟ್ವಿಸ್ಟ್ ನೀಡಿತು. ಪುನಃ ಸುಷ್ಮಾ ಬೆನ್ನುಬಿದ್ದ ಡ್ರೈವರ್ ಮಂಜು ತನ್ನನ್ನು ಪ್ರೀತಿಸಿ ಮದುವೆಯಾಗದಿದ್ದರೆ ತಾವಿಬ್ಬರು ದಂಪತಿಯಂತೆ ಜೊತೆಯಾಗಿ ತೆಗೆಸಿಕೊಂಡ ಫೋಟೋಗಳನ್ನು ಎಲ್ಲರಿಗೂ ಹಂಚಿಬಿಡ್ತೇನೆ, ನಿನ್ನ ಮುಖಕ್ಕೆ ಆ್ಯಸಿಡ್ ಎರಚಿ ವಿರೂಪ ಮಾಡ್ತೇನೆ ಎಂದು ಬೆದರಿಸಲು ಪ್ರಾರಂಭಿಸಿದ. ಆತ ಮಡಿಕೇರಿಯಲ್ಲಿದ್ದರೂ ಈಕೆಯ ಚಲನವಲನಗಳನ್ನು ಗಮನಿಸಿ ಪ್ರತಿದಿನ ವರದಿ ನೀಡುವಂತೆ ಅಲಿ ಹುಸೇನ್ ಎಂಬ ಸ್ನೇಹಿತನನ್ನು ಗೊತ್ತು ಮಾಡಿಕೊಂಡಿದ್ದ ಮಂಜುನಾಥ ಸುಷ್ಮಾ ಳಿಗೆ ವಿಪರೀತ ಟಾರ್ಚರ್ ನೀಡಲು ಶುರುವಿಟ್ಟುಕೊಂಡ. ಹೇಗಾದರು ಮಾಡಿ ಈ ರಗಳೆಯಿಂದ ಹೊರಬರಬೇಕು ಅಂದುಕೊಂಡವಳಿಗೆ ಕಾಣಿಸಿದ್ದೇ ಸುಪಾರಿ ಕಿಲ್ಲಿಂಗ್ ದಾರಿ. ಅವರಪ್ಪ ಸಾಯುವುದಕ್ಕೂ ಮುನ್ನ ತಮಿಳುನಾಡಿನಲ್ಲಿದ್ದ ಜಮೀನನ್ನು ಮಾರಿದ್ದರಿಂದ ಬಂದ 80 ಲಕ್ಷದಲ್ಲಿ ತನ್ನ ನಾಲ್ಕೂ ಮಕ್ಕಳಿಗೆ 20 ಲಕ್ಷದಂತೆ ಹಂಚಿ ಅವರವರ ಬ್ಯಾಂಕ್ ಅಕೌಂಟ್‌ನಲ್ಲಿಟ್ಟಿದ್ದ. ಆ ದುಡ್ಡನ್ನೇ ಬಳಸಿಕೊಳ್ಳಲು ಆಕೆ ನಿರ್ಧರಿಸಿದ್ದಳು. ಪೊಲೀಸರಿಗೆ ಒಂದು



ಕಿಲ್ಲರ್ ಸುಷ್ಮಾ



ಸಿಕ್ಕಿ ಬಿದ್ದ ಸುಫಾರಿ ಕೊಲೆಗಡುಕರು

ಸಣ್ಣ ಕಂಪ್ಲೇಂಟ್ ಕೊಟ್ಟಿದ್ದರೂ ಸಾಕಿತ್ತು ಡ್ರೈವರ್ ಸಾಹೇಬರ ಸ್ಟೇರಿಂಗನ್ನು ರೈಟ್ ಟರ್ನ್‌ಗೆ ತಿರುಗಿಸುತ್ತಿದ್ದರು. ಆದರೆ ಸಲೀಸು ಬಂಡವಾಳ ಎರಡನೇ ಆಲೋಚನೆಗೆ ಅವಕಾಶವನ್ನೇ ನೀಡದಂತೆ ಕಿಲ್ಲಿಂಗ್ ನಿರ್ಣಯವನ್ನು ಅಂಗೀಕರಿಸಿತ್ತು. ಒಂಚೂರು ಬ್ಯಾಲೆನ್ಸ್ ಇಲ್ಲದಂತೆ ಸಮಸ್ಯೆಯನ್ನು ತೊಡೆದು ಹಾಕುವುದ ಕ್ಕೋಸ್ಕರ ಎಕ್ಸ್ ಲವರ್ ಮಂಜುನಾಥನ ಜೊತೆಗೆ ಆತನ ಸ್ನೇಹಿತ ಹುಸೇನ್‌ನನ್ನು ಕ್ಲಿಯರ್ ಮಾಡಲು ಪ್ಲಾನ್ ರೂಪಿಸಿ ದಳು.

ಈ ಘನ ಕಾರ್ಯಕ್ಕೆ ಸುಷ್ಮಾಗೆ ಜೊತೆಯಾದದ್ದು ಆಕೆಯ ಸ್ನೇಹಿತ ಅಜಯ್ ಕುಮಾರ್ ಅಲಿಯಾಸ್ ಜಾಕಿ. ಈತನ ಮಧ್ಯಸ್ಥಿಕೆಯಲ್ಲಿ ದೀಪಕ್ (19), ಲಕ್ಷ್ಮಣ್ ಅಲಿಯಾಸ್ ಬ್ಯಾಟ್ (20) ಮತ್ತು ಅಭಿಷೇಕ್ (19) ಎಂಬ ಚಿಲ್ಲೂ ಡಾನ್‌ಗಳಿಗೆ ಡೀಲ್ ಒಪ್ಪಿಸಲಾಗಿತ್ತು. ಒಂದಷ್ಟು ಚೌಕಾಸಿಯ ನಂತರ 5 ಲಕ್ಷಕ್ಕೆ ಇಬ್ಬರನ್ನು ಖತಮ್ ಮಾಡಲು ಈ 'ಕಿಡ್ಸ್ ಕಿಲ್ಲರ್' ಟೀಮ್ ಒಪ್ಪಿಕೊಂಡಿತ್ತು. ಡೀಲ್‌ನ ಪ್ರಕಾರ ಐವತ್ತು ಸಾವಿರ ಅಡ್ವಾನ್ಸ್ ನೀಡಿದ ಸುಷ್ಮಾ ಬಾಕಿ ಹಣವನ್ನು ಕೊಲೆಯ ತರುವಾಯ ಸೆಟ್ಲ್ ಮಾಡುವುದಾಗಿ ಹೇಳಿದ್ದಳು.

ಪ್ಲಾನ್‌ನ ಪ್ರಕಾರ ಮೇ 11ಕ್ಕೆ ಮಹೂರ್ತ ಫಿಕ್ಸ್ ಮಾಡಿಕೊಂಡ ಟೀಮು ಮಂಜುನಾಥನನ್ನು ಕಿಡ್ನಾಪ್ ಮಾಡುವ ಜವಾಬ್ದಾರಿಯನ್ನು ಸುಷ್ಮಾಗೇ ವಹಿಸಿತ್ತು. ಫೋನ್ ಮಾಡಿ ತನ್ನದು ತಪ್ಪಾಯಿತು ತಮ್ಮ ಪ್ರೀತಿಗೆ ಹೊಸದಾಗಿ ಚಾಲನೆ ನೀಡಲು ಸಿದ್ಧವಿರುವುದಾಗಿ ಪುಸಲಾಯಿಸಿದ ಸುಷ್ಮಾ ಡ್ರೈವರ್ ಮಂಜುನನ್ನು ಎಚ್.ಎಂ.ಟಿ ಆಡಿಟೋರಿಯಮ್ ಬಳಿ ಕರೆಸಿಕೊಂಡಿದ್ದಳು. ಅಲ್ಲಿಗೆ ಬಂದ ಅವನನ್ನು ತನ್ನ ಒನ್ ಅಂಡ್ ಓನ್ಲಿ ಬೊಲೆರೋದಲ್ಲಿ ಹತ್ತಿಸಿಕೊಂಡು ಸ್ವಲ್ಪ ಮುಂದೆ ಹೋದದ್ದೇ ನಾಲ್ಕು ಜನ ಕಂಟ್ರಾಕ್ಟ್ ಕಿಲ್ಲರ್‌ಗಳು ಒಳ ನುಗ್ಗಿದ್ದರು. ಮಂಜುನಾಥಗೆ ಧಮಕಿ ಹಾಕಿದ ಮರಿ ಕಿಲ್ಲರ್‌ಗಳು ಅವನ ಮೂಲಕವೇ ಹುಸೇನ್‌ಗೆ ಫೋನ್ ಮಾಡಿಸಿ ಅಲ್ಲಿಗೆ ಕರೆಸಿಕೊಂಡು ಅವನನ್ನೂ ಕಾರ್‌ನಲ್ಲಿ ತುರುಕಿಕೊಂಡು ದೊಡ್ಡ ಬಳ್ಳಾಪುರದತ್ತ ಹೊರಟರು.

ತನ್ನ ಗ್ರಹಚಾರ ರಿವರ್ಸ್ ಗೇರ್‌ಗೆ ತಿರುಗಿದ್ದನ್ನು ಅರಿತ ಡ್ರೈವರ್ ಮಂಜು ಔಟರ್ ರಿಂಗ್ ರೋಡ್ ಬಳಿ ಬರುತ್ತಲೇ ಚಲಿಸುತ್ತಿದ್ದ ಕಾರ್‌ನಿಂದ ಜಂಪ್ ಮಾಡಿ ಸಿನಿಮೀಯ ರೀತಿಯಲ್ಲಿ ಎಸ್ಕೇಪ್ ಆಗಿದ್ದ. ಸುಷ್ಮಾ ಮತ್ತಾಕೆಯ ಕಿಲ್ಲರ್ ಟೀಮಿಗೆ ಮಂಜುನಾಥನ ಈ ಅಚಾನಕ್ ಆ್ಯಕ್ಷನ್ ವಿಪರೀತ ಸಿಟ್ಟು ತರಿಸಿತ್ತು. ಅದೆಲ್ಲವನ್ನೂ ಅವರು ತೀರಿಸಿಕೊಂಡದ್ದು ಹುಸೇನಿಯ ಮೇಲೆ.



ಕಿಲಾಡಿ ಸ್ಮಿತಾ

ಕಾರಿನ ಒಳಗೇ ಹಿಗ್ಗಾ-ಮುಗ್ಗಾ ಬಾರಿಸಿದ್ದಲ್ಲದೆ ಕುತ್ತಿಗೆ ಹಿಸುಕಿ ಉಸಿರುಗಟ್ಟಿಸಿ ಅಲಿ ಹುಸೇನನ ಕೊಲೆಮಾಡಿದ್ದರು. ಇಷ್ಟೆಲ್ಲ ಡ್ರೈವಿಂಗ್ ಸೀಟ್‌ನಲ್ಲಿದ್ದ ಸುಷ್ಮಾಳ ಕಣ್ಣೆದುರೇ ನಡೆದಿತ್ತು. ಹುಸೇನಿಯ ಡೆಡ್‌ಬಾಡಿಯನ್ನು ದೊಡ್ಡಬಳ್ಳಾಪುರದ ಬಳಿ ಎಸೆದವರೆ ಏನೂ ನಡೆದೇ ಇಲ್ಲವೆಂಬಂತೆ ಬೆಂಗಳೂರು ಸೇರಿಕೊಂಡಿ ದ್ದರು. ಇನ್ನಿಲ್ಲಿದ್ದರೆ ಅಪಾಯವೆಂದರಿತ ಸುಷ್ಮಾ ವೆಲ್ಲೂರಿಗೆ ಹೋಗಿ ಅಲ್ಲಿ ತನ್ನ ಹೊಸ ಲವರ್ ರಸನ್ ಕುಮಾರ್ ಎಂಬಾತ ನೊಟ್ಟಿಗಿದ್ದಳು.

ಎರಡು ದಿನಗಳ ನಂತರ ದೂರು ಕೊಟ್ಟಿದ್ದ ಮಂಜುನಾಥನ ಸಹಾಯದೊಂದಿಗೆ ವೆಲ್ಲೂರಿನಲ್ಲಿದ್ದ ಕಿಲ್ಲರ್ ಸುಷ್ಮಾಳನ್ನು ಮತ್ತು ಕಾಂಟ್ರ್ಯಾಕ್ಟ್ ಕಿಲ್ಲರ್‌ಗಳನ್ನೂ ಬಂಧಿಸಿದ ಪೊಲೀಸರು ಅವರನ್ನೆಲ್ಲ ಜೈಲಿಗಟ್ಟಿದ್ದಾರೆ. ಸದ್ಯ ಬಿಬಿಎಂ ಪರೀಕ್ಷೆ ನಡೆಯುತ್ತಿರುವುದರಿಂದ ಜೂನ್ 22 ರವರೆಗೆ ಜಾಮೀನು ನೀಡಿರುವ ಕೋರ್ಟ್ ಸ್ಟೇಷನ್‌ಗೆ ಹೋಗಿ ಸಹಿಹಾಕಿ ಬರುವಂತೆ ಸುಷ್ಮಾಗೆ ತಾಕೀತು ಮಾಡಿದೆ. ಅಂದಹಾಗೆ ಇದೇನು ಈಕೆಯ ಮೊದಲ ಪ್ರಯತ್ನವಲ್ಲ ಈ 6 ತಿಂಗಳ ಹಿಂದೆಯೇ ಬೇರೆ ಕಿಲ್ಲರ್‌ಗಳಿಗೆ ಸುಪಾರಿ ನೀಡಿ ಮಂಜುನಾಥನನ್ನು ಮುಗಿಸಲು ಪ್ಲಾನ್ ರೂಪಿಸಿದ್ದಳು. ಆಗ ಹೆಬ್ಬಾಳದ ಮನೆಯೊಂದರಲ್ಲಿ ಮಂಜುನಾಥನನ್ನು ಕೂಡಿಹಾಕಿ ಚೆನ್ನಾಗಿ ಬಾರಿಸಲಾಗಿತ್ತು. ಆದರೆ ಅಲ್ಲಿಂದಲೂ ಎಸ್ಕೇಪಾಗಿದ್ದ ಅವನು ಹೆಬ್ಬಾಳ ಪೊಲೀಸರಿಗೆ ಕಂಪ್ಲೇಂಟ್ ನೀಡಿದ್ದ ಆಮೇಲೆ ಇಬ್ಬರಿಗೂ ಕಾಂಪ್ರಮೈಸ್ ಮಾಡಿಸಲಾಗಿತ್ತು. ತನ್ನ ರಸ್ತೆಯನ್ನು ಕ್ಲೀನ್ ಅಂಡ್ ಕ್ಲಿಯರ್ ಮಾಡಿಕೊಳ್ಳಲು ಹವಣಿಸುತ್ತಲೇ ಇದ್ದ ಸುಷ್ಮಾ ಹೀಗೆ ಸ್ಕೆಚ್ ಹಾಕಿದ್ದಳು. ಹಾಗೆ ನೋಡಿದರೆ ಎರಡೆರಡು ಬಾರಿ ಸುಷ್ಮಾ ಜಾಲದಿಂದ ಎಸ್ಕೇಪಾಗಿರುವ ಮಂಜುನನ್ನು ಲಕ್ಕಿ ಫೆಲೋ ಅನ್ನಬಹುದೇನೊ.

ಪರ್ಸ್ ಕಳ್ಳಿಯ ಪರಸಂಗ

ಇನ್ನು ಸ್ಮಿತಾ ಅಲಿಯಾಸ್ ಜಿ.ವಿ. ವರುಣಾಶ್ರೀಯ ರೋಚಕ ವೃತ್ತಾಂತ ಹೀಗಿದೆ. ಸರ್ಜಾಪುರದ ಖಾಸಗಿ ಕಂಪನಿಯೊಂದರಲ್ಲಿ ಅಕೌಂಟೆಂಟ್ ಆಗಿದ್ದ ಈಕೆ ದೂರಶಿಕ್ಷಣದ ಮೂಲಕ ಎಂ.ಬಿ.ಎ ಕೋರ್ಸ್‌ಗೂ ಸೇರಿಕೊಂಡಿದ್ದಳು. ಓದಿಗೆ ತಕ್ಕಂತೆ ಮಾಡ್ ಡ್ರೆಸ್ಸು, ಮೋಹಕ ಮೇಕಪ್ಪು, ಒಂದಷ್ಟು ಬುಕ್ಸ್ ಇತ್ಯಾದಿತ್ಯಾದಿ ಕಾಸ್ಟ್ಯೂಮ್ ಸಮೇತ ಹೊರಟಳೆಂದರೆ ಎಂತವರಲ್ಲೂ ಡೀಸೆಂಟ್ ಸ್ಟುಡೆಂಟ್ ಎಂಬಲ್ಲದೆ ಮತ್ತಾವ ಕಲ್ಪನೆಗೂ ಆಸ್ಪದವಿರುತ್ತಿರಲಿಲ್ಲ. ಆದರೆ ಬಿ.ಎಂ.ಟಿ.ಸಿ. ಬಸ್ ಏರುತ್ತಿದ್ದ ಸ್ಮಿತಾ ಪಕ್ಕಾ ಪಿಕ್‌ಪಾಕೆಟರ್ ಆಗಿ ಬದಲಾಗುತ್ತಿದ್ದಳು.

ವಿಪರೀತ ರಶ್ ಇರುವ ಶಿವಾಜಿ ನಗರ, ಮೆಜೆಸ್ಟಿಕ್, ಕೆ.ಆರ್ ಮಾರ್ಕೆಟ್ ರೂಟ್‌ನ ಬಸ್‌ಗಳನ್ನೇ ನೋಡಿ ಹತ್ತುತ್ತಿದ್ದ ಈಕೆ ಮಹಿಳಾ ಪ್ರಯಾಣಿಕರ ಕಣ್ತಪ್ಪಿಸಿ ಪರ್ಸ್‌ಗಳನ್ನು ಎಗರಿಸಿ ಬಿಡುತ್ತಿದ್ದಳು. ಕೆಲಸವಾದ ಕೂಡಲೇ ಮುಂದಿನ ಸ್ಟಾಪ್‌ನಲ್ಲಿ ಇಳಿದು ಕದ್ದ ಪರ್ಸ್ ಒಳಗಿರುವುದನ್ನೆಲ್ಲ ಖಾಲಿ ಮಾಡಿಕೊಂಡ ನಂತರ ಪರ್ಸ್ ಎಸೆದು ಮತ್ತೊಂದು ಬಸ್‌ಗೆ ರೆಡಿಯಾಗುತ್ತಿದ್ದಳು. ಮೊನ್ನೆ ಬಾಣಸವಾಡಿ ಪೊಲೀಸರಿಗೆ ಸಿಕ್ಕಿಬಿದ್ದ ಈಕೆಯನ್ನು ವಶಪಡಿಸಿಕೊಂಡು ತಪಾಸಣೆ ಮಾಡಿದಾಗ 300ಕ್ಕೂ ಹೆಚ್ಚು ಪರ್ಸ್‌ಗಳು, ಬೇರೆ ಬೇರೆ ಬ್ಯಾಂಕ್‌ಗಳ 30 ಕ್ರೆಡಿಟ್ ಕಾರ್ಡ್‌ಗಳು, 8 ಲಕ್ಷ ಬೆಲೆಬಾಳುವ 273 ಗ್ರಾಮ್ ಚಿನ್ನಾಭರಣ, 10,000 ನಗದು ಸಮೇತ ತಗುಲಿಕೊಂಡಿದ್ದಳು. ಇವೆಲ್ಲ ಲೆಕ್ಕ ಸಿಕ್ಕದ್ದು ಮಾತ್ರ. ಕಳೆದ ಐದು ವರ್ಷದ ತನ್ನ ಸರ್ವಿಸ್‌ನಲ್ಲಿ ಈಗಾಗಲೇ ಸಾವಿರಕ್ಕು ಹೆಚ್ಚು ಪರ್ಸ್‌ಗಳನ್ನು ಎಗರಿಸಿರುವುದಾಗಿ ಒಪ್ಪಿಕೊಂಡಿದ್ದಾಳೆ.


ಕಳ್ಳತನದ ಸಲೀಸು ಆದಾಯಕ್ಕೆ ಮಾರುಹೋಗಿದ್ದ ಆಕೆ ಪಿಕ್‌ಪಾಕೆಟ್ ದಂಧೆಯಿಂದ ಮನೆಗಳ್ಳತನಕ್ಕೂ ಇಳಿದಿದ್ದಳು. ಪೊಲೀಸ್ ತನಿಖೆಯ ನಂತರ ಬಾಣಸವಾಡಿಯ ಎರಡು ಮನೆಗಳ್ಳತನದಲ್ಲಿ ಇವಳದ್ದೇ ಕೈವಾಡವಿದ್ದದ್ದೂ ತಿಳಿದುಬಂದಿದೆ.

ವರುಣಾಶ್ರೀ ಮೂಲತಃ ತಮಿಳುನಾಡಿನವಳು. ಇಲ್ಲಿಗೆ 15 ವರ್ಷಗಳ ಹಿಂದೆ ಆಕೆಯ ತಂದೆ ವೆಂಕಟರಾಘವ ಕೃಷ್ಣನಿಂದ ಬೇರ್ಪಟ್ಟ ತಾಯಿ ಹೇಮಲತಾ ಮಕ್ಕಳೊಂದಿಗೆ ಬೆಂಗಳೂರಿಗೆ ಬಂದು ನೆಲಸಿದ್ದಳು. ತಾಯಿ ಅವರಿವರ ಮನೆಯಲ್ಲಿ ಕೆಲಸ ಮಾಡಿಕೊಂಡಿದ್ದರೂ ಮಕ್ಕಳನ್ನು ಚೆನ್ನಾಗಿಯೇ ಓದಿಸಿದ್ದರು. ಆದರೆ ವರುಣಾಶ್ರೀಗೆ ಶೋಕಿ ಜೀವನ ನಡೆಸಬೇಕೆಂಬ ತೆವಲಿತ್ತಾದರು ಅದಕ್ಕೆ ಬಡತನ ಅಡ್ಡಿಯಾಗಿತ್ತು. ಈಗ್ಗೆ ಐದು ವರ್ಷಗಳ ಹಿಂದೆ ಒಮ್ಮೆ ಕಾಲೇಜಿಗೆ ಹೋಗುವಾಗ ಶಿವಾಜಿನಗರದ ಬಳಿ ಬಸ್‌ನಲ್ಲಿ ಆಕಸ್ಮಿಕವಾಗಿ ಯಾರದೋ ಪರ್ಸ್ ಸಿಕ್ಕಿತ್ತು. ಅದರೊಳಗಿದ್ದ ಮೂರು ಸಾವಿರ ಆಕೆಗೆ ಹಣ ಮಾಡಲು ಇರುವ ಸುಲಭದ ದಾರಿಯನ್ನು ತೋರಿಸಿತ್ತು. ಮೊನ್ನೆ ಪೊಲೀಸರ ಮುಂದೆ ಬಾಯ್ಬಿಟ್ಟ ವರುಣಾಶ್ರೀ ಆ ಘಟನೆಯೇ ತನ್ನ ಜೀವನಕ್ಕೆ ಅಧ್ಭುತ ಟರ್ನಿಂಗ್ ಪಾಯಿಂಟ್ ಎಂದೇಳಿಕೊಂಡಿದ್ದಾಳೆ. ಪಿಕ್‌ಪಾಕೆಟ್ ವೃತ್ತಿಗೆ ಅದೇ ಸ್ಫೂರ್ತಿಯಂತೆ.

ಈಕೆಯಾದರು ಅಪ್ಪಟ ಆಧುನಿಕ ಪಾಂಚಾಲಿ. ಏಕೆಂದರೆ ವರುಣಾಗೆ ಇದ್ದದ್ದು ಬರೋಬ್ಬರಿ ಐದು ಜನ ಬಾಯ್‌ಫ್ರೆಂಡ್‌ಗಳು. ಪಿಕ್‌ಪಾಕೆಟ್‌ನ ಹಣದಲ್ಲಿ ಅವರ ಬೈಕ್‌ಗಳಿಗೆ ಪೆಟ್ರೋಲ್ ತುಂಬಿಸಿ ಸಿಕ್ಕಾಪಟ್ಟೆ ಸುತ್ತಾಡುವುದು, ಸ್ಟಾರ್ ಹೋಟೆಲ್, ಪಬ್‌ಗಳಲ್ಲಿ ತಿಂದು ತೇಗುವುದು, ಬಾಕಿ ಉಳಿದ ದುಡ್ಡನ್ನು ತಾನು ದುಡಿದದ್ದು ಎಂದ್ಹೇಳಿ ಮನೆಗೆ ಕೊಟ್ಟು ಶೋಕಿ ಜೀವನಕ್ಕೆ ಸೆಟ್ಲ್ ಆಗಿದ್ದಳು. ಈಗ ಪೊಲೀಸರ ಕೈಗೆ ಸಿಕ್ಕು ಎಲ್ಲಾ ಬಯಲಾಗಿದೆ.

ಒಬ್ಬಳು ಸಿರಿತನದ ಧಿಮಾಕಿನಲ್ಲಿ ಕಿಲ್ಲರ್ ಪಟ್ಟ ಗಿಟ್ಟಿಸಿಕೊಂಡಿದ್ದರೆ, ಮತ್ತೊಬ್ಬಳು ಶೋಕಿಗಾಗಿ ಸ್ಲೇಟ್ ಹಿಡಿದು ಪೋಸ್ ಕೊಡುವಂತಾಗಿದ್ದಾಳೆ. ಒಟ್ಟಿನಲ್ಲಿ ಈ ಹುಡುಗಿಯರು 'ನಾವು ಯಾರ್ಗೂ ಕಮ್ಮಿ ಇಲ್ಲ' ಅನ್ನೋದನ್ನು ಹೀಗೆ ಅರ್ಥೈಸಲು ಹೊರಟಿರೋದೆ ವಿಪರ್ಯಾಸ.

–ಗಿರೀಶ್ ತಾಳಿಕಟ್ಟೆ



200 ಕೋಟಿ ಆಸ್ತಿ ಶಾಸಕ ಶ್ರೀನಿವಾಸನ ಭ್ರಷ್ಟ ಸಾಮ್ರಾಜ್ಯ



ಮಗ ವೆಂಕಟೇಶ್ ಬಾಬು

"ನೀವು ನಿಮ್ಮ ಸಾಮರ್ಥ್ಯದಲ್ಲಿ
ನಂಬಿಕೆ ಇಡಿ,
ನನಗೆ ನನ್ನ ಸಾಮರ್ಥ್ಯದಲ್ಲಿ
ನಂಬಿಕೆ ಇದೆ,
ಎಲ್ಲರೂ ಅಭಿವೃದ್ಧಿ ಸಾಧಿಸೋಣ"

–ಇದು ಬಿಜೆಪಿ ನಾಯಕ, ಹಾಲಿ ಬೆಂಗಳೂರಿನ ರಾಜರಾಜೇಶ್ವರಿ ನಗರದ ಶಾಸಕ ಎಂ.ಶ್ರೀನಿವಾಸ್ ಎಲೆಕ್ಷನ್‌ಗೆ ನಿಂತಿದ್ದಾಗ ನೀಡಿದ್ದ ಘೋಷಣೆ!

ಈಗ ನೋಡಿದರೆ ಶ್ರೀನಿವಾಸ್‌ಗೆ ಓಟು ಹಾಕಿ ಗೆಲ್ಲಿಸಿದ ಮತದಾರ ತನ್ನ ಸಾಮರ್ಥ್ಯವನ್ನಷ್ಟೇ ನಂಬಿಕೊಂಡು ಫುಟ್‌ಪಾತ್ ಮೇಲೆ ನಿಂತಿದ್ದಾನೆ.

ಮತ್ತೊಂದೆಡೆ ಶಾಸಕನಾಗಿ ಗೆದ್ದ ಶ್ರೀನಿವಾಸ್ ಈಗ ಸಂಪತ್ತಿನ ರಾಶಿಯ ಮೇಲೆ ಕುಳಿತು ಅಟ್ಟಹಾಸ ಮಾಡುತ್ತಿದ್ದಾನೆ. ಅದು ಅವನ ಸಾಮರ್ಥ್ಯ!

ಬಹುಶಃ ನೀವಿದನ್ನು ನಂಬಲಾರಿರೇನೋ.

ಶಾಸಕ ಶ್ರೀನಿವಾಸ್ ಇವತ್ತು ಇನ್ನೂರು ಕೋಟಿ ರೂಪಾಯಿಗಳಷ್ಟು ಆಸ್ತಿ ಹೊಂದಿರುವ ಕುಬೇರ.

ಇವನಿಗೆ ಬರುತ್ತಿರುವ ಆದಾಯದಲ್ಲಿ ತಿಂಗಳ ಬಾಡಿಗೆ ಹಣವೇ 80 ಲಕ್ಷ ರೂ ಗಳಷ್ಟಿದೆ!

ಈತನ ಸ್ವಂತ ಹೆಸರಲ್ಲಿ ಹೆಂಡತಿ ಮಗ-ಸೊಸೆಯರ ಹೆಸರುಗಳಲ್ಲಿ ಮತ್ತು ಬೇನಾಮಿ ಹೆಸರುಗಳಲ್ಲಿ ನೂರಾರು ಎಕರೆ ಭೂಮಿ ಇದೆ. ಅದೂ... ಬೆಂಗಳೂರಿನಲ್ಲಿ!!

ಕಣ್ಣಿಗೆ ಕಾಣುವಂತೆಯೇ ಡಜನ್‌ಗಟ್ಟಲೇ ಕಾಂಪ್ಲೆಕ್ಸ್ -ಬಿಲ್ಡಿಂಗ್‌ಗಳೊಂದೆಡೆ ಇದ್ದರೆ, ಬೇನಾಮಿ ಡೀಲ್‌ಗಳಲ್ಲೂ ಅಘೋಷಿತ ಕಳ್ಳ ಆಸ್ತಿಗಳೂ ಅಷ್ಟೇ ಇವೆ!!! ಅಂದಹಾಗೆ ಈ ಕುಬೇರ ಶ್ರೀನಿವಾಸ...ಇದೇ ಶ್ರೀನಿವಾಸ ಈಗ್ಗೆ ಎರಡೂವರೆ ದಶಕಗಳ ಹಿಂದೆ ಸಾಧಾರಣ ವೆಲ್ಡರ್ ಆಗಿದ್ದ. ಕೆಲಕಾಲ ಬೆಂಗಳೂರಿನ ಹೆಚ್‌ಎಎಲ್ ಕಾರ್ಖಾನೆಯಲ್ಲಿ ಕಾರ್ಮಿಕನಾಗಿಯೂ ಕೆಲಸ ಮಾಡಿಕೊಂಡಿದ್ದ!

4 ಬಾರಿ ಶಾಸಕನಾಗಿಯೂ, ಒಮ್ಮೆ ಸಂಸತ್ ಸದಸ್ಯನಾಗಿಯೂ ಗೆದ್ದಿರುವ ಶ್ರೀನಿವಾಸ ದೇಶದ ಅಭಿವೃದ್ಧಿ ಅಥವಾ ನಾಡಿನ ಒಳಿತಿಗಾಗಿ ಅದೇನು ಮಾಡಿದನೋ ಯಾರಿಗೂ ಗೊತ್ತಿಲ್ಲ, ತನ್ನ ಸ್ವಂತ ಲಾಭ-ಲೋಭವನ್ನು ಮಾತ್ರ ನೋಡಿಕೊಂಡನೆನ್ನುವುದು ಈಗ ಜನರಿಗೂ ಗೊತ್ತಾಗಿದೆ.

ಕನಕಪುರದ ಕಲ್ಲಹಳ್ಳಿಯ ದಿನೇಶ್ ಎಂಬ ಪತ್ರಕರ್ತ ಶ್ರೀನಿವಾಸನ ಭ್ರಷ್ಟ ಸಾಮ್ರಾಜ್ಯದ ಬಗ್ಗೆ ಮಾಹಿತಿ ಸಂಗ್ರಹಿಸಿ ಮೇ 7 ನೇ ತಾರೀಖು ಲೋಕಾಯುಕ್ತಕ್ಕೆ ಒಂದು ದೂರು ಕೊಟ್ಟಿದ್ದರು. ಆ ಹಿನ್ನೆಲೆಯಲ್ಲಿ ಕಳೆದ ಮೇ ತಿಂಗಳ 26 ನೇ ತಾರೀಖು ಲೋಕಾಯುಕ್ತ ಪೊಲೀಸರು ಶ್ರೀನಿವಾಸನ ಮನೆಯ ಮೇಲೆ ದಾಳಿ ನಡೆಸಿದರು. ಅವತ್ತು ಶ್ರೀನಿವಾಸನ ಜಯನಗರದ ಮನೆ, ಕನಕಪುರ ರಸ್ತೆಯ ಆರ್‌ಎಂಎಸ್ ಇಂಟರ್‌ನ್ಯಾಷನಲ್ ಸ್ಕೂಲ್ ಹಾಗೂ ಶ್ರೀನಿವಾಸನ ಸುಪುತ್ರ ವೆಂಕಟೇಶ್ ಬಾಬುನ ನಾಗರಬಾವಿ ಮನೆಗಳ ಮೇಲೆ ರೇಡ್ ನಡೆಯಿತು. ಬಹುಶಃ ಕರ್ನಾಟಕ ಲೋಕಾಯುಕ್ತರ ಇತಿಹಾಸದಲ್ಲೇ ಒಂದು ದಾಳಿಯಲ್ಲಿ ಇಷ್ಟು ಪ್ರಮಾಣದ ಅಕ್ರಮ ಆಸ್ತಿ-ಪಾಸ್ತಿಗಳು ಪತ್ತೆಯಾಗಿಲ್ಲವೆಂದು ಕಾಣುತ್ತದೆ. ಈ ದಾಳಿಯಲ್ಲಿ ಪತ್ತೆಯಾಗಿರುವ ಅಧಿಕೃತ ಆಸ್ತಿ ಮೌಲ್ಯವೇ ನೂರು ಕೋಟಿ ರೂಪಾಯಿಗಳಿಗಿಂತ ಜಾಸ್ತಿ ಇದೆ. ಇದರೊಂದಿಗೆ ಈ ಶ್ರೀನಿವಾಸ ಬೇನಾಮಿಯಾಗಿ ಮಾಡಿಟ್ಟುಕೊಂಡಿರುವ ಆಸ್ತಿಪಾಸ್ತಿ ಇನ್ನೆಷ್ಟಿರಬೇಡ?

ಶ್ರೀನಿವಾಸನ ನಂಬಿಕಸ್ಥ ಚೇಲಾಗಳಾದ ಕುಮಾರಸ್ವಾಮಿ ಲೇಔಟ್‌ನ ರಾಜಣ್ಣ, ಹೊಸಕೆರೆಹಳ್ಳಿಯ ರಶ್ಮಿ ಡಿಸೋಜಾ, ನಾಗರಾಜ ಮುಂತಾದವರ ಮನೆಗಳಲ್ಲೂ ಶಾಸಕ ಶ್ರೀನಿವಾಸನ ಅಕ್ರಮ ದಾಖಲೆಗಳು ರಾಶಿರಾಶಿಯಾಗಿ ಸಿಕ್ಕಿವೆ. ಈ ಶ್ರೀನಿವಾಸ ತನಗೆ ಸಿಕ್ಕ ಶಾಸಕನ ಅಧಿಕಾರ ಸಾಲದೆಂಬಂತೆ ತನ್ನ ಮಗ ವೆಂಕಟೇಶ್ ಬಾಬುವನ್ನು ಬಿಬಿಎಂಪಿ ಎಲೆಕ್ಷನ್‌ಗೆ ನಿಲ್ಲಿಸಿ ಕಾರ್ಪೊರೇಟರ್ ಮಾಡಿಸಿದ್ದಾನೆ. ಅಲ್ಲೂ ದುಡ್ಡು ನುಂಗಲು ಮಗನನ್ನು ಆರೋಗ್ಯ ಸ್ಥಾಯಿ ಸಮಿತಿಗೆ ಅಧ್ಯಕ್ಷನನ್ನಾಗಿಸಿದ್ದಾನೆ.

ಈಗ ಇವರ ಪಾಪದ ಕೊಡ ತುಂಬಿ ಲೋಕಾಯುಕ್ತ ದಾಳಿ ನಡೆದಿದೆ.

ರಾಮನ ಲೆಕ್ಕ-ಕೃಷ್ಣನ ಲೆಕ್ಕ

ಸಾವಿರದೊಂಭೈನೂರ ಎಂಭತ್ತರ ದಶಕದಲ್ಲಿ ಯಡಿಯೂರು

ಕಣ್ಣಿಗೆ ಕಾಣುವಂತೆಯೇ ಡಜನ್‌ಗಟ್ಟಲೇ ಕಾಂಪ್ಲೆಕ್ಸ್ -ಬಿಲ್ಡಿಂಗ್‌ಗಳೊಂದೆಡೆ ಇದ್ದರೆ, ಬೇನಾಮಿ ಡೀಲ್‌ಗಳಲ್ಲೂ ಅಘೋಷಿತ ಕಳ್ಳ ಆಸ್ತಿಗಳೂ ಅಷ್ಟೇ ಇವೆ!!! ಅಂದಹಾಗೆ ಈ ಕುಬೇರ ಶ್ರೀನಿವಾಸ...ಇದೇ ಶ್ರೀನಿವಾಸ ಈಗ್ಗೆ ಎರಡೂವರೆ ದಶಕಗಳ ಹಿಂದೆ ಸಾಧಾರಣ ವೆಲ್ಡರ್ ಆಗಿದ್ದ. ಕೆಲಕಾಲ ಬೆಂಗಳೂರಿನ ಹೆಚ್‌ಎಎಲ್ ಕಾರ್ಖಾನೆಯಲ್ಲಿ ಕಾರ್ಮಿಕನಾಗಿಯೂ ಕೆಲಸ ಮಾಡಿಕೊಂಡಿದ್ದ!


■ ಪಾರ್ವತೀಶ

ಕೆರೆ ಹತ್ತಿರದ ಒಂದು ವೆಲ್ಡಿಂಗ್ ಶಾಪ್‌ನಲ್ಲಿ ವೆಲ್ಡರ್ ಆಗಿದ್ದ ಎಂ. ಶ್ರೀನಿವಾಸ್ ಕೆಲಕಾಲ ಹೆಚ್‌ಎಎಲ್ ಕಾರ್ಖಾನೆಯಲ್ಲಿ ಕೆಲಸ ಮಾಡುತ್ತಿದ್ದ. ಆಗೊಮ್ಮೆ ಎನ್.ಆರ್ ಕಾಲೋನಿಯ ಆಚಾರ್ಯ ಪಾಠ ಶಾಲೆಯ ಕಾಲೇಜಿನ ಕಾಂಪೌಂಡ್‌ಗೆ ಗ್ರಿಲ್ ಹಾಕುವ ದೊಡ್ಡ ಮಟ್ಟದ ಗುತ್ತಿಗೆ ಕೆಲಸ ಶ್ರೀನಿವಾಸನಿಗೆ ಸಿಕ್ಕಿತು. ಆ ಡೀಲ್‌ನಲ್ಲಿ ಲಕ್ಷಾಂತರ ರೂಪಾಯಿ ಮಾಡಿಕೊಂಡ ಶ್ರೀನಿವಾಸ ಫುಲ್‌ಟೈಂ ರಾಜಕಾರಣಿಯಾಗಿ ಬಿಜೆಪಿಗಳ ಜೊತೆ ಗುರುತಿಸಿಕೊಂಡ. 1983 ರಲ್ಲೊಮ್ಮೆ ಉತ್ತರಹಳ್ಳಿ ಕ್ಷೇತ್ರದ ಶಾಸಕನಾಗಿ ಆಯ್ಕೆಯಾದ. ಪುನಃ 1985, 1994 ರಲ್ಲೂ ಶಾಸಕನಾಗಿ ಗೆದ್ದ. 1998ರಲ್ಲಿ ಒಮ್ಮೆ ಕನಕಪುರದಿಂದ ಲೋಕಸಭಾ ಚುನಾವಣೆಗೂ ನಿಂತು ಗೆದ್ದ ನಂತರ 2008ರಲ್ಲಿ ಬಿಜೆಪಿಯಿಂದ ರಾಜರಾಜೇಶ್ವರಿ ನಗರ ಕ್ಷೇತ್ರದಿಂದ ಸ್ಪರ್ಧಿಸಿ ಗೆದ್ದ. ಅದೇ ಎಲೆಕ್ಷನ್‌ನಲ್ಲಿ ಶ್ರೀನಿವಾಸನ ಸೋದರ ಎಂ.ಕೃಷ್ಣಪ್ಪನೂ ಬೆಂಗಳೂರು ದಕ್ಷಿಣ ಕ್ಷೇತ್ರದಿಂದ ಸ್ಪರ್ಧಿಸಿ ಬಿಜೆಪಿ ಶಾಸಕನಾಗಿದ್ದಾನೆ. ಶಾಸಕರಾಗಿ ಗೆದ್ದವರು ಕಾನೂನಿನ ಪ್ರಕಾರ ಪ್ರತಿ ವರ್ಷ ಲೋಕಾಯುಕ್ತರಿಗೆ ತಮ್ಮ ಆಸ್ತಿಪಾಸ್ತಿಗಳ ವಿವರಗಳನ್ನು ಸಲ್ಲಿಸುವುದು ಕಡ್ಡಾಯವಾಗಿದೆ. ಶ್ರೀನಿವಾಸ್ ಈ ನಿಯಮಗಳನ್ನೇನೊ ಪಾಲಿಸಿದ್ದಾನೆ. ಆದರೆ ಒಂದೊಂದು ವರ್ಷ ಒಂದೊಂದು ರೀತಿಯ ಮಾಹಿತಿ ನೀಡಿ ಈಗ ಸಿಕ್ಕಿಬಿದ್ದಿದ್ದಾನೆ.

ಉದಾಹರಣೆಗೆ 2007 ನೇ ವರ್ಷದಲ್ಲಿ ಘೋಷಿಸಿರುವ ಆಸ್ತಿ ವಿವರಗಳಲ್ಲಿ ತನಗೆ ವಾರ್ಷಿಕ 22 ಲಕ್ಷ ರೂಪಾಯಿಗಳ ಬಾಡಿಗೆ ಆದಾಯ ಇರುವುದಾಗಿ ಹೇಳಿಕೊಂಡಿದ್ದಾನೆ. ಆದರೆ 2008-09 ನೇ ಸಾಲಿನಲ್ಲಿ ಆದಾಯದ ಬಗ್ಗೆ ಹೇಳಿಕೊಳ್ಳುವಾಗ ವರ್ಷಕ್ಕೆ 2.69 ಕೋಟಿ ರೂ. ಬಾಡಿಗೆ ಆದಾಯವಿರುವುದಾಗಿ ಹೇಳುತ್ತಾನೆ. ಈ ಮೊತ್ತ 2010ರಲ್ಲಿ 2.83 ಕೋಟಿ ರೂ ಆಗಿದೆ.

ಬ್ಯಾಂಕ್ ಲೋನ್ ಮಂಗಮಾಯ

ಯಡಿಯೂರಿನ ಕೆನರಾ ಬ್ಯಾಂಕ್‌ನಲ್ಲಿ ಶ್ರೀನಿವಾಸ್ 2008 ರ ಸುಮಾರಿಗೆ 6.67 ಕೋಟಿ ರೂಪಾಯಿ ಸಾಲ ಪಡೆದಿರುವುದಕ್ಕೆ ದಾಖಲೆಗಳಿವೆ. ಈ



ಶ್ರೀ. ಬಿ.ಎಸ್. ಯಡಿಯೂರಪ್ಪನವರು
ಮಾನ್ಯ ಮುಖ್ಯಮಂತ್ರಿಗಳು,
ಕರ್ನಾಟಕ ಸರ್ಕಾರ. ವಿಧಾನಸೌಧ
ಬೆಂಗಳೂರು.

13621

ವಿಷಯ: ಬೆಂಗಳೂರು ಉತ್ತರ ತಾಲ್ಲೂಕು, ಯಶವಂತಪುರ ಹೋಬಳಿ ಮಾಳಗಾಲ ಸರ್ವೇ ನಂ ಮತ್ತು 14/1.ಎ 2 ಇವುಗಳಿಗೆ ಒಳಪಟ್ಟ ವಾಸದ ಮನೆಗಳು ಹಾಗೂ ನಿವೇಶನಗಳನ್ನು ಭೂ ಸ್ವಾಧಿನದಿಂದ ಕೈಬಿಡುವ ಕುರಿತು.

ಶ್ರೀಮತಿ ವೆಂಕಟಲಕ್ಷಮ್ಮ ಪಾಪರೆಡ್ಡಿಪಾಳ್ಯ ನಾಗರಬಾವಿ ನಿವಾಸಿಯಾಗಿದ್ದು. ಇವರು ಬೆಂಗಳೂರು ಉತ್ತರ ತಾಲ್ಲೂಕು. ಯಶವಂತಪುರ ಹೋಬಳಿ ಮಾಳಗಾಲ ಸರ್ವೆ ನಂ 14/1 ಎ 2 ರಲ್ಲಿ 1 ಎಕರೆ 25 ಗುಂಟೆ ಜಮೀನಿದ್ದು, ಅದರಲ್ಲಿ 30 ನಿವೇಶನಗಳನ್ನು ವಿಂಗಡಿಸಿ ಮಾರಾಟಮಾಡಿರುತ್ತಾರೆ. ಇದಕ್ಕೆ ಸಂಬಂದಪಟ್ಟಂತೆ ಖಾತ ಕಂದಾಯ ಪಹಣಿಯೊಂದಿಗೆ ನೊಂದಣಿ ಮಾಡಿಸಿಕೊಂಡು ವಾಸವಾಗಿದ್ದಾರೆ.ಈ ಸರ್ವೆ ನಂಬರ್ ನ 1 ಎಕರೆ 25 ಗುಂಟೆ ಜಮೀನನ್ನು ಭೂ-ಸ್ವಾಧಿನದಿಂದ ಕೈ ಬಿಡಬೇಕೆಂದು ಸಂಬಂಧಪಟ್ಟ ಅಧಿಕಾರಿಗಳಿಗೆ ಆದೇಶ ನೀಡಬೇಕಾಗಿ ತಮ್ಮಲ್ಲಿ ಕೋರಿದೆ.

ವಂದನೆಗಳೊಂದಿಗೆ,

ತಮ್ಮ ವಿಶ್ವಾಸಿ,

ಎಂ. ಶ್ರೀನಿವಾಸ್.

ಯಡ್ಡಿಗೆ ಶಾಸಕ ಶ್ರೀನಿವಾಸ್ ಬರೆದ ಲ್ಯಾಂಡ್ ಡೀಲ್ ಪತ್ರ.....

ಸಾಲದ ಮೊತ್ತ 2009ರ ವೇಳೆಗೆ 9.63ಕೋಟಿ ರೂಪಾಯಿಗೆ ಏರಿದೆ.

ಆದರೆ 2010ರ ಆಸ್ತಿ-ಆದಾಯ ಘೋಷಣೆ ಪ್ರಮಾಣ ಪತ್ರದಲ್ಲಿ ಶಾಸ ಶ್ರೀನಿವಾಸ್ ಬ್ಯಾಂಕ್ ಸಾಲ ಸಡನ್ನಾಗಿ 9.63 ಕೋಟಿ ರೂನಿಂದ ಕೇವ 7.29 ಲಕ್ಷ ರೂಗೆ ಇಳಿದಿದೆ. ಅಂದರೆ ಒಂದೇ ವರ್ಷದಲ್ಲಿ ಶ್ರೀನಿವಾ ಒಂಭತ್ತು ಕೋಟಿ ಐವತ್ತೈದು ಲಕ್ಷ ರೂಪಾಯಿಗಳಷ್ಟು ದುಡಿದು ಬ್ಯಾಂ ಸಾಲ ತೀರಿಸಿಕೊಂಡಿದ್ದಾನೆ ಅಂತಾಯಿತು. ಶ್ರೀನಿವಾಸನೇ ಘೋಷಿಸಿಕೊಂಡಿರು ಲೆಕ್ಕದ ಪ್ರಕಾರ ಈತನ ವಾರ್ಷಿಕ ಆದಾಯ, ಬಾಡಿಗೆ, ಸಂಬಳ ಒಟ್ಟು ರ ಮೂರು ಕೋಟಿ ರೂ. ದಾಟುವುದಿಲ್ಲ, ಹಾಗಿದ್ದಾಗ ಈ ಒಂಭತ್ತು ಕೋ ರೂ ಎಲ್ಲಿಂದ ಹೇಗೆ ಬಂದಿರಬಹುದು?



2008 ರಿಂದೀಚೆಗೆ ಕರ್ನಾಟಕದಲ್ಲಿ ಬಿಜೆಪಿ ಅಧಿಕಾರಕ್ಕೆ ಬಂದಿದ ಆಪರೇಷನ್ ಕಮಲದ ಮೂಲಕ ನೂರಾರು ಕೋಟಿ ರೂ ಚೆಲ್ಲಿ ಶಾಸಕರ ಖರೀದಿಸುವ ಘಟನೆಗಳು ನಡೆದಿದ್ದವು. ಜೊತೆಗೆ ಯಡಿಯೂರಪ್ಪ ಮುಖ್ಯಮಂ ಆದನಂತರ ತನ್ನದೇ ಬಿಜೆಪಿ ಪಕ್ಷದ ಶಾಸಕರಿಗೂ ಮನಸೋ ಇಚ್ಛೆ ಮೇಯಲ ಬಿಟ್ಟಿದ್ದು ಗುಟ್ಟಾದ ಸಂಗತಿಯೇನಲ್ಲ ಶ್ರೀನಿವಾಸ್ ಆ ಅವಕಾಶ ಜಾ ಹೋಗಲು ಯಾಕೆ ಬಿಡುತ್ತಾನೆ?

ಅಧಿಕಾರಿಗಳಿಂದ ಹಫ್ತಾ ವಸೂಲಿ, ಲ್ಯಾಂಡ್ ಡೀಲ್‌ಗಳು, ಡಿನೋಟಿಫಿಕೇಶ ದಂಧೆಗಳಿಗೆಲ್ಲಾ ಕೈಹಾಕಿದ ಶ್ರೀನಿವಾಸ್ ಎರಡೂ ಕೈಗಳಿಂದ ಹ ಬಾಚತೊಡಗಿದ. ಈತ ಆ ಅವಧಿಯಲ್ಲಿ ಬೆಳೆಸಿಕೊಂಡಿರುವ ಆಸ್ತಿಗಳ ವಿವ ನೋಡಿದರೆ ತಲೆ ಸುತ್ತು ಬರುವಂತಿದೆ.

ಹೇಗೆ ಬಂತು ಇಷ್ಟು ಆಸ್ತಿ?

ಶಾಸಕ ಶ್ರೀನಿವಾಸ್ ಸ್ವತಃ ಹೇಳಿಕೊಂಡಿರುವ ಪ್ರಕಾರ ಮತ್ತು ಬಹುತೇಕರ ಗೊತ್ತಿರುವೆಡೆ ಜಯನಗರ 'ಬಿ' ಬ್ಲಾಕ್‌ನಲ್ಲಿ 50?80 ಅಳತೆಯ ಮೂರಂತ ಮನೆಯೊಂದಿದೆ. ಅದಲ್ಲದೆ ಉತ್ತರಹಳ್ಳಿ ಸರ್ಕಲ್‌ನಲ್ಲಿ ಒಂದು ದೊಡ್ಡ ಶಾಪಿಂ ಕಾಂಪ್ಲೆಕ್ಸ್, ಕನಕಪುರ ರೋಡ್‌ನಲ್ಲಿ ಎರಡು ದೊಡ್ಡ ಫ್ಯಾಕ್ಟರಿ ಶೆಡ್‌ಗಳಿ ಕೋಣನಕುಂಟೆ ಗ್ರಾಮದ ಸರ್ವೆ ನಂ 19/3 ರಲ್ಲಿರುವ ಶೆಡ್ ಒಂ ಸುಮಾರು 50 ಸಾವಿರ ಚದರಡಿ ವಿಸ್ತಾರದ್ದು, ಅದೇ ಕೋಣನಕುಂಟೆ ಸರ್ವೆ ನಂ 18/2 ರಲ್ಲಿ ಒಂದು ಎಕರೆ ಆರು ಗುಂಟೆ ಭೂಮಿಯೂ ಇ ಇವುಗಳ ಇವತ್ತಿನ ಮಾರ್ಕೆಟ್ ರೇಟ್ ಹತ್ತಾರು ಕೋಟಿ ರೂಗಳಷ್ಟಿ ಇಷ್ಟಲ್ಲದೆ ಕಗ್ಗಲಿಪುರ ಗ್ರಾಮದ ಸರ್ವೆ ನಂ 46 ರಲ್ಲಿ ಎಂಟು ಎಕರೆಯ ಭೂಮಿ ಶ್ರೀನಿವಾಸನಿಗಿದೆ. ಇದನ್ನೆಲ್ಲಾ ಶ್ರೀನಿವಾಸ್ ಶಾಸಕರಾಗಿದ 30-10-1995 ರಲ್ಲಿ 2 ಎಕರೆ, 8-11-95 ರಲ್ಲಿ 2 ಎಕರೆ, 13-11- ರಲ್ಲಿ ಒಂದು ಎಕರೆ, 19-11-95 ರಲ್ಲಿ 2 ಎಕರೆಯಂತೆ ಖರೀದಿಸಿದ ಒಟ್ಟು ಹನ್ನೊಂದುವರೆ ಲಕ್ಷ ರೂಪಾಯಿ ನೀಡಿ ಈ ಜಾಗ ಖರೀದಿ ಎಂದು ಶ್ರೀನಿವಾಸ್ ಹೇಳಿಕೊಳ್ಳುತ್ತಾನಾದರೂ ಆ ಇಡೀ ಎಂಟೆಕರೆ ಜ ವಿವಾದಿತ ಭೂಮಿಯಾಗಿತ್ತು, ಶ್ರೀನಿವಾಸ್ ತನಗಿದ್ದ ಶಾಸಕನ ಸ್ಥಾನದ ಪ್ರಭ ಬಳಸಿಕೊಂಡು ಆ ಭೂಮಿ ಸ್ವಾಹಾ ಮಾಡಿದ್ದಾನೆ. ಬೆಂಗಳೂರು ದಕ್ಷಿ ವಿಭಾಗದ ಅಸಿಸ್ಟೆಂಟ್ ಕಮಿಷನರ್ ಕೋರ್ಟ್‌ನಲ್ಲಿದ್ದ ಈ ಭೂಮಿಯ ಕೇಸ್ ಅನ್ನು ತನಗೆ ಅನುಕೂಲವಾಗುವಂತೆ ಸೆಟಲ್ ಮಾಡಿಕೊಂಡು ಭೂಮಿ ನುಂಗಿದ್ದಾನೆ. ವಾಸ್ತವವಾಗಿ ಕಗ್ಗಲೀಪುರದ ಸರ್ವೆ ನಂ 46 ನೂರಾರು ಎಕರೆ ಗೋಮಾಳ ಲ್ಯಾಂಡ್ ಇದ್ದಿದ್ದು ಅದೀಗ ಭೂಗ ಪಾಲಾಗಿದೆ. ಗೃಹ ಸಚಿವ ಅಶೋಕ್ ಮತ್ತವರ ಚೇಲಾ ಹೆಚ್ಚುಕಡಿಮೆ ಇಡೀ ಗೋಮಾಳವನ್ನು ಹಂಚಿಕೊಂಡು ತಿಂ ಮುಗಿಸಿದ್ದಾರೆ. ಅಂತವರ ಪೈಕಿ ಒಬ್ಬನಾಗಿರುವ ಶಾಸಕ ಶ್ರೀನಿವಾ ಅನಾಮತ್ತು 30 ಎಕರೆಗೆ ಬೇಲಿ ಸುತ್ತಿ ತ ವಶದಲ್ಲಿರಿಸಿಕೊಂಡಿದ್ದಾನೆ. ಸ್ವತಃ ಉತ್ತರಹಳ್ಳಿಯ ಶಾಸಕನೂ ತಾ ಆಗಿದ್ದ ಕಾರಣ ಭೂ ಮಂಜೂರಾತಿ ಸಮಿತಿಗೆ ಶ್ರೀನಿವಾಸ ಚೇರ್‌ಮೆನ್ ಆಗಿದ್ದ. ಇದು ಅವನ ಭೂಗಳ್ಳತನಕ್ಕೆ ರಹದ ಮಾಡಿಕೊಟ್ಟಿತು. ಯಾರ್‍ಯಾರ ಹೆಸರಿಗೊ ಗೋಮಾಳ ಲ್ಯಾಂ ಮಂಜೂರು ಮಾಡಿರುವ ಶ್ರೀನಿವಾಸ್ ಕೊನೆಗೆ ಅವೆಲ್ಲವ ತನ್ನ ಹೆಸರಿಗೆ, ಕೆಲವೊಂದನ್ನು ತನ್ನ ತಾಯಿ ಹಾಗೂ ಹೆಸರಲ್ಲೂ ಖರೀದಿಸಿದ್ದಾನೆ. ಭೂಮಂಜೂರಾತಿಯಾದ ಭೂಮಿ 15 ವರ್ಷ ಕಾಲ ಪರಭಾರೆಯಾಗುವಂತಿಲ್ಲವೆಂ ಕಾನೂನಿದ್ದಾಗಲೂ 28-7-2010 ರಲ್ಲಿ ಸರ್ಕಾರಿ ಆದೇಶ ಸ RO/464/LGB/2010 ರಂದು ಅಕ್ರಮವಾಗಿ ತನ್ನ ಹೆಸ ಬದಲಿಸಿಕೊಂಡಿದ್ದಾನೆ. ಇಷ್ಟಲ್ಲದೆ ಶ್ರೀನಿವಾಸನ ಮಗ ವೆಂಕಟೇ ಬಾಬು ಹೆಸರಿನಲ್ಲೂ ಇದೇ ಕಗ್ಗಲಿಪುರದ ಗೋಮಾಳ ಸ ನಂ 46 ರಲ್ಲಿ 5 ಎಕರೆ ಜಮೀನು ಇದೆ. ಕಂದಾಯ ಇಲಾಖ

▶9

ವಿಧಾನಪರಿಷತ್ ಚುನಾವಣೆ

ಅಡ್ಡ ಮತದಾನದ ಹಿಂದೆ ಹಣದ ಮಸಲತ್ತು

ಅಡ್ಡ ಮತದಾನ ಮಾಡುವ ಮೂಲಕ ಕರ್ನಾಟಕದ ಶಾಸಕರು ಮತ್ತೊಮ್ಮೆ ರಾಷ್ಟ್ರ ಮಟ್ಟದಲ್ಲಿ 'ಸುದ್ದಿಯ ಕೇಂದ್ರಬಿಂದು'ವಾಗಿದ್ದಾರೆ.

ವಿಶೇಷವೆಂದರೆ ಆಡಳಿತಾರೂಢ ಬಿಜೆಪಿಯಲ್ಲಿ ಒಂದು ಡಜನ್ ಶಾಸಕರು ಪಕ್ಷದ ವರಿಷ್ಠರ ಆದೇಶವನ್ನು ಉಲ್ಲಂಘಿಸಿ ತಮಗೆ ಇಷ್ಟಬಂದ ಹಾಗೆ ಓಟು ಹಾಕಿ ತಮ್ಮ 'ಜೇಬು' ತುಂಬಿಸಿಕೊಂಡಿದ್ದಾರೆ. ಈ ಹಿಂದೆ ಯಾವತ್ತೂ ಇಷ್ಟೊಂದು ದೊಡ್ಡ ಸಂಖ್ಯೆಯಲ್ಲಿ ಶಾಸಕರು ಪಕ್ಷದ ನಾಯಕರ ತೀರ್ಮಾನದ ವಿರುದ್ಧ ಬಂಡೆದ್ದಿದ್ದೇ ಇಲ್ಲ. ಯಡಿಯೂರಪ್ಪ ಮತ್ತು ಸದಾನಂದ ಗೌಡರ ಬಣಗಳ ನಡುವೆ ಕಳೆದ ಏಳೆಂಟು ತಿಂಗಳಿಂದ ದಿನನಿತ್ಯ ಮನಸ್ತಾಪ, ಬೀದಿಜಗಳ ಮತ್ತು ಆರೋಪ-ಪ್ರತ್ಯಾರೋಪ ನಡೆಯುತ್ತಿರುವುದರಿಂದ ಈ ನಾಯಕರ ಹಿಂಬಾಲಕರು ಅಡ್ಡ ಮತದಾನ ಮಾಡಬಹುದು ಎಂದು ಮೊದಲೇ ನಿರೀಕ್ಷಿಸಲಾಗಿತ್ತು.


ಭಿನ್ನಮತೀಯ ಚಟುವಟಿಕೆಗಳಿಂದ ಬೆಂದು ಬೆಂಡಾಗಿರುವ ಬಿಜೆಪಿ ಪಕ್ಷದಲ್ಲಿ ಇದು ಮಾಮೂಲಿಯೆನಿಸಿದರೆ, ದೆಹಲಿ ಹೈಕಮಾಂಡ್ ತೀರ್ಮಾನದ ವಿರುದ್ಧ ನಿದ್ದೆಯಲ್ಲೂ ಮಿಸುಕಾಡದ ಕಾಂಗ್ರೆಸ್ ಶಾಸಕರು ಈ ಬಾರಿ ಹೈಕಮಾಂಡ್ ವಿರುದ್ಧವೇ ಮೌನವಾಗಿ ಬಂಡಾಯ ಎದ್ದಿರುವುದು ಕಾಂಗ್ರೆಸ್ ವಲಯದಲ್ಲಿ ದಿಗ್ಭ್ರಮೆಯನ್ನು ಸೃಷ್ಟಿಸಿದೆ. ಕಾಂಗ್ರೆಸ್ನ ಅಧಿಕೃತ ಅಭ್ಯರ್ಥಿಯಾದ ಅಹ್ಮದ್ ಇಕ್ಬಾಲ್ ಸರಡಗಿ ಸೋತು ಆ ಪಕ್ಷದ ನಾಲ್ಕನೇ ಅಭ್ಯರ್ಥಿಯಾದ ಮಾಜಿ ಶಾಸಕ ಸೀತಾರಾಂ ಗೆದ್ದಿರುವುದು ರಾಜಕೀಯ ವಲಯದಲ್ಲೇ ಅಚ್ಚರಿಯನ್ನು ಹುಟ್ಟಿಸಿದೆ.

ಈ ಹಿಂದೆ ಹಣಕ್ಕಾಗಿ ತಮ್ಮ ಮತವನ್ನು ಮಾರಾಟ ಮಾಡುವ ಚಾಳಿ ಬಿಜೆಪಿ ಮತ್ತು ಜೆಡಿಎಸ್ ಪಕ್ಷಗಳಲ್ಲಿ ಕಂಡುಬಂದಿತ್ತು, ಆದರೀಗ ಆ ರೋಗ ಕಾಂಗ್ರೆಸ್ ಪಕ್ಷಕ್ಕೂ ಹಬ್ಬಿದೆ. ಪರಿಣಾಮವಾಗಿ ರಾಷ್ಟ್ರ ಮಟ್ಟದಲ್ಲಿ ಈಗ ಕರ್ನಾಟಕದ ಶಾಸಕರೆಂದರೆ ಹಣಕ್ಕೆ ತಮ್ಮ ಪಕ್ಷದ ಸಿದ್ಧಾಂತವನ್ನು ಮರೆತು ಮತ ಹಾಕುವ ಸ್ವಾರ್ಥಿಗಳೆಂದು ಸಾಬೀತಾಗಿದೆ. ಕಾಂಗ್ರೆಸ್ ಮತ್ತು ಬಿಜೆಪಿ ಪಕ್ಷಗಳಲ್ಲಿರುವ ಅಸಮಾಧಾನವನ್ನು ಚೆನ್ನಾಗಿ ಎನ್ಕ್ಯಾಶ್ ಮಾಡಿಕೊಂಡ ಜೆಡಿಎಸ್ ನಾಯಕ ಕುಮಾರಸ್ವಾಮಿ ಮುಂಬರುವ ಅಸೆಂಬ್ಲಿ ಚುನಾವಣೆಗಳಲ್ಲಿ ಸಾಕಷ್ಟು ಬದಲಾವಣೆಯಾಗಲಿದೆ ಎಂಬ ಸಂದೇಶವನ್ನು ಎರಡು ರಾಷ್ಟ್ರೀಯ ಪಕ್ಷಗಳಿಗೆ ನೀಡಿದ್ದಾರೆ. ಇದರರ್ಥ ಬರುವ ದಿನಗಳಲ್ಲಿ ರಾಜಕೀಯ ಧ್ರುವೀಕರಣ ಆಗುತ್ತದೆ.

ಈಗ ಈ ಅಡ್ಡ ಮತದಾನದ ಬಗ್ಗೆ ಕಾಂಗ್ರೆಸ್ ಮತ್ತು ಬಿಜೆಪಿಯಲ್ಲಿ ಆತ್ಮಾವಲೋಕನ ನಡೆಯುತ್ತಿದ್ದು ತಪ್ಪಿತಸ್ಥ ಶಾಸಕರ ವಿರುದ್ಧ ಶಿಸ್ತು ಕ್ರಮ ಕೈಗೊಳ್ಳುವ ಬಗ್ಗೆ ಕೇಳಿ ಬರುತ್ತಿವೆ. ಆದರೆ ಒಂದಂತೂ ನಿಜ. ಈ ಚುನಾವಣೆಗಳು ಗೌಪ್ಯ ಮತದಾನದಲ್ಲಿ ನಡೆದಿರುವುದರಿಂದ ಯಾವುದೇ ಪಕ್ಷಕ್ಕೆ ಅಡ್ಡ ಮತದಾನ ಮಾಡಿದ ತಮ್ಮ ಶಾಸಕರ ಮೇಲೆ ಶಿಸ್ತು ಕ್ರಮ ಕೈಗೊಳ್ಳಲು ಸಾಧ್ಯವಿಲ್ಲ. ಹೆಚ್ಚೆಂದರೆ ಪಕ್ಷದ ನಿರ್ಧಾರವನ್ನು ಉಲ್ಲಂಘಿಸಿ ಮತ ಹಾಕಿದ ಅನುಮಾನಾಸ್ಪದ ಶಾಸಕರನ್ನು ಗುರುತಿಸಿ ಅವರಿಗೆ ಮುಂದಿನ ಚುನಾವಣೆಯಲ್ಲಿ ಟಿಕೆಟ್ ನೀಡದಿರಬಹುದಷ್ಟೇ.

ಬಿಜೆಪಿಯಂತಹ ಆ'ಶಿಸ್ತಿ'ನ ಪಕ್ಷದಲ್ಲಿ ಅಡ್ಡ ಮತದಾನ ಹೊಸತೇನಲ್ಲ, ಆದರೆ ವಿಧಾನ ಪರಿಷತ್ ಚುನಾವಣೆಯಲ್ಲಿ ಒಂದು ಡಜನ್ ಶಾಸಕರು ಅಡ್ಡ ಮತದಾನ ಮಾಡಿರುವುದರಿಂದ ಮೊನ್ನೆಯಷ್ಟೇ ಶಮನಗೊಂಡಿದ್ದ ಭಿನ್ನಮತೀಯ ಚಟುವಟಿಕೆ ಮತ್ತೆ ಉಲ್ಬಣಗೊಳ್ಳಲು ಅವಕಾಶ ಮಾಡಿಕೊಟ್ಟಿದೆ. ಏಕೆಂದರೆ ಯಡಿಯೂರಪ್ಪ ಬಣದ ಮೂವರು ಯಾವುದೇ ತೊಂದರೆಯಿಲ್ಲದೆ ಮೊದಲ ಪ್ರಾಶಸ್ತ್ಯದಲ್ಲೇ ಗೆದ್ದುಬಿಟ್ಟಿದ್ದಾರೆ. ಆದರೆ ಸದಾನಂದ ಗೌಡರ ಬಣದ ಮೂರು ಅಭ್ಯರ್ಥಿಗಳಲ್ಲಿ ಇಬ್ಬರು ದ್ವಿತೀಯ ಪ್ರಾಶಸ್ತ್ಯದ ಮತಗಳ ಆಧಾರದ ಮೇಲೆ ಗೆದ್ದಿದ್ದಾರೆ. ಅಂದರೆ ಸದಾನಂದ ಗೌಡರ ಜೊತೆ ಗುರುತಿಸಿಕೊಂಡಿರುವ ಶಾಸಕರೇ ಅಡ್ಡ ಮತದಾನ ಮಾಡಿದ್ದಾರೆ ಎಂಬುದು ಮೇಲ್ನೋಟಕ್ಕೆ ಕಾಣಿಸುತ್ತದೆ.

ಈ ಅಡ್ಡ ಮತದಾನದನ್ನೇ ನೆಪವಾಗಿಟ್ಟುಕೊಂಡು ಸದಾನಂದ ಗೌಡರಿಗೆ ಪಕ್ಷದ ಶಾಸಕರ ಮೇಲೆ ಹಿಡಿತವಿಲ್ಲ, ಈ ಕೂಡಲೇ ಅವರನ್ನು ಮುಖ್ಯಮಂತ್ರಿ ಸ್ಥಾನದಿಂದ ಕೆಳಗಿಳಿಸಬೇಕು, ಇಲ್ಲದಿದ್ದರೆ ಮುಂದಿನ ಚುನಾವಣೆ ವೇಳೆಗೆ ಇವರದೇ ನಾಯಕತ್ವ ಮುಂದುವರೆದರೆ ಪಕ್ಷ ಧೂಳೀಪಟವಾಗುತ್ತದೆ ಎಂದು ಆರೋಪ ಹೊರಿಸಲು ಯಡ್ಡಿ ಬಣ ಮಾಸ್ಟರ್ ಪ್ಲಾನ್ ರಚಿಸಿತ್ತು. ಮೊನ್ನೆಯಷ್ಟೇ ಲೋಕಸಭಾ ಚುನಾವಣೆಯನ್ನು ಕಳೆದುಕೊಂಡ ಸದಾನಂದರ ಪಾಲಿಗೆ ಈ ಶಾಸಕರ ಅಡ್ಡ ಮತದಾನ ನಿಜಕ್ಕೂ ತಲೆನೋವಾಗಿತ್ತು. ಆದರೆ ಅವರ ಅದೃಷ್ಟ ಚೆನ್ನಾಗಿದೆ. ಸಿಬಿಐನ ವಿಶೇಷ ನ್ಯಾಯಾಲಯ ಯಡಿಯೂರಪ್ಪನವರಿಗೆ ಜಾಮೀನು ನೀಡಲು ನಿರಾಕರಿಸಿದ್ದರಿಂದ ಈಗ ಬಂಧನದ ಭೀತಿಯಲ್ಲಿ ದಿನ ಕಳೆಯುತ್ತಿರುವ ಯಡಿಯೂರಪ್ಪ ಸದ್ಯಕ್ಕೆ ಸದಾನಂದ ಗೌಡರ ಪದಚ್ಯುತಿಗೆ ಒತ್ತಾಯಿಸುವ ಸಾಧ್ಯತೆ ಕಡಿಮೆ.


ಸೋತ ಸರಡಗಿ

ಈ ಮಧ್ಯೆ ಪದವೀಧರ ಮತ್ತು ಶಿಕ್ಷಕರ ಆರು ಕ್ಷೇತ್ರಕ್ಕೆ ನಡೆದ ಚುನಾವಣೆಯಲ್ಲಿ ಬಿಜೆಪಿ ಐದು ಸ್ಥಾನಗಳನ್ನು ಗೆದ್ದಿರುವುದು ಸದಾನಂದ ಗೌಡರ ಮುಖದಲ್ಲಿ ಆನಂದದ ನಗೆ ಬೀರಿದೆ. ಏಕೆಂದರೆ ಈ ಚುನಾವಣೆಯಲ್ಲಿ ಯಡಿಯೂರಪ್ಪ ನವರು ಮತ್ತು ಅವರ ಹಿಂಬಾಲಕರು ಪ್ರಚಾರ ಕಾರ್ಯಕ್ರಮದಲ್ಲಿ ಭಾಗವಹಿಸದೇ ಬಿಜೆಪಿಯ ಅಭ್ಯರ್ಥಿಗಳು ಸೋಲಲು ಪರೋಕ್ಷವಾಗಿ ಪ್ರಯತ್ನಿಸಿದ್ದರು. ಆದರೂ ಐದು ಕ್ಷೇತ್ರಗಳಲ್ಲಿ ಬಿಜೆಪಿ ಅಭ್ಯರ್ಥಿಗಳು ಜಯಭೇರಿ ಬಾರಿಸಿರುವುದು ಸದಾನಂದ ಗೌಡರ ಕೈಯನ್ನು ವಿದ್ಯಾವಂತರು ಬಲಪಡಿಸಿದಂತಾಗಿದೆ. ಅಂದರೆ ಯಡಿಯೂರಪ್ಪನವರ ಸಹಕಾರವಿಲ್ಲದೆಯೂ ತಾನು ಚುನಾವಣೆಯನ್ನು ಗೆಲ್ಲಬಹುದು ಎಂಬ ಧೈರ್ಯವನ್ನು ಈ ಪದವೀಧರ ಮತ್ತು ಶಿಕ್ಷಕರ ಚುನಾವಣೆ ಸದಾನಂದ ಗೌಡರಿಗೆ ನೀಡಿದೆ. ಅದರಲ್ಲೂ ಕಳೆದ ಬಾರಿ ನಾಲ್ಕು ಕ್ಷೇತ್ರಗಳಲ್ಲಿ ಗೆದ್ದಿದ್ದ ಬಿಜೆಪಿ ಈ ಬಾರಿ ಒಂದು ಹೆಚ್ಚುವರಿ ಕ್ಷೇತ್ರವನ್ನು ಪಡೆದಿರುವುದು ಗೌಡರ ಪಾಲಿನ ಹಿರಿಮೆಯೆಂದೇ ಹೇಳಬಹುದು.

ಸದ್ಯಕ್ಕೆ ಬಿಜೆಪಿ ಪಕ್ಷದಲ್ಲಿ ಶಾಂತಿ ಆವರಿಸಿದ್ದರೆ ಕಾಂಗ್ರೆಸ್ ಪಕ್ಷದಲ್ಲಿನ ವಾತಾವರಣ ಪ್ರಕ್ಷುಬ್ಧವಾಗಿದೆ. ಕಾಂಗ್ರೆಸ್ನ ಅಧಿಕೃತ ಅಭ್ಯರ್ಥಿಯಾದ ಇಕ್ಬಾಲ್ ಅಹ್ಮದ್ ಸರಡಗಿ ಸೋತಿರುವುದು ಕಾಂಗ್ರೆಸ್ ಪಕ್ಷದ ಜಾತ್ಯತೀತ ನಿಲುವಿಗೆ ದೊಡ್ಡ ಏಟು ಬಿದ್ದಂತಾಗಿದೆ. ಕಾಂಗ್ರೆಸ್ ಪಕ್ಷದ ಅಧಿಕೃತ ಅಲ್ಪಸಂಖ್ಯಾತ ಅಭ್ಯರ್ಥಿಯನ್ನು ಪಕ್ಷದ ಶಾಸಕರೇ ಸೋಲಿಸಿರುವುದು ಕಾಂಗ್ರೆಸ್ ಪಕ್ಷದಲ್ಲೂ ಭಿನ್ನಮತ ತಾಂಡವವಾಡುತ್ತಿದೆ ಎಂಬುದನ್ನು ಸ್ಪಷ್ಟಪಡಿಸಿದೆ. ಈ ಸೋಲಿನಿಂದ ಕಂಗೆಟ್ಟಿರುವ ಕಾಂಗ್ರೆಸ್ ಹೈಕಮಾಂಡ್ ಇದರ ಬಗ್ಗೆ ತನಿಖೆ ನಡೆಸಲು ಹೊರಟಿದೆ. ಈ ಮಧ್ಯೆ ಕಾಂಗ್ರೆಸ್ ಪಕ್ಷದ ಅಲ್ಪಸಂಖ್ಯಾತ ಶಾಸಕರು ಮತ್ತು ಮುಖಂಡರು ತಮ್ಮ ವಿರುದ್ಧ ಪಕ್ಷದವರೇ ನಡೆಸಿದ ಪಿತೂರಿಯಿಂದ ಬೇಸರಗೊಂಡು ಕಾಂಗ್ರೆಸ್ ಪಕ್ಷಕ್ಕೆ ರಾಜೀನಾಮೆ ನೀಡಲು ಹೊರಟಿದ್ದಾರೆ. ಸದ್ಯಕ್ಕೆ ಅವರ ಕೋಪ ಮತ್ತು ತಾಪವನ್ನು ಪಕ್ಷದ ಅಧ್ಯಕ್ಷ ಜಿ. ಪರಮೇಶ್ವರ್ ಶಮನಗೊಳಿಸಿದ್ದರೂ ಕಾಂಗ್ರೆಸ್ ಪಕ್ಷದಲ್ಲಿನ ಮುಸ್ಲಿಮ್ ನಾಯಕರೆಲ್ಲ ಈ ಸೋಲಿನ ಬಗ್ಗೆ ಪರಾಮರ್ಶಿಸುತ್ತ ತಮ್ಮ ಭವಿಷ್ಯವನ್ನು ರೂಪಿಸಿಕೊಳ್ಳಲು ಆಲೋಚಿಸುತ್ತಿದ್ದಾರೆ. ಯಾವುದೇ ಕಾರಣಕ್ಕೂ ಮುಸ್ಲಿಂ ಸಮುದಾಯಕ್ಕೆ ನೋವಾಗಬಾರದೆಂಬ ಕಾಂಗ್ರೆಸ್ ಹೈಕಮಾಂಡ್ನ ಮೂಲ ಆಶಯಕ್ಕೆ ಪಕ್ಷದ ಶಾಸಕರು ತಿರುಗಿ ಬಿದ್ದಿರುವುದು ನಿಜಕ್ಕೂ ರಾಜ್ಯ ಮತ್ತು ರಾಷ್ಟ್ರಮಟ್ಟದ ನಾಯಕರ ಪಾಲಿಗೆ ಮುಖಭಂಗ ಎಂದೇ ತಿಳಿಯಬಹುದು.

ವಿಧಾನ ಪರಿಷತ್ ಅಭ್ಯರ್ಥಿಗಳನ್ನು ಆಯ್ಕೆ ಮಾಡುವ ಸಂದರ್ಭದಲ್ಲಿ ತಮ್ಮ ಹಿಂಬಾಲಕರಿಗೆ ಟಿಕೆಟ್ ನೀಡಿಲ್ಲ ಎಂದು ಕಾಂಗ್ರೆಸ್ ಹೈಕಮಾಂಡ್ ವಿರುದ್ಧ ತಿರುಗಿಬಿದ್ದು ವಿರೋಧ ಪಕ್ಷದ ನಾಯಕನ ಸ್ಥಾನಕ್ಕೆ ರಾಜೀನಾಮೆ ಬಿಸಾಕಿದ ಸಿದ್ದರಾಮಯ್ಯ ಕೂಡ ಪಕ್ಷದ ಈ ಅಧಿಕೃತ ಅಭ್ಯರ್ಥಿಯ ಸೋಲಿನಿಂದ ಕಂಗೆಟ್ಟಿದ್ದಾರೆ. ಏಕೆಂದರೆ ಕಾಂಗ್ರೆಸ್ ಹೈಕಮಾಂಡ್ ಈ ಸೋಲಿನ ಹೊಣೆಯನ್ನು ನಾಳೆ ಸಿದ್ದರಾಮಯ್ಯನವರ ತಲೆಗೆ ಕಟ್ಟಿದರೂ ಆಶ್ಚರ್ಯವಿಲ್ಲ.

ಈ ಮಧ್ಯೆ ಕಾಂಗ್ರೆಸ್ನ ಲಿಂಗಾಯತ ಶಾಸಕರೆಲ್ಲ ಜೊತೆಗೂಡಿ ಅಧ್ಯಕ್ಷ ಸ್ಥಾನವನ್ನು ತಮ್ಮ ಜನಾಂಗದವರಿಗೆ ನೀಡಬೇಕು ಎಂದು ಪಟ್ಟು ಹಿಡಿದಿರುವುದು ಕೂಡ ಪಕ್ಷದಲ್ಲಿ ಭಿನ್ನಮತೀಯವನ್ನು ಹೆಚ್ಚಿಸಿದೆ. ಕಾಂಗ್ರೆಸ್ ಶಾಸಕರಲ್ಲಿ ಅಡ್ಡ ಮತದಾನ ಮಾಡಿದವರಲ್ಲಿ ಹೆಚ್ಚಿನವರು ಲಿಂಗಾಯತ ಜಾತಿಗೆ ಸೇರಿದವರು ಎನ್ನಲಾಗುತ್ತಿದೆ. ಅಂದರೆ ಖರ್ಗೆಯವರ ಹಿಂಬಾಲಕರಾದ ಸರಡಗಿಯವರನ್ನು ಸೋಲಿಸುವ ಮುಖಾಂತರ ಕಾಂಗ್ರೆಸ್ ಪಕ್ಷದಲ್ಲಿ ಲಿಂಗಾಯತ ಮತ್ತು ಹಿಂದುಳಿದ ಜನಾಂಗದ ನಡುವಿನ ಬಿರುಕು ಬಿಗಡಾಯಿಸಿದೆ ಎಂಬುದನ್ನು ತೋರಿಸುತ್ತದೆ. ಕಾಂಗ್ರೆಸ್ ಪಕ್ಷದಲ್ಲಿ ಕಳೆದ ಹಲವಾರು ವರ್ಷಗಳಿಂದ ಲಿಂಗಾಯತ ಸಮುದಾಯದ ಶಾಸಕರನ್ನು ಹೈಕಮಾಂಡ್ ನಿರ್ಲಕ್ಷಿಸುತ್ತಾ ಬಂದಿರುವುದು ಬಹುಶಃ ಅವರಲ್ಲಿ ಅಸಮಾಧಾನ ಸ್ಫೋಟಗೊಳ್ಳಲು ಕಾರಣವಾಗಿದೆ ಎಂದು ಪಕ್ಷದಲ್ಲಿ ಚರ್ಚೆಯಾಗುತ್ತಿದೆ.

ಹೀಗಾಗಿ ಅಡ್ಡ ಮತದಾನ ಖಂಡಿತವಾಗಿಯೂ ಕಾಂಗ್ರೆಸ್ ಪಕ್ಷದಲ್ಲಿ ಹಲವಾರು ಬದಲಾವಣೆಗಳಿಗೆ ದಾರಿ ಮಾಡಿಕೊಡುವ ಸಾಧ್ಯತೆಯಿದೆ. ಅಷ್ಟೇ ಅಲ್ಲ, ಮುಂದಿನ ಸಾರ್ವತ್ರಿಕ ಚುನಾವಣೆಗೆ ಈ ಫಲಿತಾಂಶ ಒಂದು ರೀತಿಯಲ್ಲಿ ದಿಕ್ಸೂಚಿಯಾಗಿರುವುದರಿಂದ ಈ ಸೋಲನ್ನು ಕಾಂಗ್ರೆಸ್ ಹೈಕಮಾಂಡ್ ಗಂಭೀರವಾಗಿ ಪರಿಗಣಿಸುವುದು ಶತಸಿದ್ಧ. ಸದ್ಯದಲ್ಲೇ ಕಾಂಗ್ರೆಸ್ ಅಧ್ಯಕ್ಷ ಜಿ. ಪರಮೇಶ್ವರ್ ಮತ್ತು ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯರವರ ತಲೆದಂಡ ಆಗಬಹುದು ಎಂಬ ಮಾತು ಕಾಂಗ್ರೆಸ್ ವಲಯದಲ್ಲಿ ಕೇಳಿಬರುತ್ತಿದೆ. ಇದೆಲ್ಲಕ್ಕಿಂತ ಮುಖ್ಯವಾಗಿ ದಶಕಗಳಿಂದ ಕಾಂಗ್ರೆಸ್ ಪರ ನಿಷ್ಠೆಯನ್ನು ಪ್ರದರ್ಶಿಸುತ್ತ ಬಂದಿರುವ ಮುಸ್ಲಿಂ ಸಮುದಾಯದ ಪ್ರೀತಿಯನ್ನು ಮತ್ತೆ ಪಡೆಯುವತ್ತ ಈಗ ಕಾಂಗ್ರೆಸ್ ಪಕ್ಷ ಹೊಸ ರಣನೀತಿಯನ್ನು ಹೆಣೆಯಬೇಕಾಗಿದೆ.

ಅಂತೂ-ಇಂತೂ ಈ ಬಾರಿಯ ಚುನಾವಣೆಯಲ್ಲಿ ಇಬ್ಬರು ಶ್ರೀಮಂತ ವ್ಯಕ್ತಿಗಳಾದ ಭೈರತಿ ಸುರೇಶ್ ಮತ್ತು ಎಂ.ಆರ್.ಸೀತಾರಾಂ ಎಲ್ಲಾ ರಾಜಕೀಯ ಪಂಡಿತರ ಲೆಕ್ಕಾಚಾರಗಳನ್ನು ತಲೆಕೆಳಗೆ ಮಾಡಿ ಗೆದ್ದಿರುವುದು, ಹತ್ತಾರು ಶಾಸಕರು ಅಡ್ಡ ಮತದಾನ ಮಾಡಿರುವುದು ಮತ್ತೊಮ್ಮೆ ಕರ್ನಾಟಕದ ಶಾಸಕರು ಹಣದ ಥೈಲಿಗಾಗಿ ತಮ್ಮನ್ನು ತಾವು ಮಾರಾಟ ಮಾಡಿಕೊಳ್ಳುತ್ತಾರೆ ಎಂಬ ಸಂಶಯವನ್ನು ಸಾಬೀತುಪಡಿಸಿದೆ. ಇದು ಖಂಡಿತವಾಗಿಯೂ ಪ್ರಜಾತಾಂತ್ರಿಕ ಮೌಲ್ಯಗಳಿಗೆ ನಮ್ಮ ಶಾಸಕರು ತಿಲಾಂಜಲಿ ಇಟ್ಟಂತೆ.

● ಶೆಣೈ

'ಕಠಾರಿವೀರ' ವಿವಾದ

ಸ್ವಾಮೀಜಿಗಳಿಗೆ ಕೆಲವು ಪ್ರಶ್ನೆಗಳು

ಒಂದು ಪತ್ರ

ಕನ್ನಡ ಚಿತ್ರಗಳು ವಿವಾದದಲ್ಲಿ ಮುಳುಗಿ ಏಳುತ್ತಿರುವುದು ಎಲ್ಲರಿಗೂ ಗೊತ್ತಿರುವ ವಿಚಾರ. ಆದರೆ ಈ 'ಕಠಾರಿವೀರನ...' ವಿಷಯದಲ್ಲಿ ಇತ್ತೀಚಿಗೆ ನಡೆದಿರುವುದು ನನಗಂತು ಆಶ್ಚರ್ಯ ಹುಟ್ಟಿಸಿದೆ. ಚಿತ್ರದ ನಾಯಕ ಸ್ವಾಮೀಜಿಗಳನ್ನು ಕ್ಷಮೆ ಕೇಳಿಯೂ ಆಯಿತು. ಆದರೆ ಕೆಲವು ಪ್ರಶ್ನೆಗಳು ಹಾಗೆಯೇ ಉಳಿದುಹೋದವು. ಆ ಪ್ರಶ್ನೆಗಳನ್ನು ನಾನು ಕೇಳಲು ಇಚ್ಛಿಸುತ್ತೇನೆ.

ಪ್ರಶ್ನೆ 1: ಯಮಲೋಕದಲ್ಲಿ ಪಾವಿತ್ರತೆಗೆ ಧಕ್ಕೆ ಬಂದೇ ಇಲ್ಲವೆ?

ವೇದಗಳಲ್ಲಿ ಅಣ್ಣತಂಗಿಯರಾದ ಯಮ ಮತ್ತು ಯಮಿಯರ ಸಂಭಾಷಣೆ ಬರುತ್ತದೆ. ಈ ಸಂಭಾಷಣೆಯಲ್ಲಿ ಅಣ್ಣನಾದ ಯಮನನ್ನು ತಂಗಿಯಾದ ಯಮಿಯು ಲೈಂಗಿಕ ಸುಖ ಪಡಲು ಆಹ್ವಾನಿಸುತ್ತಾಳೆ. ಜೊತೆಗೆ ಬ್ರಹ್ಮ ತನ್ನ ಮಗಳನ್ನೇ ಅನುಭವಿಸಲಿಲ್ಲವೆ ಎಂದು ಕೂಡ ಪ್ರಶ್ನಿಸುತ್ತಾಳೆ. ಆದ್ದರಿಂದ ದೇವರೆನಿಸಿಕೊಂಡವರೇ ಇಂತಹ ಅನೈತಿಕ ಚಟುವಟಿಕೆಯಲ್ಲಿ ತೊಡಗಿಸಿಕೊಂಡರೆ ಸರಿಯೇ? 'ಕಠಾರಿವೀರ' ಚಿತ್ರದಲ್ಲಿ ದೇವತೆಗಳಿಗೆ ಅವಮಾನ ಆಗಿದೆಯೆಂದು ಕತ್ತರಿ ಹಾಕಲು ಆದೇಶಿಸಿದ ತಾವುಗಳು ವೇದದಲ್ಲಿನ ಈ ಸಂಭಾಷಣೆಗೆ ಏನು ಮಾಡುವುದು? 'ಕಠಾರಿವೀರ' ಯಮಿ ಮಾಡಿರುವ ತಪ್ಪಿಗಿಂತ ದೊಡ್ಡ ತಪ್ಪು ಮಾಡಿರುವನೇ?

ಪ್ರಶ್ನೆ 2: ತಪ್ಪು ಮಾಡುವ ದೇವತೆಗಳಿಗೆ ಒದೆಯಬಾರದೆ?

ಸ್ವರ್ಗಾಧಿಪತಿ ಇಂದ್ರನ ಬಗ್ಗೆ ಸ್ವಲ್ಪ ತಿಳಿದಿರುವವರು ಕೂಡ ಅವನಿಗೆ ಮರ್ಯಾದೆ ಕೊಡಲು ಇಷ್ಟಪಡುತ್ತಾರೆ ಎಂದು ನನಗನ್ನಿಸುವುದಿಲ್ಲ, ಎಲ್ಲರಿಗೂ ತಿಳಿದಿರುವಂತೆ ಈ ಮಹಾದೇವತೆ ಗೌತಮ ಋಷಿಯ ಹೆಂಡತಿಯಾದ ಅಹಲ್ಯೆಯನ್ನು ಅನುಭವಿಸಿದ್ದು ಸರಿಯೆ? ಇದು ನೈತಿಕತೆಯೇ? ಮಹಾಭಾರತದಲ್ಲಿ ಮತ್ತು ಹರಿವಂಶಗಳಲ್ಲಿ ಆರ್ಯ ಹೆಂಗಸರಿಗೆ ದೇವತೆಗಳಾದ ಇಂದ್ರ, ಯಮ, ಸತ್ಯ, ಅಗ್ನಿ ಮುಂತಾದ ದೇವತೆಗಳಿಂದ ಹುಟ್ಟಿದ ಮಕ್ಕಳನ್ನು ಹೆಸರಿಸಲಾಗಿದೆ. ದೇವತೆಗಳಿಗೆ ಮಾನವರ ಹೆಂಗಸರು ಬೇಕು ಆದರೆ ತಪ್ಪು ಮಾಡಿದಾಗ ಒದೆಗಳು ಬೇಡವೆಂದರೆ ಹೇಗೆ? ತಪ್ಪು ಯಾರೆ ಮಾಡಿದರೂ ತಪ್ಪೇ ಅಲ್ಲವೆ?

ಪ್ರಶ್ನೆ 3: ದೇವಕನ್ನೆಯರು ಅರೆಬೆತ್ತಲೆಯಾಗಿ ಇರುವುದಿಲ್ಲವೆ?

ಹಿಂದೂ ದೇವಾಲಯಗಳಲ್ಲಿ ಹಲವು ಕಡೆ ಬೆತ್ತಲೆ ಹೆಣ್ಣುಗಳ, ನಾಲ್ಕು ಗೋಡೆಗಳ ನಡುವೆ ನಡೆಯಬೇಕಾದ ಕ್ರಿಯೆಗಳನ್ನೆಲ್ಲ ಬಹಿರಂಗವಾಗಿಯೇ ಕೆತ್ತಲಾಗಿದೆ. ಇದು ಸಭ್ಯತನವೇ? ಹೆಣ್ಣಿಗೆ ತೋರುತ್ತಿರುವ ಗೌರವವೇ? ನಮಗೆಲ್ಲರಿಗೂ ರಂಭೆ, ಊರ್ವಶಿ, ಮೇನಕೆಯರು ಮೈ ತುಂಬ ಬಟ್ಟೆ ತೊಟ್ಟಿರುವಂತೆ ಕಲ್ಪನೆ ಮೂಡಿಸಿರುವವರು ಯಾರು? ಹೋಗಲಿ ಅವರ ಗಂಡಂದಿರು ಯಾರು? ಅವರು ಏಕಪತಿ ವ್ರತಸ್ಥರೆ? ಈ ಸಭ್ಯರಿಗೆ ವಿಶ್ವಾಮಿತ್ರನ ಹತ್ತಿರ ಕೆಲಸವೇನು? ಯಾರೇ ತಪಸ್ಸು ಮಾಡಿದರೂ ಅವರ ಮುಂದೆ ಹೋಗಿ ಕುಣಿಯುವ ಈ ದೇವತೆಗಳ ಉದ್ದೇಶವೇನು? ಹೀಗೆ ಮಾಡುವವರನ್ನು ನಾವೆಲ್ಲ ದೇವಕನ್ಯೆಯರು ಎನ್ನುತ್ತಿದ್ದೇವೆಯೇ?

ಪ್ರಶ್ನೆ 4: ದೇವಕನ್ಯೆಯರನ್ನು ಮಾತನಾಡಿಸುವ ರೀತಿ ಸರಿಯಿದೆಯೆ?

ಸೀತಾದೇವಿಯನ್ನು ಭಾರತ ನಾರಿಯರು ಆದರ್ಶಳನ್ನಾಗಿ ಮಾಡಿಕೊಂಡಿದ್ದಾರೆ. ಇಂತಹ ಮಾತೆಯನ್ನು ಗಂಡು ದೇವರು, ಋಷಿಗಳು ಆದಂತ ಹನುಮಂತ, ಲಕ್ಷ್ಮಣ, ವಿಶ್ವಾಮಿತ್ರರುಗಳು ಸಂಭೋದಿಸುವುದು ಹೇಗೆಂದರೆ ಸುಶ್ರೂಣಿ (ಒಳ್ಳೆಯ ಘನವೃಳ್ಳವಳೆ), ಸುಮಧ್ಯ (ಒಳ್ಳೆಯ ನಡುವಿರುವವಳೆ), ಕುಚೋನ್ನತೆ (ಉನ್ನತ ಎದೆಗಳಿರುವವಳೆ) ಎಂದು. ಇದು ಹೆಣ್ಣಿಗೆ ಕೊಡುವ ಮರ್ಯಾದೆಯೆ?

ಪ್ರಶ್ನೆ 5: ದೇವರುಗಳು ಶ್ವೇತಹಸ್ತರೆ?

ರಾಮಾಯಣ ಬರೆದಿರುವ ವಾಲ್ಮೀಕಿ ರಾಮನನ್ನು 'ಸ್ತ್ರೀಲೋಲರಲ್ಲೇ ರಾಜ' ಎನ್ನುತ್ತಾನೆ. ಇದರ ಅರ್ಥ ಏಕಪತ್ನಿವ್ರತಸ್ಥನೆಂದೇ? ಸೀತೆ ಮತ್ತು ರಾಮ ಇಬ್ಬರೂ ಸೋಮರಸವನ್ನು ಕುಡಿಯುವ ಪ್ರಸಂಗವಿದೆ. ಇದು ಸರಿಯೇ? ಆದಾಗಲೇ ಮದುವೆಯಾಗಿದ್ದ ರಾಧೆಯನ್ನು ಕೃಷ್ಣ ಹಾರಿಸಿಕೊಂಡು ಬಂದದ್ದು ಸರಿಯೇ?

ಈ ಮೇಲಿನ ಪ್ರಶ್ನೆಗಳಿಗೆ ಯಾರಾದರು ಸ್ವಾಮೀಜಿಗಳು ಉತ್ತರಿಸಿ ನನ್ನ ಗೊಂದಲಗಳನ್ನು ಪರಿಹಾರ ಮಾಡಬೇಕಾಗಿ ಕೋರುತ್ತೇನೆ. ಹಾಗೆಯೇ 'ಕಠಾರಿವೀರ'ನಿಗೆ ಕತ್ತರಿ ಹಾಕಿಸಿದಂತೆ ಇವುಗಳೆಲ್ಲಕ್ಕೂ ಕತ್ತರಿ ಹಾಕಲು ಪ್ರತಿಭಟನೆ ಮಾಡಲು ಆದಷ್ಟು ಬೇಗ ತಯಾರಾಗಬೇಕೆಂದು ಪ್ರಾರ್ಥಿಸುತ್ತೇನೆ. ಈ ಮೇಲಿನವುಗಳಲ್ಲಿ ತಪ್ಪು ತಿಳುವಳಿಕೆಯೇನಾದರೂ ಇದ್ದರೆ ದಯಮಾಡಿ ಕ್ಷಮಿಸಿ ಅವುಗಳನ್ನು ತಿದ್ದಬೇಕಾಗಿ ಕೇಳಿಕೊಳ್ಳುತ್ತೇನೆ. ಮೊದಲು ಇವುಗಳಿಗೆ ಕತ್ತರಿ ಹಾಕಿದ ನಂತರ ಜಾತಿ ವ್ಯವಸ್ಥೆಯ ಬುನಾದಿ ಆಗಿರುವ ಚಾತುರ್ವರ್ಣ ಪದ್ಧತಿ [illegible] ಕತ್ತರಿ ಹಾಕಲು ಸುಗಮ ದಾರಿಯಾಗುತ್ತದೆ.

● ವಿಕಾಸ್ ಆರ್. ಮೌರ್ಯ, ಬೆಂಗಳೂರು

ಉಗ್ರ ಸಿದ್ದಿಕಿಯನ್ನು ಪೊಲೀಸರೇ ಕೊಂದರಾ?



ಕಟೀಲ್ ಸಿದ್ದಿಕಿ

ನಮ್ಮ ದೇಶದ ಕಾನೂನು ಸುವ್ಯವಸ್ಥೆ, ಆಂತರಿಕ ಭದ್ರತೆಗಳಿಗೆ ಭೂಗತ ಲೋಕ ಮತ್ತು ಭಯೋತ್ಪಾದನೆಗಳು ಗಂಭೀರ ಸವಾಲಾಗಿವೆ. ಸಾವಿರಾರು ಮುಗ್ಧರನ್ನು ಬಲಿತೆಗೆದುಕೊಳ್ಳುತ್ತಿರುವ ಈ ದುಷ್ಟ ಶಕ್ತಿಗಳನ್ನು ನಿಯಂತ್ರಿಸುವಲ್ಲಿ ಪೊಲೀಸರ ಪಾತ್ರ ಎಂಥಾದ್ದು? ನಮ್ಮ ಭದ್ರತಾ ವ್ಯವಸ್ಥೆ ಎತ್ತ ಸಾಗುತ್ತಿದೆ ಎಂಬುದಕ್ಕೆ ಈ ಪ್ರಕರಣ ಸ್ಪಷ್ಟ ನಿದರ್ಶನ.

ಜೂನ್ 8 ರಂದು ಅತ್ಯಂತ ಬಿಗಿಭದ್ರತೆ ಹೊಂದಿರುವ ಪುಣೆಯ ಯರವಾಡ ಜೈಲಿನಲ್ಲಿ ಸುಮಾರು 27 ವರ್ಷ ವಯಸ್ಸಿನ ಯುವಕನೊಬ್ಬನ ಕೊಲೆಯಾಯಿತು. ಆತನೇ ಹಲವು ಭಯೋತ್ಪಾದಕ ಕೃತ್ಯಗಳಲ್ಲಿ ಆರೋಪಿಯಾಗಿದ್ದ ಮಹಮದ್ ಕಟೀಲ್ ಸಿದ್ದಿಕಿ. ಈತ ಒಬ್ಬ ಭಯೋತ್ಪಾದಕನಾಗಿದ್ದ ಕಾರಣ ಆತನ ಕೃತ್ಯದಿಂದ ಮನನೊಂದಿದ್ದ ಇದೇ ಜೈಲಿನ ಸಹ ಕೈದಿಗಳಾದ ಶರದ್ ಮೊಹಲ್ ಮತ್ತು ಅಲೋಕ್ ಭಲೇರಾವ್ ಎಂಬುವವರು ಆತನ ಉಸಿರುಗಟ್ಟಿಸಿ ಕೊಲೆ ಮಾಡಿದ್ದಾರೆ ಎಂಬ ಪೊಲೀಸ್ ಸ್ಟೋರಿಯನ್ನು ಇಡೀ ದೇಶಾದ್ಯಂತ ಎಲ್ಲಾ ಪತ್ರಿಕೆಗಳೂ ಮುಖಪುಟದಲ್ಲಿ ಪ್ರಕಟಿಸಿದವು.

ಈಕೊಲೆ ದೇಶಾದ್ಯಂತ ಸಂಚಲನವನ್ನುಂಟುಮಾಡಿದ್ದಲ್ಲದೆ ಹಲವು ಅನುಮಾನಗಳಿಗೆ ಕಾರಣವಾಗಿದೆ. ಇಂಟೆಲಿಜೆನ್ಸ್ ಬ್ಯೂರೋ ಮತ್ತು ಭಯೋತ್ಪಾದನಾ ನಿಗ್ರಹ ದಳ (ATS) ಜಂಟಿಯಾಗಿ ಸಂಚು ರೂಪಿಸಿ ಸಿದ್ದಿಕಿಯ ಕೊಲೆ ಮಾಡಿವೆಯೆಂದು ಸಿದ್ದಿಕಿಯ ಪತ್ನಿ ಎಂಟು ತಿಂಗಳ ಗರ್ಭಿಣಿ ಫಾತಿಮಾ ಮತ್ತು ಕುಟುಂಬ ಹಾಗೂ ಹಲವು ಮಾನವ ಹಕ್ಕು ಸಂಘಟನೆಗಳು ನೇರವಾಗಿ ಆರೋಪಿಸಿವೆ. ಹಾಗಾದರೆ ಸತ್ಯಾಂಶವೇನು?


ಪೊಲೀಸ್ ಆರೋಪದ ಪ್ರಕಾರ ಈತ ಇಂಡಿಯನ್ ಮುಜಾಹಿದ್ದೀನ್ ಎಂಬ ಟೆರರಿಸ್ಟ್ ಸಂಘಟನೆಯ ಸದಸ್ಯ. 2010ರಲ್ಲಿ ನಡೆದ ಬೆಂಗಳೂರಿನ ಚಿನ್ನಸ್ವಾಮಿ ಕ್ರೀಡಾಂಗಣದ ಬಳಿ ಸ್ಫೋಟ, ದೆಹಲಿಯ ಜಾಮಿಯ ಮಸೀದಿಯ ಶೂಟೌಟ್, ಪುಣೆಯ ಜರ್ಮನ್ ಬೇಕರಿ ಸ್ಫೋಟ ಮುಂತಾದ ಪಾತಕಗಳಲ್ಲಿ ಈತ ಆರೋಪಿ.

ದೆಹಲಿ ಪೊಲೀಸರು 2011ರ ನವೆಂಬರ್‌ನಲ್ಲಿ ಈತನನ್ನು ಬಂಧಿಸಿದರು. ಹಲವು ಸುತ್ತಿನ "ತೀವ್ರ ವಿಚಾರಣೆ"ಯ ನಂತರ ಆತನನ್ನು ನ್ಯಾಯಾಂಗ ಬಂಧನದಡಿ ತಿಹಾರ ಜೈಲಿನಲ್ಲಿರಿಸಲಾಗಿತ್ತು. ಕಳೆದ ಮೇ ಕೊನೆಯ ವಾರದಲ್ಲಿ ಮಹಾರಾಷ್ಟ್ರ ಪೊಲೀಸರು ಆರೋಪಿಯ ಗುರುತು ಪತ್ತೆ ಕಾರ್ಯಕ್ಕೆಂದು ಆತನನ್ನು ವಶಕ್ಕೆ ಪಡೆದುಕೊಂಡು ಮೇ 28 ರಿಂದ ಪೂನಾದ ಯರವಾಡ ಜೈಲಿನಲ್ಲಿಟ್ಟರು. ಆತ ಕೊಲೆಯಾದ ದಿನ ಅಂದರೆ ಜೂನ್ 8 ನೇ ತಾರೀಕು ಆತನ ಕಸ್ಟಡಿ ಅವಧಿ ಮುಗಿಯುತ್ತಿದ್ದುದರಿಂದ ಆತನನ್ನು ಆ ದಿನ ಮಧ್ಯಾಹ್ನವೇ ನ್ಯಾಯಾಲಯಕ್ಕೆ ಹಾಜರುಪಡಿಸಬೇಕಿತ್ತು. ಅಲ್ಲಿಂದ ಆತ ಮತ್ತೆ ದೆಹಲಿ ಜೈಲಿಗೆ ವರ್ಗಾವಣೆಯಾಗುತ್ತಿದ್ದ. ಅಷ್ಟರಲ್ಲಿ ಸುಮಾರು 9.45 ರಿಂದ 11.45 ರ ನಡುವೆ ಆತ ಕೊಲೆಯಾಗಿ ಹೋದ.

ಇಡೀ ಪ್ರಕರಣದಲ್ಲಿ ಬಹಳ ಸಂಶಯಾಸ್ಪದವಾಗಿರುವ ಹತ್ತಾರು ಅಂಶಗಳಿವೆ.

- ಮೊದಲನೆಯದಾಗಿ ಕೊಲೆ ನಡೆದದ್ದು ಸಾಮಾನ್ಯ ಜೈಲಿನಲ್ಲಲ್ಲ, ಯರವಾಡ ಜೈಲಿನ ಹೈ ಸೆಕ್ಯುರಿಟಿ ಅಂಡಾ ಸೆಲ್‌ನ ಒಳಗಡೆ. ಈತನನ್ನು ಇರಿಸಲಾಗಿದ್ದ 10 x 10 ಅಡಿ ಅಳತೆಯ ಪ್ರತ್ಯೇಕ ಕೋಣೆಗಳಿಗೆ ಬಿಗಿಯಾದ ಕಬ್ಬಿಣದ ಗೇಟುಗಳಿವೆ. ದಿನದ 24 ಗಂಟೆಯೂ ಅಲ್ಲಿ ಪೊಲೀಸ್ ಸರ್ಪಗಾವಲು ಇರುತ್ತದೆ. ವಾಸ್ತವಾಂಶ ಹೀಗಿರುವಾಗ ಬೇರೊಂದು ಸೆಲ್‌ನಲ್ಲಿ ಇದೇ ರೀತಿಯಲ್ಲಿ ಬಂಧಿತರಾಗಿದ್ದ "ಕೊಲೆಗಾರರು" ಸಿದ್ದಿಕಿಯ ಸೆಲ್ ಪ್ರವೇಶಿಸಲು ಸಾಧ್ಯವಾಗಿದ್ದು ಹೇಗೆ? ಜೈಲು ಅಧಿಕಾರಿಗಳ ಪಾತ್ರವಿಲ್ಲದೆ ಇಂಥಾ ಕೃತ್ಯವನ್ನು ಊಹಿಸಿಕೊಳ್ಳಲು ಸಾಧ್ಯವೆ?
- ಕೊಲೆಯಾದ ಸಿದ್ದಿಕಿಗೆ ತನ್ನನ್ನು ಮುಗಿಸಲು ಕೆಲವರು ಸಂಚು ರೂಪಿಸುತ್ತಿರುವ ಗುಮಾನಿ ಬಂದಿತ್ತು. ಕೆಲದಿನಗಳ ಹಿಂದೆ ತನ್ನ ಹೆಂಡತಿಯೊಂದಿಗೆ ಫೋನ್‌ನಲ್ಲಿ ಮಾತಾಡಿದ್ದ ಸಂದರ್ಭದಲ್ಲಿ "ನನ್ನ ಸುತ್ತಲೂ ಏನೋ ಸಂಚು ನಡೆಯುತ್ತಿದೆ, ನನ್ನ ಪ್ರಾಣಕ್ಕೆ ಅಪಾಯವಿದೆ" ಎಂದು ತನ್ನ ಆತಂಕವನ್ನು ತೋಡಿಕೊಂಡಿದ್ದ. ಅದಾದ ನಂತರ ಆತನನ್ನು ಪೂನಾಗೆ ಶಿಫ್ಟ್ ಮಾಡಲಾಗಿತ್ತು. ಆ ಬಗ್ಗೆ ಕುಟುಂಬದವರಿಗೆ ಯಾವ ಮಾಹಿತಿಯೂ ಇರಲಿಲ್ಲ.
- ಸಿದ್ದಿಕಿಯನ್ನು ಗುರುತು ಪತ್ತೆಗೆಂದು ಪುಣೆಗೆ ಕರೆದುತರಲಾದ ಕೇಸು ಮತ್ತೊಂದು ಕತೆಯನ್ನು ಹೇಳುತ್ತದೆ. ಪೊಲೀಸ್ ಸ್ಟೋರಿ ಪ್ರಕಾರ ಜರ್ಮನ್ ಬೇಕರಿ ಸ್ಫೋಟ ನಡೆದ ದಿನವೇ ಪುಣೆಯ ಹಲ್ವಾಯಿ ಗಣಪತಿ ಗುಡಿಯ ಬಳಿಯ ಹೂವಿನ ಅಂಗಡಿಗೆ ಬಂದ ಶಂಕಿತ ವ್ಯಕ್ತಿಯೊಬ್ಬ ಬ್ಯಾಗ್ ಒಂದನ್ನು ಅಂಗಡಿಯ ಸಮೀಪ ಇಡಲು ಕೇಳಿಕೊಂಡ. ಅನುಮಾನಗೊಂಡ ಅಂಗಡಿಯವನು ಆ ಬ್ಯಾಗನ್ನು ಇಟ್ಟುಕೊಳ್ಳದೇ ವಾಪಸ್ ಕಳಿಸಿದ. ಆ ಬ್ಯಾಗ್‌ನ ತುಂಬಾ ಬಾಂಬ್‌ಗಳಿದ್ದವು. ಆ ಶಂಕಿತ ವ್ಯಕ್ತಿ ಬೇರೆ ಯಾರೋ ಅಲ್ಲ, ಇದೇ ಕಟೀಲ್ ಸಿದ್ದಿಕಿ. ಅಂಗಡಿಯವನು ವಾಪಸ್ ಕಳಿಸಿದ್ದರಿಂದ ಭಾರೀ ಅನಾಹುತ ತಪ್ಪಿಹೋಯಿತು ಎಂಬುದು ಪುಣೆ ಪೊಲೀಸರು ಮತ್ತು ಎಟಿಎಸ್‌ನವರು ಹೇಳುತ್ತಿರುವ ಸ್ಟೋರಿ. ಈ ಕತೆಯ ಮುಂದುವರೆದ ಭಾಗವಾಗಿ ಸಿದ್ದಿಕಿ ಕೂಡಾ ವಿಚಾರಣೆ ವೇಳೆ ಈ ಕೃತ್ಯವನ್ನು ಒಪ್ಪಿಕೊಂಡಿದ್ದಾನಂತೆ. ಅವರ ಪ್ರಕಾರ ಅಂದು ದೇವಾಲಯ ಸ್ಫೋಟಿಸುವ ತನ್ನ ಕೃತ್ಯಕ್ಕೆ ಹೂವಿನ ಅಂಗಡಿಯವನ ಸಹಕಾರ ಸಿಗದೇ ಹೋಗಿದ್ದರಿಂದ ತೀವ್ರ ಬೇಸರಗೊಂಡ ಸಿದ್ದಿಕಿ ಕಾರಿನಲ್ಲಿ ಸೀದಾ ಮುಂಬೈಗೆ ಬಂದು ಬಾಂಬನ್ನು ಸಮುದ್ರಕ್ಕೆ ಎಸೆದುಬಿಟ್ಟನಂತೆ.

ಹಾಗಾದರೆ ಅಂಗಡಿಯವನು ಬ್ಯಾಗ್ ಇಟ್ಟುಕೊಳ್ಳಲಿಲ್ಲವೆಂದ ಮಾತ್ರಕ್ಕೆ ಉಗ್ರನೊಬ್ಬ ತನ್ನ ಕಾರ್ಯಾಚರಣೆಯನ್ನು ಬರಕಾಸ್ತು ಮಾಡಿಬಿಡುತ್ತಾನೆಯೆ



ಸಿದ್ದಿಕಿ ಕುಟುಂಬ

ಎಂಬ ಪ್ರಶ್ನೆ ಸಹಜವಾಗಿ ಉದ್ಭವಿಸುತ್ತದೆ. ಅದಿರಲಿ, ಆತನನ್ನು ದೆಹಲಿಯಿಂದ ಪುಣೆಗೆ ಕರೆತಂದಿದ್ದೇ ಗುರುತು ಪತ್ತೆಗಾಗಿ. ಹೋಗಲಿ, ಆ ಅಂಗಡಿಯವ 'ಬಾಂಬ್' ಇಡಲು ಬಂದಿದ್ದ ಸಿದ್ದಿಕಿಯನ್ನು ಗುರುತಿಸಿದನೆ? ಎಂಬ ಪ್ರಶ್ನೆಗೆ ಉತ್ತರವೇ ಇಲ್ಲದಂತಾಗಿ ಅನಾಥವಾಗಿದೆ.

- ಈ ಆರೋಪಿತ ಉಗ್ರ ಕಟೀಲ್ ಸಿದ್ದಿಕಿ ಬಾಂಬ್ ಸ್ಫೋಟಿಸಿದನೆಂದು ಹೇಳಲಾದ ಒಂದು ದಿನದಂದು ಆತ ತನ್ನ ಹುಟ್ಟೂರಾದ ಬಿಹಾರ್‌ನ ದರ್ಭಾಂಗ ಜಿಲ್ಲೆಯ ಬರ್ ಸಮೈಲಾ ಎಂಬ ಗ್ರಾಮದಲ್ಲಿ ತನ್ನ ಬಂಧುವೊಬ್ಬರ ಮದುವೆ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದನಂತೆ. ಈ ಘಟನೆಗೆ ಪ್ರತ್ಯಕ್ಷ ಸಾಕ್ಷಿಯಾಗಿದ್ದ ಊರಿನ ಜನ ಆತನ ಕೊಲೆಯ ಸುದ್ದಿ ಕೇಳಿ ತಮ್ಮ ಆಕ್ರೋಶ ವ್ಯಕ್ತಪಡಿಸಿದ್ದಾರೆ.
- ಇನ್ನು ಬೆಂಗಳೂರಿನ ಚಿನ್ನಸ್ವಾಮಿ ಸ್ಟೇಡಿಯಂನ ಸ್ಫೋಟದ ಬಗ್ಗೆ ಚಿತ್ರವಿಚಿತ್ರ ಹೇಳಿಕೆಗಳು ಹೊರಬಿದ್ದಿವೆ. ಆಗಿನ ಗೃಹ ಮಂತ್ರಿ ವಿಎಸ್ ಆಚಾರ್ಯ ಇದು ಕ್ರಿಕೆಟ್ ಬೆಟ್ಟಿಂಗ್ ಲಾಬಿಯ ಕೈವಾಡ ಎಂದಿದ್ದರು. ಬೆಂಗಳೂರಿನಲ್ಲಿ ನಡೆಯುವ ಐಪಿಎಲ್ ಪಂದ್ಯವನ್ನು ಬೇರೆಡೆಗೆ ಸ್ಥಳಾಂತರಿಸುವ ದುರುದ್ದೇಶದಿಂದ ಈ ಕೃತ್ಯ ಎಸಗಲಾಗಿದೆ ಎಂದು ವಿವರಣೆ ನೀಡಿದ್ದರು. ಆಗಿನ ಡಿಜಿಪಿ 'ಇದು ಲಷ್ಕರ್ ಇ ತೋಯ್ಬಾ ಹಾಗೂ ಮದನಿಯ ಕೈವಾಡ' ಎಂದಿದ್ದರು. ಇತ್ತೀಚೆಗೆ ಕಟೀಲ್ ಸಿದ್ದಿಕಿಯೇ ಕಾರಣವೆಂದು ಆರೋಪಿಸಲಾಗುತ್ತಿದೆ. ಅದಕ್ಕೆ ಸಾಕ್ಷಿಯಾಗಿ ಘಟನಾಸ್ಥಳದಲ್ಲಿ ಆರೋಪಿಯ ಕೂದಲುಗಳು ಲಭ್ಯವಾಗಿವೆಯಂತೆ!
- ಈ ಘಟನೆಗಳು ನಡೆದು ಎರಡೂವರೆ ವರ್ಷ ದಾಟಿದೆ. ಆರೋಪಿಯನ್ನು ಬಂಧಿಸಿ ಸುಮಾರು 8 ತಿಂಗಳಾಗಿದೆ. ಹೀಗಿದ್ದರೂ ಈ ಕೇಸಿನಲ್ಲಿ ಇನ್ನೂ ಚಾರ್ಜ್‌ಶೀಟ್ ಹಾಕಿಲ್ಲವೆಂದರೆ ನೀವು ನಂಬುತ್ತೀರಾ? ಇದು ಆಶ್ಚರ್ಯವಾದರೂ ಸತ್ಯಸಂಗತಿ. ಪೊಲೀಸರು ಚಾರ್ಜ್‌ಶೀಟ್ ಹಾಕಲು ಹಿಂದೆಮುಂದೆ ಎಣಿಸುತ್ತಿರುವುದಕ್ಕೆ ಕಾರಣವೇನಿರಬಹುದು?
- ಭಯೋತ್ಪಾದಕ ಕೃತ್ಯಗಳಿಂದ ಬೇಸತ್ತು "ಕೊಲೆ ಮಾಡಿದ" ಆರೋಪಿಗಳು "ದೇಶಭಕ್ತ" ಗ್ಯಾಂಗ್‌ಸ್ಟರ್ ಛೋಟಾರಾಜನ್‌ನ ಅನುಚರರು. ಭೂಗತ ದೊರೆ ಛೋಟಾ

ಭೂಗತ ಪಾತಕಿಗೆ ದೇಶಭಕ್ತನ ಪಟ್ಟ

ಎಂಥಾ ನಾಚಿಕೆಗೇಡು! ಮನುಷ್ಯ ಮಾತ್ರನಾದವನು ಮಾಡಬಾರದ ನಾನಾ ದುಷ್ಕೃತ್ಯಗಳಲ್ಲಿ ತೇಲಿ ಮುಳುಗುತ್ತಿರುವ ಭೂಗತ ಲೋಕದ ಪಾತಕಿಯೊಬ್ಬನಿಗೆ 'ದೇಶಭಕ್ತ ಡಾನ್' ಎಂಬ ಬಿರುದು!! ಖುದ್ದು ಪೊಲೀಸ್ ಹಾಗೂ ಗುಪ್ತಚಾರ ಇಲಾಖೆಗಳಿಂದಲೇ ಆತನಿಗೆ ಮುಕ್ತ ಬೆಂಬಲ!!!

ಹೌದು ನಿಜ, ಇದು ಛೋಟಾ ರಾಜನ್ ಎಂಬ ಭೂಗತ ದೊರೆಯ ವೃತ್ತಾಂತ. ಈತ ದೇಶಭಕ್ತನೆಂದು ಬಿಂಬಿತವಾಗಿದ್ದಾದರೂ ಹೇಗೆ? ಸಂಕ್ಷಿಪ್ತವಾಗಿ ಅದರ ಹಿನ್ನೆಲೆಯನ್ನು ನೋಡೋಣ.

ಒಂದು ಕಾಲದಲ್ಲಿ ಛೋಟಾ ರಾಜನ್, ಮುಂಬೈ ಭೂಗತಲೋಕದ ಏಕೈಕ ಸಾಮ್ರಾಟ ದಾವೂದ್ ಇಬ್ರಾಹಿಂನ ಅತ್ಯಂತ ನಂಬುಗೆಯ ಭಂಟನಾಗಿದ್ದ. ಐಎಸ್‌ಐ ಜೊತೆ ನಂಟನ್ನು ಹೊಂದಿದ್ದ ದಾವೂದ್ ಗ್ಯಾಂಗ್ ಆಗ ದುಬೈನಿಂದಲೇ ಕಾರ್ಯಾಚರಣೆ ನಡೆಸುತ್ತಿತ್ತು. ಡೇರ್‌ಡೆವಿಲ್ ಖ್ಯಾತಿಯ ರಾಜನ್ ಬಹು ಬೇಗ ಪ್ರಭಾವಶಾಲಿಯಾಗಿ ಬೆಳೆದುಬಿಟ್ಟ. ಈತನ ಬೆಳವಣಿಗೆ ಅವೇ ಡಿ-ಕಂಪನಿಯಲ್ಲಿದ್ದ ಶರದ್ ಶೆಟ್ಟಿ, ಛೋಟಾ ಶಕೀಲ್ ಮುಂತಾದ ವರಿಗೆ ನುಂಗಲಾರದ ತುತ್ತಾಗಿತ್ತು. ಹೀಗಾಗಿ ರಾಜನ್ ವಿರುದ್ಧ ದಾವೂದ್‌ನ ತಲೆತಿಕ್ಕಿದರು. ಅಪಾಯದ ವಾಸನೆ ಹಿಡಿದ ಚಾಣಾಕ್ಷ ಛೋಟಾ ರಾಜನ್‌ಗೆ ಪ್ರಾಣಾಪಾಯದಿಂದ ಪಾರಾಗಲು ಉಳಿದದ್ದು ಒಂದೇ ದಾರಿ. ಕೂಡಲೆ ಭಾರತದ ಅಧಿಕಾರಿಗಳನ್ನು ಸಂಪರ್ಕಿಸಿದ ರಾಜನ್ ಬೇರೊಂದು ದೇಶದಲ್ಲಿ ತಲೆಮರೆಸಿಕೊಳ್ಳಲು ತನಗೆ ಸಹಾಯ ಮಾಡುವುದಾದರೆ ದಾವೂದ್‌ನ ಭೂಗತ ಲೋಕದ ಬಗ್ಗೆ ಮಾಹಿತಿ ಒದಗಿಸುವುದಾಗಿ ಡೀಲ್ ಕುದುರಿಸಿಕೊಂಡ. ಹಾಗೆ 1993ರಲ್ಲಿ ಥೈಲ್ಯಾಂಡ್‌ಗೆ, ನಂತರ ಮಲೇಷಿಯಾಕ್ಕೆ ಹಾರಿಹೋದ. ತನ್ನದೇ ಪ್ರತ್ಯೇಕ ಭೂಗತ ಗ್ಯಾಂಗ್ ರೂಪಿಸಿ, ಮುಂಬೈ ಅಂಡರ್‌ವರ್ಲ್ಡ್‌ನ ಹಫ್ತಾ ವಸೂಲಿ, ರಿಯಲ್ ಎಸ್ಟೇಟ್, ಸ್ಮಗ್ಲಿಂಗ್ ಎಲ್ಲಾ ಕಡೆ ದಾಂಗುಡಿ ಇಟ್ಟು ದಾವೂದ್‌ಗೆ ಸೆಡ್ಡುಹೊಡೆದ. ಹೀಗೆ ಶುರುವಾದ ಭೀಕರ ಗ್ಯಾಂಗ್‌ವಾರ್‌ನಲ್ಲಿ ಉರುಳಿದ ತಲೆಗಳಿಗೆ ಲೆಕ್ಕವಿಲ್ಲ.

ಛೋಟಾರಾಜನ್‌ನ ಭೂಗತ ಜಗತ್ತಿನ ಬಗ್ಗೆ ಮುಂಬೈ ಪೊಲೀಸರು ಮತ್ತು ಗುಪ್ತಚರ ಇಲಾಖೆಯ ಅಧಿಕಾರಿಗಳು ಒಂದು ರೋಚಕ ಕತೆಯನ್ನು ತೇಲಿಬಿಟ್ಟರು. ಮುಂಬೈನಲ್ಲಿ ದಾವೂದ್ ನಡೆಸಿದ್ದ ಸರಣಿ ಸ್ಫೋಟಗಳನ್ನು ರಾಜನ್ ಒಬ್ಬ ಹಿಂದೂವಾಗಿದ್ದರಿಂದ ವಿರೋಧಿಸಿದ. ಆದ್ದರಿಂದಲೇ ಅವರಿಬ್ಬರ ನಡುವೆ ದ್ವೇಷ ಪ್ರಾರಂಭವಾಯಿತು ಎಂಬುದು ಆ ಕಟ್ಟುಕತೆ. ವಾಸ್ತವದಲ್ಲಿ ದಾವೂದ್ ಗ್ಯಾಂಗ್‌ನಲ್ಲಿ ಹಿಂದೂ ರೌಡಿಗಳೂ, ರಾಜನ್ ಗ್ಯಾಂಗ್‌ನಲ್ಲಿ ಮುಸ್ಲಿಂ ರೌಡಿಗಳೂ ಹೇರಳವಾಗಿದ್ದಾರೆ. ಆದರೆ ರೋಚಕತೆಯ ಗೀಳಿನಲ್ಲಿರುವ ಕೆಲ ಮಾಧ್ಯಮಗಳು ಅದಕ್ಕೆ ಮಸಾಲೆ ಹಚ್ಚಿ ಪ್ರಚುರಪಡಿಸಿದವು. ದಾವೂದ್ ಗ್ಯಾಂಗ್‌ನವರನ್ನು ರಾಜನ್ ಕೊಂದ




ಸುದ್ದಿಗೆ ದೇಶಭಕ್ತಿಯ ಬಣ್ಣ ಹಚ್ಚುತ್ತಲೇ ಬಂದವು. ಹೀಗೆ ನಮ್ಮ ದೇಶದಲ್ಲಿ "ದೇಶಭಕ್ತ ಡಾನ್" ಒಬ್ಬ ಹುಟ್ಟಿಕೊಂಡಂತಾಯಿತು.

ವಾಸ್ತವದಲ್ಲಿ ಈ "ದೇಶಭಕ್ತ ಗ್ಯಾಂಗ್" ಕೂಡ ದಾವೂದ್‌ನಂತೆಯೇ ಕೊಲೆ ಸುಲಿಗೆ, ಕಿಡ್ನ್ಯಾಪ್, ಹಫ್ತಾ ವಸೂಲಿ, ಸ್ಮಗ್ಲಿಂಗ್ ಮುಂತಾದ ಸೇವಾಕಾರ್ಯದಲ್ಲಿ ತೊಡಗಿದ್ದಾರೆಂಬುದು ಜಗತ್ತಿಗೇ ತಿಳಿದಿರುವ ಸತ್ಯ. ಒಂದು ಅಂದಾಜಿನಂತೆ ಈಗ ರಾಜನ್ ಗ್ಯಾಂಗಿನಲ್ಲಿ ಸುಮಾರು ಒಂದು ಸಾವಿರಕ್ಕೂ ಹೆಚ್ಚು ವೃತ್ತಿಪರ ಕ್ರಿಮಿನಲ್‌ಗಳು, ಸುಮಾರು 150 ಶಾರ್ಪ್‌ಶೂಟರ್‌ಗಳು, ನೂರಾರು ಮಾಹಿತಿದಾರರು ದೇಶಾದ್ಯಂತ ಸಕ್ರಿಯರಾಗಿದ್ದಾರೆಂಬ ಸುದ್ದಿಯೇ ಆತಂಕ ಹುಟ್ಟಿಸುತ್ತದೆ. ರಿಯಲ್ ಎಸ್ಟೇಟ್ ದಂಧೆಯಲ್ಲೂ, ಬಾಲಿವುಡ್‌ನಲ್ಲೂ ಸಾವಿರಾರು ಕೋಟಿ ಮೌಲ್ಯದ ವಹಿವಾಟನ್ನು "ದೇಶಭಕ್ತ"ನ ಗ್ಯಾಂಗ್ ನಿಯಂತ್ರಿಸುತ್ತಿದೆ.

ಕ್ರಮೇಣವಾಗಿ ಮುಂಬೈ ಭೂಗತಲೋಕದ ಮೇಲೆ ಛೋಟಾ ರಾಜನ್‌ನ ಹಿಡಿತ ಹೆಚ್ಚುತ್ತಾ ಹೋಯಿತು. ಹಾಗೆ ಪೊಲೀಸ್ ಇಲಾಖೆಯಲ್ಲಿ ಆತನ ಪ್ರಭಾವ ಕೂಡ ಹೆಚ್ಚಿತು. ಪರಿಣಾಮವಾಗಿ ಪೊಲೀಸರು ಹೊರಡಿಸಿರುವ ಮೋಸ್ಟ್ ವಾಂಟೆಡ್ ಲಿಸ್ಟ್‌ನಲ್ಲಿ ಛೋಟಾರಾಜನ್‌ನ ಹೆಸರು ಕೈಬಿಟ್ಟುಹೋಯಿತು. ಹೋಗಲಿ, ಎರಡನೇ ಆದ್ಯತೆಯ ವಾಂಟೆಡ್ ಲಿಸ್ಟ್‌ನಲ್ಲಾದರೂ ಇದೆಯಾ ಎಂದರೆ ಊಹೂಂ.... ಅದರಲ್ಲೂ ಆತನ ಹೆಸರಿಲ್ಲ! ಅಂದರೆ ನಾವು ಈ ಬೆಳವಣಿಗೆಯನ್ನು ಏನೆಂದು ಅರ್ಥಮಾಡಿಕೊಳ್ಳಬೇಕು?

2000ನೇ ಇಸವಿಯಲ್ಲಿ ಬ್ಯಾಂಕಾಕ್‌ನಲ್ಲಿದ್ದ ರಾಜನ್ ಮೇಲೆ ದಾವೂದ್ ಗ್ಯಾಂಗ್ ಗುಂಡಿನ ದಾಳಿ ನಡೆಸಿತ್ತು. ಕೂದಲೆಳೆಯಲ್ಲಿ ಪ್ರಾಣಾಪಾಯದಿಂದ ಆತ ತಪ್ಪಿಸಿಕೊಂಡಿದ್ದ. ಆತ ಪಾರಾಗಿದ್ದರ ಬಗ್ಗೆ ಆಗ ಕೇಂದ್ರ ಗೃಹಮಂತ್ರಿಯಾಗಿದ್ದ ಎಲ್‌ಕೆ ಅಡ್ವಾಣಿಯೇ ಸಂತಸದ ಮಾತುಗಳನ್ನಾಡಿದ್ದರೆಂದರೆ ಇಲಾಖೆಯೊಂದಿಗೆ ಆತನ ಬಾಂಧವ್ಯವನ್ನು ಯಾರಾದರೂ ಊಹಿಸಬಹುದು.

ಇಂದು ಛೋಟಾರಾಜನ್ ಇಲಾಖೆಯೊಳಗೆ ಎಷ್ಟೊಂದು ಪ್ರಭಾವಶಾಲಿಯೆಂಬುದನ್ನು ಅರ್ಥಮಾಡಿಕೊಳ್ಳಲು ಒಂದು ಉದಾಹರಣೆ ನೋಡೋಣ. 2008ರಲ್ಲಿ ಐಬಿಎನ್ ಮರಾಠಿ ಚಾನೆಲ್‌ಗೆ ದೂರವಾಣಿ ಸಂದರ್ಶನ ನೀಡಿದ ಛೋಟಾರಾಜನ್ ಹಿರಿಯ ಪೊಲೀಸ್ ಅಧಿಕಾರಿ ಪ್ರದೀಪ್ ಶರ್ಮಾ ದಾವೂದ್ ಇಬ್ರಾಹಿಂನ ಪರವಾಗಿ ಕೆಲಸ ಮಾಡುತ್ತಿರುವುದಾಗಿಯೂ, ಆತನ ಬೇನಾಮಿ ಆಸ್ತಿಗಳನ್ನು ರಕ್ಷಿಸುತ್ತಿರುವುದಾಗಿಯೂ ನೇರವಾಗಿ ಆರೋಪ ಮಾಡಿದ. ಪರಿಣಾಮ ಏನಾಯ್ತು ಗೊತ್ತಾ? ಕೂಡಲೇ ತನಿಖೆ ನಡೆಸಿದ ಸರ್ಕಾರ ಕೆಲವೇ ದಿನಗಳಲ್ಲಿ ಶರ್ಮಾನನ್ನು ಕಿತ್ತೊಗೆಯಿತು. ಈ ಪ್ರದೀಪ್ ಶರ್ಮಾ ಎಂಥಾ ಅಧಿಕಾರಿ ಎಂದುಕೊಂಡಿದ್ದೀರಾ? ಸಾರ್ವಜನಿಕರ ದೃಷ್ಟಿಯಲ್ಲಿ ಆತ ಒಬ್ಬ ಪೊಲೀಸ್ ಹೀರೋ.



ಎಟಿಎಸ್ ಚೀಫ್ ರಾಕೇಶ್ ಮರಿಯಾ ಮತ್ತು ಶರದ್ ಮೊಹಲ್


ರಾಜನ್ ಒಬ್ಬ "ದೇಶಭಕ್ತ"ನೆಂದು ಪೊಲೀಸ್ ಇಲಾಖೆಯೇ ಪ್ರಚಾರ ಮಾಡಿದೆ. ಈ ಗುಂಪಿನ ಸಕ್ರಿಯ ಸದಸ್ಯ ಶರದ್ ಮೊಹಲ್ ಕೊಲೆ, ದರೋಡೆ ಮುಂತಾದ ಗುರುತರವಾದ ಅಪರಾಧಗಳನ್ನೇ ಕಾಯಕ ಮಾಡಿಕೊಂಡಿರುವವನು. ಸರಪಂಚ್‌ನೊಬ್ಬನನ್ನು ಅಪಹರಿಸಿ 47 ಲಕ್ಷ ಒತ್ತೆಹಣ ಪಡೆಯುವ ಹಂತದಲ್ಲಿ ಪೊಲೀಸರಿಗೆ ರೆಡ್‌ಹ್ಯಾಂಡಾಗಿ ಸಿಕ್ಕು ... ಜೈಲು ಸೇರಿದ್ದು. ಇನ್ನು ಆತನ ದೇಶಭಕ್ತಿ ಯಾವ ರೀತಿಯದು ಎಂಬುದನ್ನು ನೀವೇ ಊಹಿಸಿ.

ಇಂತಹ ಹತ್ತು ಹಲವು ಪ್ರಶ್ನೆಗಳಿಗೆ ಉತ್ತರಿಸುವ ಗೋಜಿಗೆ ಹೋಗದ ಅಧಿಕಾರಿಗಳು ಜೈಲು ಸೂಪರಿಂಟೆಂಡೆಂಟನ್ನು ಅಮಾನತ್ತುಗೊಳಿಸಿ ಕೈ ತೊಳೆದುಕೊಂಡಿದ್ದಾರೆ.

ಒಟ್ಟಾರೆ ಈ ಪ್ರಕರಣವನ್ನು ಕೂಲಂಕಶವಾಗಿ ನೋಡಿದಾಗ ಮಾನವ ಹಕ್ಕು ಸಂಘಟನೆಗಳ ವಾದದಲ್ಲಿ ಸತ್ಯಾಂಶವಿರಬಹುದು ಎಂಬ ನಿಲುವಿಗೆ ಬರುವುದು ಅನಿವಾರ್ಯ. ಅವರ ಪ್ರಕಾರ ಸಿದ್ದಿಕಿಯ ಮೇಲಿನ ಆರೋಪಗಳನ್ನು ಸಾಬೀತು ಮಾಡಲಿಕ್ಕೆ ಸಾಧ್ಯವಾಗದ ಎಟಿಎಸ್ ಮತ್ತು ... ಸಂಸ್ಥೆಗಳು ಒಟ್ಟು ಸೇರಿ ತಮ್ಮ ತಪ್ಪನ್ನು ಮುಚ್ಚಿಕೊಳ್ಳಲು ಈ ಕೊಲೆ ನಡೆಸಿದ್ದಾರೆ ಅಥವಾ ಸ್ಫೋಟ ಕೃತ್ಯಗಳಲ್ಲಿ ಭಾಗಿಯಾಗಿರುವ ... ಪವಾದ ಅಪರಾಧಿಗಳನ್ನು ರಕ್ಷಿಸಲಿಕ್ಕಾಗಿ ಈ ಎಲ್ಲಾ ನಾಟಕೀಯ ಬೆಳವಣಿಗೆಗಳು ನಡೆಯುತ್ತಿವೆ. ಈ ಮಾತನ್ನು ನಂಬಲು ಅಷ್ಟೇನೂ ಕಷ್ಟವೆನಿಸುವುದಿಲ್ಲ ಅಲ್ಲವೆ?

ಕೊಲೆಗಾರರು ಮತ್ತು ಕೊಲೆಯಾದ ವ್ಯಕ್ತಿ ಇಬ್ಬರೂ ನ್ಯಾಯಾಂಗ ಬಂಧನದಲ್ಲಿದ್ದವರೇ. ಆದ್ದರಿಂದ ಈ ಕೊಲೆಯ ನೇರ ಹೊಣೆಗಾರಿಕೆ ನ್ಯಾಯಾಂಗದ ಹೆಗಲಿಗೆ ಬರುತ್ತದೆ. ಆದ್ದರಿಂದ ಮಹಾರಾಷ್ಟ್ರ ಹೈಕೋರ್ಟ್ ಈ ಕೊಲೆಯ ಬಗ್ಗೆ ಸ್ವಯಂಪ್ರೇರಿತ ದೂರು ದಾಖಲಿಸಿಕೊಂಡು ನ್ಯಾಯಾಂಗ ತನಿಖೆ ನಡೆಸುವುದು ಸೂಕ್ತ ಎಂಬ ಹ್ಯೂಮನ್ ರೈಟ್ಸ್ ಕಾರ್ಯಕರ್ತರ ಕೂಗಿಗೆ ಓಗೊಡುವವರು ಯಾರಾದರೂ ಇದ್ದಾರೆಯೆ?

- ದೊಡ್ಡಿಪಾಳ್ಯ ನರಸಿಂಹಮೂರ್ತಿ



... ಹಾಕಿಂದರೆ ಆತ ಬರೋಬ್ಬರಿ 112 ಕ್ರಿಮಿನಲ್‌ಗಳನ್ನು ಕೊಂದುಹಾಕಿದ್ದ ... ದರೇನಂತೆ? ಸ್ವತಃ 'ದೇಶಭಕ್ತ ಡಾನ್' ಆರೋಪ ಮಾಡುತ್ತಾನೆಂದರೆ ... ದಕ್ಕೆ ಬೆಲೆ ಕೊಡಲೇ ಬೇಕಲ್ಲವೆ? ಹೀಗಾಗಿ ಒಂದೇ ಏಟಿಗೆ ನಾಲ್ಕು ಮಂದಿ ಹಿರಿಯ ಪೊಲೀಸ್ ಅಧಿಕಾರಿಗಳು ತಮ್ಮ ಹುದ್ದೆ ಕಳೆದು ಕೊಂಡರು. ದಾವೂದ್‌ನಂಥ ಪಾತಕಿಯ ಜೊತೆ ನಂಟು ಹೊಂದಿದ್ದವರಿಗೆ ಆ ಶಿಕ್ಷೆ ಕಡಿಮೆಯೇ. ಆದರೆ ಅವ ನಂತೆಯೇ ಪಾತಕಗಳಲ್ಲಿ ತೊಡಗಿರುವ ಛೋಟಾ ರಾಜನ್ ಜೊತೆ ಚಕ್ಕಂದ ಆಡುತ್ತಿರುವ ಅಧಿಕಾರಿಗಳ ಕತೆ....? ದೇಶಭಕ್ತನೆಂಬ ಹಣೆಪಟ್ಟಿ ಅಂಟಿಸಿಕೊಂಡುಬಿಟ್ಟರೆ ಏನು ಬೇಕಾದರೂ ಮಾಡಲು ಲೈಸೆನ್ಸ್ ಸಿಕ್ಕಿಬಿಡುತ್ತದೆಂದೆ...?

ಹಾಗೆ ಕ್ರಮೇಣ ಮುಂಬಡ್ತಿ ಪಡೆದ ರಾಜನ್ ದೇಶದ ಬೇಹುಗಾರಿಕಾ ಸಂಸ್ಥೆಗಳಿಗೆ ಹತ್ತಿರವಾದ. ಗುಪ್ತಚರ ಇಲಾಖೆಯ ಅಧಿಕಾರಿಗಳು ಪಾಕಿಸ್ತಾನದಲ್ಲಿ ಕಾರ್ಯಾಚರಣೆ ನಡೆಸಲು ಛೋಟಾ ರಾಜನ್‌ನನ್ನು ಒಂದು ಆಯುಧವಾಗಿ ಬಳಸಿಕೊಂಡರು. ಪಾಕಿಸ್ತಾನದಲ್ಲಿ ನಡೆದ ಹಲವು ವಿಧ್ವಂಸಕ ಕೃತ್ಯಗಳಲ್ಲಿ ಛೋಟಾರಾಜನ್ ಕೈವಾಡವಿರುವುದು ಬೆಳಕಿಗೆ ಬಂದಿದೆ.

ಹಾಗಾದರೆ ಇಲ್ಲಿ ಒಂದು ಪ್ರಶ್ನೆ ಸಹಜವಾಗಿ ಮೂಡುತ್ತದೆ. ಪಾಕಿಸ್ತಾನದ ಬೇಹುಗಾರಿಕಾ ಸಂಸ್ಥೆ ಭೂಗತ ಪಾತಕಿಗಳ, ಟೆರರಿಸ್ಟ್ ಗುಂಪುಗಳ ಜೊತೆ ಕೈಜೋಡಿಸಿ ನಮ್ಮ ದೇಶದಲ್ಲಿ ವಿಧ್ವಂಸಕ ಕೃತ್ಯಗಳನ್ನು ನಡೆಸುತ್ತಿರುವುದನ್ನು ನಾವು ಮನಃಪೂರ್ವಕವಾಗಿ ವಿರೋಧಿಸುತ್ತೇವೆ. ಭಾರತದ ಗುಪ್ತಚರ ಸಂಸ್ಥೆಗಳೂ ಅದೇ ಹಾದಿ ಹಿಡಿದು, ಭೂಗತ ಪಾತಕಿಗಳಿಗೆ ದೇಶಭಕ್ತರ ಪಟ್ಟ ಕಟ್ಟಿಬಿಟ್ಟರೆ ಅದನ್ನು ಸಹಿಸಿಕೊಳ್ಳುವುದು ಕಷ್ಟವೆನಿಸುತ್ತಿದೆ ಅಲ್ಲವೆ?

ಈ ಭರತಭೂಮಿಗೆ ಇಂಥಾ ದುರ್ಗತಿ ಬಂದು ಬಿಟ್ಟಿದೆಯಾ? ದೇಶಭಕ್ತಿ ಎಂಬ ಶಬ್ದ ಇಲ್ಲಿ ಇಷ್ಟೊಂದು ಅಗ್ಗವಾಗಿಬಿಟ್ಟಿದೆಯಾ?

▸6 ಶಾಸಕ ಶ್ರೀನಿವಾಸನ ಭ್ರಷ್ಟ ಸಾಮ್ರಾಜ್ಯ

ಆರ್‌ಟಿಸಿ ದಾಖಲೆಗಳಲ್ಲಿ ಇವೆಲ್ಲಾ ದಾಖಲಾಗಿದೆ.

ಬೆಂಗಳೂರಿನ ಕಾರ್ಪೊರೇಟ್ ಆಗಿರುವ ವೆಂಕಟೇಶ್ ಬಾಬು ಕಗ್ಗಲೀಪುರ ಗ್ರಾಮದಲ್ಲಿ ಭೂರಹಿತ ಕೃಷಿಕನೆಂದು ಹೇಳಿಕೊಂಡು ಸರ್ಕಾರಿ ಭೂಮಿ ಕಬಳಿಸಿರುವ ಪರಿ ಹೀಗಿದೆ. ಶ್ರೀನಿವಾಸ್ ಮತ್ತವನ ಭೂಗಳ್ಳ ಪುತ್ರ ವೆಂಕಟೇಶ್ ಬಾಬು ಈ ಅಕ್ರಮ ಆಸ್ತಿಗಳ ವಿವರಗಳನ್ನು ಲೋಕಾಯುಕ್ತರಿಗೆ ನೀಡಿಲ್ಲ.

ಇವೆಲ್ಲ ನ್ಯಾಯಯುತ ಸಂಪಾದನೆಯಾಗಿದ್ದರೆ ತಾನೆ ಧೈರ್ಯವಾಗಿ ಹೇಳಿಕೊಳ್ಳಲು ಸಾಧ್ಯ!

ಲೋಕಾಯುಕ್ತ ದಾಳಿ

ಮೇ 26 ರಂದು ಲೋಕಾಯುಕ್ತ ಬೆಂಗಳೂರು ಎಸ್‌ಪಿ ಶಿವಶಂಕರ್ ನೇತೃತ್ವದಲ್ಲಿ ದಾಳಿ ನಡೆದಾಗ ಶಾಸಕ ಶ್ರೀನಿವಾಸ್ ಹಾಗೂ ವೆಂಕಟೇಶ್ ಬಾಬು ಮನೆಯಲ್ಲಿ ಎಷ್ಟು ಆಸ್ತಿ ದಾಖಲೆಗಳು ಪತ್ತೆಯಾದವೊ ಅದರ ಮೂರು ಪಟ್ಟು ಆಸ್ತಿಗಳು ಶ್ರೀನಿವಾಸನ ಚೇಲಾ ರಾಜಣ್ಣನ ಮನೆಯಲ್ಲಿ ಸಿಕ್ಕಿವೆ.

ಕುಮಾರಸ್ವಾಮಿ ಲೇಔಟ್‌ನ ರಾಜ್ಯೋತ್ಸವ ನಗರದಲ್ಲಿರುವ ರಾಜಣ್ಣನ 'ಮನೆಗೂ ಲೋಕಾಯುಕ್ತ ಪೊಲೀಸರ ದಾಳಿ ನಡೆಯಿತು. ಮೇಲ್ನೋಟಕ್ಕೆ ಅಲ್ಲೇನು ಇರಲಿಲ್ಲ. ಆದರೆ ಪೊಲೀಸರು ರಾಜಣ್ಣನ ಕಾರ್ ಶೆಡ್‌ಗೆ ನುಗ್ಗಿ ತಪಾಸಣೆ ಮಾಡಿ ನಡೆಸಿದಾಗ ಅಟ್ಟದ ಮೇಲೆ ಮೂರು ಸೂಟ್‌ಕೇಸ್‌ಗಳ ತುಂಬಾ ಅನೇಕ ಆಸ್ತಿ ಪತ್ರಗಳು ಸಿಕ್ಕವು. ಒಂದು ಮನೆ, 2 ಸೈಟು, 2 ಕೈಗಾರಿಕಾ ಷೆಡ್‌ಗಳು,



ಆರ್‌ಎಂಎಸ್ ಇಂಟರ್‌ನ್ಯಾಷನಲ್ ಸ್ಕೂಲ್‌ನ ದಾಖಲೆಗಳು, 48.39 ಎಕರೆಯಷ್ಟು ಜಮೀನಿನ ಒಡೆತನದ ದಾಖಲೆಗಳು ಅಲ್ಲಿ ಸಿಕ್ಕಿವೆ. ಜೊತೆಗೆ ಹೊಸಕೆರೆ ಹಳ್ಳಿಯ ದ್ವಾರಕಾನಗರ ವಾಸಿ ರಶ್ಮಿ ಡಿಸೋಜಾ ಎಂಬಾಕೆಯ ಮನೆಯಲ್ಲೂ ಕೋಟ್ಯಂತರ ರೂಪಾಯಿಗಳ ಶ್ರೀನಿವಾಸನ ಅಕ್ರಮ ಆಸ್ತಿ ದಾಖಲೆಗಳು ಸಿಕ್ಕಿವೆ.


ಈ ಶ್ರೀನಿವಾಸ ತಾನು ಹೇಳಿದಂತೆಯೇ ಮಾಡಿದ್ದಾನೆ

'ನೀವು ನಿಮ್ಮ ಸಾಮರ್ಥ್ಯ ಏನಿದೆಯೋ ಅದನ್ನೂ ಮಾಡಿ, ನಾನು ನನಗೇನೂ ಸಾಧ್ಯವೋ ಅದನ್ನು ಮಾಡುತ್ತೇನೆ? ಎಂದು ಅನೌನ್ಸ್ ಮಾಡಿದಂತೆಯೇ ಈಗ 200 ಕೋಟಿ ರೂಪಾಯಿ ಬೆಲೆಯ ಆಸ್ತಿ ಮಾಡಿಕೊಂಡಿದ್ದಾನೆ. ಆದರೇನು ಬಿಜೆಪಿ ಪಾರ್ಟಿಯ ಯಾವ ನಾಯಕನೂ ಶ್ರೀನಿವಾಸನದು ತಪ್ಪು ಎನ್ನುತ್ತಿಲ್ಲ. ದುಡ್ಡು ಮಾಡುವುದೇ ಬಿಜೆಪಿಗಳ ನಿತ್ಯ ಕಾಯಕವಾಗಿರುವಾಗ ಯಾರು ತಾನೆ ಶ್ರೀನಿವಾಸ್ ಬಗ್ಗೆ ಟೀಕೆ ಮಾಡಲು ಸಾಧ್ಯ ಹೇಳಿ'

ಭ್ರಷ್ಟ ಶಾಸಕ ಶ್ರೀನಿವಾಸ್‌ಗೆ 'ಬಿಜೆಪಿ ರತ್ನ' ಎಂಬ ಬಿರುದು ಕೊಡಲು ಈಗ ಏನೂ ಅಡ್ಡಿಯಿಲ್ಲ. ಈಗ ಲೋಕಾಯುಕ್ತ ದಾಳಿಯಾಗಿ ತನಿಖೆ ಶುರುವಾಗಿರುವುದರಿಂದ ಶಾಸಕ ಶ್ರೀನಿವಾಸ್ ಸದ್ಯಕ್ಕೆ ಕರೆಂಟು ಹೊಡೆದ ಕಾಗೆಯಂತಾಗಿದ್ದಾನೆ.

ಹೆಂಡತಿ ರತ್ನಮ್ಮ ಸೈಟುಕಳ್ಳಿ!

ಫುಲ್‌ಟೈಂ ಭೂಕಬಳಿಕೆಯನ್ನೇ ದಂಧೆ ಮಾಡಿ ಕೊಂಡಿರುವ ಶ್ರೀನಿವಾಸ್ ಕುಟುಂಬದಲ್ಲಿ ಈತನ ಹೆಂಡತಿ ರತ್ನಮ್ಮನ ಸಾಧನೆಯೂ ಗಮನಾರ್ಹವಾಗಿದೆ.



ಮಹಾನ್ ಸೈಟುಕಳ್ಳಿ ಈಕೆ! ಯಡ್ಡಿಯ ಡಿನೋಟಿಫಿಕೇಶನ್ ಸರಣಿ ಅಪರಾಧಗಳ ಪಟ್ಟಿಗೆ ಶಾಸಕ ಶ್ರೀನಿವಾಸನ ಕೊಡುಗೆಯೂ ಇದೆ. ಬೆಂಗಳೂರಿನ ಯಶವಂತಪುರ ಹೋಬಳಿಯ ಮಾಳಗಾಲ ಸರ್ವೆ ನಂ14/2ರಲ್ಲಿ ಒಂದು ಎಕರೆ 26 ಗುಂಟೆ ಜಮೀನನ್ನು ಸರ್ಕಾರ ಭೂಸ್ವಾಧೀನಪಡಿಸಿಕೊಂಡಿತ್ತು, ಆದರೆ ಜಮೀನಿನ ಓನರ್ ಪಾಪರೆಡ್ಡಿ ಪಾಳ್ಯದ ವೆಂಕಟಲಕ್ಷ್ಮಮ್ಮ ಇದನ್ನು ನಿರ್ಲಕ್ಷಿಸಿ ಸುಮಾರು 30 ಸೈಟ್ ವಿಂಗಡಿಸಿ ಯಾರ್‍ಯಾರಿಗೊ ಮಾರಿಕೊಂಡಿದ್ದಳು. ಅಂತವರ ಪೈಕಿ ಜಿಪಿಎ ಮಾಡಿಕೊಂಡಿದ್ದ ಎನ್. ಕೃಷ್ಣಮೂರ್ತಿ ಹಾಗೂ ಎನ್. ಪ್ರಭಾಕರ್ ಎಂಬುವರೊಂದಿಗೆ ಶ್ರೀನಿವಾಸ್ ಪತ್ನಿ ರತ್ನಮ್ಮ ಒಂದು ಸೈಟು ಖರೀದಿ ಒಪ್ಪಂದ ಮಾಡಿಕೊಂಡಳು. ಸದರಿ ಸರ್ವೆ ನಂ ನಲ್ಲಿ ಸೈಟ್ ನಂ 21, 22, 23, 24, 25, 26, 29, 30, 31 32 ಹಾಗೂ 33 ಹೀಗೆ ಒಟ್ಟು 11 ಸೈಟುಗಳ ಖರೀದಿಗೆಂದು 20 ಲಕ್ಷ ರೂ ಅಡ್ವಾನ್ಸ್ ನೀಡಿ ದಿನಾಂಕ 9-11-2009 ರಲ್ಲಿ ಸೇಲ್ ಅಗ್ರಿಮೆಂಟ್ ಮಾಡಿಕೊಂಡಳು.

ವಾಸ್ತವದಲ್ಲಿ ಇದೊಂದು ಬ್ಲಾಕ್‌ಮನಿ ಡೀಲ್ ಕೂಡ ಆಗಿದೆ. ಆ ಏರಿಯಾದಲ್ಲಿ ಒಂದೊಂದು ಸೈಟಿನ ಬೆಲೆ ಐವತ್ತು ಲಕ್ಷ ರೂ ಇದೆ. ಆದರೂ ಸೈಟುಗಳ ಅಸಲಿ ಬೆಲೆ ಕಡಿಮೆ ತೋರಿಸಿ ಈ ವ್ಯವಹಾರ ನಡೆಸಲಾಗಿದೆ. ಆದರೂ ಆ ಜಾಗ ನೋಟಿಫೈ ಆಗಿತ್ತಾದ್ದರಿಂದ ಶಾಸಕ ಶ್ರೀನಿವಾಸ್ ದಿನಾಂಕ 13-04-2010 ರಂದು ಸಿಎಂ ಯಡಿಯೂರಪ್ಪಗೆ ಒಂದು ಪತ್ರ ಬರೆದು ಸದರಿ ಜಮೀನನ್ನು ಡಿನೋಟಿಫೈ ಮಾಡುವಂತೆ ಕೋರಿದ್ದಾರೆ. ಈ ನಡುವೆ ಬಿಬಿಎಂಪಿಯ ಕಾನೂನು ವಿಭಾಗವು ಡಿನೋಟಿಫಿಕೇಶನ್‌ಗೆ ಅಸಮ್ಮತಿ ಸೂಚಿಸಿದಾಗ್ಯೂ ಯಡ್ಡಿ ಕೇರ್ ಮಾಡದೆ ಶ್ರೀನಿವಾಸ್‌ಗೆ ಅನುಕೂಲ ಮಾಡಿಕೊಟ್ಟರು.

ಇದೊಂದೆ ಡೀಲ್‌ನಲ್ಲಿ ಶ್ರೀನಿವಾಸ್ ಮತ್ತವನ ಹೆಂಡತಿ ರತ್ನಮ್ಮ 5 ಕೋಟಿ ರೂಪಾಯಿ ಅಕ್ರಮ ಲಾಭ ಮಾಡಿಕೊಂಡಿದ್ದಾರೆ. ಲೋಕಾಯುಕ್ತ ಪೊಲೀಸರು ಈ ಬಗ್ಗೆ ಹೆಚ್ಚಿನ ಗಮನ ನೀಡಿ ತನಿಖೆ ಮಾಡಿದರೆ ಯಡ್ಡಿಯ ಕುತ್ತಿಗೆಗೂ ಶ್ರೀನಿವಾಸನೆಂಬ ಹಗ್ಗ ಸುತ್ತಿಕೊಳ್ಳುವುದು ಖಚಿತ.

ಅಂದಹಾಗೆ ರತ್ನಮ್ಮನಿಗೆ ನಿಶ್ಚಿತವಾದ ಆದಾಯವೆಂಬುದು ಏನು ಇಲ್ಲದಿರುವಾಗ ಅದು ಹೇಗೆ ಆಕೆ ಕೋಟ್ಯಂತರ ರೂ. ಬೆಲೆಯ ಸೈಟು ಕೊಂಡಳೆಂಬುದನ್ನು ತನಿಖೆ ಮಾಡಬೇಕಿದೆ. ✤

ಕಳ್ಳನ ವಿರುದ್ಧ ಸುಳ್ಳನ ಕದನ

ಆರ್ಟ್ ಆಫ್ ಅರೆಸ್ಟ್!



ಸ್ವಾಮಿಯನ್ನು ಹಣಿಯದೆ ಹೋದರೆ ಮುಖ್ಯಮಂತ್ರಿಗೆ ಸಿಟ್ಟು. ಹೋರಾಟಗಾರರನ್ನು ಚೆಂಡಾಡದಿದ್ದರೆ ಗೃಹಮಂತ್ರಿಯ ಕೆಂಗಣ್ಣು. ಅತ್ತ ಸ್ವಾಮಿ ಬೆಂಬಲಕ್ಕೆ ನಿಂತ ಚನ್ನಪಟ್ಟಣದ ಮೆಗಾಸಿಟಿ ಯೋಗೇಶಿಯನ್ನೂ ಒಲೈಸಬೇಕು. ಇತ್ತ ಬೀದಿಗಿಳಿದ ಸಂಘಟನೆಗಳು, ಕಾಳಿಮಠ ಸ್ವಾಮಿ, ಸುದ್ದಿ ಚಾನಲ್‌ಗಳನ್ನೂ ಸಂತೈಸಬೇಕು. ಚೂರು ಯಡವಟ್ಟಾದರೂ ಕೋರ್ಟು ಛೀಮಾರಿ ಹಾಕುತ್ತದೆ. ಸುಮ್ಮನೆ ಬಿಟ್ಟರೆ ಲಂಚದ ಕಳಂಕ ಮೈಗಂಟುತ್ತದೆ.....!

ಹೀಗೆ ರಾಮನಗರದ ಪೊಲೀಸರು, ಎಸ್ಪಿ ಅನುಪ್ ಅಗರ್‌ವಾಲ್, ಡಿವೈಎಸ್‌ಪಿ ರಾಮಕೃಷ್ಣಪ್ಪ, ಜಿಲ್ಲಾಧಿಕಾರಿ ಶ್ರೀರಾಮರೆಡ್ಡಿ, ಹೆಚ್ಚುವರಿ ಡೀಸಿ ಅರ್ಚನಾ ಮುಂತಾದವರನ್ನೆಲ್ಲ ತನ್ನ ಆಮಿಷದ ಕೊಕ್ಕೆಗೆ ಬೀಳಿಸಿ ಪೀಕಲಾಟ ತಂದಿಟ್ಟವನು ಕೇಡಿ ಸ್ವಾಮಿ ನಿತ್ಯಾನಂದ!

ಇದೇ ಜೂನ್ 3 ರಿಂದ ನಿತ್ಯಾನಂದನ ಬಿಡದಿ ಅಡ್ಡೆಯ ಸುತ್ತ ಸಂಭವಿಸುತ್ತಿರುವ ಅಸಹ್ಯ, ಗಲಾಟೆ, ಬೀದಿರಂಪ ಮತ್ತು ಈ ಬಗ್ಗೆ ಸತತವಾಗಿ ಒಂದು ವಾರದಿಂದ ಕನ್ನಡ ಸುದ್ದಿ ಚಾನಲ್‌ಗಳು ಬೊಬ್ಬೆ ಹಾಕುತ್ತಿರುವ ರೀತಿಯನ್ನು ಕಂಡ ಯಾರಿಗಾದರೂ ವಾಕರಿಕೆ ಹುಟ್ಟಲೇಬೇಕು.

ಏಕಾಏಕಿ ಆರತಿ ರಾವ್ ಎಂಬ ಮಹಿಳೆಯೊಬ್ಬಳು ಪ್ರತ್ಯಕ್ಷಳಾಗಿದ್ದೇ ನಿತ್ಯಾನಂದ ತನ್ನನ್ನು ಆರು ವರ್ಷಗಳ ಕಾಲ ಲೈಂಗಿಕವಾಗಿ ಶೋಷಿಸಿದನೆಂದೂ, ತನ್ನ ಕಾಮತೃಷೆಗಾಗಿ ಗರ್ಭದಲ್ಲಿದ್ದ ನನ್ನ ಮಗುವನ್ನೇ ಕೊಲ್ಲಿಸಿದನೆಂದೂ, ಈಗ ನಾನು ಗಂಡನಿಗೂ ಸಲ್ಲದೆ ದುಡಿಮೆಯೂ ಇಲ್ಲದೆ ಬೀದಿಗೆ ಬಿದ್ದಿದ್ದೇನೆಂದು ಗಂಟೆಗಟ್ಟಲೆ ಸಂದರ್ಶನ ಕೊಡುತ್ತಾಳೆ. ನೆಟ್ಟಗೆ ಮುಖವನ್ನು ತೋರಿಸದೆ ಮುಖಕ್ಕೆ ಬಟ್ಟೆ ಸುತ್ತಿಕೊಂಡು ಹೇಳಿಕೊಂಡ ಆಕೆಯ ದಾರುಣ(!) ಕತೆಯನ್ನು ಒಂದು ಚಾನಲ್ ಸತತ ಮೂರು ದಿನಗಳ ಕಾಲ ಮತ್ತೆಮತ್ತೆ ಬಿತ್ತರಿಸಿದ್ದಷ್ಟೇ ಅಲ್ಲ, ಅದೇ ಚಾನಲ್ ಮಾಲೀಕನ ಒಡೆತನದ ದಿನಪತ್ರಿಕೆಯೂ ಮುಖಪುಟ ಸುದ್ದಿಯನ್ನಾಗಿ ಪ್ರಕಟಿಸುತ್ತದೆ.

ಆರತಿ ರಾವ್

ಹೀಗೆ ಟೀವಿಗೆ ಮುಖ ಮುಚ್ಚಿ ಸಂದರ್ಶನ ಕೊಟ್ಟ ಆರತಿ ರಾವ್ ಮರುದಿನ ನಾಪತ್ತೆಯಾಗಿದ್ದಾಳೆಂದೂ ಆಕೆಯ ಕಣ್ಮರೆಯ ಕುರಿತಂತೆ ಸರ್ಕಾರವಾಗಲಿ ಪೊಲೀಸರಾಗಲಿ ಯಾವುದೇ ಕಾಳಜಿ ವಹಿಸುತ್ತಿಲ್ಲವೆಂದೂ ಮತ್ತೊಂದು ಸುದ್ದಿ ಪ್ರಕಟವಾಗುತ್ತದೆ. ಅದೂ ಈ ಹಿಂದೆ ಆಕೆಯ ಸಂದರ್ಶನ ಬಿತ್ತರಿಸಿದ ಅದೇ ಪತ್ರಿಕೆ ಮತ್ತು ಅದೇ ಟೀವಿಯಲ್ಲಿ!

ಕುಚೋದ್ಯವೆಂದರೆ ಆರತಿ ರಾವ್ ನಾಪತ್ತೆಯಾಗಿದ್ದಾಳೆಂದು ಆಕೆಯ ಮನೆಯವರಾಗಲಿ, ಸಂಬಂಧಿಕರಾಗಲಿ ಯಾರೂ ದೂರು ಕೊಟ್ಟಿಲ್ಲ. ಆಕೆಯನ್ನು ಹುಡುಕುತ್ತಿದ್ದೇವೆಂದು ಯಾವ ಪೊಲೀಸ್ ಅಧಿಕಾರಿಯೂ ಹೇಳಿಕೆ ಕೊಟ್ಟಿಲ್ಲ. ಆಕೆ ನಾಪತ್ತೆಯಾಗಿದ್ದಾಳೆ ಎಂದು ಆಕೆಯ ಪತ್ತೆಗಾಗಿ ತಲೆಕೆಡಿಸಿಕೊಂಡಿದ್ದಾದರೂ ಯಾರು?

ಇಡೀ ಪ್ರಕರಣದ ಮರ್ಮವಿರುವುದೇ ಇಲ್ಲಿ. ಅಲ್ಲಿಗೆ ರಂಜಿತಾ ಪ್ರಕರಣ ಮತ್ತು ಕಾಮಕೇಳಿಯ ವಿಷಯ ಕೋರ್ಟಿನಲ್ಲಿತ್ತು, ಮಧುರೈ ಆಧೀನಮ್ ಮಠಕ್ಕೆ ನಿತ್ಯ ಉತ್ತರಾಧಿಕಾರಿಯಾದದ್ದೂ ಕೋರ್ಟ್ ಮಧ್ಯಪ್ರವೇಶದಿಂದಾಗಿ ಒಂದು ಹಂತಕ್ಕೆ ಬಂದಿತ್ತು. ಹಾಗೊಮ್ಮೆ ಆರತಿ ರಾವ್ ನಿತ್ಯಾನಂದನಿಂದ ಲೈಂಗಿಕವಾಗಿ ನೊಂದಿದ್ದರೆ ದೇಶದ ಯಾವುದಾದರೂ ಪೊಲೀಸ್ ಠಾಣೆಯಲ್ಲಿ ದೂರು ದಾಖಲಿಸಬಹುದಿತ್ತು. ನಿತ್ಯಾನಂದನ ಭೀತಿಯಿದ್ದಿದ್ದೇ ಆಗಿದ್ದರೆ ಮುಖ್ಯಮಂತ್ರಿಗೋ ಮಹಿಳಾ ಆಯೋಗಕ್ಕೋ ಲಿಖಿತವಾಗಿ ಮನವಿ ಸಲ್ಲಿಸಬಹುದಿತ್ತು. ಇದ್ಯಾವುದನ್ನೂ ಮಾಡದೆ ಆರತಿ ರಾವ್ ನೇರವಾಗಿ ಟೀವಿಗೆ ಬಂದು ಕಣ್ಣೀರಿಡುತ್ತಾಳೆ!

ಸರಿ, ನಿತ್ಯಾನಂದನ ಪ್ರಭಾವ, ಧನಬಲ, ತಾಕತ್ತಿನ ಮುಂದೆ ಆಕೆಗೆ ಧೈರ್ಯ ಸಾಲಲಿಲ್ಲ ಎಂದೇ ಇಟ್ಟುಕೊಂಡರೂ ಇದೆಲ್ಲವನ್ನೂ ಮೀರಿ ಟೀವಿ ಸಂದರ್ಶನ ನೀಡಲು ಹೇಗೆ ಧೈರ್ಯ ಬಂತು?!

ಇದೇನೇ ಇರಲಿ, ಆಕೆಯ ಸಂದರ್ಶನ ಮಾಡಿದ ಟೀವಿ ಶಿಖಾಮಣಿಗಳಾದರೂ ಆಕೆಯನ್ನೊಯ್ದು ಪೊಲೀಸರಿಗೆ ದೂರು ನೀಡಿಸಬಹುದಿತ್ತಲ್ಲವೇ. ಹಾಳಾಗಲಿ, ಆಕೆ ನೀಡಿದ ಸಂದರ್ಶನದ ಪ್ರತಿಯನ್ನೇ ಮುಂದಿಟ್ಟು ಆಕೆಯ ಪರವಾಗಿ ಟೀವಿ ವರದಿಗಾರರೋ ಅಥವಾ ಅವರ ಆಣತಿವೇತ್ತ ಯಾವುದೇ ಮಹಿಳಾ ಸಂಘಟನೆಗಳೋ ಪೊಲೀಸ್ ಠಾಣೆಯೊಂದರಲ್ಲಿ ಆರತಿ ರಾವ್ ಪರವಹಿಸಿ ದೂರು ನೀಡಬಹುದಿತ್ತಲ್ಲವೆ?



ಪ್ರೆಸ್‌ಮೀಟ್ ಫಜೀತಿ

ಅಲ್ಲಿಗೆ ಆಕೆ ನಾಪತ್ತೆಯಾಗಿದ್ದಾಳೆಂದು ಪುಕಾರೆಬ್ಬಿಸಿದ ಟೀವಿ ಧೂರ್ತರಿಗಿದ್ದದ್ದು ನಿತ್ಯಾನಂದನ ವಿರುದ್ಧ ಪೊಲೀಸ್ ಕ್ರಮವಲ್ಲ, ಅಥವಾ ದೂರು ನೀಡುವಷ್ಟು ಅಸಲಿಯತ್ತು ಕಣ್ಣೀರಿಟ್ಟ ಹೆಂಗಸಿಗೇ ಇರಲಿಲ್ಲ!

ಇಷ್ಟಾದ ಮೇಲೆ ನಡೆದದ್ದು ಅಕ್ಷರಶಃ ಮೇಲೋಡ್ರಾಮಾ.

ಜೂನ್ 7 ರಂದು ಈ ಬಗ್ಗೆ ಸ್ಪಷ್ಟನೆ ನೀಡಲೆಂದೇ ತನ್ನ ಬಿಡದಿ ಅಡ್ಡೆಯಲ್ಲೊಂದು ಪತ್ರಿಕಾಗೋಷ್ಠಿ ಕರೆಯುತ್ತಾನೆ ನಿತ್ಯಾನಂದ. ಅದಕ್ಕೆ ಸುದ್ದಿಗೆ ಬಿದ್ದ ಟೀವಿಯ ಪ್ರತಿನಿಧಿಯಾಗಿ ಬಂದದ್ದು ಅಜಿತ್ ಹನುಮಕ್ಕನವರ್ ಎಂಬ ಪತ್ರಕರ್ತ. ಯಾರೇ ಪತ್ರಕರ್ತನೊಬ್ಬ ತನ್ನ ಆರೋಪಕ್ಕೆ ಎದುರಾಳಿಯ ಪ್ರತಿಕ್ರಿಯೆ, ಹೇಳಿಕೆಯನ್ನು ಕೇಳುವಷ್ಟೂ ತಾಳ್ಮೆ ವಹಿಸದೆ, ಏಕಾಏಕಿ ನಿತ್ಯಾನಂದನ ವಿರುದ್ಧ ಅಮೆರಿಕದ ಯಾವುದೋ ನ್ಯಾಯಾಲಯ ಸಲಿಂಗರತಿಗೆ ಸಂಬಂಧಪಟ್ಟಂತೆ ಸಮನ್ಸ್ ಹೊರಡಿಸಿದ್ದನ್ನೇ ಎತ್ತಾಡಿ ಜಗಳಕ್ಕೆ ಬೀಳುತ್ತಾನೆಂದರೆ ಆತನ ಉದ್ದೇಶವಿದ್ದದ್ದು ಆರತಿ ರಾವ್ ನಿತ್ಯನ ವಿರುದ್ಧ ಮಾಡಿದ ಆರೋಪಗಳಿಗೆ ಸ್ಪಷ್ಟೀಕರಣದ ನಿರೀಕ್ಷೆಗಿಂತಲೂ ಕ್ಯಾತೆ ತೆಗೆದು ಪತ್ರಿಕಾಗೋಷ್ಠಿಯನ್ನೇ ಹಾಳು ಮಾಡುವುದು!

ಅಲ್ಲಿಗೆ ಈ ಪತ್ರಕರ್ತರೆಲ್ಲ ಸೇರಿ ಹೆಣೆದಿದ್ದ ಬಲೆಗೆ

> ವಂಚಕ ನಿತ್ಯಾನಂದನಿಗೆ ತಕ್ಕ ಶಾಸ್ತಿಯಾಗುತ್ತಿದೆ. ಇದರ ಕೀರ್ತಿ ಮಾಧ್ಯಮಗಳಿಗೂ ಸಲ್ಲಬೇಕು. ಆದರೆ ಇದರ ಹಿಂದೆ ಆರ್ಟ್ ಆಫ್ ಲೀವಿಂಗ್‌ನ ರವಿಶಂಕರ ಗುರೂಜಿ ಎಂಬ ಇನ್ನೊಬ್ಬ ವಂಚಕನ ಕೈವಾಡವೂ ಇದೆ..... ಮಾಧ್ಯಮಗಳೇಕೆ ಇವನ ವಿರುದ್ಧ ದನಿ ಎತ್ತುತ್ತಿಲ್ಲ?

ನಿತ್ಯಾನಂದನೇ ಬಂದು ಬಿದ್ದುಬಿಟ್ಟ. ಕೇಳಿದ ಪ್ರಶ್ನೆಗೆ ಓರ್ವ ಸನ್ಯಾಸಿಯಾಗಿ ಸಮಾಧಾನಚಿತ್ತನಾಗಿ ಉತ್ತರಿಸಬೇಕಿತ್ತು, ಅಥವಾ ತಾನೇನು ಹೇಳಬೇಕಿತ್ತೋ ಅದನ್ನು ಹೇಳಿದ ನಂತರವೇ ಇದಕ್ಕೆಲ್ಲ ಉತ್ತರಿಸುತ್ತೇನೆಂದು ಹೇಳಿ ಆತುರಗೇಡಿ ಹನುಮಕ್ಕನವರ್ ಎಂಬಾತನನ್ನು ತೆಪ್ಪಗಾಗಿಸಬೇಕಿತ್ತು. ಏಕಾಏಕಿ ಸಿಟ್ಟಿಗೆದ್ದು ಆತನ ಜೊತೆ ಜಗಳಕ್ಕೆ ಬಿದ್ದ. ಇದನ್ನೇ ಕಾಯುತ್ತಿದ್ದ ನಿತ್ಯಾನಂದನ ಬುದ್ಧಿಗೇಡಿ ಭಕ್ತೆಯರು ಕ್ಯಾತೆಗೆ ಬಂದಿದ್ದ ಹನುಮಕ್ಕನವರ್ ಮೇಲೆ ಜಗಳಕ್ಕೆ ಬಿದ್ದರು. ಇಷ್ಟಾಗಿಯೇ ಉಳಿಕೆ ಪತ್ರಕರ್ತರೆಲ್ಲ ಪತ್ರಿಕಾಗೋಷ್ಠಿಯ ಉದ್ದೇಶವನ್ನೇ ಮರೆತು ಹೊರನಡೆದುಬಿಟ್ಟರು.

ಇನ್ನು ಜಿದ್ದಿಗೆ ಬಿದ್ದಿದ್ದ ಟೀವಿ ಕೇಳಬೇಕೆ? ತನ್ನ ವರದಿಗಾರ ಹನುಮಕ್ಕನವರ್ ಮೇಲೆ ನಿತ್ಯನ ಭಕ್ತೆಯರಿಂದ ದಾಳಿಯೇ ನಡೆಯಿತೆಂಬಂತೆ ಇಡೀ ದಿನ ಸುದ್ದಿ ಬಿತ್ತರಿಸಿತು. ಅದಕ್ಕೆ ತಕ್ಕಂತೆ ನಿತ್ಯಾನಂದನೇ ಪ್ರಚೋದನೆ ಕೊಟ್ಟು ತನ್ನ ಮೇಲೆ ಹಲ್ಲೆ ಮಾಡಿಸಿ ದನೆಂದೂ, ತನಗೆ ಕೊಲೆ ಬೆದರಿಕೆ ಹಾಕಿದನೆಂದೂ ಹನುಮಕ್ಕನವರ್ ಬಿಡದಿ ಪೊಲೀಸ್ ಠಾಣೆಗೆ ಹೋಗಿ ದೂರು ಕೊಟ್ಟ.

ಇದರ ಮರುದಿನ ನಡೆದದ್ದಂತೂ ಇನ್ನೂ ಅಸಹ್ಯ. ಇದ್ದಕ್ಕಿದ್ದಂತೆ ಕರ್ನಾಟಕ ನವನಿರ್ಮಾಣ ಸೇನೆ ಮತ್ತು ಚನ್ನಪಟ್ಟಣದ ಕಸ್ತೂರಿ ಕನ್ನಡ ಜನಪರ ವೇದಿಕೆಗಳೆಂಬ ಎರಡು ಸಂಘಟನೆಗಳ ನೇತೃತ್ವದಲ್ಲಿ ಸರಿಸುಮಾರು ಐವತ್ತು ಮಂದಿಯಿದ್ದ ಕನ್ನಡ ಹೋರಾಟಗಾರರ ಪಡೆ ನಿತ್ಯನ ಅಡ್ಡೆಗೆ ನುಗ್ಗಿದ್ದೇ ಹಾವಳಿಯಿಟ್ಟರೆ. ನಿತ್ಯನ ಭಕ್ತೆಯರಿಗೂ ಕನ್ನಡವೀರರಿಗೂ ಹೊಡೆದಾಟವೇ ನಡೆಯಿತು. ಬಿಡದಿ ಪೊಲೀಸರು ಬರದೇ ಹೋಗಿದ್ದರೆ ಯಾರ ಹೆಣ ಬೀಳುತ್ತಿತ್ತೋ ಯಾರ ಗತಿ ಏನಾಗುತ್ತಿತ್ತೋ ಗೊತ್ತಿಲ್ಲ.

ಸಿಎಂ ಡಿವಿಯ ಮೌನ

ಜೂನ್ 8 ರ ಧ್ಯಾನಪೀಠದ ಮಾರಾಮಾರಿಯಿಂದಾಗಿ ಇಡೀ ಪ್ರಕರಣಕ್ಕೊಂದು ಹೊಸ ತಿರುವು ಬಂದಂತಾಗಿ ಕಡ್ಡಿಗೀರಿದ 24x7 ಟೀವಿಯ ಜೊತೆ ಮತ್ತೂ ಒಂದು 'ಪಬ್ಲಿಕ್' ಪೂರಕ ಚಾನೆಲ್ ನಿತ್ಯನ ವಿನಾಶಕ್ಕೆ ಕೈಜೋಡಿಸಿತು. ದಿನವಿಡೀ ನಿತ್ಯನದೇ ಸುದ್ದಿ, ಚರ್ಚೆಗಳಾದವು. ಅದಕ್ಕೆ ತಕ್ಕಂತೆ ಬಿಡದಿ ಪೊಲೀಸರು ಸೋಕಾಲ್ಡ್ ಕನ್ನಡ ಕಾರ್ಯಕರ್ತರನ್ನೆಲ್ಲ ಭಯಂಕರ ಕೇಸುಗಳ ಮೇಲೆ ಜೈಲಿಗೆ ದಬ್ಬಿದರೆ, ಹೊಡೆದಾಡಿದ ನಿತ್ಯ ಭಕ್ತಾದಿಗಳ ಮೇಲೂ ಮಾರಾಮಾರಿಯ ಮೊಕದ್ದಮೆ ದಾಖಲಿಸಿದರು. ರಾಮನಗರದ ಕೋರ್ಟು, ಪೊಲೀಸರು, ಜಿಲ್ಲಾಧಿಕಾರಿ, ಕನ್ನಡ ಸಂಘಟನೆಗಳು, ಸುದ್ದಿ ಚಾನಲ್‌ಗಳು; ಹೀಗೆ ನಿತ್ಯಾನಂದನ ವಿರುದ್ಧ ಪ್ರತಿಯೊಬ್ಬರೂ ಒಂದಲ್ಲ ಒಂದು ಕಾರಣಕ್ಕೆ ಭಾಗೀದಾರರಾಗಿಬಿಟ್ಟರು. ನಿತ್ಯಾನಂದನ ವಿರುದ್ಧ ಏನೇ ಮಾಡಿದರೂ ಬಿಟ್ಟಿ ಪ್ರಚಾರ ಗ್ಯಾರಂಟಿಯೆಂದು ಗೊತ್ತಾಗಿದ್ದೇ ಕಾಳಿಮಠದ ಋಷಿ ಕುಮಾರಸ್ವಾಮಿ ಎಂಬ ನಿತ್ಯನ ಟೈಪಿನದೇ ಸ್ವಾಮಿಯೊಬ್ಬ ನಿತ್ಯಾನಂದನ ವಿರುದ್ಧ ಮೆರವಣಿಗೆ ತೆಗೆದ. ಜೂನ್ 11 ರ ಸೋಮವಾರದ ಹೊತ್ತಿಗೆ ಜೈಲುಪಾಲಾಗಿದ್ದ ಹೋರಾಟಗಾರರಿಗೆ ಜಾಮೀನು ಸಿಕ್ಕಿತ್ತು.

ವಿಕಟವೆಂದರೆ ನಿತ್ಯನ ರಾದ್ಧಾಂತಕ್ಕೆ ಏಕಾಏಕಿ ಮುಖ್ಯಮಂತ್ರಿ ಸದಾನಂದ ಗೌಡರು ಸಾಥ್ ಕೊಟ್ಟಿದ್ದು!

ಹಾಗೆ ನೋಡಿದರೆ ಗೃಹಮಂತ್ರಿ ಆಶೋಕ್ ಈ ಬಗ್ಗೆ ತಲೆಕೆಡಿಸಿಕೊಳ್ಳಬೇಕು. ಅಥವಾ ರಾಮನಗರದ ಉಸ್ತುವಾರಿ ಮಂತ್ರಿ ಯೋಗೇಶ್ವರ್ ನಿತ್ಯನ ಹಾವಳಿ ವಿರುದ್ಧ ಕ್ರಮಕ್ಕೆ ಮುಂದಾಗಬೇಕು. ಇವರಿಬ್ಬರನ್ನೂ ಓವರ್‌ಟೇಕ್ ಮಾಡಿ ಮುಖ್ಯಮಂತ್ರಿ ಸದಾನಂದ ಗೌಡರು ಪತ್ರಿಕಾ ಪ್ರತಿನಿಧಿಗಳನ್ನು ಕಂಡಿದ್ದೇ 'ನಿತ್ಯಾನಂದನನ್ನು ಎಲ್ಲಿದ್ದರೂ ಅರೆಸ್ಟ್ ಮಾಡಿ, ಆತನ ಆಶ್ರಮಕ್ಕೆ ಬೀಗ ಹಾಕಿ.... ಎಂದು ಈಗಾಗಲೇ ಗೃಹ ಕಾರ್ಯದರ್ಶಿಗೆ ಆದೇಶ ಕೊಟ್ಟಿದ್ದೇನೆ. ಇಂಥ ಅನಾಚಾರವನ್ನೆಲ್ಲ ಸರ್ಕಾರ ಸಹಿಸೋಲ್ಲ. ಈ ಬಗ್ಗೆ ಯಾರೆಲ್ಲ ತಲೆಕೆಡಿಸಿಕೊಂಡು ಸಮಸ್ಯೆ ಬಗೆಹರಿಸಬೇಕಿತ್ತೋ ಅವರೇ ಬಾಯಿಮುಚ್ಚಿ ಕೂತಿದ್ದರಿಂದ ನಾನು ಮಧ್ಯಪ್ರವೇಶಿಸಬೇಕಾಯ್ತು! ಎಂದು ಗಾಬರಿಗೆ ಬಿದ್ದು ಹೇಳಿಬಿಟ್ಟರು.

ಸದಾನಂದಗೌಡ ಓರ್ವ ವಕೀಲರು. ಮುಖ್ಯಮಂತ್ರಿ

ಬಚ್ಚಿಟ್ಟುಕೊಂಡಿದ್ದು ರಂಜಿತಾ ಚಿಕ್ಕಮ್ಮನ ಮನೆಯಲ್ಲಿ?



ಜೂನ್ 8 ರಂದು ಕನ್ನಡ ಪರ ಸಂಘಟನೆಗಳ ಹೆಸರಲ್ಲಿ ನಿತ್ಯಾನಂದನ ಅಡ್ಡೆಯ ಮೇಲೆ ದಾಳಿಯಾಯಿತಲ್ಲ, ಆವತ್ತು ರಾತ್ರಿಯಿಂದ ಜೂನ್ ೧೩ ರ ಬುಧವಾರ ಆತ ರಾಮನಗರದ ಕೋರ್ಟಿಗೆ ಹಾಜರಾಗುವ ತನಕ ಅಂದರೆ ನಾಲ್ಕು ದಿನಗಳ ಕಾಲ ನಿತ್ಯ ಎಲ್ಲಿ ಅಡಗಿಕೊಂಡಿದ್ದ?

ಹಾಗೊಮ್ಮೆ ಮಧುರೈನ ಆಧೀನಮ್ ಮಠಕ್ಕೋ, ತಮಿಳುನಾಡಿನಲ್ಲಿರುವ ಆತನ ಶಾಖಾ ಮಠಗಳಿಗೋ ಹೋಗಿದ್ದರೆ ಅದು ಸುದ್ದಿಯಾಗಬೇಕಿತ್ತು. ಅಲ್ಲಿಗೂ ಹೋಗದೆ ಬಿಡದಿಯ ಧ್ಯಾನಪೀಠದಲ್ಲೂ ಕಾಣದೆ [illegible] ನಿತ್ಯಾನಂದನಿಗೆ [illegible] ಬೆಂಗಳೂರಿನ ರಂಜಿತಾಳ ಚಿಕ್ಕಮ್ಮನ ಮನೆ.

[illegible]

ಅಶೋಕ್ ಮತ್ತು ಯೋಗೇಶ್ವರ್ ನಿತ್ಯನ ಬೆಂಬಲಕ್ಕೆ ನಿಂತಿದ್ದೇಕೆ?

ಗೃಹಮಂತ್ರಿ ಅಶೋಕ್ ಮತ್ತು ನಿತ್ಯಾನಂದನ ಮಧ್ಯೆ ನೆಂಟಸ್ತಿಕೆ ಕುದುರಿಸಿದ್ದು ...ಸಿಟಿ ಯೋಗೇಶ್ವರನೆ? ಏಕೆ ಮಾಗಡಿ ಶಾಸಕ ಬಾಲಕೃಷ್ಣ ರಾಮನಗರದ ...ಲ್ಲೇ ಅಪ್ಪೇರಹಳ್ಳಿ ರಾಜು ನಿತ್ಯಾನಂದನ ವಿರುದ್ಧ ತೆಪ್ಪಗಾಗಿದ್ದಾರೆ?

...ಂಥ ಪ್ರತಿಯೊಂದು ಪ್ರಶ್ನೆಗೂ ಬಿಡದಿ ಮತ್ತು ...ನಗರದ ಜನರಲ್ಲಿ ಉತ್ತರವಿದೆ. ರಂಜಿತಾ ಪ್ರಕರಣ ...ನಿತ್ಯ ಸೆಕ್ಸ್ ವಿಡಿಯೋ ಬಯಲಾಯಿತಲ್ಲ; ಇದಾಗಿ ...ಗೇ ಮಾಗಡಿ ಶಾಸಕ ಬಾಲಕೃಷ್ಣ ನಿತ್ಯಾನಂದನ ಆಶ್ರಮಕ್ಕೆ ...ತ್ತಾರೆ. ಹಾಗೇ ಬಂದು ಹೀಗೆ ಹೋದ ಮಾಗಡಿ ಶಾಸಕ ...ಕೃಷ್ಣರ ನಂತರ ರಾಮನಗರದ ಎಮ್ಮೆಲ್ಲೇ ರಾಜು ಕೂಡ ...ತ್ತಾರೆ. ಯಾಕೆ ಬಂದಿದ್ದು? ಏನಾಯಿತು? ಯಾರಿಗೂ ...ಲ್ಲ. ಅಲ್ಲಿಯ ತನಕ ನಿತ್ಯಾನಂದನ ಪರ ಎಲ್ಲಾ ...ೋಬಸ್ತು, ಡೀಲು ನೋಡಿಕೊಳ್ಳುತ್ತಿದ್ದದ್ದು ಆವತ್ತು ...ನಗರಕ್ಕೆ ಡಿವೈಎಸ್‌ಪಿಯಾಗಿದ್ದು ಕ್ರಮೇಣ ನೈಸ್ ಜಾಣೆಯ ...ಗೆ ನಿಂತು ಎತ್ತಂಗಡಿಯಾದ ಒಬ್ಬ ಎಸಿಪಿ.

ಈಗ ಡಿವೈಎಸ್‌ಪಿಯಾಗಿರುವ ಎಂ.ಜಿ. ರಾಮಕೃಷ್ಣಪ್ಪ ...ದ್ದೂ ಇದನ್ನೇ. ಪಕ್ಕಾ ಕಾವಲುಬಂಟನಂತೆ ನಿತ್ಯಾನಂದನ ವಿರುದ್ಧ ...ಟಿಸಿದ ಕನ್ನಡ ಕಾರ್ಯಕರ್ತರ ಮೇಲೆ ಭಯಂಕರ ಸೆಕ್ಷನ್ನುಗಳನ್ನೇ ...ು ಜೈಲಿಗಟ್ಟಿದರು. ಆದರೆ ನಿತ್ಯನ ಭಕ್ತೆಯರ ಗೂಂಡಾಗಿರಿಗೆ ಯಾವ ...ರ ಪ್ರಕರಣಗಳನ್ನೂ ದಾಖಲಿಸದೇ ಪರೋಕ್ಷವಾಗಿ ನೆರವಾದರು. ಬಿಡದಿಯ ...ೆಸರೇ ಹೇಳುವಂತೆ ಜೂನ್ 8 ರ ರಾತ್ರಿ ತನ್ನ ಅಡ್ಡೆಯಿಂದ ನಿತ್ಯ ...ರಯಾಗಲು ನೆರವಾಗಿದ್ದೇ ಡಿವೈಎಸ್‌ಪಿ ರಾಮಕೃಷ್ಣ

...ಂಗೆ ನಿತ್ಯನ ನೆರವಿಗೆ ಡಿವೈಎಸ್‌ಪಿ ರಾಮಕೃಷ್ಣಪ್ಪ ನಿಲ್ಲುವಂತೆ ಡೀಲು ...ರಿಸಿದ್ದು ಬಿಡದಿಯ ಹಳೇ ಕಾಂಗ್ರೆಸ್ ಪುಢಾರಿ ಪಿಂಗಿ ರಾಜಣ್ಣ! ...ೇ ನಿಂತು ಚನ್ನಪಟ್ಟಣದ ಮೆಗಾಸಿಟಿ ಯೋಗೇಶ್ವರ್‌ಗೂ ನಿತ್ಯಾನಂದನಿಗೂ ವ್ಯವಹಾರ ಕುದುರಿಸಿದ್ದ. ಯೋಗೇಶ್ವರ್ ಸೂಚನೆಯ ಮೇರೆಗೇ ಚನ್ನಪಟ್ಟಣದ ಜೆಡಿಎಸ್ ನಾಯಕ ಮತ್ತು ಕೆಎಂಎಫ್ ಡೈರೆಕ್ಟರ್ ಲಿಂಗೇಶ್ ಕುಮಾರ್ ಹಾಗೂ ರಾಮನಗರದ ತಾಲ್ಲೂಕು ಬಿಜೆಪಿ ಅಧ್ಯಕ್ಷ ಮತ್ತು ಕೆಎಂಎಫ್‌ನ ಮತ್ತೊಬ್ಬ ಡೈರೆಕ್ಟರ್ ಮಾಯಿಗಾನಹಳ್ಳಿ ನಾಗರಾಜ್‌ರನ್ನು ತನ್ನ ಅಡ್ಡೆಗೆ ಕರೆಸಿಕೊಂಡ ನಿತ್ಯಾನಂದ ಕೈತುಂಬಾ ಪ್ರಸಾದ ಕೊಟ್ಟೇ ಸುಮ್ಮನಾಗಿಸಿದ್ದ.



ಇದಾದ ನಂತರ ನಿತ್ಯನ ಅಡ್ಡೆಗೆ ಕಾಲಿಟ್ಟ ಮತ್ತೊಬ್ಬ ಜೆಡಿಎಸ್ ಮುಖಂಡನೇ ದುಂತೂರು ವಿಶ್ವನಾಥ್. ಕಳೆದ ವಿಧಾನ ಸಭಾ ಚುನಾವಣೆಯಲ್ಲಿ ಕನಕಪುರಕ್ಕೆ ಡೀಕೆ ವಿರುದ್ಧ ನಿಂತಿದ್ದ ದುಂತೂರು ವಿಶ್ವನನ್ನು ಬಿಜೆಪಿಗೆ ಸೆಳೆದು ಡೀಕೆಗೆ ಬಿಸಿ ಮುಟ್ಟಿಸುವುದು ಮೆಗಾ ಯೋಗಿಯ ಹುನ್ನಾರ. ಅದಕ್ಕೆ ಪೂರ್ವಭಾವಿಯಾಗಿ ಕೈ ಬೆಚ್ಚಗೆ ಮಾಡಬೇಕಲ್ಲ, ಅದಕ್ಕೆ ಲಿಂಗೇಶನನ್ನು ಜೊತೆ ಮಾಡಿ ನಿತ್ಯಾನಂದನ ದರ್ಶನಕ್ಕೆ ಕಳಿಸಿಕೊಟ್ಟಿದ್ದಾನೆ. ದುಂತೂರು ವಿಶ್ವನಿಗೂ ನಿತ್ಯನ ಪ್ರಸಾದ ಸಂದಾಯವಾಗಿದೆ.



ಇಷ್ಟಲ್ಲದರ ಮಧ್ಯೆ ರಾಮನಗರ, ಬಿಡದಿ ಸುತ್ತಮುತ್ತಲು ಪಂಚಾಯತಿ ಸದಸ್ಯರನ್ನು ಬರಮಾಡಿಕೊಂಡ ನಿತ್ಯ ಪ್ರತಿಯೊಬ್ಬರಿಗೂ ಕೈತುಂಬಾ ಕಾಣಿಕೆ ಕೊಟ್ಟಿದ್ದಾನೆ. ಬೆನ್ನಲ್ಲೇ ಬಿಡದಿ ಸುತ್ತಮುತ್ತಲ ಸುಮಾರು ಐವತ್ತು ಮಹಿಳಾ ಸ್ವಸಹಾಯ ಸಂಘಗಳನ್ನು ಕರೆಸಿಕೊಂಡು ಪ್ರತಿ ಸಂಘಕ್ಕೂ ತಲಾ ಒಂದು ಲಕ್ಷದಂತೆ ಬಳುವಳಿ ನೀಡಿದ್ದಾನೆ. ಇದಕ್ಕೆ ಪೂರಕವಾಗೇ ಜಯ ಕರ್ನಾಟಕ ಸಂಘಟನೆಯ ನಾಯಕ ಮತ್ತು ನಿತ್ಯಾನಂದರ ಮಧ್ಯೆ ರಾಜಿ ಕುದುರಿದೆ. ಹಾಗೆ ರಕ್ಷಣಾ ವೇದಿಕೆಯ ಅಧಿನಾಯಕರೂ ನಿತ್ಯನ ದರ್ಶನ ಪಡೆದು ಪಾವನರಾದರು.

ಇದೆಲ್ಲ ಒಂದೆಡೆಯಾದರೆ ಮತ್ತೊಂದೆಡೆ ಸ್ವತಃ ಮೆಗಾ ಯೋಗಿಯೇ ನಿಂತು ಗೃಹ ಮಂತ್ರಿ ಅಶೋಕ್ ಮತ್ತು ನಿತ್ಯನ ಮಧ್ಯೆ ದೋಸ್ತಿ ಏರ್ಪಡಿಸಿದ್ದಾನೆ. ಪ್ರಸಾದದ ಮೊತ್ತ ಕೂಡ ಸಣ್ಣದೇನಲ್ಲ, ಇಂಥಾದ್ದೊಂದು ಏರ್ಪಾಡು ಮಾಡಿಕೊಂಡೇ ನಿತ್ಯಾನಂದ 'ಬೇಕಿದ್ದರೆ ನನ್ನ ವಿರುದ್ಧ ಸಿಬಿಐ ತನಿಖೆ ನಡೆಯಲಿ?' ಎಂದು ಧಿಮಾಕಿನಿಂದ ಹೇಳಿದ್ದು.

ನಿತ್ಯನ ಇಂಥಾ ಏರ್ಪಾಡುಗಳ ಮರ್ಮ ಗೊತ್ತಿಲ್ಲದ ಟೀವಿ ಮುಖ್ಯಸ್ಥರು ಛೂ ಬಿಟ್ಟಿದ್ದನ್ನೇ ನಂಬಿ ನಿತ್ಯಾನಂದನ ಅಡ್ಡೆಗೆ ದಾಳಿಯಿಟ್ಟ ಓರಾಟಗಾರರ? ವೇಷದ ನಿತ್ಯನ ವಿರೋಧಿ ಗಳಿಗೆ ಮುಟ್ಟಿ ನೋಡಿಕೊಳ್ಳುವಂತೆ ಏಟು ಕೊಟ್ಟಿದ್ದು ರಾಮನಗರದ ಪೊಲೀಸರು. ದಾಳಿ ನಡೆದ ಸುದ್ದಿ ಹೊರಬಿದ್ದದ್ದೇ ಗೃಹ ಮಂತ್ರಿ ಅಶೋಕ್ 'ಬೇಕಿದ್ದರೆ ನಿತ್ಯಾನಂದರ ವಿರುದ್ಧ ದೂರು ನೀಡಲಿ. ಪೊಲೀಸರು ಆ ಬಗ್ಗೆ ಕಾನೂನು ರೀತ್ಯವೇ ಕ್ರಮ ಕೈಗೊಳ್ಳುತ್ತಾರೆ. ಆದರೆ ಪ್ರತಿಭಟನೆ ಹೆಸರಲ್ಲಿ ಕಾನೂನು ಕೈಗೆತ್ತಿಕೊಂಡರೆ ಸರ್ಕಾರ ಕೈಕಟ್ಟಿ ಕೂರಲು ಸಾಧ್ಯವಿಲ್ಲ? ಎಂದು ಬಿಟ್ಟರು.

ಇದು ನಿತ್ಯನ ಪರವಾಗಿ ಅಶೋಕ್ ಘೋಷಿಸಿದ ಪರೋಕ್ಷ ಬೆಂಬಲ ವಾಗಿತ್ತು. ಉಸ್ತುವಾರಿ ಮಂತ್ರಿ ಮೆಗಾ ಯೋಗಿಯೇ ನಿತ್ಯನ ಕುಮ್ಮಕ್ಕಿಗೆ ನಿಂತಿದ್ದರಿಂದ ಧ್ಯಾನಪೀಠದಿಂದ ಆತ ಸಲೀಸಾಗಿ ಪರಾರಿಯಾದ. ನಿತ್ಯನ ಪರ ಅಶೋಕ್ ಮತ್ತು ಮೆಗ ಯೋಗಿ ನಿಂತದ್ದು ಗೊತ್ತಾಗಿಯೇ ಮುಖ್ಯ ಮಂತ್ರಿ ಸದಾನಂದ ಗೌಡ ಆತುರಕ್ಕೆ ಬಿದ್ದರು. ಇಲ್ಲದಿದ್ದರೆ ಕನ್ನಡ ಓರಾಟಗಾರರೇಕೆ ಜೈಲು ಪಾಲಾಗುತ್ತಿದ್ದರು?

ಅಷ್ಟಕ್ಕೂ ನಿತ್ಯನ ಅಡ್ಡೆಗೆ ನುಗ್ಗಿದ ಕಸ್ತೂರಿ ಕನ್ನಡ ವೇದಿಕೆಯ ನಾಯಕ ರೇಷ್ಮೆ ಸೀಮೆ ರಮೇಶನೆಂಬ ವಸೂಲಿ ವೀರರ ಹೊರತಾಗಿ ಬೇರೆಲ್ಲ ಕನ್ನಡ ಸಂಘಟನೆಗಳು ಏಕೆ ತೆಪ್ಪಗಿದ್ದವು?



...ಾನು ಇಂಥ ಹೇಳಿಕೆ ಕೊಟ್ಟರೆ ಅದರ ಪರಿಣಾಮ ...ತ್ತದೆ ಎಂಬ ಬಗ್ಗೆ ಪರಿಜ್ಞಾನವುಳ್ಳವರು. ಯಾರೇ ...ಬ್ಬರನ್ನು ಏಕಾಏಕಿ ಅರೆಸ್ಟ್ ಮಾಡಿ, ಯಾವುದೋ ...ವೊಂದಕ್ಕೆ ಬೀಗಹಾಕಿ ಎನ್ನುವ ಅಧಿಕಾರ ...ಂತ್ರಿಗಿಲ್ಲ. ಹಾಗೊಮ್ಮೆ ಯಾರೇ ವ್ಯಕ್ತಿಯ ವಿರುದ್ಧ ...ದಾಖಲಾಗಿದ್ದರೆ ಆ ಠಾಣೆಯ ಪೊಲೀಸ್ ಅಧಿಕಾರಿ ...ಬಹುದೇ ಹೊರತು ಕೋರ್ಟು ವಿಚಾರಣೆ ನಡೆಸಿ ...ಸಮಾಜಕ್ಕೆ ಹಾನಿಕರ ಮತ್ತು ಕಾನೂನುಬಾಹಿರ ...ೂತ್ತಾದ ಮೇಲೆಯೇ ಬೀಗ ಹಾಕಲು ಪೊಲೀಸರಿಗೆ ... ಆದೇಶ ನೀಡಬೇಕು.

ಹಳ್ಳಕ್ಕೆ ಬಿದ್ದ ಸಿಎಂ

...ಮುಖ್ಯಮಂತ್ರಿ ಸಂಬಂಧಪಟ್ಟವರು ತಮ್ಮ ಕೆಲಸ ...ಷಾದ್ದರಿಂದ ತಾನು ತಲೆಕೆಡಿಸಿಕೊಂಡೆ ಅಂದಿದ್ದು ...ತ್ರಿ ಅಶೋಕ್ ಮತ್ತು ಅರಣ್ಯ ಮಂತ್ರಿ ಯೋಗೇಶ್ವರ್ ... ಗೃಹ ಮಂತ್ರಿ ಅಶೋಕ್ ನಿತ್ಯಾನಂದನ ಬೆನ್ನಿಗೆ ...ರೆಂಬುದು, ಮಂತ್ರಿ ಯೋಗೇಶ್ವರ್ ಪರ ...ದ್ದಾರೆಂಬುದು ಈ ಹೊತ್ತಿಗಾಗಲೇ ಸದಾನಂದ ... ಗ್ಯಾರಂಟಿಯಾಗಿತ್ತು. ತನ್ನ ಸಂಪುಟದ ಇಬ್ಬರು ...ಳು ನಿತ್ಯಾನಂದನ ಪರವಾಗಿದ್ದದ್ದು ಗೊತ್ತಾಗಿಯೂ ...ದಾನಂದ ಗೌಡ ತಾನೊಬ್ಬ ವಕೀಲ ಮತ್ತು ...ಮಂತ್ರಿ ಎಂಬುದನ್ನೂ ಮರೆತು ನಿತ್ಯಾನಂದನನ್ನು ...ವಂತೆ, ಆತನ ಅಡ್ಡೆಯನ್ನು ಮುಚ್ಚಿಸುವಂತೆ ...ದ್ದು?

...ಖ್ಯಮಂತ್ರಿಯ ಅಂತರಂಗ ಮತ್ತು ಟೀವಿ ...ನಾಗಳ ಕುತಂತ್ರವನ್ನು ಅತೀ ಹತ್ತಿರದಿಂದ ...ಒಬ್ಬರು ಹೇಳುವಂತೆ, ಇಬ್ಬರು ಪ್ರಮುಖ ಟೀವಿ ...ಸ್ಥರು ಜೂನ್ 11 ರ ಸೋಮವಾರ ಬೆಳಗ್ಗೆಯೇ ...ಮಂತ್ರಿ ಸದಾನಂದ ಗೌಡರಿಗೆ ಫೋನ್ ಮಾಡಿ; ...ಸಗೆ ಅಶೋಕ್ ಮತ್ತು ಯೋಗೇಶ್ವರ್ ಕುಮ್ಮಕ್ಕು ...ವೆಂದೂ, ನಿತ್ಯನಿಂದ ಅವರಿಬ್ಬರಿಗೆ ಕೋಟಿಗಟ್ಟಲೇ ...ಸಂದಾಯವಾಗಿದೆಯೆಂದೂ, ನೀವೇನಾದರೂ ಈ ...ಲ್ಲಿ ಆತನ ವಿರುದ್ಧ ಕ್ರಮ ಜರುಗಿಸದೇ ಹೋದರೆ ...ಮ್ಮ ವಿರುದ್ಧ ನಿಲ್ಲಬೇಕಾಗುತ್ತೆ ಎಂದೂ ಧಮಕಿ ...ದ್ದರೆ!

ಟೀವಿಗಳ ಮುಖ್ಯಸ್ಥರ ಇಂಥ ಧಮಕಿಯ ಜೊತೆಗೆ ಅಡ್ವಾಣಿ ಮಾನಸಪುತ್ರನಂತಿರುವ ಬಿಜೆಪಿಯ ರಾಷ್ಟ್ರನಾಯಕನೊಬ್ಬ ಕೂಡ ನಿತ್ಯಾನಂದನನ್ನು ಒದ್ದೋಡಿಸುವಂತೆ ಮುಖ್ಯಮಂತ್ರಿಗೆ ದುಂಬಾಲು ಬಿದ್ದಿದ್ದನಂತೆ!

ಇದನ್ನೆಲ್ಲ ಲೆಕ್ಕ ಹಾಕಿದ ಸದಾನಂದ ಗೌಡರಿಗೆ ಒಂದು ಸಂಗತಿ ನಿಚ್ಚಳವಾಗಿತ್ತು. ಅದೆಂದರೆ ನಿತ್ಯಾನಂದನ ಬೆನ್ನಿಗೆ ಬಿದ್ದಿರುವುದು ಕೇವಲ ಕನ್ನಡ ಓರಾಟಗಾರರಾಗಲಿ, ಎರಡು ಪ್ರಮುಖ ನ್ಯೂಸ್ ಚಾನಲ್ಲುಗಳಷ್ಟೇ ಅಲ್ಲ, ಇದಕ್ಕಿಂತಲೂ ಮುಖ್ಯವಾಗಿ ಆರ್ಟ್ ಆಫ್ ಲೀವಿಂಗ್‌ನ ರವಿಶಂಕರ್ ಗುರೂಜಿ!

ಪೇಜಾವರನ ಪಿತ್ತೂರಿ

ನಿತ್ಯಾನಂದ ಬಿಡದಿಗೆ ಬಂದ ಮೇಲೆ ಆತನ 'ವರ್ಚಸ್ಸು', 'ಯೋಗ', 'ಪ್ರಾವೀಣ್ಯ', 'ಪಾಂಡಿತ್ಯ'ಗಳಿಂದಾಗಿ ಆರ್ಟ್ ಆಫ್ ಲೀವಿಂಗ್ ಡಲ್ಲು ತೊಡೆಯಲಾರಂಭಿಸಿತು. ಕನಕಪುರ ರಸ್ತೆಯಲ್ಲಿರುವ ರವಿಶಂಕರನ ಆಶ್ರಮಕ್ಕೆ ಈ ಹಿಂದೆ ಸಿಕ್ಕಾಪಟ್ಟೆ ವಿದೇಶಿ ಭಕ್ತರು ಬರುತ್ತಿದ್ದವರು ಈಗ ನಿತ್ಯಾನಂದನ ಆಶ್ರಮಕ್ಕೆ ಮುಗಿಬಿದ್ದಿದ್ದರು. 'ಯೋಗ', 'ಕುಂಡಲಿನಿ'ಯ ವಿಷಯಕ್ಕೆ ಬಂದರೆ ರವಿಶಂಕರ್ ಗುರೂಜಿಗಿಂತಲೂ ನಿತ್ಯಾನಂದನ ಕೈಯೇ ಮೇಲಾಗಿತ್ತು. ವಿದೇಶಗಳಿಂದ ಹರಿದುಬರುತ್ತಿದ್ದ ದುಡ್ಡು ಮಾತ್ರವಲ್ಲದೆ ದೇಶವಿದೇಶಗಳಲ್ಲಿ ಆರ್ಟ್ ಆಫ್ ಲೀವಿಂಗ್‌ನ್ನು ಮೀರಿಸಿ ಧ್ಯಾನಪೀಠ ಬೆಳೆಯುತ್ತಿತ್ತು. ಸೆಕ್ಸ್ ವೀಡಿಯೋ ಅಸಹ್ಯ ಮಾಡಿಕೊಂಡು ಜೈಲಿಗೆ ಹೋಗಿ ಬಂದರೂ ನಿತ್ಯಾನಂದನ ಮಾರುಕಟ್ಟೆ ಮಾತ್ರ ಕುಸಿದಿರಲಿಲ್ಲ.

ಇಂಥ ಪರಿಸ್ಥಿತಿಯಲ್ಲೇ ಪತ್ರಿಕೆ ಮತ್ತು ಟೀವಿ ಎರಡನ್ನೂ ನಡೆಸುವ ರಾಜ್ಯಸಭಾ ರಾಜಕಾರಣಿಗೆ ಪೇಜಾವರರಿಂದ ದೂರೊಂದು ಬಂದಿದೆ. ತಾನು ಪಂಕ್ತಿ ಭೋಜನವನ್ನು ಸಮರ್ಥಿಸಿದ್ದರ ವಿರುದ್ಧ ನಿಮ್ಮ ಪತ್ರಿಕೆಯ ಮುಖ್ಯಸ್ಥ ನನ್ನ ತೇಜೋವಧೆಗಿಳಿದಿದ್ದಾನೆ. ಅಂಥವನನ್ನು ನೀವು ಇನ್ನೂ ಇಟ್ಟುಕೊಂಡಿದ್ದೀರಲ್ಲ ಇದಕ್ಕಿಂತ ಪಾಪಬೇಕೆ?

ಪೇಜಾವರರ ಛಿಟ್ಟಿಂಗ್ ಕೇಳಿದ್ದೇ ತಡ ಟೀವಿ-ಪತ್ರಿಕೆಯ ಮಾಲೀಕರು ಟೀವಿಯ ಮುಖ್ಯಸ್ಥರನ್ನು ಮತ್ತು ಕೇಸರಿ ಪ್ರತಾಪಿ ವರದಿಗಾರನನ್ನು ಕಿತ್ತೆಸೆಯುವ ಕಾರ್ಯಾಚರಣೆಗಿಳಿದಿದ್ದಾರೆ. ಈ ಸುದ್ದಿಯು ಗೊತ್ತಾಗಿ ತಮ್ಮ ಹಾಲಿ ಮಾಲೀಕನಿಗೆ ತೀರ ಆತ್ಮೀಯರಾದ ರವಿಶಂಕರ್ ಗುರೂಜಿಯನ್ನು ಹಿಡಿದಿದ್ದಾರೆ. ರವಿಶಂಕರ್ ಗುರೂಜಿಗೆ ಇದೇ ಬೇಕಿತ್ತು. ಪತ್ರಿಕೆ-ಟೀವಿ ಧಣಿಗೆ, ಪೂಸಿ ಹೊಡೆದು ತೇಪೆ ಹಾಕಿದ್ದೇ ಅಲ್ಲದೆ 'ಆಯ್ತಪ್ಪಾ, ನಿಮಗೇನೋ ನಾನು ಈ ಸಹಾಯ ಮಾಡ್ದೆ, ಆದ್ರೆ ನಿಮ್ಮಿಂದ ನನಗೊಂದು ಸಹಾಯ ಆಗಬೇಕಲ್ಲ' ಎಂದು ಆರ್ಟ್ ಆಫ್ ರವಿಶಂಕ್ರ ರಾಗತೆಗೆದಿದ್ದಾನೆ.

ನೋಡ್ರಪ್ಪಾ ಆ ನಿತ್ಯಾನಂದನ್ನ ಮೊದಲು ಇಲ್ಲಿಂದ ಒದ್ದೋಡಿಸ್ರೀ.....! ಅವನು ಇಲ್ಲಿರುವವರೆಗೆ ನಾವ್ಯಾರೂ ತಲೆ ಎತ್ತಿ ತಿರುಗುವಂತಿಲ್ಲ ಎಂದು ಆರ್ಟಾಫ್ ರವಿಶಂಕ್ರ ರಣವೀಳ್ಯ ಕೊಟ್ಟಿದ್ದಾನೆ. ಇದೇ ರವಿಶಂಕರ್ ಪರವಾಗೇ ಬಿಜೆಪಿಯ ಅನಂತನಾಯಕನೊಬ್ಬ ಸದಾನಂದ ಗೌಡರಿಗೆ ನಿತ್ಯನ ವಿರುದ್ಧ ಕಿವಿಯೂದಿದ್ದು. ಇಂಥ ಒತ್ತಡ ತಾಳದೇ ಗಾಬರಿಗೆ ಬಿದ್ದ ಮುಖ್ಯಮಂತ್ರಿ ವಿವೇಕ ಕಳಕೊಂಡು ದುಡುಕಿನ ಆದೇಶ ಕೊಟ್ಟು ಬಿಟ್ಟಿದ್ದು, ಅವನನ್ನು ಬಂಧಿಸಿ, ಆಶ್ರಮಕ್ಕೆ ಬೀಗ ಹಾಕಿ ಎಂದಿದ್ದು.

ಕಾಂಡೋಮ್.....!

ನಾಳೆ ಮುಖ್ಯಮಂತ್ರಿಯ ಅವಿವೇಕಿ ಆದೇಶ ದಿಂದಾಗಿಯೇ ನನಗೆ ಅಪಾಟ ನಷ್ಟವಾಯಿತು, ಮಾನಹಾನಿ ಯಾಯ್ತು, ಪ್ರಕರಣ ನ್ಯಾಯಾಲಯದಲ್ಲಿರುವಾಗ ಕೋರ್ಟಿನ ವಿವೇಚನೆಯನ್ನೂ ಮೀರಿ ನನ್ನನ್ನು ಬಂಧಿಸುವಂತೆ ಆದೇಶ ಹೊರಡಿಸಿದ್ದರಿಂದಾಗಿ ನ್ಯಾಯಾಲಯದ ಉಲ್ಲಂಘನೆಯಾಯ್ತು ಎಂದೆಲ್ಲ ನಿತ್ಯಾನಂದ ಕೋರ್ಟಿಗೆ ಹೋದನೆಂದರೆ ಮುಖ್ಯಮಂತ್ರಿಗೆ ಕೋರ್ಟು ಛೀಮಾರಿ ಹಾಕುತ್ತದೆ.

ಅಷ್ಟಕ್ಕೂ ನಿತ್ಯಾನಂದನ ಮೇಲೆ ಟೀವಿ ವರದಿಗಾರ ಹನುಮಕ್ಕನವರ್ ಕೊಟ್ಟ ಬೆದರಿಕೆ ಮತ್ತು ನಿಂದನೆಯ ಕೇಸು ಬಿಟ್ಟರೆ ಬೇರೆ ಪ್ರಕರಣಗಳೇ ಇರಲಿಲ್ಲ. ಇದು ಕೂಡ ಪೊಲೀಸರೇ ಜಾಮೀನು ಕೊಡಬಹುದಾದ ಕೇಸು. ಇದೊಂದೇ ಕಾರಣಕ್ಕೆ ನಿತ್ಯಾನಂದನನ್ನು ಬಂಧಿಸಿ, ಬೀಗಮುದ್ರೆ ಹಾಕಿ ಎಂದೆಲ್ಲ ಮುಖ್ಯಮಂತ್ರಿ ಆದೇಶ ಕೊಟ್ಟರೆಂದರೆ, ನಾಳೆ ನಿತ್ಯಾನಂದ ಪೊಲೀಸರು ಮುಖ್ಯಮಂತ್ರಿಯ ಮುಖ ಉಳಿಸಲೆಂದೇ ಕಾಂಡೋಮ್, ಸೆಕ್ಸ್ ಸೀಡಿಗಳು ಮತ್ತು ಗಾಂಜಾ ಪೊಟ್ಟಣಗಳನ್ನು ಆಶ್ರಮದಲ್ಲಿ ತಂದಿಟ್ಟರು ಎಂದು ಸಲೀಸಾಗಿ ವಾದಿಸುತ್ತಾನೆ. ಕಾಮುಕ ಸನ್ಯಾಸಿಯೊಬ್ಬನಿಗೆ ಸರ್ಕಾರವೇ ಅನುಕೂಲ ಮಾಡಿಕೊಟ್ಟಂತಾಯಿತಲ್ಲ.

ನಿತ್ಯಾನಂದ ಕಾಮುಕ, ವಂಚಕ, ಕೇಡಿ ಎಂಬ ಬಗ್ಗೆ ಎರಡು ಮಾತಿಲ್ಲ. ಅಂಥವನಿಂದ ಜನ ಮೋಸ ಹೋಗದ ಹಾಗೆ ಮುಗ್ಧ ಮಹಿಳೆಯರು ಆತನಿಗೆ ಬಲಿಯಾಗದ ಹಾಗೆ ಕ್ರಮ ಕೈಗೊಳ್ಳಬೇಕಾದದ್ದು ಪೊಲೀಸರು ಮತ್ತು ಸರ್ಕಾರದ ಕರ್ತವ್ಯ. ಆದರೆ ಯಾರ ಹಿತಾಸಕ್ತಿಗಾಗಿ, ಯಾವ ಲಾಭಕ್ಕಾಗಿ ಇದೆಲ್ಲ ನಡೆಯುತ್ತಿದೆ?

• ರಾ. ಸೋಮನಾಥ್




ದಾಳಿಯಿಟ್ಟ ಹೋರಾಟಗಾರರು

ಚಿತ್ರದುರ್ಗ: ಮಂಜುನಾಥರಿಗೆ ಕೈ ಸಿಕ್ಕರೆ ಬಿಜೆಪಿಗೆ ಕೆಸರು ಗ್ಯಾರಂಟಿ

ಈ ಬಾರಿ ಚಿತ್ರದುರ್ಗ ಜಿಲ್ಲೆಯ ಆರು ಕ್ಷೇತ್ರಗಳಲ್ಲೂ ಜಯಗಳಿಸುವ ಇರಾದೆ ಕಾಂಗ್ರೆಸ್ ಪಕ್ಷದ್ದಾಗಿದೆ. ಈಗಾಗಲೇ ಹೊಳಲ್ಕೆರೆಯಿಂದ ಹೆಚ್.ಆಂಜನೇಯ, ಹೊಸದುರ್ಗದಿಂದ ಗೋವಿಂದಪ್ಪ, ಮೊಳಕಾಲ್ಮೂರಿನಿಂದ ಗೋಪಾಲಕೃಷ್ಣ, ಚಳ್ಳಕೆರೆಯಿಂದ ಟಿ.ರಘುಮೂರ್ತಿ ಅಭ್ಯರ್ಥಿಗಳು ಎಂಬುದು ಸ್ಪಷ್ಟವಾಗಿದ್ದರೂ, ಹಿರಿಯೂರು ಮತ್ತು ಚಿತ್ರದುರ್ಗದಿಂದ ಯಾರು ಕಾಂಗ್ರೆಸ್ ಅಭ್ಯರ್ಥಿ ಎಂದು ಸ್ಪಷ್ಟವಾಗಿಲ್ಲ. ಚಿತ್ರದುರ್ಗದಿಂದ ಈ ಬಾರಿ ಲಿಂಗಾಯತ ಸಮುದಾಯದವರಿಗೇ ಟಿಕೆಟು ನೀಡಬೇಕೆಂಬ ಒತ್ತಡವಿದೆ. ಅದು ಕೈಗೂಡಿದರೆ ಭೀಮಸಮುದ್ರದ ಮಂಜುನಾಥರಿಗೆ ಕಾಂಗ್ರೆಸ್ ಟಿಕೆಟ್ ಸಿಗುವ ಸಾಧ್ಯತೆಗಳೀವೆ. ಹಾಗಾದರೆ ಬಿಜೆಪಿ ಮತ್ತು ಜೆಡಿಎಸ್ ಪಕ್ಷಗಳಿಗೆ ಚಿತ್ರದುರ್ಗದಿಂದ ಗೆಲ್ಲುವುದು ಕಷ್ಟವಾಗಬಹುದು.


ಚಿತ್ರದುರ್ಗದ ರಾಜಕಾರಣ ರಂಗೇರಿದೆ. ಕಾಂಗ್ರೆಸ್-ಬಿಜೆಪಿ- ಜೆಡಿಎಸ್ ಪಕ್ಷಗಳಲ್ಲಿ ಮುಂಬರುವ ವಿಧಾನಸಭಾ ಚುನಾವಣೆಗೆ ಟಿಕೆಟು ತಮ್ಮದಾಗಿಸುವ ಭರಾಟೆ ಬಿರುಸುಗೊಂಡಿದೆ. ಸಾರ್ವಜನಿಕ ರಂಗದಿಂದ ಮರೆಯಾದವರೆಲ್ಲರಿಗೂ ಈಗ ಸಾರ್ವಜನಿಕರ ನೆನಪಾಗುತ್ತಿದೆ.


ಸದ್ಯ ಚಿತ್ರದುರ್ಗ ವಿಧಾನಸಭಾ ಕ್ಷೇತ್ರವನ್ನು ಎಸ್.ಕೆ. ಬಸವರಾಜನ್ ಶಾಸಕರಾಗಿ ಆಳುತ್ತಿದ್ದಾರೆ. ಶತಮಾನಗಳ ಇತಿಹಾಸವಿರುವ ಮುರುಘಾರಾಜೇಂದ್ರ ಮಠಕ್ಕೆ ಆಡಳಿತಾಧಿಕಾರಿಯಾಗಿ ಹುರಿದು ಉಪ್ಪು ಹಾಕಿದ ಈತನಿಗೆ ಕ್ಷೇತ್ರದ ಮತದಾರರನ್ನಾಳುವುದೇನು ಕಷ್ಟದ ಕೆಲಸವೇನಲ್ಲ. 2008ರ ಚುನಾವಣೆಯಲ್ಲಿ ಅವರ ಗೆಲುವೇನು ಅಷ್ಟು ಸುಲಭದ್ದಾಗಿರಲಿಲ್ಲ.

ಕಾಂಗ್ರೆಸ್ಸಿನ ತಿಪ್ಪಾರೆಡ್ಡಿಯ ಎದುರು ಜೆಡಿಎಸ್‌ನಿಂದ ನಿಂತು ಗೆದ್ದು ಬಂದದ್ದೇ ಬಸವರಾಜನ್‌ನ ಸಾಧನೆ. ಅದನ್ನು ಬಿಟ್ಟರೆ ಆತನಿಂದ ಕ್ಷೇತ್ರಕ್ಕೆ ಬೇರೇನೂ ಮಾಡಲಾಗಿಲ್ಲ.


ಉಮಾಪತಿ


ಬಸವರಾಜನ್


ಮಂಜುನಾಥ್


ಶಿವಪ್ಪ

ಬಸವರಾಜನ್ ಬೃಹನ್ಮಠದ ಆಡಳಿತಾಧಿಕಾರಿಯಾಗಿ ಮುರುಘಾ ಶರಣರಿಗಿಂತ ಬರಪೂರ ಮೆರೆದವನು. ಶರಣರು ಮತ್ತು ಬಸವರಾಜನ್ ನಡುವೆ ಮೌನದೊಳಗಿನ ಗುದ್ದಾಟ ಬಯಲು ಆಲಯದೊಳಗೂ ಧೂಳೆಬ್ಬಿಸಿದ್ದು ಈಗ ಇತಿಹಾಸ. ಶರಣರ ಚೈಲ್ಡಿಶ್ ವರ್ತನೆಗೂ, ಬಸವರಾಜನ್‌ನ ಚಕ್ರವರ್ತಿ ತಿಕ್ಕಲುತನಗಳಿಗೂ ಎಂದೂ ತಾಳೆಯಾಗಿರಲಿಲ್ಲ, ಅದೆಲ್ಲಿಗೆ ಈ ಇಬ್ಬರ ನಡುವಿನ ಗದ್ದಲ ತಲುಪಿತ್ತೆಂದರೆ ಬಸವರಾಜನ್ ಶರಣರನ್ನೇ ಪೀಠದಿಂದ ಉಚ್ಚಾಟಿಸಿ ತನ್ನ ಹುಕುಮ್ಮಿಗೆ ಗೋಣಾಕುವ ಮನುಷ್ಯನಿಗೆ ಕಾವಿ ತೊಡಿಸಿ ಶರಣ ಎಂದು ನಾಮಕರಣ ಮಾಡುವ ತುದಿಯವರೆಗೂ ತಲುಪಿತ್ತು. ಮಠದ ಆವರಣದೊಳಗೆ ಸಾಂಸಾರಿಕ ವಾತಾವರಣವಿರಬಾರದೆಂಬ ಸನ್ಯಾಸಿ ಪರಂಪರೆಯ ಧಾರ್ಮಿಕ ನಿಯಮವಿದ್ದರೂ ಬಸವರಾಜನ್ ಮಠದ ಆವರಣದೊಳಗೇ ಮನೆ ಮಾಡಿ ಸಂಸಾರ ಹೂಡಿದ್ದ. ಇದು ಭಕ್ತರನ್ನು ಗಲಿಬಿಲಿಗೀಡು ಮಾಡಿತ್ತು. ಅದೇ ಒಂದು ದಿನ ಭುಗಿಲೆದ್ದು ಇಡೀ ಮಠವೇ ಸಾರ್ವಜನಿಕರ ಚರ್ಚೆಗೆ ಗ್ರಾಸವಾಗಿತ್ತು. ಇದೆಲ್ಲ ಹಳೆಯ ಕತೆ. ಇಂಥಾ ಸರ್ವಾಧಿಕಾರಿಯ ಕೈಗೆ ಚಿತ್ರದುರ್ಗದ ಶಾಸಕತ್ವ ಬಂದಿದೆ ಎಂದರೆ ಮತದಾರನ ಗತಿ ಏನಾಗಿರಬೇಡ?

ಬಸವರಾಜನ್ ಮಠದಲ್ಲಿದ್ದಾಗಲೇ ರಾಜಕಾರಣ ಶುರುಮಾಡಿದ್ದವನು. ಅವನ ಹಿಂದೆ ಠಳಾಯಿಸುತ್ತಿದ್ದ ಮುಠಾಳರು ಬಸವರಾಜನ್ ಮೆದುಳಿನಾಳಕ್ಕೆ ರಾಜಕಾರಣದ ಐಲುಗಳನ್ನು ತುಂಬಿದ್ದರು. ಅಷ್ಟೇ ಅಲ್ಲದೆ 'ನೀನೇ ಬಾಸು' ಎಂಬ ಅಹಂಕಾರದ ಪರಿಭಾಷೆ ಬಸಿದೇ ಅಟ್ಟಕ್ಕೇರಿಸಿದ್ದರು. ಮಠದ ಪರಂಪರೆಯನ್ನು ಧಿಕ್ಕರಿಸಿ ರಾಜಕೀಯ ರಂಗವನ್ನು ಪ್ರವೇಶಿಸಿದ ಬಸವರಾಜನ್ ಒಮ್ಮೆ ಇದೇ ದುರ್ಗದ ವಿಧಾನಸಭಾ ಕ್ಷೇತ್ರದಿಂದ ಅದೇ ತಿಪ್ಪಾರೆಡ್ಡಿಯ ವಿರುದ್ಧ ಇದೇ ಜೆಡಿಎಸ್‌ನಿಂದ ಸ್ಪರ್ಧಿಸಿ ಪಲ್ಟಿಹೊಡೆದಿದ್ದ.

ಈತನ ಚುನಾವಣಾ ಗೆಲುವಿನ ಲೆಕ್ಕಾಚಾರ ಹೇಗಿತ್ತೆಂದರೆ ಮಠದ ಭಕ್ತರೇ ಲಕ್ಷಾಂತರ ಮಂದಿ ಇದ್ದಾರೆ. ಅವರು ತನ್ನ ಕೈಬಿಡಲಾರರು ಎಂದೇ ನಂಬಿದ್ದ. ಆದರೆ ಆತ ನಂಬಿದ್ದ ಮತದಾರರೇ ಬಸವರಾಜನ್ ಕೈಗೆ ಸೋಲಿನ ಚೊಂಬು ಕೊಟ್ಟಿದ್ದರು. ಈ ಸೋಲಿನ ನಂತರ ತನ್ನ ಅದೃಷ್ಟಕ್ಕೆ ಶನಿ ಅಟಕಾಯಿಸಿಕೊಂಡಿದ್ದಾನೆಂದು ಭಾವಿಸಿದ ಬಸವರಾಜನ್ ತನ್ನ ಧರ್ಮಪತ್ನಿ ಸೌಭಾಗ್ಯ ಬಸವರಾಜನ್‌ರನ್ನು ಜಿಲ್ಲಾ ಪಂಚಾಯತಿ ಚುನಾವಣೆಗೆ ನಿಲ್ಲಿಸಿದ. ಸೌಭಾಗ್ಯ ಬಸವರಾಜನ್ ಗಂಡನಷ್ಟು ಉಡಾಫೆ ಚಕ್ರವರ್ತಿಯ ತಿಕ್ಕಲಾಗಿರಲಿಲ್ಲ. ತನ್ನ ಮಾತು, ನಡೆ, ವರ್ತನೆಗಳಿಂದಲೇ ವಿಜಯಿಯಾಗಿ ಅಧ್ಯಕ್ಷೆಯಾಗಿ ಚಿತ್ರದುರ್ಗ ಜಿಲ್ಲಾ ಪಂಚಾಯತಿಯನ್ನು ಸುಗಮವಾಗಿಯೇ ನಡೆಸಿದ ಆಕೆ ಒಳ್ಳೆ ಹೆಸರು ಮಾಡಿದ್ದು ಸುಳ್ಳೇನಲ್ಲ. ಹಾಗೆ ನೋಡಿದರೆ ಗಂಡ-ಹೆಂಡತಿಯ ಚುನಾವಣಾ ವೆಚ್ಚ ಬರಿಸಿದ್ದು ಇದೇ ಮುರುಘಾಮಠ. ಆಗಿನ್ನೂ ಬಸವರಾಜನ್‌ನ ಕೈಯಲ್ಲಿ ಮಠದ ಜುಟ್ಟು ಇತ್ತು. ಅದೇ ಮಠದ ಕಾಂಪೌಂಡಿನಲ್ಲೇ ಆತನ ಮನೆಯೂ ಇತ್ತು.

ಮಠದಿಂದ ಹೊರಬಂದ ನಂತರ ನಿರುದ್ಯೋಗಿಯಾದ ಬಸವರಾಜನ್ ರಾಜಕಾರಣವನ್ನೇ ಉದ್ಯೋಗವನ್ನಾಗಿ ಆಯ್ಕೆ ಮಾಡಿಕೊಂಡ. 2008ರ ಚುನಾವಣೆ ಸಂದರ್ಭದಲ್ಲಿ ಜೆಡಿಎಸ್ ಆತನನ್ನು ಕೈಬೀಸಿ ಕರೆದು ಕಣಕ್ಕಿಳಿಸಿತು. ಈತನ ಗೆಲುವಿಗೆ ಮೂರು ಕಾರಣಗಳು ಸಹಕರಿಸಿದವು. ಒಂದು ಶಾಸಕನಾಗಿದ್ದ ತಿಪ್ಪಾರೆಡ್ಡಿಯ ದುಡ್ಡಿನ ದುರಹಂಕಾರ, ಎರಡು ಬಸವರಾಜನ್ ಮೇಗಿನ ಆಕಾಲಿಕ ಸಾವಿನ ಸಿಂಪಥಿ, ಮೂರು ಮಠ ಬಿಟ್ಟ ಬಗ್ಗೆ ಮತದಾರರಲ್ಲಿ ಕನಿಕರ. ಇವೆಲ್ಲ ಆತ ಚುನಾವಣೆಯಲ್ಲಿ ಗೆಲ್ಲಲು ಕಾರಣವಾಗಿದ್ದವು.

ಅದೇನೇ ಇರಲಿ, ಗೆದ್ದು ಬಂದ ಮೇಲಾದರೂ ಬಸವರಾಜನ್ ಕರಾರುವಾಕ್ಕಾದ ರಾಜಕಾರಣ ಮಾಡಿದನಾ ಅಂತ ಅವಲೋಕಿಸಿದರೆ ಅದೂ ಇಲ್ಲ. ಈತನದ್ದು ಏನಿದ್ದರೂ ವಕ್ರ ಬುದ್ಧಿಯ ಧಿಮಾಕಿನ ರಾಜಕಾರಣ. ತಾನು ಗೆದ್ದಿದ್ದರೂ ರಾಜ್ಯದಲ್ಲಿ ಬಿಜೆಪಿ ಸರಕಾರ ಇರುವುದರಿಂದ ಜನರಿಗೆ ತಾನು ಕೆಲಸ ಮಾಡಲು ಆಗುತ್ತಿಲ್ಲ ಎಂಬ ಸಬೂಬನ್ನು ಹೇಳುತ್ತಲೇ ತನ್ನ ಶಾಸಕತ್ವದ ಅವಧಿಯನ್ನು ಕಳೆದದ್ದು ವಾಸ್ತವ. ಈಗ ಅದೇ ಆತನ ಇಡೀ ರಾಜಕಾರಣದ ಬದುಕಿಗೆ ಕಂಟಕವಾಗಿದೆ. ಮುಂಬರುವ ಚುನಾವಣೆ ಈತನಲ್ಲಿ ದಿಗಿಲುಹುಟ್ಟಿಸಿದೆ. ಮಠ ಮತ್ತು ಹೆಂಡತಿಯ ನೆರಳಿನಲ್ಲೇ ರಾಜಕಾರಣ ಮಾಡುತ್ತಾ ಬಂದಿರುವ ಬಸವರಾಜನ್ ಈಗ ರಾಜಕೀಯ ಭ್ರಮನಿರಸನದಲ್ಲಿದ್ದಾರೆ.

ಹಾಗೆ ನೋಡಿದರೆ ಚಿತ್ರದುರ್ಗದ ರಾಜಕಾರಣದಲ್ಲಿ ಏಕಾಂತಯ್ಯ ಮೂರು ಬಾರಿ ಶಾಸಕರಾಗಿ, ಮಂತ್ರಿಯಾಗಿ ರಾಜಕೀಯಕ್ಕೆ ಗೌರವ ತಂದವರು. ಈಗ ಅವರು ರಾಜಕಾರಣದ ಸಹವಾಸವೇ ಬೇಡ ಎನ್ನುತ್ತಿದ್ದರೂ ಮುಂಬರುವ ಚುನಾವಣೆಯಲ್ಲಿ ಅವರೇ ಕಾಂಗ್ರೆಸ್ಸಿನಿಂದ ಸ್ಪರ್ಧಿಸುವ ವರ್ತಮಾನವಿದೆ. ಹಿರಿಯ ರಾಜಕಾರಣಿ ಎಚ್.ರಂಗನಾಥರು ನಿಧನರಾದ ನಂತರ ಚಿತ್ರದುರ್ಗ ಜಿಲ್ಲೆಯಲ್ಲಿ ಕಾಂಗ್ರೆಸ್ ರಾಜಕಾರಣ ಹಳಿತಪ್ಪಿತೆನ್ನುವ ಮಾತು ಉತ್ಪ್ರೇಕ್ಷೆಯಲ್ಲ. ಜಿಲ್ಲಾ ಕಾಂಗ್ರೆಸ್‌ನಲ್ಲಿ ರಂಗನಾಥರು ಹಿರಿಯ ಯಜಮಾನನ ಸ್ಥಾನದಲ್ಲಿದ್ದವರು. ಈಗ ಅವರು ಆಕ್ರಮಿಸಿದ್ದ ಸ್ಥಾನ ಶೂನ್ಯಪೀಠವಾಗಿದೆ.

ಕಾಂಗ್ರೆಸ್‌ನಲ್ಲಿ ಇದ್ದ ತಿಪ್ಪಾರೆಡ್ಡಿ ಅಧಿಕಾರದ ಆಸೆಯಿಂದ ಬಿಜೆಪಿಗೆ ವಲಸೆ ಹೋಗಿ ಎಂಎಲ್‌ಸಿ ಆಗಿಬಿಟ್ಟ. ಆತನ ಅಣ್ಣ ಅಶ್ವತ್ಥರೆಡ್ಡಿ ಕಾಂಗ್ರೆಸ್ಸಿನಲ್ಲೇ ಇದ್ದರೂ, ನಾಲ್ಕುಬಾರಿ ಶಾಸಕರಾಗಿ ಮಂತ್ರಿಯಾಗಿ ಅಧಿಕಾರ ಅನುಭವಿಸಿದ್ದರೂ ಒಮ್ಮೆ ಬಿಜೆಪಿ ಅಂಗಳ ಮೆಟ್ಟಿ ಮತ್ತೆ ಕಾಂಗ್ರೆಸ್ಸಿಗೆ ಹಿಂದಿರುಗಿರುವವರು. ಆದರೀಗ ಅವರು ಚಲಾವಣೆಯಲ್ಲಿಲ್ಲದ ನಾಣ್ಯದಂತಾಗಿದ್ದಾರೆ.

ದಿಕ್ಕಿಲ್ಲದ ಕಾಂಗ್ರೆಸ್ಸಿಗೆ ಜಿಲ್ಲಾ ಅಧ್ಯಕ್ಷರಾಗಿ ಸೇತೂರಾಂ ಅವರನ್ನು ತರಲಾಯಿತು. ಹಳೆ ತಲೆಮಾರಿನ ಸೇತೂರಾಂ ಜಿಲ್ಲಾ ಕಾಂಗ್ರೆಸ್ಸಿನ ಚುರುಕನ್ನು ತಂದಿರುವುದು ಸುಳ್ಳಲ್ಲ. ಹಾಗಾಗಿಯೆ ಈಗ ಜಿಲ್ಲೆಯಲ್ಲಿ ಹೊಸ ಗಾಳಿ ಬೀಸುತ್ತಿದೆ.

ಈ ಮಧ್ಯೆ ಭೀಮಸಮುದ್ರದ ಅಡಿಕೆ ಧಣಿ ಜಿ.ಎಸ್.ಮಂಜುನಾಥ ಕಾಂಗ್ರೆಸ್ಸಿನಿಂದ ಟಿಕೆಟ್ ಪಡೆಯುವ ಆಕಾಂಕ್ಷಿಗಳ ಸಾಲಿನಲ್ಲಿದ್ದಾರೆ. ಈ ಹಿಂದೆ ಮಂಜುನಾಥ್ ಹೊಳಲ್ಕೆರೆಯಲ್ಲಿ ಸ್ಪರ್ಧಿಸಿ ಉಮಾಪತಿಯ ವಿರುದ್ಧ ಸೋತಿದ್ದರು. ಹಾಗೆಯೇ 2008ರಲ್ಲಿ ಚಿತ್ರದುರ್ಗದಿಂದ ಬಿಜೆಪಿ ಅಭ್ಯರ್ಥಿಯಾಗಿ ಸ್ಪರ್ಧಿಸಿ ಸೋತಿದ್ದರು. ಈಗ ಇವರು ಕಾಂಗ್ರೆಸ್ಸಿನ ಅಂಗಳದಲ್ಲಿ ತನ್ನ ರಾಜಕೀಯ ಅಸ್ತಿತ್ವವನ್ನು ಹುಡುಕಿಕೊಳ್ಳಲು ಪ್ರಯತ್ನಿಸುತ್ತಿದ್ದಾರೆ.

ಈ ಮಂಜುನಾಥರದ್ದು ವಿಚಿತ್ರ ಕ್ಯಾರೆಕ್ಟರು. ಮಾತಿನಲ್ಲಿ ನೇರಾನೇರ. ನಿಷ್ಠೂರವಾದಿ. ಈತ ಸಾಧು ಲಿಂಗಾಯತರಾದರೂ ಸ್ವಜಾತಿ ಪ್ರೇಮವನ್ನು ಬೆಳೆಸಿಕೊಂಡವರಲ್ಲ. ಅಷ್ಟೇ ಅಲ್ಲ, ಸಾಧು ಲಿಂಗಾಯತರ ಮಠವನ್ನು ಮೀರಿ ಬೆಳೆಯುವ ಗುಣವೂ ಇವರಲ್ಲಿ ಇದೆ. ಅವರ ಇಂತಹ ಗುಣವೇ ಅವರು ಎರಡು ಬಾರಿ ಸೋಲುವುದಕ್ಕೆ ಕಾರಣವಾಗಿತ್ತು.

ಮಂಜುನಾಥರ ತಂದೆ ಶಿವಪ್ಪ 1952 ರಿಂದ 57 ರತನಕ ಪಕ್ಷೇತರರಾಗಿ ಚಿತ್ರದುರ್ಗದ ಶಾಸಕರಾಗಿದ್ದರು. ನಂತರ 57 ರಿಂದ 62 ರ ತನಕ ಕಾಂಗ್ರೆಸ್ಸಿನ ಜೋಡಿ ಗುರುತಿನಡಿ ಸ್ಪರ್ಧಿಸಿ ಎರಡನೇ ಬಾರಿಗೂ ಶಾಸಕರಾಗಿ... ರಾಜಕೀಯ ಮನೆತನ ಅನುಭವ ಮತ್ತು ತಂದೆ... ಹೆಸರಿದ್ದರೂ ಮಂಜುನಾಥರ ಸ್ಪರ್ಧೆ ಅ... ಸುಲಭವಾಗಿರುವುದಿಲ್ಲ.

ಹತ್ತಿರದ ಹೊಳಲ್ಕೆರೆ ವಿಧಾನ ಸಭಾ ಕ್ಷೇತ್ರ ಪರಿ... ಜಾತಿಗೆ ಮೀಸಲಾಗಿದ್ದೇ ತಡ ಉಮಾಪತಿ ಚಿತ್ರದು... ಕ್ಷೇತ್ರಕ್ಕೆ ಕಾಲಿಟ್ಟಿದ್ದಾನೆ. ಈ ಉಮಾಪತಿ ಈ ಹಿ... ಹಿರಿಯೂರಿನಲ್ಲಿ ತನ್ನ ರಾಜಕೀಯ ಭವಿಷ್ಯವನ್ನು ಪರಿ... ಒಡ್ಡಿದ್ದ. ಅಲ್ಲಿ ಸೋತ ನಂತರ ಜೆಡಿಎಸ್‌ನ ಕದತ... ಒಂದೆರಡು ಬಾರಿ ದೇವೇಗೌಡ ಮತ್ತು ಕುಮಾರಸ್ವಾ... ಪಕ್ಷ ವೇದಿಕೆಗಳಲ್ಲಿ ಕುಳಿತು ಹಿಂದುಳಿದ ನಾಯಕನ ಪೋ... ಕೊಟ್ಟಿದ್ದು. ಆದರೆ ಅಲ್ಲಿಯೂ ಆತ ಸಲ್ಲದವನಾಗಿ ... ಶ್ರೀರಾಮುಲು ಪಾದಾರವಿಂದಗಳಿಗೆ ಬಿದ್ದಿದ್ದಾನೆ.

ಮುಂದಿನ ಚುನಾವಣೆಯ... ಶ್ರೀರಾಮುಲು ಆಶೀರ್ವಾದ ಪ... ಬಿಎಸ್‌ಆರ್ ಅಭ್ಯರ್ಥಿಯಾಗ... ಹವಣಿಸುತ್ತಿದ್ದಾನೆ. ನಾಲ್ಕು ... ಕಾಂಗ್ರೆಸ್ಸಿನಿಂದ ಶಾಸಕನಾಗಿ ಹೊಳಲ್ಕೆರೆಯ... ಹದಿನೈದು ವರ್ಷಗಳ ಕಾಲ ಮುಂದಾಯಿ... ಅನುಭವ ಮತ್ತು ಅದರೊಂ... ಮಾಡಿಕೊಂಡ ದುಡ್ಡಿದೆ ಈ ಉಮಾಪ... ಬಳಿ. ಅಧಿಕಾರದ ಆಶೆ ಮತ್ತು ಪುಕ್ಕಟೆಯ... ಬಂದ ದುಡ್ಡು ಆತನನ್ನು ಸುಮ್ಮನೆ ಕೂ... ಬಿಡುತ್ತಿಲ್ಲ. ಚಿತ್ರದುರ್ಗ ಬಿಟ್ಟರೆ ಈತ... ಬೇರೆಲ್ಲೂ ಸ್ಪರ್ಧಿಸುವ ಅವಕಾಶವಿಲ್ಲ. ಬ... ಬರಲಿರುವ ಚುನಾವಣೆಯೇ ಈತನ ಅಂತಿಮ ರಾಜಕೀ... ಪ್ರಯತ್ನವಾಗಬಹುದು ಎಂದು ಜನ ಮಾತನಾಡುತ್ತಿರುವು... ಸುಳ್ಳಲ್ಲ.

ಮಾಜಿ ಮಂತ್ರಿ ಏಕಾಂತಯ್ಯ ಜನತಾ ಪಕ್ಷ... ಚಿತ್ರದುರ್ಗದಲ್ಲಿ ರಾಜಕೀಯವಾಗಿ ಹೆಸರು ಮಾಡಿರುವ... ಪ್ರಾಮಾಣಿಕತೆಗೆ ಹೆಸರಾದವರು. ಕೊನೆಗೆ ದೇವೇಗೌ... ಸರ್ವಾಧಿಕಾರಕ್ಕೆ ಮತ್ತು ಕುಟುಂಬ ರಾಜಕಾರಣಕ್ಕೆ ಬೇ... ಕಾಂಗ್ರೆಸ್ಸಿನ ಕಡೆ ಮುಖ ಮಾಡಿದವರು. ... ವರ್ಷಾನುವರ್ಷಗಳಿಂದ ಇವರು ಚಿತ್ರದುರ್ಗ... ಸಾರ್ವಜನಿಕರಿಂದಲೇ ದೂರವಾಗಿದ್ದು ಸಕ್ರಿ... ರಾಜಕಾರಣದಿಂದ ಒಂದು ರೀತಿಯಲ್ಲಿ ನಿವೃತ್ತರಾಗಿದ್ದ... ಆದರೆ ಚುನಾವಣೆ ಹತ್ತಿರ ಬರುತ್ತಿದ್ದಂತೆ ಏಕಾಂತ... ಇದ್ದಕ್ಕಿದ್ದಂತೆ ಗರಿಗೆದರಿಕೊಂಡಿದ್ದಾರೆ. ಟಿಕೆಟಿಗಾಗಿ ... ಶುರುಹಚ್ಚಿಕೊಂಡಿದ್ದಾರೆ.

ಈ ಬಾರಿ ಚಿತ್ರದುರ್ಗ ಜಿಲ್ಲೆಯ ಆರು ಕ್ಷೇತ್ರಗಳ... ಜಯಗಳಿಸುವ ಇರಾದೆ ಕಾಂಗ್ರೆಸ್ ಪಕ್ಷದ್ದಾಗಿದೆ. ಈಗಾ... ಹೊಳಲ್ಕೆರೆಯಿಂದ ಹೆಚ್.ಆಂಜನೇಯ, ಹೊಸದುರ್ಗ... ಗೋವಿಂದಪ್ಪ, ಮೊಳಕಾಲ್ಮೂರಿನಿಂದ ಗೋಪಾಲ... ಚಳ್ಳಕೆರೆಯಿಂದ ಟಿ.ರಘುಮೂರ್ತಿ ಅಭ್ಯರ್ಥಿಗಳು ಎಂಬ... ಸ್ಪಷ್ಟವಾಗಿದ್ದರೂ, ಹಿರಿಯೂರು ಮತ್ತು ಚಿತ್ರದುರ್ಗ... ಯಾರು ಕಾಂಗ್ರೆಸ್ ಅಭ್ಯರ್ಥಿ ಎಂದು ಸ್ಪಷ್ಟವಾ... ಚಿತ್ರದುರ್ಗದಿಂದ ಈ ಬಾರಿ ಲಿಂಗಾಯ... ಸಮುದಾಯದವರಿಗೇ ಟಿಕೆಟು ನೀಡಬೇಕೆಂಬ ಒತ್ತಡ... ಅದು ಕೈಗೂಡಿದರೆ ಭೀಮಸಮುದ್ರದ ಮಂಜುನಾ... ಕಾಂಗ್ರೆಸ್ ಟಿಕೆಟ್ ಸಿಗುವ ಸಾಧ್ಯತೆಗಳೀವೆ. ಹಾಗ... ಬಿಜೆಪಿ ಮತ್ತು ಜೆಡಿಎಸ್ ಪಕ್ಷಗಳಿಗೆ ಚಿತ್ರದುರ್ಗ... ಗೆಲ್ಲುವುದು ಕಷ್ಟವಾಗಬಹುದು.

ಸದ್ಯ ಬೆಂಗಳೂರಿನ ಕಾಂಗ್ರೆಸ್ಸಿನಲ್ಲಿ ನಡೆಯುತ್ತಿ... ವರ್ತಮಾನಗಳು ಬರಲಿರುವ ಚಿತ್ರದುರ್ಗ ವಿಧಾನ... ಚುನಾವಣೆಯ ದಿಕ್ಕನ್ನು ಬದಲಿಸಬಹುದು. ಇತ್ತೀ... ಲಿಂಗಾಯತರು ಹಿರಿಯ ರಾಜಕಾರಣಿ ಶಾಮನೂ... ಶಿವಶಂಕರಪ್ಪನವರ ಮನೆಯಲ್ಲಿ ಸಭೆ ನಡೆಸಿದ್ದಾರೆ. ಕಾಂಗ್ರೆ... ಲಿಂಗಾಯತರಿಗೆ ಪ್ರಾತಿನಿಧ್ಯವಿಲ್ಲ ಎಂಬ ಅಸಮಾ... ಹೊರಬಿದ್ದಿದೆ. ಪರಿಣಾಮವಾಗಿ ಕಾಂಗ್ರೆಸ್ಸಿ... ಬದಲಾವಣೆಯ ಗಾಳಿ ಬೀಸಿದರೆ ಚಿತ್ರದುರ್ಗದಿಂದ ... ಲಿಂಗಾಯತರ ಕ್ಯಾಂಡಿಡೇಟ್ ಗ್ಯಾರಂಟಿಯಾಗಬಹು... ಹಾಗಾದರೆ ಮಾತ್ರ ಹೊಳಲ್ಕೆರೆ ಮತ್ತು ಹೊಸದು... ಕ್ಷೇತ್ರಗಳು ಕಾಂಗ್ರೆಸ್ಸಿಗೆ ಒಲಿಯಲು ಸಾಧ್ಯ. ಯಾಕೆ... ಕಳೆದ ಬಾರಿ ಚಿತ್ರದುರ್ಗದ ಯಾವ ಕ್ಷೇತ್ರದಿಂದ... ಲಿಂಗಾಯತ ಸಮುದಾಯದವರಿಗೆ ಕಾಂಗ್ರೆಸ್ಸು ಟಿ... ನೀಡಿರಲಿಲ್ಲ. ಈ ಭಾಗದಲ್ಲಿ ವೀರಶೈವ ಅದರಲ್ಲೂ ... ಲಿಂಗಾಯತರ ಮತಗಳೇ ಚುನಾವಣೆಯಲ್ಲಿ ನಿರ್ಣಾ... ಮಾತ್ರ ವಹಿಸುತ್ತವೆ.

ಒಟ್ಟಾರೆ ಚಿತ್ರದುರ್ಗ ವಿಧಾನಸಭಾ ಕ್ಷೇತ್ರ ದಿನ-ದಿ... ರಂಗೇರುತ್ತಿದೆ. ಹಾಲಿ ಶಾಸಕ ಬಸವರಾಜನ್‌ಗೆ ದ... ಹುಟ್ಟಿದೆ.

• ಟಿ.ಎನ್.ಷಣ್...

ಅಡನಾಡಿಗಳ ನಡುವೆ ಬಸವರಾಜನ್

ಹಾಲಿ ಶಾಸಕ ಬಸವರಾಜನ್ ಖಾಸಗಿ ಮತ್ತು ಸಾರ್ವಜನಿಕ ಜೀವನದ ನಡುವೆ ವ್ಯತ್ಯಾಸವೇ ಗೊತ್ತಿಲ್ಲದವನಂತೆ ವರ್ತಿಸುತ್ತಿರುವುದೇ ಆತನ ಅವಸಾನಕ್ಕೆ ಕಾರಣವಾಗುತ್ತಿದೆ. ಜಿಲ್ಲಾ ಪಂಚಾಯತಿ, ಚಿತ್ರದುರ್ಗ ನಗರ ಸಭೆಗಳಲ್ಲಿ ಜೆಡಿಎಸ್ ಪಕ್ಷದ ಸದಸ್ಯರಿದ್ದರೂ ಅವರ ಮೇಲೆ ಹಿಡಿತ ಮತ್ತು ವಿಶ್ವಾಸ, ಎರಡನ್ನೂ ಬಸವರಾಜನ್ ಕಳೆದುಕೊಂಡಾಗಿದೆ. ಬಸವರಾಜನ್‌ಗೆ ಅಧಿಕಾರಿಗಳೊಂದಿಗೆ ಹಾಲುಜೇನಿನ ಸಂಬಂಧವಿದ್ದರೂ ಸ್ವಂತ ಪಕ್ಷದ ನಾಯಕರ, ಕಾರ್ಯಕರ್ತರ ಮತ್ತು ಮತದಾರರ ವಿಶ್ವಾಸದಿಂದ ಆತ ಮರೆಯಾಗಿದ್ದಾರೆ.

ಕಾಂತರಾಜ ಎಂಬ ನಗರಸಭೆಯ ಮಾಜಿ ಅಧ್ಯಕ್ಷನ ಘಟಿಂಗ ರಾಜಕಾರಣದ ಸಾಂಗತ್ಯ ಇವತ್ತು ಬಸವರಾಜನ್ ವರ್ಚಸ್ಸಿಗೆ ಧಕ್ಕೆ ತಂದಿದೆ. ಈ ಕಾಂತರಾಜ ಮೂಲತಃ ಕಾಂಗ್ರೆಸ್ಸಿಗನಾದರೂ ಕಾಂಗ್ರೆಸ್ಸಿಗನಲ್ಲ. ಸಮಯ ಸಿಕ್ಕರೆ ಊಸರವಳ್ಳಿಯಂತೆ ಬಣ್ಣ ಬದಲಾಯಿಸುವವ. ಕೈ ಪಕ್ಷಕ್ಕೆ ಕೈ ಎತ್ತಿ ಜೆಡಿಎಸ್‌ನ ಹುಲ್ಲಿನ ಹೊರೆ ಹೊತ್ತು ಸಾಕಾಗಿ ಈಗ ಬಿಜೆಪಿಯ ಅಂಗಳಕ್ಕೆ ನೆಗೆದು ಕಮಲದ ದಳಗಳಿಗೆ ನೀರು ಚಿಮುಕಿಸುತ್ತಿದ್ದಾನೆ ಈ ಕಾಂತರಾಜ. ಇಂಥಾ ಅಡನಾಡಿಯನ್ನು ತನ್ನ ಜೊತೆ ಇಟ್ಟುಕೊಂಡಿರುವ ಬಸವರಾಜನ್ ಅದೆಂತಹ ಜನಪರ ರಾಜಕಾರಣ ಮಾಡಲು ಸಾಧ್ಯವಾದೀತು?

ಈಗಾಗಲೇ ನಗರಸಭೆಯಲ್ಲಿ ತಾನೇ ಸೃಷ್ಟಿಸಿದ ರಾದ್ಧಾಂತವನ್ನು ಮೈ ಮೇಲೆಳೆದುಕೊಂಡಿರುವ ಬಸವರಾಜನ್ ರಾಜಕೀಯವಾಗಿ ಚೇತರಿಸಿಕೊಳ್ಳುವುದು ಕಡುಕಷ್ಟ. ಆದ್ದರಿಂದಲೇ ಬಸವರಾಜನ್ ಬರುವ ವಿಧಾನಸಭಾ ಚುನಾವಣೆಯಲ್ಲಿ ಹಿಂದೆ ಸರಿದು ತನ್ನ ಹೆಂಡತಿಯನ್ನು ಕಣಕ್ಕಿಳಿಸಿ ಶಿಖಂಡಿ ರಾಜಕಾರಣ ಮಾಡಲು ಸಿದ್ಧವಾಗಿರುವುದು ಆತನ ಅಸಹಾಯಕತೆಗೆ ಸ್ಪಷ್ಟ ಸಾಕ್ಷಿ ನೀಡುತ್ತಿದೆ.

...ಲ್ಲಿ ಕೂಲಿ ಹೆಂಗಸಿಗೆ ಹೆರಿಗೆ ನೋವೂ ...ಹೀಮ್‌ನ ಮಾನವೀಯತೆಯೂ

...ಓಖಾ ಎಕ್ಸ್‌ಪ್ರೆಸ್. ಮಹಾರಾಷ್ಟ್ರದಿಂದ ಚೆನ್ನೈ ...ರಟಿದ್ದ ರೈಲು. ಉತ್ತರ ಕನ್ನಡದ ಭಟ್ಕಳಕ್ಕೆ ...ತಲುಪಿದಾಗ ಬೆಳಗಿನ 10.30 ರ ಸಮಯ. ... ಜೂನ್ ತಿಂಗಳ ಐದನೇ ದಿನ.

...ಯುತ್ತಿದ್ದ ರೈಲಿನೊಳಗೆ ರಹೀಮ್ ಅಹ್ಮದ್ ...ತನ್ನ ಹೆಂಡತಿ ಮತ್ತು ಮೂವರು ಪುಟ್ಟ-ಪುಟ್ಟ ...ಗೆ ತೂರಿಕೊಳ್ಳುತ್ತಾನೆ. ಮುರ್ಡೇಶ್ವರದ ... ಕಾಲೋನಿಯ ನಿವಾಸಿಯಾದ ರಹೀಮ್ ...ಪೀಡಿತ ಮಡದಿಯನ್ನು ಮಂಗಳೂರಿನ ...ಪತ್ರೆಗೆ ಕರೆದೊಯ್ಯುತ್ತಿದ್ದ.

ಆಚೀಚೆ ಕತ್ತು ತಿರುಗಿಸತೊಡಗಿದ. ಆ ನೋವಿನ ಧ್ವನಿ ರೈಲಿನ ಬುರ್ನಾಸ್ ಸಂಡಾಸಿನಿಂದ ಬರುತ್ತಿತ್ತು. ರಹೀಮ್ ಎದೆಗವುಚಿಕೊಂಡಿದ್ದ ತನ್ನ ಒಂದು ವರ್ಷದ ಮಗುವನ್ನು ಹೆಂಡತಿಯ ಕೈಗಿತ್ತವನೇ ವೇಗವಾಗಿ ಶೌಚಾಲಯದತ್ತ ಧಾವಿಸುತ್ತಾನೆ.

ಕಕ್ಕಸಿನ ಮುಚ್ಚಿದ ಕದದ ಮುಂದೆ ಗಂಡಸೊಬ್ಬ ನಿಂತಿರುತ್ತಾನೆ. ಆತ ಕಾವಲುಗಾರನ ಧರತಿಯಲ್ಲಿದ್ದ. ರಹೀಮ್ ಏನಾಗುತ್ತಿದೆ ಒಳಗೆ ಎಂದು ಕೇಳಿದರೂ ಉತ್ತರಿಸುವುದಿಲ್ಲ. ಇದೆಲ್ಲ ಮಾಮೂಲಿ ಎಂಬಂಥ ಮುಖ ಚಹರೆ ಆ ಗುಡ್ಡಗಾಡು ಗಂಡಸಿನದು. ಆದರೂ

ಮರೆತು ಆ ಆದಿವಾಸಿ ಕುಟುಂಬದ ಹೆಂಗಸಿಗೆ ನೆರವಾಗುವ 'ರಿಸ್ಕ್' ತೆಗೆದುಕೊಳ್ಳುತ್ತಾನೆ. ಆ ಸಾಬಿ ಧರ್ಮ-ಕರ್ಮ ಯಾವುದೂ ನೋಡದೆ ಮನುಷ್ಯತ್ವದಿಂದ ವರ್ತಿಸುತ್ತಾನೆ. ಗರ್ಭಿಣಿ ಹೆಂಗಸನ್ನು ಅನಾಮತ್ತಾಗಿ ಎತ್ತಿಕೊಂಡು ಪ್ರಯಾಣಿಕರ ಸೀಟಿಗೆ ತರುತ್ತಾನೆ. ಸುತ್ತಮುತ್ತಲಿನ ಸುಮಾರು 20 ಹೆಂಗಸರಿಗೆ ಗರ್ಭಿಣಿಗೆ ಸಹಾಯ ಮಾಡುವಂತೆ ಪರಿಪರಿಯಾಗಿ ಬೇಡುತ್ತಾನೆ. ಒಬ್ಬಳೇ ಒಬ್ಬ ಹೆಂಗಸೂ ಸ್ತ್ರೀ ಸಹಜ ಕಾಳಜಿ ತೋರಿಸದೇ ಕಲ್ಲು ಹೃದಯದವರಂತೆ ಅಡ್ಡ ಮುಖ ಹಾಕಿಕೊಳ್ಳುತ್ತಾರೆ. ಅಲ್ಲಿದ್ದ ಹೆಂಗಸರು-ಗಂಡಸರಿಗೆ ರಿಕ್ವೆಸ್ಟ್ ಮಾಡಿ ಪ್ರಯೋಜನವಿಲ್ಲ


ರಹೀಮನಲ್ಲಿ ಏನೋ ಧನ್ಯತಾಭಾವ. ಇಷ್ಟಾದರೂ ಆತನಿಗೆ ಸಮಾಧಾನ ಆಗುವುದಿಲ್ಲ. ಹಸಿ ಬಾಣಂತಿ-ಹಸುಗೂಸನ್ನು ಯಾವುದಾದರೂ ಆಸ್ಪತ್ರೆ ಸೇರಿಸಬೇಕೆಂದು ರಹೀಮ್ ಚಡಪಡಿಸುತ್ತಾನೆ. ಆತನ ಹತ್ತಿರ ಕಾಸಿರುವುದಿಲ್ಲ. ರೈಲಿನ ಆಚೀಚೆಯ ಬೋಗಿಗೆಲ್ಲ ಹೋಗಿ ಪ್ರಸವದ ಕರುಣಾಜನಕ ಕತೆ ಹೇಳಿ ಹಣ ಸಹಾಯ ಕೇಳುತ್ತಾನೆ. ಬರೋಬ್ಬರಿ ನಾಲ್ಕು ಸಾವಿರ ರೂಪಾಯಿ ಒಟ್ಟಾಗುತ್ತದೆ. ರೈಲಿನ ಚಾಲಕನ ಬಳಿಗ್ಹೋಗಿ ಮಂಗಳೂರು ಬಂದಾಗ ವೀಲ್‌ಚೇರ್ ವ್ಯವಸ್ಥೆ ಇರುವಲ್ಲಿ ಟ್ರೈನ್ ನಿಲ್ಲಿಸಿ ಉಪಕಾರ ಮಾಡು ಅನ್ನುತ್ತಾನೆ. ಮಂಗಳೂರು ಸೇರಿದಾಗ ವೀಲ್ ಕುರ್ಚಿ ಮೇಲೆ ಬಾಣಂತಿಯನ್ನು ಕೂಡ್ರಿಸಿ ನಿಲ್ದಾಣದ ಒಂದು ಮೂಲೆಗೊಯ್ದು ನಿಲ್ಲಿಸುತ್ತಾನೆ. ಓಮ್ನಿ ಕಾರೊಂದನ್ನು ಬಾಡಿಗೆಗೆ ಪಡೆದು ಬಾಣಂತಿ-ಪಾಪುವನ್ನು ಮಂಗಳೂರಿನ ವೆನ್‌ಲಾಕ್ ಆಸ್ಪತ್ರೆಗೆ ಸೇರಿಸುತ್ತಾನೆ ರಹೀಮ್ ಭಾಯ್! ಆಗವನಿಗೆ ಏನೋ ಸಮಾಧಾನ; ಕರ್ತವ್ಯ ಮುಗಿಸಿದ ತೃಪ್ತಿ!!

ರಹೀಮ್ ನೆರವಾದ ಮಹಿಳೆ ಯಾರು ಗೊತ್ತಾ?





ರಹೀಮ್



ಆಸ್ಪತ್ರೆಯಲ್ಲಿ ತಾಯಿ ಮತ್ತು ಮಗು

...ಬುಕ್.... ಚುಕ್‌ಬುಕ್ ಎನ್ನುತ್ತ ರೈಲು ...ಹೋಗುತ್ತಿತ್ತು. ಒತ್ತೊತ್ತಾಗಿ ಕುಂತಿದ್ದ-ನಿಂತಿದ್ದ ...ರ ಮುಖ ಇನ್ನೊಬ್ಬರು ನೋಡುತ್ತಿದ್ದರೂ ...ಾಗಿದ್ದರು. ಏನೋ ಒಂಥರಾ ಬಿಗುಮಾನ. ...-ಸುಖಕ್ಕೆ ಯಾರೂ ಸ್ಪಂದಿಸದ ಸ್ವಾರ್ಥ. ಆ ...ುಲ್ಲಿ "ಯಾರಿಗೂ ಯಾರೂ ಇಲ್ಲ.... ಯಾರಿ ...ವೇನಿಲ್ಲ" ಎಂಬಂಥ ವಾತಾವರಣ. ಹೊರಗಿನ ...ಏತ್ತು ಒಳಗಿನ ಬಿಸಿಯುಸಿರಲ್ಲಿ ಅಸಹಾಯಕ ...ರ ಆರ್ತನಾದ ಬರೆಯುತ್ತಿತ್ತು. ಒಮ್ಮೆ ಆಕ್ರಂದನ ...ತ್ತಿತ್ತು; ಮರು ಘಳಿಗೆಯೇ ಕ್ಷೀಣಿಸುತ್ತಿತ್ತು. ...ಆ ಯಾತನೆಯ ಕೂಗಿನತ್ತ ಹೊರಳುತ್ತಲೇ

...ಪಕ್ಕಾ ಸಂಪ್ರದಾಯವಾದಿ ಸಾಬಿಯಂತೆ ಕಾಣಿ ...ಹೀಮ್‌ನ ಎದೆಯಲ್ಲಿ ಮಾತ್ರ ತವಡು ಕುಟ್ಟಿ ...ತ್ತು. ಯಾಕೆ ಆ ಹೆಂಗುಸು ಗೋಳಾಡುತ್ತಿದ್ದಾಳೆ! ... ಆಕ್ರಂದನ ತೂರಿಬರುತ್ತಿದೆಯೆಂದು ರಹೀಮ್

ಪಟ್ಟುಬಿಡದ ರಹೀಮ್ ಆತನನ್ನು ಗದರಿಸಿ ಪಕ್ಕಕ್ಕೆ ನಿಲ್ಲಿಸುತ್ತಾನೆ. ಬಾಗಿಲು ಒಂದೇಸಮನೆ ಬಡಿಯುತ್ತಾನೆ. ಸ್ವಲ್ಪ ಹೊತ್ತಿನಲ್ಲಿ ಸಂಡಾಸಿನ ಕದ ತೆರೆದುಕೊಳ್ಳುತ್ತದೆ. ಆ ಗಬ್ಬುನಾರುವ ಸಂಡಾಸಿನೊಳಗಿನ 'ದೃಶ್ಯ' ಕಂಡು ರಹೀಮ್ ಒಮ್ಮೆ ಬೆಚ್ಚಿಬೀಳುತ್ತಾನೆ!

ಆದಿವಾಸಿ ಕುಟುಂಬದವಳಂತೆ ಕಾಣಿಸುತ್ತಿದ್ದ ಬಡ ಕೂಲಿ ಹೆಂಗಸೊಬ್ಬಳು ಹೆರಿಗೆ ನೋವು ತಾಳಲಾರದೆ ಒದ್ದಾಡುತ್ತಿದ್ದಳು. ಕಕ್ಕಸಿನಲ್ಲಿ ಹಾಸಿದ್ದ ಸೀರೆ ತುಂಡೊಂದರ ಮೇಲೆ ಮಲಗಿದ್ದ ಆಕೆಯ ಗೋಳು ಹೇಳತೀರದಾಗಿತ್ತು. ರೈಲಿನ ಹೊಯ್ದಾಟಕ್ಕೆ ಆಕೆಯ ಯಾತನೆ ನೂರ್ಮಡಿ ಸುತ್ತಿತ್ತು! ಹೆಂಡತಿಯ ತಲೆ ಹಿಡಿದುಕೊಂಡು ಸಂತೈಸುತ್ತಿದ್ದ ಆಕೆಯ ಗಂಡನೂ ಬಿಕ್ಕುತ್ತಿದ್ದ. ಆ ನತದೃಷ್ಟ ಕುಟುಂಬದ ಕಿತ್ತು ತಿನ್ನುವ ಬಡತನ, ಅಸಹಾಯಕತೆ, ತುತ್ತಿನ ಚೀಲ ತುಂಬಿಕೊಳ್ಳಲು ಕೂಲಿ ಅರಸಿ ಹೊರಟಿದ್ದ ಆ ಮಂದಿಯ ಪಾಡು ರಹೀಮನಿಗೆ ಅರ್ಥವಾಗುತ್ತದೆ.

ರಹೀಮ್ ತನ್ನ ಕಷ್ಟ-ಕೋಟಲೆಯನ್ನೆಲ್ಲ ಆ ಕ್ಷಣ


ಎಂಬುದು ರಹೀಮ್‌ಗೆ ಖಾತ್ರಿಯಾಗುತ್ತದೆ. ತಾನೇ ಹೆರಿಗೆ ಮಾಡಿಸಲು ಮುಂದಾಗುತ್ತಾನೆ. ರಹೀಮ್‌ಗೆ ಆತನ ಹೆಂಡತಿ ಗೈಡ್ ಮಾಡುತ್ತಾಳೆ. ರಹೀಮ್ ಮೆಲ್ಲ- ಮೆಲ್ಲಗೆ ಗರ್ಭಿಣಿಯ ಹೊಟ್ಟೆಯಲ್ಲಿದ್ದ ಶಿಶುವನ್ನು ಪುಶ್ ಮಾಡುತ್ತಾನೆ. ಅಲ್ಲಾನನ್ನು ನೆನೆಯುತ್ತಾ ರಹೀಮನೂ ತಿಣಕಾಡುತ್ತಾನೆ. ಸ್ವಲ್ಪ ಹೊತ್ತಿನಲ್ಲೇ ಗಂಡು ಶಿಶುವಿನ ಅಳುವಿನ ನಾದ ರೈಲಲ್ಲಿ ತುಂಬಿದೆ. ಅಷ್ಟಕ್ಕೆ ಹೆರಿಗೆ. ಕೆಲಸ ಮುಗಿಯುವುದಿಲ್ಲ. ಹೊಕ್ಕಳು ಬಳ್ಳಿ ಕತ್ತರಿಸಬೇಕಿತ್ತು. ಇದು ಅರ್ಥವಾಗದೇ ರಹೀಮ್ ಕಂಗೆಡುತ್ತಾನೆ. ಆಗಾತನ ಹೆಂಡತಿ "ಯಾರಲ್ಲಾದರೂ ಬ್ಲೇಡು ಅಥವಾ ಕತ್ತರಿ ಇದೆಯಾ ನೋಡಿ... ಹೊಕ್ಕಳು ಬಳ್ಳಿ ಕಟ್ ಮಾಡಿ...." ಎನ್ನುತ್ತಾಳೆ.

ರಹೀಮ್ ಬ್ಲೇಡು-ಕತ್ತರಿಗಾಗಿ ಇಡೀ ಬೋಗಿ ತಡಕಾಡುತ್ತಾನೆ. ಗುಜರಾತಿಯೊಬ್ಬನ ಬಳಿ ಪುಟ್ಟ ಕತ್ತರಿಯೊಂದು ಸಿಗುತ್ತದೆ. ಆ ಕತ್ತರಿಯಿಂದ ಹೊಕ್ಕಳು ಬಳ್ಳಿ ಬೇರ್ಪಡಿಸುತ್ತಾನೆ. ಸ್ವಚ್ಛತೆಯ ಕೆಲಸವನ್ನೂ ಅರ್ಪಣಾಭಾವದಿಂದ ಮಾಡುತ್ತಾನೆ; ಒಂದು ಜೀವ ಎರಡು ಜೀವಗಳಾದಾಗ

ಆಕೆ ಮಹಾರಾಷ್ಟ್ರದ ದೋಡಾ ಜಿಲ್ಲೆಯ ಶ್ರೀಪುರ ಎಂಬಲ್ಲಿಯ ಲಲಿತಾ ದಾರಾಸಿಂಗ್. ಈ ಬುಡಕಟ್ಟು ಮಂದಿಗೆ ಹೊಟ್ಟೆ ಪಾಡಿಗಾಗಿ ದೇಶದ ಮೂಲೆಮೂಲೆ ಅಲೆಯುವುದೇ ಜೀವನ! ಕೂಲಿ ಕಂಟ್ರಾಕ್ಟರ್ ಇವರಿಗೆ ಅನ್ನದ ಆಸೆ ತೋರಿಸಿ ಎಲ್ಲೆಲ್ಲಿಗೋ ಕಳಿಸಿ ಕಾಸು ಮಾಡಿಕೊಳ್ಳುತ್ತಾನೆ. ಈ ಮಂದಿ ಒಂದೊತ್ತಿನ ಗಂಜಿಗಾಗಿ ಜೀವ ಸವೆಸುತ್ತಾರೆ. ಈ ಆದಿವಾಸಿ ಜನರಿಗೆ ಅಭಿವೃದ್ಧಿಶೀಲ ದೇಶ ಭಾರತದಲ್ಲಿ ಇಂಥ ರೈಲು-ಬಸ್-ಬೀದಿ ಬದಿಯ ಹೆರಿಗೆ ಮಾಮೂಲಿ! ಎರಡು-ಮೂರೇ ದಿನದಲ್ಲಿ ಬಾಣಂತಿ ಕೂಲಿಗೆ ಸಜ್ಜಾಗಲೇಬೇಕು. ಅಷ್ಟೊತ್ತಿಗಾಗಲೇ ಕಂಟ್ರಾಕ್ಟರ್ ಸಾಹೇಬ ಧುತ್ತನೆ ಎದುರಾಗುತ್ತಾನೆ!


ಮನಕಲಕುವ ಮಹತ್ಕಾರ್ಯ ಮಾಡಿದ ರಹೀಮ್ ಮುರುಡೇಶ್ವರದ ರಥಬೀದಿಯಲ್ಲಿರುವ ತನ್ನ ಫ್ಯಾನ್ಸಿ ಸ್ಟೋರಿನಲ್ಲಿ ಗಿರಾಕಿಗಾಗಿ ಕಾಯುವಂತೆ ಕಟುಕ ಕೂಲಿ ಕಂಟ್ರಾಕ್ಟರ್ ಲಲಿತಾಳಂಥ ನತದೃಷ್ಟರು ಹೆರಿಗೆಯಾದಲ್ಲೇ ಕಾಯುತ್ತಿರುತ್ತಾರೆ... ಎಂಥ ದುರಂತ!!

• ನೆಹುಪ



ಕೇರಳ ಮೂಲದ ಒ.ಟಿ.ರವೀಂದ್ರನ್ ಅವರು ಹಲವಾರು ದಶಕಗಳ ಕಾಲ ಚೆನ್ನೈನಲ್ಲಿ ಪರಿಸರ ತಜ್ಞರಾಗಿ, ಉದ್ಯಾನ ಕುಶಲಿಯಾಗಿ, ಲ್ಯಾಂಡ್‌ಸ್ಕೇಪ್ ಡಿಸೈನರ್ ಆಗಿ ಕೆಲಸ ಮಾಡಿದವರು. ಅವೆಲ್ಲಕ್ಕಿಂತ ಮುಖ್ಯವಾಗಿ ಅವರು ಗಿಡ, ಮರ ಮತ್ತು ಹೂಗಳ ಚಿತ್ರಗಳನ್ನು ಪೇಯಿಂಟ್ ಮಾಡುತ್ತಿದ್ದ ಅದ್ಭುತ ಕಲಾವಿದರಾಗಿದ್ದರು. 1984ರಲ್ಲಿ ರವೀಂದ್ರ ಅವರು ಪೇಯಿಂಟ್ ಮಾಡಿದ್ದ ಹೂಗಳ ಕಲಾಕೃತಿಗಳು ಅಮೆರಿಕದ ಪ್ರತಿಷ್ಠಿತ ಕಾರ್ನಗಿ ಆರ್ಟ್ ಸೆಂಟರ್‌ನಲ್ಲಿ ಪ್ರದರ್ಶನಗೊಂಡಾಗ ಅಲ್ಲಿನ ವಿಮರ್ಶಕರೊಬ್ಬರು "ಅಮೆರಿಕದ ಪಕ್ಷಿಸಂಕುಲಕ್ಕೆ ಜೇಮ್ಸ್ ಆಡುಬೋನ್ ಅವರ ಕೊಡುಗೆ ಎಷ್ಟು ಮುಖ್ಯವೋ ಅಷ್ಟೇ ಮುಖ್ಯ ಭಾರತದ ಹೂ ಗಿಡಗಳಿಗೆ ರವೀಂದ್ರ ಅವರ ಕಲಾ ಕೊಡುಗೆ" ಎಂದು ಪ್ರಶಂಸಿಸಿದ್ದರು. "ನಿಮ್ಮ ಹೆಸರಿನಲ್ಲಿರುವ ಒ ಮತ್ತು ಟಿ ಅಕ್ಷರಗಳ ಅರ್ಥವೇನು?" ಎಂದು ಯಾರಾದರು ಕೇಳಿದರೆ "ಒ ಅಂದರೆ ಆರ್ಕಿಡ್ ಹೂಗಳು ಮತ್ತು ಟ ಅಂದರೆ ಟ್ರೀ (ಮರ)" ಎಂದು ಉತ್ತರಿಸುತ್ತಿದ್ದ ರವೀಂದ್ರನ್ ಅವರ ಆರ್ಕಿಡ್ ಹೂಗಳ ನಾಲ್ಕು ಕಲಾಕೃತಿಗಳು 1991ರಲ್ಲಿ ಅಂಚೆಚೀಟಿಯಾಗಿ ಪ್ರಕಟಗೊಂಡಿದ್ದವು. ಅಂಚೆಚೀಟಿ ಸಂಗ್ರಹಕಾರರು ಅವುಗಳನ್ನು ಎಷ್ಟು ಮೆಚ್ಚಿದ್ದರೆಂದರೆ ಅವುಗಳನ್ನ ಒಂದು ಸೆಟ್ ಆಗಿ ವಿವಿಧ ದೇಶಗಳಲ್ಲಿರುವ ಭಾರತದ ಎಂಬಸ್ಸಿಗಳು ಉಡುಗೊರೆಯಾಗಿ ನೀಡುತ್ತಿದ್ದವು. ಇವತ್ತಿಗೂ ರವೀಂದ್ರನ್ ಅವರ ಇಂತಹ ಕಲಾಕೃತಿಗಳು ವಿಶ್ವವಿಖ್ಯಾತಿ ಪಡೆದಿರುವ ಅಮೆರಿಕದ ಸ್ಮಿತ್‌ಸೋನಿಯನ್ ಸಂಗ್ರಹಾಲಯ ಮತ್ತು ಲಂಡನ್ನಿನ ಕೀ ಗಾರ್ಡನ್ಸ್‌ನಲ್ಲಿ ಪ್ರದರ್ಶನಗೊಳ್ಳುತ್ತಿವೆ. ಈಗಲೂ ಚೆನ್ನೈನಲ್ಲಿರುವ ಹಲವಾರು ಮರಗಳನ್ನು ನೆಟ್ಟಿದ್ದ ರವೀಂದ್ರನ್ ಅವರು ನಮ್ಮ ಮೈಸೂರಿನ ಪರಿಸರ ಪ್ರೇಮಿ ಪದ್ಮಾ ಶ್ರೀರಾಮ್ ಅವರಿಗೆ ಆಪ್ತರಾಗಿದ್ದವರು. ಜೊತೆಗೆ ಹೂಗಿಡಗಳ ಬಗ್ಗೆ ಪದ್ಮಾ ಅವರಿಗೆ ಮಾಹಿತಿ ನೀಡಿ ಮಾರ್ಗದರ್ಶನ ಮಾಡುತ್ತಿದ್ದವರು. ರವೀಂದ್ರನ್ ಅವರು 'ದಿ ಹಿಂದು' ಪತ್ರಿಕೆಗೆ ಹೂಗಿಡಗಳ ಬಗ್ಗೆ ಒಂದು ಅಂಕಣವನ್ನು ಬರೆಯುತ್ತಿದ್ದರು. ಅಷ್ಟೇ ಅಲ್ಲ, ಅವರು ಕೆಲವು ಹಾಸ್ಯ ಪ್ರಸಂಗಗಳನ್ನು ಇಂಗ್ಲಿಷ್‌ನಲ್ಲಿ ಬರೆದು ಅವು ಪುಸ್ತಕ ರೂಪದಲ್ಲಿ ಪ್ರಕಟಗೊಂಡಿದ್ದವು. ಈಗ ರವೀಂದ್ರನ್ ಅವರು ಇಲ್ಲ, ಆದರೆ ಪದ್ಮಾ ಶ್ರೀರಾಮ್ ಅವರು ರವೀಂದ್ರನ್ ಅವರು ಬರೆದಿದ್ದ ಹಲವು ಹಾಸ್ಯ ಪ್ರಸಂಗಗಳನ್ನು ಕನ್ನಡಕ್ಕೆ ಅನುವಾದಿಸಿದ್ದಾರೆ. ಇಲ್ಲಿ ಬರುವ ಎಲ್ಲ ಘಟನೆಗಳು ನಡೆಯುವುದು ಚೆನ್ನೈನಲ್ಲಿ. ಅಂತಹ ಹಲವು ಹಾಸ್ಯ ಬರಹಗಳನ್ನು ಈ ವಾರದಿಂದ ಪತ್ರಿಕೆಯಲ್ಲಿ ಪ್ರಕಟಿಸುತ್ತಿದ್ದೇವೆ. ಪದ್ಮಾ ಶ್ರೀರಾಮ್ ಅವರು ಹೇಳುವಂತೆ "ಪತ್ರಿಕೆಯ ಸೀರಿಯಸ್ ಬರಹಗಳ ನಡುವೆ ಇವು ಓದುಗರಿಗೆ ಒಂಥರಾ ಕಚಗುಳಿ ನೀಡುತ್ತವೆ."

ವ್ಯಾಸರ್ಪಡಿ ರೌಡಿ



ಅತ್ಯಂತ ಧಗೆಯ ಮೇ ತಿಂಗಳ ಒಂದು ಬೆಳಗ್ಗೆ ಅತ್ಯಂತ ಕೆಟ್ಟ ಬೈಗುಳಗಳು ಕೇಳಿಸಿ ನಾನು ಎಚ್ಚರಗೊಂಡೆ. ಒಬ್ಬ ಕುಳ್ಳ ದೊಳ್ಳು ಹೊಟ್ಟೆ ಆಸಾಮಿ ನಮ್ಮ ಕಾಂಪೌಂಡ್ ಒಳಕ್ಕೆ ಬಂದು ನನ್ನ ಫ್ಲ್ಯಾಟ್ ಕಡೆ ಕೈ ತೋರುತ್ತ ಬೈಯುತ್ತಿದ್ದ. ಈಗಾಗಲೇ ಅಲ್ಲೊಂದು ಪುಟ್ಟ ಜನಸಂದಣಿ ಸೇರಿ ಅದರೊಳಗೆ ನನ್ನ ಸಹಾಯಕ ಕುಪ್ಪುವೂ ಇದ್ದ.

ಕುಪ್ಪುವನ್ನು ನಾನು ಕರೆದಾಗ ಅವನು ಒಲ್ಲದ ಮನಸ್ಸಿನಿಂದ ಬಂದ. "ಏನು ಇದೆಲ್ಲಾ? ಯಾರಿವನು" ಕೇಳಿದೆ.

"ಅವನು ನಿಮ್ಮ ಮೂಳೆ ಮುರೀತಾನಂತೆ" ಕುಪ್ಪು ಉತ್ತರ ಕೊಟ್ಟ.

"ನೀನು ಭಾಳ ದೊಡ್ಡ ಮನುಷ್ಯನಂಗೆ ಆಡ್ತಿದೀಯಾ, ನೀನ್ಯಾರು ಅಂತ ನಂಗೆ ಗೊತ್ತಿಲ್ವಾ? ಕೆಳಗಿಳಿದು ಬಾರೊ, ನಿನ್ನ ಮೂಳೆ ಮುರಿತೀನಿ" ಎಂದು ದೊಳ್ಳು ಹೊಟ್ಟೆ ಆಸಾಮಿ ಬೈಗುಳಗಳ ಮಳೆ ಸುರಿಸತೊಡಗಿದ.

ಕುಪ್ಪು ಬಹಳ ಸ್ಟೈಲಾಗಿ ಹೇಳಿದ. "ಅವನು ನಿಮ್ಮ ಮೇಲೆ ಒಂದು ಕಂಪ್ಲೇಂಟ್ ಹೇಳ್ತಿದಾನೆ. ನೀವು ಆ ಸೌದೆ ಅಂಗಡಿ ಮಾಲೀಕರ ಮಗಳಿಗೆ ಕಣ್ ಹೊಡೆದಿರಂತೆ. ಅದಕ್ಕೆ ಅವನು ನಿಮಗೆ ಬುದ್ಧಿ ಕಲಿಸಕ್ಕೆ ಬಂದಿದಾನಂತೆ."

"ಕುಪ್ಪು ನೀನು ಹೋಗಿ ನಾನು ಯಾವ ಸೌದೆ ಅಂಗಡಿಯವರ ಮಗಳಿಗೂ ಕಣ್ಣು ಹೊಡೆದಿಲ್ಲ ಎಂದು ಅವನಿಗೆ ಹೇಳು" ಎಂದು ಕುಪ್ಪುಗೆ ಹೇಳಿದೆ.

ಎಲ್ಲ ಗೊತ್ತಿರುವವನ ಹಾಗೆ ವಿಚಿತ್ರವಾಗಿ ನಗೆಮುಖ ಮಾಡಿಕೊಂಡ ಕುಪ್ಪು "ಹಾಗಂತ ನಾನು ಹೇಗೆ ಹೇಳಲಿ ಸಾರ್" ಎಂದು ಹುಸಿನಗೆಯಿಂದ ಮೂತಿ ತಿರುವಿದ.

"ಲೋ ಕುಪ್ಪು, ನಾನು ಯಾವುದೇ ಹುಡ್ಗೀಗೆ ಕಣ್ಣು ಹಾರಿಸುವುದಿರಲಿ, ಒಂದು ಆಲೂಗೆಡ್ಡೆ ಮೂಟೆಗೂ ಕಣ್ಣು ಹೊಡೆದಿಲ್ಲ ಕಣೊ!" ಎಂದು ನಾನು ಹೇಳಿದರೂ ಕುಪ್ಪು ತನ್ನ ದಿವ್ಯ ಮುಗುಳ್ನಗೆ ಬೀರಿದ.

"ನಿಂಗೆ ನಾನ್ಯಾರೂಂತ ಗೊತ್ತಿಲ್ಲ, ನಾನು ವ್ಯಾಸರ್ಪಡಿ ರೌಡಿ! ಕೆಳಗಿಳಿದು ಬಾರೊ. ನಿನ್ ಮೈಮೂಳೆ ಮುರಿಯಕ್ಕೆ ಮುಂಚೆ, ನಿನ್ನ ಹಲ್ಲು ಉದುರಿಸಿ ಕೈಗೆ ಕೊಡ್ತೀನಿ. ಕೆಳಗಿಳಿದು ಬಾರೊ." ವ್ಯಾಸರ್ಪಡಿ ರೌಡಿ ಕೂಗುತ್ತಿದ್ದ.

"ಕುಪ್ಪು ಪೊಲೀಸರನ್ನು ಕರಿ" ನಾನು ಆರ್ಡರ್ ಮಾಡಿದೆ.

"ಏನು ಪ್ರಯೋಜನ. ಪೊಲೀಸ್ ಬರೊ ಅಷ್ಟರಲ್ಲಿ ಅವನು ನಿಮ್ಮ ಮೂಳೆ ಮುರಿದಿರ್ತಾನೆ" ಎಂದು ಕುಪ್ಪು ಎಲ್ಲ ಅರಿತ ಕಾಲಜ್ಞಾನಿಯಂತೆ ಮಾತಾಡಿದ.

ಆ ಮನುಷ್ಯ ನಮ್ಮ ಗೇಟನ್ನು ತೆರೆದಿಟ್ಟದ್ದರಿಂದ ಒಂದು ಕಂದುಕಪ್ಪು ಮಚ್ಚೆಯುಳ್ಳ ಹಸು ಇದೇ ಸಮಯವೆಂದು ಕಳ್ಳನ ಹಾಗೆ ಮೆಲ್ಲಗೆ ನುಗ್ಗಿ ನಮ್ಮ ಮನೆಯ ಕೋಲಿಯಸ್ ಗಿಡಗಳ ಪಾತಿಯಲ್ಲಿ ನಿಂತು ಸುತ್ತಲೂ ಅಜಮಾಯಿಶಿ ನಡೆಸತೊಡಗಿತು.

"ಹಸೂ"........ ನಾನು ಕೂಗಿಕೊಂಡೆ.

ಕುಪ್ಪು ತಟ್ಟನೆ ಅಲ್ಲಿದ್ದ ಹಳೆ ಹಾಕಿಸ್ಟಿಕ್‌ನ್ನು ಸೆಳೆದುಕೊಂಡು ಕೆಳಗಡೆಗೆ ದೌಡಾಯಿಸಿದ. ಅವನು ಸರಸರನೆ ಮೆಟ್ಟಲಿಳಿದು ಬರುತ್ತಿರುವುದನ್ನು ಶ್ರೀಮಾನ್ ವ್ಯಾಸರ್ಪಡಿ ರೌಡಿ ನೋಡಿ ಪಕ್ಕಕ್ಕೆ ಸರಿದ. ಕುಪ್ಪು ಸರಿಯಾಗಿ ಗುರಿಯಿಟ್ಟು ಹಾಕಿಸ್ಟಿಕ್ಕಿನಿಂದ ಹೊಡೆದರೂ ಆ ತಂತ್ರಗಾರ ಹಸು ವಿಮಾರಿಸಿ ಪಕ್ಕಕ್ಕೆ ಸರಿದದ್ದರಿಂದ ಹಾಕಿಸ್ಟಿಕ್ಕನ ಏಟು ರೌಡಿಯ ಬೆನ್ನಿಗೆ ಬಿತ್ತು, ಇಷ್ಟು ಮಾಡುವುದರ... ಸಹ ಆಯತಪ್ಪಿ ಬಿದ್ದರೂ. ಕುಪ್ಪು ಒಳ್ಳೆ ಜುಡೊ ... ಸಟಕ್ಕನೆ ಏಳುವಾಗ ತಲೆಯಿಂದ ವ್ಯಾಸರ್ಪಡಿ ಸೊಂಟಕ್ಕೆ ಡಿಕ್ಕಿ ... ವ್ಯಾಸ್ಪರಡಿಗೆ ಉಸಿರು ಕಟ್ಟಿತು. ಕುಪ್ಪು ಪಟ್ಟನೆ ಮತ್ತೊಂದು ... ಹೊಡೆದಾಗ ಏಟು ಶ್ರೀಮಾನ್ ವ್ಯಾಸರ್ಪಡಿ ಮತ್ತು ಹಸು ... ಬಿತ್ತು, ರೌಡಿ ಕೋಲಿಯಸ್ ಗಿಡಗಳ ಮೇಲೆ ಬಿದ್ದುಬಿಟ್ಟ... ತೆರೆದ ಗೇಟನಿಂದ ಆಚೆ ಓಡಿಹೋಯಿತು. ಕುಪ್ಪು ಗೇಟ... ಮಹಡಿಗೆ ಬಂದು ಹಾಕಿಸ್ಟಿಕ್ಕನ್ನು ಅದರ ಜಾಗದಲ್ಲಿರಿಸಿದ.

"ನೀನ್ಯಾಕೆ ಆ ಮನುಷ್ಯನಿಗೆ ಹೊಡೆದೆ" ಎಂದು ನಾನು ... ಪ್ರಶ್ನಿಸಿದೆ. ಕುಪ್ಪುವು "ಆತನಿಗೆ ನಾನೇನೂ ಮಾಡಲಿಲ್ಲ, ಹಸುವಿಗೆ ಮಾತ್ರ ಹೊಡೆದೆ" ಎಂದ.

"ಕುಪ್ಪು ನೀನು ಅವನಿಗ ಹೊಡೆದೆ, ಅವನು ಬರ... ನನ್ನ 'ಮೂಳೆ ಮುರಿಯೊಕ್ಕೆ ಮುಂಚೆ ನಿನಗೆ ಕಾದಿದೆ" ... ನಾನು ಹೇಳುತ್ತಿರುವಾಗ ಕುಪ್ಪು ಮುಖ ಕಂಗೆಟ್ಟಿತ್ತು, ಅವನು ... ಹತ್ತಿರ ಓಡಿ "ಬನ್ನಿ ಸಾರ್! ಪೊಲೀಸ್‌ಗೆ ಫೋನ್ ... ಎನ್ನುತ್ತಿರುವಾಗ ತಟ್ಟನೆ ನಮ್ಮನೆ ಬಾಗಿಲನ್ನು ದೂಡಿಕೊಂಡ... ಮಧ್ಯವಯಸ್ಕ ವ್ಯಕ್ತಿ ಒಳಬಂದರು. ಆತ ನಮ್ಮ ಕಾಲೆ... ಸೌದೆ, ಇದ್ದಿಲು ವ್ಯಾಪಾರಿ ಎಂದು ನಾನು ತಕ್ಷಣ ಗುರುತು ...

ನಾನು ನಿಮ್ಮನ್ನು ಕ್ಷಮ್ಸಿ ಅಂತ ಕೇಳೊಕ್ಕೆ ಬಂದೆ. ... ಎದುರಿಗಿರುವ ಕಾಲೇಜು ಹುಡುಗರಿಗೆ ಒಂದು ಧಮಕಿ ಹಾ... ಬಾ. ನನ್ನ ಮಗಳು ಸ್ಕೂಲಿಗೆ ಹೋಗುವಾಗ ಅವರು ... ಚುಡಾಯಿಸ್ತಾರೆ ಅಂತ ನಾನು ಹೇಳಿದ್ರೆ ಅವನು ತಪ್ಪಾಗಿ ... ನಿಮ್ಮನೆಗೆ ಬಂದಿದ್ದಾನೆ. ಆದರೂ ನೀವುಗಳು ಅವನಿಗೆ ... ಹೊಡೀಬಾರದಿತ್ತು" ಎಂದು ಸೌದೆ ವ್ಯಾಪಾರಿ ಹೇಳಿದ.

"ನಾನು ಹೊಡೀಲಿಲ್ಲ" ಎಂದು ನಾನು ಹೇಳಿದೆ. ಕುಪ್ಪು ... ಬಿಡಲಿಲ್ಲ


ಅಷ್ಟರಲ್ಲಿ ಬೀದಿಯಲ್ಲಿ ಏನೊ ಕೂಗಾಟ ಕೇಳಿಸಿತು. ... ರೌಡಿಯು ಕೈಯಿಂದ ಲಾಲಿಪಾಪ್ ಕಿತ್ತುಗೊಂಡ ಮಗ... ಗೋಳಾಡುತ್ತ "ನಾನೇನೊ ಅಪ್ಪಿತಪ್ಪಿ ನಿಮ್ಮ ಮನೆಗೆ ಬಂದ... ಆಳು ನಂಗೆ ಹೇಗೆ ಹೊಡೆದ. ನಿಮಗಾದರೂ ಬುದ್ಧಿ ... ಎಂದು ಹೇಳುತ್ತ ಅಲ್ಲಿ ಸೇರಿದ್ದ ಸಣ್ಣ ಗುಂಪಿಗೆ ಏಟುಬಿದ... ಬೆನ್ನು ಇತ್ಯಾದಿ ತೋರಿಸುತ್ತಿದ್ದ.

"ಹೋಗಲಿ, ಹೊಡೆಯೋದು ಹೊಡೆದಿದ್ದೀರಿ. ಪಾಪ ... ಒಂದ್ಹತ್ತು ರೂಪಾಯಿ ಕೊಟ್ಟು ಕಳಿಸಿ ಎಂದು ಸೌದೆ ಅಂಗ... ನಮಗೆ ಹೇಳಿದ.

ಶ್ರೀಮಾನ್ ವ್ಯಾಸರ್ಪಡಿ ನೋವಿನಿಂದ ನರಳುತ್ತಿದ್ದ, ... ಹಾಗೆ ಕುಪ್ಪುವಿನ ಮುಖದಲ್ಲಿ ಒಂದು ಶೌರ್ಯದ ಕಳೆ ... ಅವನು ಹಾಕಿಸ್ಟಿಕ್ಕನ್ನು ಕೈಗೆತ್ತಿಕೊಂಡು ಸೌದೆ ವ್ಯಾಪಾರಿಗೆ "ನ... ಎಂದು ಗದರಿ ಮಹಡಿಯಿಂದ ಕೆಳಕ್ಕಿಳಿದು ಓಡಿದ. ... ನೋಡಿ ಶ್ರೀಮಾನ್ ವ್ಯಾಸರ್ಪಡಿ, ಸೌದೆ ಅಂಗಡಿಯವ ... ಕಾಲಿಗೆ ಬುದ್ಧಿ ಹೇಳಿದರು.

"ನಾನು ಕೊರಕ್ಕುಪೇಟೆ ರೌಡಿ. ಇನ್ನೊಂದು ಸಲ ನ... ನೋಡಿದ್ರೆ ನಿನ್ನ ಹಲ್ಲು ಮುರಿತೀನಿ" ಎಂದು ... ಓಡಿಹೋಗುತ್ತಿದ್ದವರಿಗೆ ಅಬ್ಬರಿಸಿದ. ಅಲ್ಲಿ ನೆರೆದಿದ್ದ ಜನ... ಪುಕ್ಕಟೆ ಮನರಂಜನೆ ಒದಗಿತು.

ಮನಮುಟ್ಟುವ ಸತ್ಯಮೇವ ಜಯತೆ




ಬಾಲಿವುಡ್‌ನ ಸಂವೇದನಾಶೀಲ ನಟ-ನಿರ್ದೇಶಕನೆನಿಸಿ ಕೊಂಡ ಆಮೀರ್ ಖಾನ್ ನಡೆಸಿಕೊಡುವ, ಕಳೆದ ಒಂದು ತಿಂಗಳಿನಿಂದ ಪ್ರತಿ ಭಾನುವಾರ ಬೆಳಗ್ಗೆ 11 ಗಂಟೆಗೆ ಡಿಡಿ 1 ಮತ್ತು ಸ್ಟಾರ್‌ಪ್ಲಸ್‌ಗಳಲ್ಲಿ ಪ್ರಸಾರವಾಗುತ್ತಿರುವ ಒಂದು ವಿಶಿಷ್ಟ ಕಾರ್ಯಕ್ರಮ 'ಸತ್ಯಮೇವ ಜಯತೇ', ನಾವು ಬದುಕುತ್ತಿರುವ ಸಮಾಜದ ಹಲವಾರು ಕರಾಳ ಮುಖಗಳನ್ನು ಒಂದೊಂದಾಗಿ ಪ್ರತಿ ಅಧ್ಯಾಯದಲ್ಲಿ ಅನಾವರಣಗೊಳಿಸುತ್ತಿದೆ. ಪ್ರತಿ ಕಂತಿನಲ್ಲಿಯೂ ನಮ್ಮ ಸಮಾಜದ ಒಂದುವರ್ಗ ಅನುಭವಿಸುತ್ತಿರುವ ಯಾತನೆ, ವೇದನೆ, ಸಂಕಷ್ಟಗಳು ಮನಮುಟ್ಟುವಂತೆ ಚಿತ್ರಿಸಿ ಅವರಿಂದಲೇ ಅವರ ಅನುಭವಗಳನ್ನು ಜನಸಾಮಾನ್ಯರಿಗೆ ತಲುಪಿಸಿ, ನಾವು ಕಂಡರೂ ಕಾಣದಂತಿರುವ ಲೈಂಗಿಕ ಶೋಷಣೆ, ಹೆಣ್ಣು ಭ್ರೂಣಹತ್ಯೆ ಆಸಿಡ್ ದಾಳಿ, ಅಂತ ರ್ಜಾತೀಯ ವಿವಾಹ, ವಿಕಲಾಂಗ ಚೇತನರ ಬದುಕು- ಆಶಯ ಇತ್ಯಾದಿ ವಿಷಯಗಳ ಹಲವಾರು ಮಜಲುಗಳನ್ನು ನಮ್ಮ ಮುಂದೆ ಎಳೆಎಳೆಯಾಗಿ ಬಿಚ್ಚಿಡುತ್ತಿದೆ.

ಮೊನ್ನೆ ಭಾನುವಾರ ಜೂನ್ 10 ರಂದು ಪ್ರಸಾರವಾದ ಕಂತಿನಲ್ಲಿ ನಾನು ಕಂಡ ಒಂದು ಮಗುವಿನ ಚಿತ್ರಣ ಹೃದಯವಿದ್ರಾವಕವಾಗಿತ್ತು, ಒಂದು ಕ್ರೈಸ್ತ ದಂಪತಿಗೆ ಬೆಂಗಳೂರಿನ ಪ್ರತಿಷ್ಠಿತ ಬಡಾವಣೆಯ ರಸ್ತೆಬದಿಯಲ್ಲಿ ಎಸೆದು ಹೋದ ವಿಚಿತ್ರವಾಗಿ ಕಾಣುವ ಹೆಣ್ಣು ಮಗುವೊಂದು ಕೆಲವು ವರ್ಷಗಳ ಹಿಂದೆ ಸಿಕ್ಕಿತು. ಅದೀಗ ಹನ್ನೆರಡು ವರ್ಷದ ಮಗುವಾಗಿದ್ದು ಅಸ್ಥಿಪಂಜರದಂತೆ ಕಾಣುವ ಅದರ ದೈಹಿಕ ಬೆಳವಣಿಗೆಯೇ ವಿಚಿತ್ರವಾದುದು. ದೇಹದ ಬೆಳವಣಿಗೆಗೆ ಹೊಂದಿಕೊಳ್ಳುವಂತೆ ಚರ್ಮದ ಬೆಳವಣಿಗೆಯಾಗದೆ ಒಣಗಿ ಮುರುಟಿಕೊಂಡು ಸಣ್ಣಸಣ್ಣ ಚೂರುಗಳಾಗಿ ಸಿಪ್ಪೆಯಂತೆ ಹರಿದು ಕಣ್ಣು ಬಾಯಿ ಊದಿಕೊಂಡು ಕಣ್ಣಿನ ರೆಪ್ಪೆ ತುಟಿಗಳ ಚಲನೆಗೆ ಚರ್ಮ ಎಳೆದಂತಾಗಿ ವಿಪರೀತ ನೋವಿನಿಂದ ನರಳುತ್ತಿತ್ತಂತೆ. ಆಕೆ ಮಗುವಾಗಿದ್ದಾಗ ನಿದ್ರೆ ಮಾಡುವಾಗಲೂ ಕಣ್ಣು ತೆರೆದಿರುತ್ತಿದ್ದು ಬಾಯಿ ಒಣಗಿದಂತಾಗಿ ಆಕೆ ಯಮಯಾತನೆ ಅನುಭವಿಸುತ್ತಿದ್ದುದು ಊಹಿಸಲೂ ನಮಗೆ ಸಾಧ್ಯವಾಗದು. ಅಂತಹ ಮಗುವೊಂದನ್ನು ಎತ್ತಿ ತಂದು ವರ್ಷಾನುಗಟ್ಟಲೆ ಸಾಕಿ ಸಲಹುತ್ತಿರುವ ಆ ದಂಪತಿಗಳಿಗೊಂದು ಹ್ಯಾಟ್ಸಾಫ್. ನಮ್ಮ ಸಭ್ಯ ನಾಗರಿಕ ಸಮಾಜಕ್ಕೆ ಅತ್ಯಂತ ಕುರೂಪಿಯಾಗಿ, ಅಸಹ್ಯವೆನಿಸುವಂತೆ ಕಾಣುವ ಈ ಮಗುವನ್ನು ಅದರ ಸಾಕುತಾಯಿ ಒಮ್ಮೆ ಮಾಲ್‌ವೊಂದಕ್ಕೆ ಕ... ಅಲ್ಲಿಗೆ ಶಾಪಿಂಗ್‌ಗೆಂದು ಬಂದಿದ್ದ 'ಸಭ್ಯ ಸ್ತ್ರೀ'ಯೊಬ್ಬಳು ಆ ... ಕಂಡಾಕ್ಷಣ ಭಯಭೀತಳಾಗಿ- ಅಸಹ್ಯಪಟ್ಟುಕೊಂಡು ಆ ಮಗುವಿ... ಮೇಲೆ ಉಗಿದೇ ಬಿಟ್ಟಳಂತೆ. ಮಗುವಿನ ಪೋಷಕರನ್ನು ಹಿಗ್ಗಾಮು... "ಇಷ್ಟು ಅಸಹ್ಯವಾದ ಮಗುವನ್ನು ಮನೆಯಿಂದ ಹೊರಕ್ಕೆ ಯಾ... ನೋಡಲು ವಾಕರಿಕೆ ಬರುವಂತಿರುವ ಅದನ್ನು ಯಾಕೆ ಸಾಕುತ್ತಿದ್ದೀರ... ಅದನ್ನು ಇಲ್ಲಿಂದ ಆಚೆಗೆ ತೆಗೆದುಕೊಂಡು ಹೋಗಿ," ಎಂದೆಲ್ಲ... ಮಾಡಿದಳಂತೆ. ಸಾಕುತಾಯಿಗೆ ಆ ಮಗುವಿನ ಮೇಲೆ ಸ್ವಂತ ... ಹೆಚ್ಚು ಪ್ರೀತಿ ಆ ಕ್ಷಣದಿಂದಲೇ ಆ ತಾಯಿಗೆ ಆ ಮಗುವಿನ ... ಕಾಳಜಿ ಉಕ್ಕಿ ಅದನ್ನು ತಬ್ಬಿಕೊಂಡು ಸಾಂತ್ವನ ಮಾಡಿ ಅಂತ... ಮಗುವೊಂದರ ತಾಯಿ ತಾನಾಗಿದ್ದೇನಲ್ಲ ಎಂಬ ಹೆಮ್ಮೆ ತನಗಾಯಿ... ಆ ಕಾರ್ಯಕ್ರಮದಲ್ಲಿ ನಮ್ಮ ಸುಂದರ ಸಮಾಜದ ಮನೋವಿಕಾರತೆ ... ಎಂದು ಬಿಡಿಸಿಬಿಟ್ಟಳು.

ದೊಡ್ಡದೊಡ್ಡ ನಗ... ನಾಗರಿಕರೆನಿಸಿಕೊಂಡು ಬಾಳ... ಸೌಂದರ್ಯಕ್ಕೆ ಹೆಚ್ಚಿನ ಪ್ರಾಶ... ನಾವು ನಮ್ಮ ಅಂತಃಸಾಕ್ಷಿಗೆ, ಮಾನವೀಯತೆಗೆ ಯಾಕೆ ತೆರೆದುಕೊಳ್ಳ... ಗೊತ್ತಿಲ್ಲ. ಕೊನೆಯದಾಗಿ, ನಮ್ಮ ಮನಸ್ಸನ್ನು ತೀಕ್ಷ್ಣವಾಗಿ ಕಾಡುವ, ... ಪ್ರೇರೇಪಿಸುವ, ನಮ್ಮ ಸಮಾಜದೊಳಗೆ ಅಡಗಿರುವ ಮತ್ತೊಂ... ಪ್ರಪಂಚಕ್ಕೆ ಕನ್ನಡಿ ಹಿಡಿಯುವ, ನಮ್ಮನ್ನು ಸೂಕ್ಷ್ಮ ಸಂವೇದನೆಗಳೆಡೆಗೆ ... ಕಾರ್ಯ ಶ್ಲಾಘನೀಯ. ಸರಳ ಹಿಂದಿಯಲ್ಲಿರುವ ಈ ಕಾರ್ಯ... ಹಿಂದಿ ಬಾರದವರೂ ನೋಡಿ ಅರ್ಥೈಸಿಕೊಳ್ಳುವುದು ಕಷ್ಟವೇನ...

● ಎ.ಎಸ್.ನೂರ್‌ಅಹ...



ನ್ ಬಾಯಿ ಪೆಟಿಟ್/ಮರಿಯಂ ಜಿನ್ನಾ

ತಿರುಗುಬಾಣ

ಇಂದಿನ ಮಾಯಾನಗರಿ ಮುಂಬೈ ಅಂದು ಕೈಗಾರಿಕೀ ಮೊದಲ ಮಜಲಿನಲ್ಲಿತ್ತು. ಆ ನಗರಿಯ ಕುಬೇರ ೂಂಡಿದ್ದ ಉದ್ಯಮಿಯೊಬ್ಬರು ತಮ್ಮ ಕಾನೂನು ಾರನೆಂದು ಅಂದಿನ ಸುಪ್ರಸಿದ್ಧ ನ್ಯಾಯವಾದಿಯನ್ನು ಮಾಡಿಕೊಂಡಿದ್ದರು. ಆ ನ್ಯಾಯವಾದಿ ಸ್ವಾತಂತ್ರ್ಯ ಾಟದ ಮುಂಚೂಣಿ ನಾಯಕನಾಗಿದ್ದರು. ಕುಬೇರನ ಸುಪುತ್ರಿ ಸಹ ಸ್ವಾತಂತ್ರ್ಯ ಹೋರಾಟದಲ್ಲಿ ಳಾಗಿದ್ದಳು.

ಂದು ದಿನ ಆ ನ್ಯಾಯವಾದಿ ಉದ್ಯಮಿಯನ್ನುದ್ದೇಶಿಸಿ, ದೇಶ ಈವರೆಗೆ ಪರಕೀಯರ ಆಡಳಿತಕ್ಕೊಳಪಟ್ಟಿದ್ದು ಕ್ಯದ ಕೊರತೆಯಿಂದಾಗಿಯೇ. ಈಗಂತೂ ಕೋಮು ಗಳು ದೇಶವನ್ನೊಡೆಯಲು ಹವಣಿಸುತ್ತಿದ್ದಾರೆ. ಇದು ಂತರಿಗೆಲ್ಲ ಗೊತ್ತಿರುವ ವಿಷಯ. ಇನ್ನು ಮುಂದಾ ಎಲ್ಲ ಸಮುದಾಯದವರು ಸೌಹಾರ್ದದಿಂದ ಬದುಕ ವರೆ ಅಂತರ್ಧರ್ಮೀಯ ಮದುವೆಗಳು ಅನಿವಾರ್ಯ ?" ಎಂದು ಕೇಳಿದರು.

ಹೌದು. ನೀವನ್ನುವುದು ನೂರಕ್ಕೆ ನೂರರಷ್ಟು ನಿಜ" ಉದ್ಯಮಿ ನ್ಯಾಯವಾದಿಯ ಪ್ರಗತಿಪರ ಚಿಂತನೆಯನ್ನು ಲಿಸಿದರು.

ನ್ಯಾಯವಾದಿ ಮುಂದೆ ಹಲವಾರು ಸಂದರ್ಭಗಳಲ್ಲಿ ಇದೂ ಮಾತನಾಡಿದ ಮೇಲೆ ಇದೇ ಪ್ರಶ್ನೆಯನ್ನು ತ್ತಿದ್ದರು. ಆ ಪ್ರಗತಿಪರ ಉದ್ಯಮಿ ಆ ಪ್ರಶ್ನೆಗೆ ಅದೇ ನೀಡುತ್ತಿದ್ದರು. ಕಡೆಗೆ ಅವರಿಗೆ ನ್ಯಾಯವಾದಿಯ ಂಶಯ ಬರತೊಡಗಿತು. ನ್ಯಾಯವಾದಿ ಆ ಪ್ರಶ್ನೆಯನ್ನು ಪದೇ ಕೇಳುವುದರ ಮೂಲಕ ತನ್ನ ಮುದ್ದಿನ ಏಕೈಕ ಸುಪುತ್ರಿಯನ್ನು ಮದುವೆಯಾಗುವುದಕ್ಕೆ ಅನುಮತಿ ಪಡೆಯುವುದು ಸುಲಭವಾಗಬಹುದು ಎನ್ನುವುದು ಅವನ ಲೆಕ್ಕಾಚಾರವಾಗಿತ್ತು ಎಂದು ಅವರಿಗೆ ಖಾತ್ರಿಯಾಯಿತು. ಅವರಿಗೆ ಪಿತ್ಥ ನೆತ್ತಿಗೇರಿದಂತಾಯಿತು. ಕಾರಣ ಅವರಿಗೆ ಅಳಿಯನಾಗಬಯಸಿದವನು ಅನ್ಯ ಧರ್ಮೀಯನೆನ್ನುವುದು ಸುಸ್ಪಷ್ಟ.

ಆ ಉದ್ಯಮಿ ದೇಶದಲ್ಲಿ ಮೊದಲ ಕಾಟನ್‌ಮಿಲ್ ಸ್ಥಾಪಿಸಿದ್ದ ಆಗರ್ಭ ಶ್ರೀಮಂತ ಪಾರ್ಸಿ ಕುಟುಂಬದ ಸರ್ ದಿನ್‌ಶಾ ಪೆಟಿಟ್. ಅವರ ಮಗಳನ್ನು ಮದುವೆಯಾಗಲು ಹಂಬಲಿಸಿದವರು ಮೊಹಮ್ಮದ್ ಅಲಿ ಜಿನ್ನಾ. ವಾಸ್ತವದಲ್ಲಿ ಮೊಹಮ್ಮದ್ ಅಲಿ ಜಿನ್ನಾ ಅವರನ್ನು ಮೆಚ್ಚಿ ಅವರನ್ನು ಬಾಳಸಂಗಾತಿಯನ್ನಾಗಿ ಮಾಡಿಕೊಳ್ಳಬಯಸಿದ್ದು ಪೆಟಿಟ್ ಅವರ ಸುಪುತ್ರಿ ರತನ್‌ಬಾಯಿಯೇ. ಅವಳನ್ನು ಪ್ರೀತಿಯಿಂದ ರತಿ ಎಂದು ಕರೆಯಲಾಗುತ್ತಿತ್ತು. ಈ ರತಿಗೆ ಮೊಹಮ್ಮದ್ ಅಲಿ ಜಿನ್ನಾ ಕಾಮದೇವನಾಗಿ ಕಂಡಿದ್ದರು.

ನಿಜಕ್ಕೂ ಜಿನ್ನಾ ತಮ್ಮ ಗೆಳೆಯರ ಬಳಗಕ್ಕೆ 'ಲಂಡನ್‌ನ ಪರ್‌ಫೆಕ್ಟ್ ಜಂಟಲ್‌ಮ್ಯಾನ್' ಆಗಿದ್ದರು. ಸರೋಜಿನಿ ನಾಯ್ಡು ಅವರ ಪ್ರಕಾರ ಜಿನ್ನಾ ಕೋಮುಸೌಹಾರ್ದದ ಹರಿಕಾರರಾಗಿದ್ದರು. ಆದರೆ ಜಿನ್ನಾರಿಗೆ ಅಂದಿನ ರಾಜಕೀಯ ರಂಗದಲ್ಲಿ ಮುಖಾಮುಖಿಯಾದ ಗಾಂಧೀ 'ಸಂಸ್ಕಾರ'ದ ಪ್ರಾಣೇಶಾಚಾರ್ಯರಾಗಿ ಕಂಡರೇನೋ. ಜಿನ್ನಾ ತಮ್ಮನ್ನು ನಾರಣಪ್ಪ ಎಂದು ಭಾವಿಸಿಕೊಂಡು 'ಜಾತ್ಯತೀತತೆ'ಗೆ ಹೊಸ ವ್ಯಾಖ್ಯೆ ನೀಡಲು ತೀರ್ಮಾನಿಸಿದರೇನೋ. ಹಾಗಾಗಿ ಅವರು ತಮ್ಮ ಆ ವ್ಯಾಖ್ಯೆಯಂತೆಯೇ ಬದುಕತೊಡಗಿದ್ದರು. ಅಂದಹಾಗೆ ಆ ರತಿ ಕಾಮರ ಕತೆ ಮಾಮೂಲಿ ಪ್ರೇಮ ಕತೆಯಾಗಿರಲಿಲ್ಲ.

ರತಿಗೆ ತನ್ನ ಮನ್ಮಥನನ್ನು ಭೆಟ್ಟಿಯಾಗುವುದು ದುಸ್ತರವಾಯಿತು. ತನ್ನ ಮನದನ್ನೆಯಿಂದ ಒಂದು ಕ್ಷಣವೂ ದೂರವಿರುವುದು ಸಾಧ್ಯವಿಲ್ಲವೆನಿಸತೊಡಗಿತು ಜಿನ್ನಾಗೆ. ಪ್ರೇಮರೋಗವೆಂದ ಮೇಲೆ ಇದೆಲ್ಲ ಸಹಜವೇ ಆಗಿತ್ತು ಇಂತಹ ಸಂದರ್ಭದಲ್ಲಿ ತನ್ನ ಪ್ರಿಯತಮನಿಗೆ ಮುಂದಾಗಲಿರುವ ಅನಾಹುತದ ಬಗ್ಗೆ ಎಚ್ಚರಿಸಿದಳು. ತನ್ನ ಕಣ್ಣು ತಪ್ಪಿಸಿ ಮಗಳು ಭೇಟಿಯಾದರೆ ಆಗಲೆಂದು ಅವಳ ತಂದೆ ನಿಶ್ಚಿಂತರಾಗಿದ್ದರು. ತನ್ನ ಮಗಳೇನಾದರೂ ಜಿನ್ನಾ ಜೊತೆ ಓಡಿಹೋದರೆ ಅವರ ವಿರುದ್ಧ ಮೊಕದ್ದಮೆ ಹೂಡುವುದಾಗಿ ಬಡಬಡಿಸತೊಡಗಿದರು. ಕಾರಣ ಅವಳಿನ್ನೂ ಹದಿನಾರರ ಬಾಲೆಯಾಗಿದ್ದಳು. ಆಗ ಅವಳನ್ನು ಮದುವೆಯಾದರೆ ಅದು ಒಂದು ಅಪರಾಧವಾಗುವುದೆನ್ನುವುದನ್ನು ಕಾನೂನುತಜ್ಞ ಜಿನ್ನಾರಿಗೆ ಬೇರೆಯವರೇನೂ ಹೇಳಿಕೊಡಬೇಕಾಗಿರಲಿಲ್ಲ. ಆದಾಗ್ಯೂ ಇನ್ನೆರಡು ವರ್ಷ ಗಟ್ಟಿ ಮನಸ್ಸು ಮಾಡಿ ದೂರವಿರುವುದೊಂದೇ ದಾರಿಯೆಂದು ರತಿ ತನ್ನ ಪ್ರಿಯತಮನಿಗೆ ಮನವರಿಕೆ ಮಾಡಿಕೊಟ್ಟಳು.

ಎರಡು ವರ್ಷದ ಅಜ್ಞಾತವಾಸದ ನಂತರ ಆ ಪ್ರೇಮಿಗಳು ಮದುವೆಯಾದ ಸುದ್ದಿ ಗೊತ್ತಾಗುತ್ತಲೇ ದಿನ್‌ಶಾ ಪೆಟಿಟ್ ಇನ್ನು ತನ್ನ ಮಗಳು ತನ್ನ ಪಾಲಿಗೆ ಸತ್ತಳೆಂದು



ಮೊಹಮ್ಮದ್ ಅಲಿ ಜಿನ್ನಾ ಹಾಗೂ ಅವರ ಮಗಳು ದೀನಾ

ಮನಸ್ಸು ಕಲ್ಲು ಮಾಡಿಕೊಂಡರು. ಪ್ರೇಮಿಗಳ ಮಿಲನವನ್ನು ಸಹಿಸದವರು ಕಲ್ಲು ಮನಸ್ಸಿನವರೆಂದು ಭಾವಿಸಿದ್ದ ರತಿಗೆ ತನ್ನ ಪ್ರಿಯತಮನ ಪ್ರೀತಿಗಿಂತ ಮಿಗಿಲಾದದ್ದೇನೂ ಇಲ್ಲವೆನಿಸಿತ್ತು. ರತಿ ಇಸ್ಲಾಮಿಗೆ ಮತಾಂತರಗೊಂಡ ಮೇಲೆ ಮರಿಯಂ ಜಿನ್ನಾ ಆದಳು. ಆದಾಗ್ಯೂ ಅವಳು ರತಿ ಎಂದೇ ಸುಪರಿಚಿತಳಾದಳು. ರತಿ ಹಾಗೂ ಜಿನ್ನಾ ಮಧುಚಂದ್ರಕ್ಕೆಂದು ಯೂರೋಪ್ ಯಾತ್ರೆ ಹೊರಟರು. ಮರಳಿ ಸ್ವದೇಶಕ್ಕೆ ಬಂದಮೇಲೆ ಜಿನ್ನಾ ವಕಾಲತ್ತಿಗಿಂತ ಹೆಚ್ಚಾಗಿ ರಾಜಕೀಯರಂಗದಲ್ಲಿ ಸಕ್ರಿಯರಾದರು. ಅವರು ರಾಜಕೀಯದಲ್ಲಿ ತಮ್ಮನ್ನು ಅದೆಷ್ಟು ತೊಡಗಿಸಿಕೊಂಡರೆಂದರೆ ತಮ್ಮ ಪ್ರೀತಿಯ ಮಡದಿಯನ್ನು ಸಹ ಮರೆತುಬಿಟ್ಟರು. ಒಬ್ಬ ನ್ಯಾಯವಾದಿಯಾಗಿ ಜಿನ್ನಾ ಸೋತದ್ದೇ ಹೆಚ್ಚು. ಆದರೆ ಅವರು ಸೋತ ಮೊಕದ್ದಮೆಗಳೆಲ್ಲ ರಾಷ್ಟ್ರೀಯ ಮಹತ್ವದ ಪ್ರಕರಣಗಳಾಗಿದ್ದವು. ಅವರ ದಾಂಪತ್ಯ ಜೀವನದಲ್ಲಿ ಬಿರುಕು ಕಾಣಿಸಿಕೊಂಡಿತು. ಕಡೆಗೆ ರತಿ ತನ್ನ ಪತಿಯನ್ನು ತೊರೆದು ಹೋಟೆಲ್ ತಾಜ್‌ನಲ್ಲಿ ಬಿಡಾರ ಹೂಡಿದಳು.

ಜಿನ್ನಾ ಹಾಗೂ ರತಿಯ ಹಿತೈಷಿಗಳು ಅವರನ್ನು ಮತ್ತೆ ಒಂದುಗೂಡಿಸಲು ಎಷ್ಟೇ ಪ್ರಯತ್ನಿಸಿದರೂ ಪ್ರಯೋಜನವಾಗಲಿಲ್ಲ. ರತಿ ಅನಾರೋಗ್ಯದಿಂದ ಬಳಲಿದ್ದಕ್ಕಿಂತ ಹೆಚ್ಚಾಗಿ ತನ್ನ ಪ್ರೀತಿಯ ಪತಿಯ ಪ್ರೀತಿಗಾಗಿ ಹಪಹಪಿಸಿ ಕೊನೆಗೊಂದು ದಿನ ತನ್ನ ಇಹಲೋಕ ಯಾತ್ರೆಯನ್ನು ಮುಗಿಸಿದಳು. ಆದರೆ ತನ್ನ ದಾಂಪತ್ಯ ಜೀವನದ ಕುರುಹಾಗಿ ದೀನಾ ಎಂಬ ಒಬ್ಬ ಹೆಣ್ಣು ಮಗುವನ್ನು ಬಿಟ್ಟುಹೋದಳು. ಜಿನ್ನಾ ಇದ್ದಕ್ಕಿದ್ದಂತೆ ಒಬ್ಬ ಧರ್ಮನಿಷ್ಠ ಮುಸಲ್ಮಾನರಾಗಿ ಬಿಟ್ಟಿದ್ದರು. ತಮ್ಮ ಮಗಳಿಗೆ ಕುರಾನ್ ಪಠಣ ಹಾಗೂ ಇಸ್ಲಾಮೀ ಸಂಸ್ಕೃತಿಯ ತಿಳಿವಳಿಕೆ ನೀಡುವ ಜವಾಬ್ದಾರಿಯನ್ನು ತಮ್ಮ ಸೋದರಿಗೆ ವಹಿಸಿಕೊಟ್ಟರು.

ಮುಂದೆ ದೀನಾ ಇಂಗ್ಲೆಂಡ್‌ನಲ್ಲಿ ವಿದ್ಯಾಭ್ಯಾಸ ಮುಗಿಸಿ ಸ್ವದೇಶಕ್ಕೆ ಮರಳಿದಳು. ಒಂದು ದಿನ ತಾನು ತನ್ನ ಬಾಳ ಸಂಗಾತಿಯಾಗಿ ಒಬ್ಬ ಪಾರ್ಸಿ ಯುವಕ ನೆವಿಲ್ ವಾಡಿಯಾರನ್ನು ಆಯ್ಕೆ ಮಾಡಿಕೊಂಡಿದ್ದನ್ನು ಯಾವುದೇ ಅಳುಕಿಲ್ಲದೆ ತನ್ನ ತಂದೆಗೆ ತಿಳಿಸಿದಳು. ಜಿನ್ನಾರಿಗೆ ಮಗಳ ಆಯ್ಕೆ ಸರಿ ಎನಿಸಲಿಲ್ಲ. ದೀನಾ ತಂದೆಯ ವಿರೋಧಕ್ಕೆ ಮಣಿಯಲಿಲ್ಲ. "ನನ್ನ ತಾಯಿ ತನ್ನ ತಂದೆಯ ವಿರೋಧವನ್ನು ಲೆಕ್ಕಿಸದೆ ನಿಮ್ಮನ್ನು ಮದುವೆಯಾದದ್ದನ್ನು ನೀವು ಮರೆತಂತೆ ಕಾಣುತ್ತದೆ" ಎನ್ನುವ ಒಂದು ಮಾತು ಜಿನ್ನಾರನ್ನು ತಬ್ಬಿಬ್ಬುಗೊಳಿಸಿತು. ಅಂದಿನಿಂದ ಜಿನ್ನಾ ತಮ್ಮ ಮಗಳ ಜತೆಗಿನ ಸಂಬಂಧ ಹರಿದುಕೊಂಡರಂತೆ. ದೀನಾ ಸಹ ತನ್ನ ತಂದೆಯನ್ನು ಮತ್ತೆಂದೂ ಭೇಟಿಯಾಗಲೇ ಇಲ್ಲ. ಜಿನ್ನಾರ ಅಂತಿಮ ಸಂಸ್ಕಾರಕ್ಕೆಂದು ದೀನಾ ಲಾಹೋರ್‌ಗೆ ಹೋದಳು. ಧರ್ಮದ ಹೆಸರಿನಲ್ಲಿ ಮುಲ್ಲಾಶಾಹಿ ಪ್ರೀತಿ ಪ್ರೇಮವನ್ನು ತನ್ನ ಅಂಕೆಯಲ್ಲಿರಿಸಿಕೊಂಡಿತ್ತು. ಆ ವ್ಯವಸ್ಥೆ ಕಂಡು ಅವಳು ದಿಙ್ಮೂಢಳಾದಳು. ತನ್ನನ್ನು ಹುಟ್ಟಿಸಿದ ತಂದೆಯೇ ಇಂತಹ ಕ್ರೂರ ವ್ಯವಸ್ಥೆಯನ್ನು ಹುಟ್ಟುಹಾಕಿದವನು ಎನ್ನುವ ಕಟು ವಾಸ್ತವವಂತೂ ಅವಳಿಗೆ ದುಃಸ್ವಪ್ನವಾಗಿ ಕಾಡಿತು. ಬಾಂಬೆ ಡೈಯಿಂಗ್ ಮಾಲೀಕ ನೆವಿಲ್ ವಾಡಿಯಾ ಹಾಗೂ ದೀನಾ ಅವರ ದಾಂಪತ್ಯ ಜೀವನದ ಮೇಲೆ ಎಂದೂ ರತಿ ಹಾಗೂ ಜಿನ್ನಾ ಅವರ ದುರಂತ ಪ್ರೇಮದ ಕರಿ ನೆರಳು ಮಾತ್ರ ಬೀಳಲಿಲ್ಲ.

● ಹಸನ್ ನಯೀಂ ಸುರಕೋಡ, ಬೆಳಗಾವಿ


ಮನೆಯ ಕಿಟಕಿಯಿಂದ ಲೋಕದತ್ತ ನೆಟ್ಟ ಕಣ್ಣು

ನ್ನಡ ಸಾಹಿತ್ಯದಲ್ಲಿ ಅಂಕಣ ಬರಹಗಳಿಗೆ ವಾದ ಚರಿತ್ರೆಯಿದೆ ಮತ್ತು ಮಹತ್ವವಿದೆ. ಒಂದು ದಶಕದಲ್ಲಿ ವಿಪುಲವಾದ ಣಸಾಹಿತ್ಯ ರಚನೆಯಾಗಿದೆ. ಪತ್ರಿಕೆಗಳು ಾಗಳಿಗೆ ನೀಡುತ್ತಿರುವ ಮಹತ್ವ ಮತ್ತು ದಸುತ್ತಿರುವ ಸ್ಥಳಾವಕಾಶ ಇದಕ್ಕೆ ಪ್ರಮುಖ ಾವಾಗಿದೆ. ಇದಕ್ಕೆಲ್ಲ ಮೂಲವಾಗಿರುವುದು ಬರಹವನ್ನು ನಿರಂತರ ಓದುತ್ತಿರುವ ಗಸಮೂಹ. 'ಮನದೊಳಗಿನ ಮಾತು - ಮಥನ' ಸಂಜೆ ಪತ್ರಿಕೆಯೊಂದರಲ್ಲಿ ಪ್ರಕಟವಾದ .ಎಸ್.ಚೈತ್ರಾ ಅವರ ಅಂಕಣ ಬರಹಗಳ ಲನ. ಈ ಕೃತಿ 2011ರ ಸಾಲಿನ ಶಿವಮೊಗ್ಗದ ಟಕ ಸಂಘ ನೀಡುವ ಹಾಮಾನಾ ಅಂಕಣ ಗೆ ಭಾಜನವಾಗಿದೆ.


ಡಾ.ಕೆ.ಎಸ್.ಚೈತ್ರಾ ವೃತ್ತಿಯಲ್ಲಿ ಬೆಂಗಳೂರಿನಲ್ಲಿ ವೈದ್ಯೆ ಪ್ರವೃತ್ತಿಯಲ್ಲಿ ಭರತನಾಟ್ಯ ಕಲಾವಿದೆ ದೂರದರ್ಶನದ ನಿರೂಪಕಿ.

ಲೇಖಕಿಯ ಅಧ್ಯಯನ, ಸಿನಿಮಾ ವೀಕ್ಷಣೆ ಮತ್ತು ಗಳು ರೂಪಿಸಿದ ಜೀವನದೃಷ್ಟಿ ಇಲ್ಲಿನ ಗಳಲ್ಲಿ ಪ್ರತಿಬಿಂಬಿತವಾಗಿವೆ. ಕ್ಲೀಷೆಗಳಿಲ್ಲದ ಾದ ಭಾಷೆ, ಕಥನಶೈಲಿ ಕೃತಿಯನ್ನು ಯಿಲ್ಲದೆ ಓದಿಸಿಕೊಂಡು ಹೋಗುತ್ತವೆ. ಗ್ರಹವಿಲ್ಲದ ಮುಕ್ತಮನಸ್ಸು ಮತ್ತು ಇಲ್ಲಿನ ಬರಹಗಳ ಶಕ್ತಿಯನ್ನು ಹೆಚ್ಚಿಸಿವೆ. ಬಿಂಬದ ಮೂಲಕವೇ ಜಗತ್ತನ್ನು ನೋಡುವ, ನ್ನು ಪರಿಭಾವಿಸುವ, ಆದರೆ ತನ್ನ ನಂಬಿಕೆಯ ತ್ಯವೆಂದು ಭಾವಿಸದ ಲೋಕದ ಸತ್ಯಗಳಿಗೆ ನಸ್ಸು ಈ ಅಂಕಣಗಳನ್ನು ಸೃಷ್ಟಿಸಿದೆ.

ಸಾಂಪ್ರದಾಯಿಕ ನಂಬಿಕೆಗಳನ್ನು ತನ್ನ ನಿತ್ಯದ ಗಳ ಬೆಳಕಿನಲ್ಲಿ ಲೇಖಕಿ ಇಲ್ಲಿ ಬಿಡಮೋಲು ಅಮೆರಿಕದ ಜೀವನಶೈಲಿಯ ಬಗ್ಗೆ ನಮಗೆ



ಕೃತಿ: ಮನದೊಳಗಿನ ಮಾತು-ಮಥನ (ಅಂಕಣ ಬರಹಗಳು)
ಲೇಖಕಿ: ಡಾ.ಕೆ.ಎಸ್.ಚೈತ್ರಾ, ಪುಟಗಳು: 180, ಬೆಲೆ: 100 ರೂ.
ಪ್ರಕಾಶನ: ಶ್ರೀ ವಿಜಯ ಪ್ರಕಾಶನ, ಶಿವಮೊಗ್ಗ



ಅನೇಕ ದೂರುಗಳಿವೆ. ಅವರು ಸಣ್ಣಪುಟ್ಟ ಕಾರಣಕ್ಕೆಲ್ಲ ಡೈವೋರ್ಸ್ ಮಾಡುತ್ತಾರೆ. ಅವರು ಮಕ್ಕಳ ಬಗ್ಗೆ ಪ್ರೀತಿ ತೋರುವುದಿಲ್ಲ, ಅವರ ಸಂಸ್ಕೃತಿ ಸರಿಯಿಲ್ಲ, ಇತ್ಯಾದಿ. ಆದರೆ ಅಮೆರಿಕದಲ್ಲಿ ಸ್ವಲ್ಪ ಕಾಲ ನೆಲೆಸಿದ್ದ ಲೇಖಕಿ ಅಮೆರಿಕದ ಪೋಷಕರು ತಮ್ಮ ಮಕ್ಕಳನ್ನು ಚಿಕ್ಕಂದಿನಿಂದಲೇ ಸ್ವಾವಲಂಬಿಗಳನ್ನಾಗಿ, ಸ್ವಾಭಿಮಾನಿಗಳನ್ನಾಗಿ ಹೇಗೆ ಬೆಳೆಸುತ್ತಾರೆ ಎಂದು ತಮ್ಮ ಅನುಭವದಿಂದಲೇ ವಿವರಿಸುತ್ತಾರೆ. ಮಹಿಳೆಗೆ ಶಿಕ್ಷಣವೇ ಆಕೆಯನ್ನು ಎಲ್ಲಾ ಬಂಧನಗಳಿಂದ ಬಿಡುಗಡೆ ಮಾಡುತ್ತದೆ ಎಂಬ ಚಾಲ್ತಿಯಲ್ಲಿರುವ ನಂಬಿಕೆಗೆ ವಿರುದ್ಧವಾಗಿ ಶಿಕ್ಷಣವೇ ಮಹಿಳೆಗೆ ಹೇಗೆ ಬಂಧನವೂ ಆಗುತ್ತದೆ ಎಂಬುದನ್ನು ಇನ್ನೊಂದು ಅಂಕಣ ವಿಶದಪಡಿಸುತ್ತದೆ.

ಮಧ್ಯಮವರ್ಗದ ಆದರ್ಶವಾದಿ ಪ್ರಜ್ಞೆ ಈ ಕೃತಿಯ ಉದ್ದಕ್ಕೂ ಕೆಲಸ ಮಾಡಿದೆ. ಈ ಮಾತನ್ನು ನೇತ್ಯಾತ್ಮಕವಾಗಿ ನೋಡಬೇಕಾಗಿಲ್ಲ. ಏಕೆಂದರೆ ಇಲ್ಲಿನ ಆದರ್ಶಗಳು ಪ್ರಾಮಾಣಿಕವಾಗಿವೆ. ಅಂಕಣದ ಒಂದಿಲ್ಲೊಂದು ಕಡೆ ಲೇಖಕಿಯ ಅಪ್ಪ, ಅಮ್ಮ, ಅಕ್ಕ, ತಂಗಿ, ಸಂಗಾತಿಯ ಹಾಗು ಮಕ್ಕಳ ಪ್ರಸ್ತಾಪ ಬರುತ್ತದೆ. ಇದು ಲೇಖಕಿ ತನ್ನ ಕುಟುಂಬವನ್ನು ಪ್ರೀತಿಸುವ ಪರಿಯನ್ನು ಸೂಚಿಸುತ್ತದೆ. ಮುಂದೆ 'ಕಾವೋರ್ಡದಂಚಿನಲ್ಲಿ ರವಿ' ಅಂಕಣದಲ್ಲಿ ಖುಜರಾಹೋದಲ್ಲಿ ಕೆಡುತ್ತಿರುವ ಮಕ್ಕಳ ಬಗ್ಗೆ ಲೇಖಕಿಯ ಅಂತಃಕರಣ ಮಿಡಿಯುತ್ತದೆ. ತಲಕಾಡಿನಲ್ಲಿ ಅಲ್ಲಿನ ಪುರಾತನ ದೇವಾಲಯಗಳನ್ನು ನೋಡಲು ಇವರಿಗೆ ಗೈಡ್ ಆಗಿ ಬರುವ ಬಡಹುಡುಗ ರವಿಯ ಶಿಸ್ತು, ಪ್ರಾಮಾಣಿಕತೆ, ಕಲಿಯುವ ಹಂಬಲ ಮತ್ತು ದುಡಿಯುವ ಛಲ ಲೇಖಕಿಯಲ್ಲಿ ಹೆಮ್ಮೆ ಮೂಡಿಸುತ್ತದೆ. ತನ್ನವರೆಡೆಗಿನ ಪ್ರೀತಿ ಸಮಾಜದೆಡೆಗಿನ ಪ್ರೀತಿಯಾಗಿ ವಿಸ್ತರಿಸುವ ಸಹಜ ರೀತಿಯಿದು.

ರಾಜಕೀಯ ಪ್ರಜ್ಞೆಯ ಗೈರುಹಾಜರಿ ಈ ಕೃತಿಯ ಒಂದು ಮಿತಿ. ನಮ್ಮ ದಿನನಿತ್ಯದ ಆಗುಹೋಗುಗಳು ಆಕಸ್ಮಿಕವಾಗಿ ಘಟಿಸುತ್ತವೆ ಎಂದು ಹೊರನೋಟಕ್ಕೆ ಎನ್ನಿಸಿದರೂ ಅದರ ಹಿಂದೆ ಚಾರಿತ್ರಿಕವಾದ ಸಾಮಾಜಿಕ, ಆರ್ಥಿಕ ಹಾಗು ರಾಜಕೀಯ ಹಿನ್ನೆಲೆಯಿರುತ್ತದೆ. ಅಂತರರಾಷ್ಟ್ರೀಯ ಹಿತಾಸಕ್ತಿಗಳಿರುತ್ತವೆ. ಇಂತಹ ವಿಚಾರಗಳನ್ನು ಚರ್ಚಿಸಲು ಸಾಧ್ಯತೆಯಿದ್ದ ಅಂಕಣ 'ಸಾವಿನ ಸುತ್ತಮುತ್ತ'. ಆದರೆ ಈ ಅಂಕಣ ಒಬ್ಬ ಮೇಜರ್‌ನ ಸಾವಿಗೆ ಅನುಕಂಪ ತೋರುತ್ತ ಬದುಕಿನ ನಶ್ವರತೆಯ ಬಗ್ಗೆ ಸಾಗುತ್ತದೆ ವಿನಃ ಭಯೋತ್ಪಾದಕತೆಯಂತಹ ಗಂಭೀರ ವಿಚಾರವನ್ನು ಚರ್ಚೆಗೆ ಕೈಗೆತ್ತಿಕೊಳ್ಳುವುದಿಲ್ಲ. ಜಾಗತೀಕರಣದ ಕುರಿತು ಚರ್ಚೆ ಮಾಡಬಹುದಾಗಿದ್ದ 'ಮನಸ್ಸೆಂಬ ಮಾಯಾಬಜಾರ್' ಅಂಕಣ ಬಾಲ್ಯದ ನೆನಪುಗಳಲ್ಲಿಯೇ ಮುಗಿದುಬಿಡುತ್ತದೆ.


ಈ ಅಂಕಣಗಳು ತುಂಬು ಜೀವನಪ್ರೀತಿಯಿಂದ ಕೂಡಿವೆ. ಅಮೆರಿಕದ 82 ವರ್ಷದ ಜೂಡಿ ಎಂಬ ಮಹಿಳೆ ಆ ವಯಸ್ಸಿನಲ್ಲೂ ಹೊಸ ಅಡಿಗೆ ಕಲಿಯಲು, ಕಂಪ್ಯೂಟರ್‌ನಲ್ಲಿ ತರಬೇತಿ ಪಡೆಯಲು ಹೋಗುವಂತಹ ಸಂಗತಿಗಳನ್ನು ಇಲ್ಲಿನ ಅಂಕಣಗಳು ಸಂಭ್ರಮದಿಂದ ವರ್ಣಿಸುತ್ತವೆ.

ಅಪ್ಪ ತಾಯ್ತನ ಈ ಕೃತಿಯ ಬರಹಗಳಲ್ಲಿ ಎದ್ದು ಕಾಣುವ ಗುಣ. ಅದು ತನ್ನ ಸಮಾಜವನ್ನು ಪ್ರೀತಿಸುವ, ಅದು ದಾರಿ ತಪ್ಪಿದಾಗ ತಳಮಳಿಸುವ ತಾಯ್ತನ. ಇಂತಹ ತಾಯ್ತನ ಈ ಅಂಕಣಗಳಿಗೆ ಜೀವಂತಿಕೆಯನ್ನು ತಂದುಕೊಟ್ಟಿವೆ.

● ಸರ್ಜಾಶಂಕರ ಹರಳಿಮಠ

ಪ್ರಾಮಾಣಿಕತೆಯೇ ನಿಜವಾದ ಪೂಜೆ

ಮಕ್ಕಳಿಗೆಂದು ನೀತಿಪಾಠ



ಕೆಲವು ಚಲನಚಿತ್ರಗಳಲ್ಲಿ ಹಾಗೂ ಜಾಹೀರಾತುಗಳಲ್ಲಿ ಹಿಂದೂ ದೇವರನ್ನು ಹಾಗೂ ಯಮರಾಜನನ್ನು ಅವಮಾನಿಸಲಾಗಿದೆ ಎಂದು ಕೆಲವು ಮಠಾಧೀಶರು ಹಾಗೂ ಸಂಘಟನೆಗಳು ಪ್ರತಿಭಟಿಸಿದ್ದವು. ಆದರೆ ಇದೇ ಯಮರಾಜ ನ್ಯಾಯನಿಷ್ಠೂರ ಎಂದು ಬಿಂಬಿಸುವ ಮಕ್ಕಳ ಕಥೆಗಳೇಕೆ ಈ ಮಠಾಧೀಶ ಹಾಗೂ ಸಂಘಟನೆಗಳಿಂದ ಪ್ರಚಾರ ಪಡೆಯುತ್ತಿಲ್ಲ? ಮಕ್ಕಳಿಗೆ ಅತ್ಯುತ್ತಮ ನೀತಿಬೋಧನೆ ಮಾಡುವ ಕಥೆಯೊಂದನ್ನು ನಾನು ಚಿಕ್ಕಂದಿನಲ್ಲಿ ಕೇಳಿದ್ದು, ಈಗ ಈ ಕಥೆ ಚಲಾವಣೆ ಕಳೆದುಕೊಂಡಿದೆ. ಈ ಕಥೆಯನ್ನು ಮತ್ತೆ ಚಲಾವಣೆಗೆ ತಂದರೆ ಮಕ್ಕಳಿಗೆ ಒಳ್ಳೆಯ ನೀತಿಪಾಠ ಸಿಗಬಹುದೆಂಬ ಆಶೆಯಿಂದ ಅದನ್ನು ಇಲ್ಲಿ ಬರೆದಿದ್ದೇನೆ. -

ಒಂದು ಹಳ್ಳಿಯಿಂದ ಹತ್ತಿರದ ನಗರಕ್ಕೆ ದಿನಾ ಬೆಳಗ್ಗೆ ಒಂದು ಸರಕಾರಿ ಬಸ್ಸು ಹಳ್ಳಿಗರನ್ನು ತುಂಬಿಕೊಂಡು ಹೋಗುತ್ತಿತ್ತು. ಆ ದಿನ ಇನ್ನೇನು ಬಸ್ಸು ಹೊರಡಬೇಕೆನ್ನುವಷ್ಟರಲ್ಲಿ ಆ ಊರಿನ ಏಕೈಕ ದೇವಸ್ಥಾನದ ಪುರೋಹಿತರಾದ ಅಪ್ಪಂಭಟ್ಟರು ಓಡುತ್ತಾ ಬಂದು ಬಸ್ಸು ಹತ್ತಿದರು. ಅವರು ಒಳಗೆ ಬಂದು ನೋಡಿದಾಗ ಬಸ್ಸು ಮುಕ್ಕಾಲು ಭಾಗ ತುಂಬಿತ್ತು, ಕೇವಲ ಕೆಲವು ಹಿಂದಿನ ಸೀಟುಗಳು ಮಾತ್ರ ಖಾಲಿ ಇದ್ದವು. ತಾನು ಊರಿನ ಪ್ರತಿಷ್ಠಿತ ಅರ್ಚಕನಾಗಿ ಹಿಂದಿನ ಸೀಟಿನಲ್ಲಿ ಕುಳಿತುಕೊಳ್ಳುವುದು ಅವಮಾನಕರ ಎಂದೆಣಿಸಿ ಆ ಭಟ್ಟರು ಬಸ್ ಕಂಡಕ್ಟರ್‌ನನ್ನು ಕರೆದು ಆತನ ಕಿವಿಯಲ್ಲಿ ಏನೋ ಉಸುರಿದರು. ಆ ಕಂಡಕ್ಟರ್ ಎಲ್ಲಕ್ಕಿಂತ ಮುಂದಿನ ಸಾಲಿಗೆ ಹೋಗಿ ಅಲ್ಲಿ ಕುಳಿತಿದ್ದ ಮೂವರಲ್ಲಿ ಒಬ್ಬನಾದ ರೈತನನ್ನು ಎಬ್ಬಿಸಿ ಹಿಂದಿನ ಸೀಟಿಗೆ ಕಳುಹಿಸಿ ಅರ್ಚಕರನ್ನು ಆ ಮುಂದಿನ ಸೀಟಿನಲ್ಲಿ ಪ್ರತಿಷ್ಠಾಪಿಸಿದನು.

ಬಸ್ಸು ಚಲಿಸಲಾರಂಭಿಸಿದಾಗ ತಮ್ಮ ಬದಿಗೆ ಕೂತಿದ್ದ ಹಳ್ಳಿಯ ಕ್ಷೌರಿಕನ ಹೆಗಲು ಭಟ್ಟರಿಗೆ ತಾಗುತ್ತಿತ್ತು, ಮಡಿವಂತ ಭಟ್ಟರಿಗೆ ಇದು ಸರಿಯೆನಿಸಲಿಲ್ಲ, ಅದಕ್ಕಾಗಿ ಮತ್ತೆ ಕಂಡಕ್ಟರನನ್ನು ಕರೆದು ಏನೋ ಹೇಳಿದರು. ಆಗ ಕಂಡಕ್ಟರ್ ಕ್ಷೌರಿಕನನ್ನು ಎಬ್ಬಿಸಿ ಹಿಂದಿನ ಸೀಟಿಗೆ ಕಳುಹಿಸಿದನು.

ಈಗ ಭಟ್ಟರು ಆರಾಮಾಗಿ ಕಾಲು ಮೇಲಿಟ್ಟು ಪದ್ಮಾಸನದಲ್ಲಿ ಆಸೀನರಾದರು. ಆದರೆ ಮತ್ತೆ ಬಲಕ್ಕೆ ನೋಡಿದಾಗ ಅದೇ ಸೀಟಿನ ಕೊನೆಗೆ ಆ ಹಳ್ಳಿಯ ಮೋಚಿ ಗುಬ್ಬಚ್ಚಿಯಂತೆ ಕುಳಿತಿದ್ದು ಕಾಣಿಸಿತು. ಒಬ್ಬ ಚಪ್ಪಲಿ ಹೊಲಿಯುವವನು ಊರಿನ ಮಹಿಮಾಪೂರ್ಣ ದುರ್ಗಾ ದೇವಸ್ಥಾನದ ಅರ್ಚಕನ ಜೊತೆಸರಿಸಮಾನ ಕುಳಿತುಕೊಳ್ಳುವುದೆಂದರೇನು ಎಂದು ಯೋಚಿಸಿದ ಭಟ್ಟರು ಕಂಡಕ್ಟರ್‌ನನ್ನು ಕರೆದು ಮತ್ತೆ ಆತನ ಕಿವಿಯಲ್ಲಿ ಏನೋ ಹೇಳಿದರು. ಕಂಡಕ್ಟರ್ ಆ ಮೋಚಿಯನ್ನು ಅಲ್ಲಿಂದ ಎಬ್ಬಿಸಿ ಹಿಂದಿನ ಸೀಟಿಗೆ ರವಾನಿಸಿದನು. ಈಗ ಭಟ್ಟರು ಕಾಲು ಚಾಚಿ ರೀವಿಯಿಂದ ಇಡೀ ಸೀಟನ್ನು ಒಬ್ಬರೇ ಆಕ್ರಮಿಸಿ ಕುಳಿತು ಪ್ರಯಾಣಿಸತೊಡಗಿದರು. ಬಸ್ಸು ಮುಂದೆ ಒಂದು ಸೇತುವೆಯ ಹತ್ತಿರ ಬಂತು. ಮಳೆಗಾಲವಾದುದರಿಂದ ಹೊಳೆ ತುಂಬಿ ನೀರು ಸೇತುವೆಯ ಮೇಲಿಂದ ಹರಿಯುತ್ತಿತ್ತು. ಆದರೂ ಬಸ್ ಚಾಲಕ ಹುಚ್ಚು ಧೈರ್ಯದಿಂದ ಬಸ್ಸನ್ನು ಸೇತುವೆಯ ಮೇಲೆ ಚಲಾಯಿಸಿದನು. ನೀರಿನ ರಭಸಕ್ಕೆ ಬಸ್ಸು ನಿಯಂತ್ರಣ ತಪ್ಪಿ ಹೊಳೆಯಲ್ಲಿ ಬಿದ್ದು ಬಸ್ಸಿನಲ್ಲಿದ್ದವರೆಲ್ಲಾ ಮುಳುಗಿ ಸಾವನ್ನಪ್ಪಿದರು.

ಯಮಧೂತರು ಸತ್ತವರ ಆತ್ಮಗಳನ್ನು ತಂದು ಯಮನ ಮುಂದೆ ನಿಲ್ಲಿಸಿದರು. ತಮ್ಮ ಇಡೀ ಜೀವನವನ್ನೇ ದೇವರ ಪೂಜೆಗೆ ಮೀಸಲಿರಿಸಿದ್ದ ಭಟ್ಟರಿಗೆ ಸ್ವರ್ಗ ಗ್ಯಾರಂಟಿಯಾದುದರಿಂದ ಯಮಧೂತರು ಅವರನ್ನು ಸಾಲಿನ ಕೊನೆಗೆ ಗೌರವದಿಂದ ಕುಳ್ಳಿರಿಸಿ ಉಳಿದ ಪಾಪಾತ್ಮರನ್ನು ಸಾಲಿನ ಮೊದಲಿಗೆ ನಿಲ್ಲಿಸಿದರು. ಮೊದಲಿಗೆ ರೈತನ ಸರದಿ.

ಚಿತ್ರಗುಪ್ತ ವರದಿ ನೀಡಲಾರಂಭಿಸಿದನು. 'ಈ ರೈತ ಪ್ರಾಮಾಣಿಕನಾಗಿದ್ದ, ಕಷ್ಟಪಟ್ಟು ದುಡಿಯುತ್ತಿದ್ದ, ಬಂದ ಆದಾಯದಲ್ಲಿ ಸಂತುಷ್ಟನಾಗಿರುತ್ತಿದ್ದ, ಸ್ವಲ್ಪ ಹಣವುಳಿಸಿ ದಾನಧರ್ಮ ಮಾಡುತ್ತಿದ್ದ, ಮನಸ್ಸಿನಲ್ಲೇ ದೇವರನ್ನು ಸ್ಮರಿಸುತ್ತಿದ್ದ.' 'ಹಾಗಾದರೆ ಇವನನ್ನು ಸ್ವರ್ಗಕ್ಕೆ ಕಳುಹಿಸಿ' ಎಂದು ಯಮರಾಜ ಆದೇಶಿಸಿದನು. ಇದನ್ನು ಕೇಳಿ ಅರ್ಚಕರಿಗೆ ಕಸಿವಿಸಿಯಾಯಿತು. ಕಾರಣ ಸ್ವರ್ಗದಲ್ಲಿ ತನ್ನೊಂದಿಗೆ ಈ ಆಚಾರವಿಚಾರ ಗೊತ್ತಿಲ್ಲದ ಬೋರೇಗೌಡನು ಇರುವುದು ಭಟ್ಟರಿಗೆ ಸರಿಕಾಣಲಿಲ್ಲ.

ನಂತರದ ಸರದಿ ಕ್ಷೌರಿಕನದು.

'ಈತ ತನ್ನ ಕೆಲಸ ಪ್ರಾಮಾಣಿಕನಾಗಿ ಮಾಡುತ್ತಿದ್ದ, ಬರುತ್ತಿದ್ದ ಅಲ್ಪ ಆದಾಯದಿಂದ ಖುಷಿಯಾಗಿದ್ದ. ಜೊತೆಗೆ ತನಗೆ ಗೊತ್ತಿದ್ದ ಗಿಡಮೂಲಿಕೆ ಮದ್ದುಗಳಿಂದ ಜನರಿಗೆ ಉಚಿತ ಆರೋಗ್ಯ ಸೇವೆ ಮಾಡುತ್ತಿದ್ದ' ಎಂಬ ಚಿತ್ರಗುಪ್ತನ ವರದಿ ಕೇಳಿ ಯಮರಾಜ ಕ್ಷೌರಿಕನನ್ನೂ ಸ್ವರ್ಗಕ್ಕೆ ಕಳುಹಿಸಲು ಆದೇಶಿಸಿದನು. ಇದನ್ನು ಕೇಳಿ ಭಟ್ಟರಿಗೆ ಇನ್ನೂ ಹೆಚ್ಚಿನ ಕಸಿವಿಸಿ. ಕಾರಣ ಮೈಲಿಗೆಯುಳ್ಳ ಕ್ಷೌರಿಕನೂ ತನ್ನಂತೆ ಸ್ವರ್ಗಸುಖ ಅನುಭವಿಸುವುದೆಂದರೇನು!

ನಂತರದ ಸರದಿ ಮೋಚಿಯದು. 'ಈತ ತುಂಬಾ ಬಡವ, ಆದರೂ ಬಹಳ ಪ್ರಾಮಾಣಿಕವಾಗಿ ತನ್ನ ಕಸುಬು ನಡೆಸಿ, ಬರುತ್ತಿದ್ದ ಸ್ವಲ್ಪ ಆದಾಯದಲ್ಲೇ ಜೀವನ ನಡೆಸುತ್ತಿದ್ದ. ತನ್ನಂತಿದ್ದ ಬಡವರ ಚಪ್ಪಲಿ ಉಚಿತವಾಗಿ ರಿಪೇರಿ ಮಾಡಿಕೊಡುತ್ತಿದ್ದ' ಎಂಬ ಚಿತ್ರಗುಪ್ತನ ವರದಿ ಕೇಳಿ ಯಮರಾಜ ಅವನನ್ನೂ ಸ್ವರ್ಗಕ್ಕೆ ಕಳುಹಿಸಲು ಆದೇಶಿಸಿದನು. ಈಗಂತೂ ಭಟ್ಟರಿಗೆ ನಖಶಿಖಾಂತ ಉರಿದು ಹೋಯಿತು. ಈ ಅಸ್ಪೃಶ್ಯ ತನಗೆ ಸರಿಸಮನಾಗಿ ಸ್ವರ್ಗಸುಖ ಅನುಭವಿಸುವುದು ಸರಿಯಲ್ಲವೆಂದು ತನ್ನ ಸರದಿ ಬಂದಾಗ ಪ್ರತಿಭಟಿಸಬೇಕೆಂದು ಭಟ್ಟರು ನಿಶ್ಚಯಿಸಿದರು.


ನಂತರದ ಸರದಿ ಕಂಡಕ್ಟರನದ್ದು. ಅವನು ಅತ್ಯಂತ ಪ್ರಾಮಾಣಿಕವಾಗಿ ಸೇವೆ ಸಲ್ಲಿಸಿದ್ದರೂ ಕೊನೆಗೆ ಅರ್ಚಕರ ಒತ್ತಾಯಕ್ಕೆ ಮಣಿದು ಪ್ರಯಾಣಿಕರಲ್ಲಿ ಭೇದಭಾವ ಮಾಡಿದ್ದರಿಂದ, ಒಂದು ವರ್ಷ ಅವನನ್ನು ನರಕದಲ್ಲಿಟ್ಟು ನಂತರ ಸ್ವರ್ಗಕ್ಕೆ ಕಳುಹಿಸಲು ಯಮನು ಆದೇಶಿಸಿದ. ಬಸ್ ಚಾಲಕನು ಪ್ರಾಮಾಣಿಕನಾಗಿದ್ದರೂ ಕೊನೆಗೆ ಬೇಜವಾಬ್ದಾರಿಯಿಂದಾಗಿ ಬಹಳ ಜನರ ಸಾ ಕಾರಣನಾದುದರಿಂದ ಅವನನ್ನು ಮೂರು ವರ ನರಕದಲ್ಲಿಟ್ಟು ನಂತರ ಸ್ವರ್ಗಕ್ಕೆ ವರ್ಗಾವಣೆ ಮಾಡ ಯಮರಾಜ ಆದೇಶಿಸಿದನು.

ಕೊನೆಯ ಸರದಿ ಅರ್ಚಕನದು. ತಾನು ಜೀವನಪ ದೇವರ ಪೂಜೆ ಮಾಡಿ, ದೇವರ ಶುದ್ಧಿ, ಅಲಂ ಸೇವೆ ಮಾಡಿದ್ದರಿಂದ ತನಗೆ ರೈತ, ಕ್ಷೌರಿಕ, ಮೋಚಿಗ ಉನ್ನತ ಸ್ಥಾನದ ಸ್ವರ್ಗ ಸಿಗುತ್ತದೆಯೆಂದು ಭಟ್ಟ ಖಾತ್ರಿಯಿತ್ತು. ಚಿತ್ರಗುಪ್ತನು ಭಟ್ಟರ ಲೆಕ್ಕಾಚ ಓದತೊಡಗಿದನು- 'ಇವರು ದೇವರ ಪೂಜೆ ಒ ದಿನವೂ ತಪ್ಪಿಸಲಿಲ್ಲ, ದೇವಸ್ಥಾನವನ್ನು ಚೆನ್ನಾಗಿ ಅಭಿ ಮಾಡಿದ್ದಾರೆ.' ಚಿತ್ರಗುಪ್ತನಿಂದ ತನ್ನ ಹೊಗಳಿಕೆ ಕೇ ಭಟ್ಟರಿಗೆ ಸ್ವರ್ಗಕ್ಕೆ ಮೂರೇ ಗೇಣು ಉಳಿಯಿತು. ಚಿತ್ರ ಮುಂದುವರೆಸಿದನು -'ಆದರೆ ಈ ಅರ್ಚಕರು ಭಕ್ತ ಜಾತಿ ಭೇದ ಮಾಡುತ್ತಿದ್ದರು. ಧನಿಕ ಭಕ್ತರಿಗೆ ಮೊ ಸೇವೆ ಕೊಟ್ಟು ಬಡವರನ್ನು ಕೊನೆಗೆ ನಿಲ್ಲಿಸುತ್ತಿದ್ದರು. ದೇ ಅಲಂಕಾರ, ಪೂಜೆಗಳನ್ನು ಯಾಂತ್ರಿಕವಾಗಿ ಮಾಡುತ್ತಿ ಹೊರತು ಭಕ್ತಿಯಿಂದ ಅಲ್ಲ, ಅಷ್ಟೇ ಅಲ್ಲ ತನ್ನ ಕುಲದೇ ಮೇಲು, ಇತರ ದೇವರು ಕೀಳು ಎಂದು ದೇವ ತಾರತಮ್ಯ ಮಾಡುತ್ತಿದ್ದರು. ಯಾರಿಗೂ ಯಾವುದೇ ಸಹಾ ಮಾಡಿದವರಲ್ಲ, ಜ್ಯೋತಿಷ್ಯ-ಜಾತಕದ ಹೆಸರಲ್ಲಿ ಮುಗ್ಧ ದಾರಿ ತಪ್ಪಿಸುತ್ತಿದ್ದರು. ದೇವರಲ್ಲಿ ತಾರತಮ್ಯ ಪರವಾ ಆದರೆ ಭಕ್ತರಲ್ಲಿ ತಾರತಮ್ಯ ಮಾಡುವವ ಅತ್ಯಂತ ಹೇ ವ್ಯಕ್ತಿ. ದೇವರ ಪೂಜೆ ಪರಂಪರಾಗತವಾಗಿ ಬಂದದ್ದರಿ ಹಾಗೂ ಬೇರೆ ವೃತ್ತಿ ಗೊತ್ತಿಲ್ಲದಿದ್ದರಿಂದ ಹೊಟ್ಟೆಪಾಡಿಗ ಗತ್ಯಂತರವಿಲ್ಲದೇ ಅರ್ಚಕ ವೃತ್ತಿ ಸ್ವೀಕರಿಸಿದರೇ ಯಾವುದೇ ಭಕ್ತಿಯಿಂದ ಅಲ್ಲ. ಇದರಲ್ಲೂ ನ ಪ್ರಾಮಾಣಿಕತೆ ಇರಲಿಲ್ಲ. ದೇವರ ಹೆಸರ ದುರುಪಯೋಗಪಡಿಸಿ ಹಣ ಮಾಡುವವರು ಘೋ ಪಾಪಿಗಳು.' ಚಿತ್ರಗುಪ್ತನ ಈ ವರದಿ ಕೇಳಿ ಯಮರಾ ಅರ್ಚಕನನ್ನು ಘೋರ ನರಕಕ್ಕೆ ತಳ್ಳಲು ಆದೇಶಿಸಿದ

ಈ ರೀತಿ ದಿನಾಲೂ ದೇವರ ಪೂಜೆಯ ವೃತ್ತಿಯಾಗಿಸಿಕೊಂಡಿದ್ದವನು ನರಕಕ್ಕೂ ಹಾಗೂ ದೇ ಪೂಜೆ ಮಾಡದಿದ್ದರೂ ತಮ್ಮ ತಮ್ಮ ಕಸುಬ ಪ್ರಾಮಾಣಿಕವಾಗಿ ಮಾಡುತ್ತಿದ್ದವರು ಸ್ವರ್ಗ ಹೋಗಬೇಕಾಗಿ ಬಂದದ್ದು ಯಮಧರ್ಮನ ನ್ಯಾಯದಾ ವಿಧಾನ. ಇದು ಈಗಿನ ಪುರೋಹಿತರಿಗೆ ಮ ಮಠಾಧೀಶರಿಗೂ ಅನ್ವಯ.

● ಪ್ರವೀಣ್ ಎಸ್ ಶೆಟ್ಟಿ, ಮಂಗಳ

ಅಪ್ಪನ ಅಕ್ಷರ



ಬಡಕಲು ದೇಹದ
ಒಂಟಿ ಕಾಲ್ಗಳಿಗೆ
ಅದೆಂತಹ ಶಕುತಿಯೋ
ಒಂದೊಂದು ಹೆಜ್ಜೆಯೂ
ಮಾರು ದೂರ
ಸವೆದ ಹಾದಿ
ಯೋಜನ ದೂರ

ಸಾಲಿಗೊಂಟ ದಿನ
ಅಪ್ಪನ ಕಣ್ಣ ಬೆಳಕು
ಝಗ್ಗನೆ ಮಿಂಚು
ಎಲ್ಲರ ಕಣ್ಣು ಕೋರೈಸಿದ ನೆನಪು

ಎಸ್ಸೆಸ್ಸೆಲ್ಸಿ ಪರೀಕ್ಷೆ ನನಗೋ
ಅಪ್ಪನಿಗೋ ಗೊಂದಲ ನನಗೆ
ಪರೀಕ್ಷೆ ಮುಗೀವರ್‍ಗೂ
ಕಾದು ಚಡಪಡಿಸಿದ್ದು ನಾನಲ್ಲ
ಸಾವಿರ ವರ್ಷಗಳ
ಸೋಲಿಂದ ತಪ್ಪಿಸಿಕೊಂಡ ಸಂಭ್ರಮ

ಪರೀಕ್ಷೆಯಲಿ
ಅಪ್ಪ ಪಾಸಾಗಿದ್ದ

ತುಳಿತಕ್ಕೆ
ಉತ್ತರ ಸಿಕ್ಕಿತೆಂದು ಕುಣಿದಾಡಿದ್ದ
ಕೆರೆದುಂಬಿ ಕೋಡಿ ಹರಿದಿತ್ತು

ಪ್ರತೀ ಸಾಲು ಬರೆವಾಗಲೂ
ಅಪ್ಪನ ರಂಟೆಗಳು ಮೂಡಿಸಿದ
ಗೀರುಗಳು
ಮುಂದಿನ ಸಾಲುಗಳಿಗೆ ಕರೆದಂತೆ
ಅಪ್ಪ ಬಿತ್ತಿದ
ಅಕ್ಕಡಿ ಸಾಲಿನ ಗಿಡಗಳು
ಕೈಬೀಸಿ ಕರೆದಂತೆ
ಅಕ್ಷರಗಳು
ಬೆಳೆಯುತಿವೆ.

■ ಬಿ. ಶ್ರೀನಿವಾಸ್, ಹಾವೇರಿ

▸2 ಹಿಂದೂತ್ವ ಮತ್ತು ದಲಿತರು

ಯಲ್ಲಿ ಸಮರ್ಥಿಸಿಕೊಳ್ಳುವುದು ಮತ್ತು ಅದಕ್ಕೆ ಲೋಹಿಯಾವಾದ ಇತ್ಯಾದಿಗಳ ಬಣ್ಣದ ಮೆರುಗು ತೊಡಿಸುವ ಸೈದ್ಧಾಂತಿಕ ಭ್ರಷ್ಟತೆ ಕರ್ನಾಟಕಕ್ಕೂ ಕಾಲಿಡುತ್ತಿದೆ. ಈ ಬಗೆಯ ತತ್ವಭ್ರಷ್ಟ ರಾಜಕಾರಣವನ್ನೇ ನಿಧಾನವಾಗಿ ಹಿಂದೂತ್ವವಾದಿಗಳು ದಲಿತರನ್ನು ತಮ್ಮ ಸಂಘಟನಾತ್ಮಕ ತೆಕ್ಕೆಗೆ ತೆಗೆದುಕೊಳ್ಳಲು ಒಂದು ಆಯುಧವನ್ನಾಗಿ ಮಾಡಿಕೊಂಡಿದ್ದನ್ನು ಗಮನಿಸಿದರೆ ಕರ್ನಾಟಕವು ಅದರ ಹೊಸ್ತಿಲಲ್ಲಿರುವುದು ಕಾಣುತ್ತದೆ.

ಇದಲ್ಲದೆ ಯಡಿಯೂರಪ್ಪನವರ ಹಯಾಮಿನಲ್ಲಿ ಮಠಗಳಿಗೆ ದೇವಸ್ಥಾನಗಳಿಗೆ ಹಣವನ್ನು ನೀಡುವ ಸಾಂಸ್ಕೃತಿಕ ರಾಜಕಾರಣದ ಪ್ರಧಾನ ಫಲಾನುಭವಿಗಳು ಲಿಂಗಾಯತ ಮಠಗಳೇ ಆಗಿದ್ದರೂ ಅದರ ಹಿಂದೆ ಹಿಂದೂತ್ವದ ಒಂದು ದೊಡ್ಡ ಅಜೆಂಡಾವೇ ಅಡಗಿತ್ತು. ಬಿಜೆಪಿಯ ಅಧಿಕಾರಾವಧಿಯಲ್ಲಿ ಉತ್ತರ ಮತ್ತು ದಕ್ಷಿಣ ಕರ್ನಾಟಕದಲ್ಲಿ ಸಮುದಾಯ ಭವನಗಳ ಹೆಸರಲ್ಲಿ ದಲಿತರ ಮತ್ತು ಸಣ್ಣ ಪುಟ್ಟಜಾತಿಗಳ ಊರ ದೇವತೆಗಳನ್ನು, ಗುಡಿಗಳನ್ನು ಪುನರುಜ್ಜೀವಿಸಿ ಅದಕ್ಕೆ ವಾರ್ಷಿಕ ಜಾತ್ರೆ ಮಾಡುವ ಕಾರ್ಯಕ್ರಮಕ್ಕೆ ಸರ್ಕಾರ ಮತ್ತು ಬಿಜೆಪಿ ಪಕ್ಷ ನೇರವಾಗಿ ಹಣ ನೀಡುತ್ತಿದೆ. ಈ ರೀತಿ ನವೀಕರಣಗೊಂಡ ದೇವಸ್ಥಾನಗಳಲ್ಲಿ ಈವರೆಗೆ ಇಲ್ಲದ ಬ್ರಾಹ್ಮಣೀಯ ಪೂಜೆಗಳನ್ನು, ನವೀಕರಣದಲ್ಲಿ ವಾಸ್ತು ಪೂಜೆ, ಆಚಾರವಿಚಾರ ಎಲ್ಲದರಲ್ಲೂ ಬ್ರಾಹ್ಮಣೀಯ ಅಂಶಗಳನ್ನು ತೂರಿಸಿ ಶೂದ್ರ ಮತ್ತು ದಲಿತ ದೈವಗಳನ್ನು ಬ್ರಾಹ್ಮಣ್ಯದ ಒಕ್ಕಲನ್ನಾಗಿಸುವ ಸಾಂಸ್ಕೃತಿಕ ರಾಜಕಾರಣವನ್ನು ಹಿಂದೂತ್ವ ಪ್ರಾರಂಭಿಸಿದೆ. ಇದು ಹೇಗೆ ದಲಿತ ಮತ್ತು ಶೂದ್ರ ಪ್ರಜ್ಞೆಯನ್ನು ಬ್ರಾಹ್ಮಣ್ಯದ ಅಧೀನವಾಗಿಸುತ್ತದೆ ಮತ್ತು ಶೂದ್ರ ಮತ್ತು ದಲಿತರನ್ನು ಸಂಘಪರಿವಾರದ ಪದಾತಿದಳವಾಗಿಸುತ್ತದೆ ಎಂಬುದಕ್ಕೆ ಅವೈದಿಕ ನೆಲೆವೀಡಾದ ಅವಿಭಜಿತ ದಕ್ಷಿಣ ಕನ್ನಡ ಹೇಗೆ ಈ ಬಗೆಯ ಸಾಂಸ್ಕೃತಿಕ ರಾಜಕಾರಣದಿಂದ ಹಿಂದೂತ್ವದ ಸೈದ್ಧಾಂತಿಕ ನೆಲೆವೀಡಾಯಿತು ಎಂಬುದೇ ಒಂದು ದೊಡ್ಡ ಉದಾಹರಣೆ.

ಇದು ಈ ದೇಶದ ತುಳಿತಕ್ಕೊಳಗಾದ, ದಮನಿತ ಶೋಷಿತ ಜನರ ದೃಷ್ಟಿಯಿಂದ ಹಾಗೂ ಈ ದೇಶದ ಪ್ರಜಾಸತ್ತೆಯ ಭವಿಷ್ಯದ ದೃಷ್ಟಿಯಿಂದ ಅತ್ಯಂತ ಆತಂಕಕಾರಿ ವಿದ್ಯಮಾನವಾಗಿದೆ. ಈ ದೇಶದ ಸಮಾಜವಾದೀ ವ ಪ್ರಜಾಸತ್ತಾತ್ಮಕ ಭವಿಷ್ಯದಲ್ಲೇ ದಲಿತರ ವಿಮೋಚನ ಬೆಳಕು ಇದೆಯೆಂದು ಈ ದೇಶದ ದಮನಿತ ಜನರ ನಾಯಕ ಮತ್ತು ದಾರ್ಶನಿಕ ಅಂಬೇಡ್ಕರ್ ಸ್ಪಷ್ಟ ಮಾತುಗಳಲ್ಲಿ ಹಲವಾರು ಬಾರಿ ಹೇಳಿದ್ದರು. ಪ್ರಜಾತಂತ್ರೀಕರಣ ಕೇವಲ ಪ್ರಭುತ್ವ ರಚನೆಯ ಮಟ್ಟ ಮಾತ್ರವಲ್ಲದೆ ಸಾಮಾಜಿಕ ಮತ್ತು ಆರ್ಥಿಕ ಕ್ಷೇತ್ರದ ಬಲುಬೇಗನೆ ನಡೆಯದಿದ್ದರೆ ಈ ದೇಶದ ಸ್ವಾತಂ ಏನೂ ಅರ್ಥವಿರುವುದಿಲ್ಲವೆಂದು ಸ್ಪಷ್ಟವಾಗಿ ಘೋಷಿಸಿ ಆದರೆ ಕಳೆದ ಆರು ದಶಕಗಳಲ್ಲಿ ಅದರಲ್ಲೂ ಎರಡು ದಶಕಗಳಲ್ಲಿ ಹಿಂದೂತ್ವವಾದಿ ಶಕ್ತಿಗಳು ಅಂಬೇ ಪ್ರತಿಪಾದಿಸಿದ ಮೌಲ್ಯಗಳಾದ ಪ್ರಜಾತಂತ್ರ ವ ಸಮಾಜವಾದದ ಮೇಲೆಯೇ ಸಮರ ಸಾರಿವೆ. ಈ ಸಮ ದಲಿತರನ್ನೇ ಬಳಸಿಕೊಳ್ಳುತ್ತಿದೆ. ಇದು ಹೇಗೆ ಸಾಧ್ಯವಾಯಿ

ಡಾ. ಆನಂದ್ ತೇಲ್‌ತುಂಬ್ಡೆಯವರು ಒಂದು ಹೇಳಿರುವಂತೆ ಅಂಬೇಡ್ಕರ್‌ರನ್ನು ಈ ದೇಶದ ಸಮೂಹ ದಾರಿದೀಪವಾಗಿ ಕಾಣುವ ಬದ "ಪ್ರತಿಮೆ"ಯಂತೆ ಕಾಣತೊಡಗಿದ್ದು ಇದಕ್ಕೆ ಒಂದು ಪ್ರಮ ಕಾರಣ. ಅದೇರೀತಿ ಸಮಕಾಲೀನ ದಲಿತ ಸಂಘಟನ ಇಡೀ ಸಮಾಜವನ್ನೇ ಕ್ರಾಂತಿಕಾರಿಯಾಗಿ ಪುನಾ ಮಾಡಬೇಕೆಂಬ ಅಂಬೇಡ್ಕರ್ ವಾದವನ್ನು ದಲಿ ಅಧಿಕಾರ ಬೇಕೆಂಬ ಹಂಬಲವೆಂಬ ಮಟ್ಟಕ್ಕೆ ಇಳಿಸಿ ಸಹ ವ್ಯವಸ್ಥೆಗೆ - ಅದರಲ್ಲೂ ಹಿಂದೂತ್ವವಾದಿಗಳಿ ಅಂಬೇಡ್ಕರ್‌ರನ್ನು ಅಪವ್ಯಾಖ್ಯಾನಗೊಳಿಸಿ ತ ಅಜೆಂಡಾಗಳಿಗೆ ತಕ್ಕಂತೆ ಬಳಸಿಕೊಳ್ಳಲು ಸಾಧ್ಯವಾಗು ಮಾಡಿತು.

ಹೀಗೆ ದಲಿತರ ಮೇಲೆ ಹೆಚ್ಚಾಗುತ್ತಿರುವ ಹಿಂದೂ ಪ್ರಭಾವವು ಸಾರಾಂಶದಲ್ಲಿ ಈ ದೇಶದ ಪ್ರಜಾಸತ್ತೆ ಸಮಾಜವಾದಿ ಕನಸುಗಳ ವಿರುದ್ಧ ಮತ್ತು ಈ ದೇ ಜನತೆಯ ವಿರುದ್ಧ ಹಿಂದೂತ್ವವಾದಿಗಳು ನಡೆಸುತ್ತಿ ಪ್ರತಿಗಾಮಿ ಆಕ್ರಮಣದ ತಾತ್ಕಾಲಿಕ ವಿಜಯದ ಕಥನ ತೆರೆದಿಡುತ್ತದೆ.

...ತ್ಯಾನಂದ ಹೆಂಗಸ್ರಿಗೆ ಗಂಡಸಂತೆ, ಗಂಡಸ್ರಿಗೆ ಹೆಂಗಸಾದನಂತೆ

ಬಯಲುಸೀಮೆ ಕಟ್ಟೆಪುರಾಣ

• ಬಿ.ಚಂದ್ರೇಗೌಡ

...ಮ್ಮೆಮೇಲಿನ ಬಟ್ಟೆ ಹಾರಾಡಿಸುವಂತಹ ಗಾಳಿ. ...ರಿನ ಎಳ್ಳು, ಜೋಳ, ತಡ್ನಿ ಬಿತ್ತಲು ಅವಕಾಶ ...ಟ್ಟು ಮಳೆ ಕೈಕೊಟ್ಟಿತ್ತು, ಆದ್ದರಿಂದ ಕಾಳಮಾವ ...ಕೊಂಡಿದ್ದ ಆದರೆ ಜವಾಬ್ದಾರಿ ಹೊತ್ತವರಲ್ಲಿ ಅಂತಹ ...ದೇ ಗಾಬರಿ ಕಾಣದೆ ಅವರೆಲ್ಲಾ ಯಾವನೋ ...ರಿ ಕಪಟ ಸನ್ಯಾಸಿಯ ಸಮಸ್ಯೆಯಲ್ಲಿ ಮುಳುಗಿ ...ದ್ದರು. ಟಿವಿಯವರಂತೂ ಅನ್ನ ನೀರು ಬಿಟ್ಟು ...ತ್ತಿದ್ದರು. ಅದನ್ನೆಲ್ಲಾ ಕೇಳಿಸಿಕೊಂಡ ಕಾಳಮಾವ, ...ವನ್ಯಾರ್ಲ ಉಗ್ರಿ ಸನ್ಯಾಸಿ, ಸಿಕ್ಕಿ ಸಿಕ್ಕಿದೋರಿಗ್ಯಲ್ಲ ...ಕಲುಸ್ತನಂತಲ್ಲಾ ನಿಜವೆ?" ಎಂದ.

...ಯ್ಯೋ ಅವುಂದು ಹಳೆ ಕತೆ ಕಣಮಾವ. ಕಲ್ತಿದ್ದ ...ಕಲೆಗಾತಿ ಅಂದ್ರೆ ನಡುಂತ್ರದಲ್ಲಿ ಬುಟ್ಟು ಏನು ...ಅಂದ್ಲಂತೆ. ಅಂಗಾಯ್ತು ಇವನಕತೆ."

...ರಿ, ಅಂಥೋನ್ಯಾಕೆ ಮಡಿಕಂಡವ್ರುರೆ?"

...ಮಡಿಕಂಡವ್ರುರೆ ಅಂದ್ರೆ ಸಮ್ಮೊರಂಗವುರಪ್ಪ, ಇವತ್ತಿನ ... ನಿತ್ಯಾನಂದ ವಾಸ ಮಾಡೊ ಜಾಗದಲ್ಲಿರೊ ...ರಣಿಗಳು ಬಾಯಿಬುಟ್ಟಿಲ್ಲ, ಅಲ್ಲೇ ಜಿಲ್ಲಾ ... ಮೆಂಬ್ರುಗಳವುರೆ, ಎಮ್ಮೆಲ್ಲೆ ಅವುನೆ, ...ಅವುನೆ. ಅವುರ್‍ಯಾರು ನಿತ್ಯಾನಂದನ ವಿರುದ್ಧ ... ಒಂದು ಮಾತಾಡಿಲ್ಲ ಅಂದ್ರೆ, ಈ ...ಕ್ಕಳು ಅವುನತ್ರ ಏಟು ಕಿತ್ತಿರಬೇಕು ...ಕು?"

...ನೋಡು ಮತ್ತೆ, ಅಂಗರೆ ಮ್ಯರಿಯದಿಲವೆ ...?"

...ಅಂಥೋನತ್ರಕ್ಕೂ ಜನ ಹೋಯ್ತರಲ್ಲೇಳು. ...ಪ್ರೂ ಹೊಯ್ತರೆ?" ಎಂದ.

...ಹೆಂಗಸರಿಗೇನು ಕ್ಯಲಸ ಅಲ್ಲಿ?" ಎಂದಳು

...ಅಲ್ಲಿ ಹೆಂಗಸರೇ ಮುಖ್ಯ ಕಣೆ. ಬೇಕಾದಷ್ಟು ...ದ್ದು ಮದಿವಾಗದೆಯಿರೊ ಹೆಂಗಸರು, ...ನೊ ತರಕಲ ಗಂಡಸ ಕಟ್ಟಿಗಂಡಿರೊ ...ಸರಲ್ವೆ, ದುಡ್ಡು ಕಾಸು ಇರೊ ...ತರ ಮನಿಯೋರ್ಯಲ್ಲ ಬಂದು ... ಮಗನ ಕಾಲೊತ್ತದು, ಹಾಸಿಗೆ ...ಏ, ಆಮ್ಯಾಲೆ ಅಂಗಾತ ಮನಿಕಳದು, ಯಲ್ಲಾನು ...ಂತೆ. ಈಗ ಅವುನ ಹಿಂಸೆ ತಡಿಯಕ್ಯಾಗದೊಳೊಬ್ಬಳು ... ದೂರೇಳಿ ಜೈಲಿಗಾಕಿಸಿದ್ಲು."

...ಅಗ್ಯಾರೊ ವಬ್ಬ ಯಕ್ಕಡದಲ್ಲಿ ವಡದಿದ್ದ ಅಲವೆ."


...ಥೂ, ಅದು ಗುಂಪಿನಲ್ಲಿ ನ್ಯಡದ ದೊಂಬಿ ಕ್ಯಲಸವಂತೆ ...ಮಾವ. ಯಾರು ವಡೆದ್ರು ಅಂತ ಯಾರಿಗೂ ...ಗಲಿಲ್ಲ, ಆದ್ರು ಪಾಪ ವಬ್ಬ ಮೇಷ್ಟ್ರ ಅರೆಸ್ಟು ...ಕಂಡು ತಗಂಡೋದ, ದೇವರಾಜ ಅನ್ನೊ ಡಿವೈಎಸ್‌ಪಿ ...ನಿಂದ ನಿಮ್ಮವ್ವ ಕೆಣಕಿದ್ನ? ಅಥವಾ ನಿನ್ನೆದ್ದಿ ...ಯಿಸಿದ್ನೆ' ಅಂತಾವ ಕಿವೀಲಿ ಕೇಳಬಾರದ ಮಾತನ್ಯಲ್ಲಿ ಅಂದು, ವಾಚು, ಉಂಗುರ, ಮೊಬೈಲ್ ಕಿತಗಂಡು ಕಳಿಸಿದ್ದನಂತೆ. ಅಲ್ಲಿಗೆ ಪೊಲೀಸ್‌ನೋರು ನಿತ್ಯಾನಂದನ ಎಂಜಲು ತಿಂದು ಅವುನ ಪರನೆ ಇದ್ರು ಅಂದಂಗಾಯ್ತು."

"ಆಸ್ರಮಕೋದ ಹುಡುಗರಿಗೆ ಕೈಕಾಲು ಮುರಿಯಂಗೆ ವಡದೋಡಿಸಿದ್ರೂ ಈ ಪೊಲೀಸ್‌ನೋರು ಅಂದ್ರೆ ಅವುರಿರದೆ ಅವುನ್ನ ಕಾಯಕ್ಕೇ ಕಂಡ್ರ" ಎಂದ ಸೀರ.

"ಅಂಗೆ ಆಯ್ತಪ್ಪ, ಸದಾನಂದ ಗೌಡ ಅವುನ್ನ ಅರೆಸ್ಟು ಮಾಡಿ ವಳಿಕಾಕಿ ಅನ್ನದೆಯಿದ್ರೆ ಈ ಪೊಲೀಸ್‌ನೋರು ಪ್ರತಿಭಟನೆ ಮಾಡೋರಿಗ್ಯಲ್ಲ ಸರಿಯಾಗಿ ಗೂಸು ಕೊಟ್ಟಗಂಡೇ ಕಾಲಹಾಕೋರು."

"ಅವುನು ಯಾವೂರೋನ್ನ?"

"ಏ, ಅದು ಕಾಟ್‌ಪಾಡಿ ಕೊಂಗಾಟನನ್ನ ಮಗಂದು



ಕಣಮಾವ. ನೋಡಕ್ಕೆ ಹೆಂಗಸಿಗೆ ಹೆಂಗಸೂ ಅಲ್ಲ, ಗಂಡಸಿಗೆ ಗಂಡ್ಸೂ ಅಲ್ಲ, ಅಂಗೆ ಕಾಣ್ತನೆ. ಮಾಡೋ ಕ್ಯಲಸಗಳೂ ಅಂತವೆಯಾ."

"ಅದೇನು ಕ್ಯಲಸ ಮಾಡ್ತನೂ?"

"ಥೂ, ಆ ನನ್ನ ಮಗನ ಕ್ಯಲಸ ಒಂದೊಂದಲ್ಲ, ಹೇಳಕ್ಕೆ ಒಂಥರಾಯ್ತದೆ" ಎಂದು ಉಗ್ರಿ ಹೇಳುತ್ತಿರುವಂತೆ ಕಾಣಿಸಿಕೊಂಡ ವಾಟಿಸ್ಸೆ.

"ನಾನೇಳ್ತಿನಿ ಇರೊ ಉಗ್ರಿ. ನಿತ್ಯಾನಂದನ ನಿತ್ಯದ ಕೆಲಸ ಏನೂ ಅಂದ್ರೆ ಬಿಟ್ಟಿ ಕೂಳು ತಿಂದು ಭಾಷಣ ಮಾಡದು, ಕನ್ನಡದಲ್ಲೊ ತಮುಳಲ್ಲೋ ಮಾಡಿದ್ರೆ ಜನಕ್ಕೆ ಒಂಥರಾ ಸದರಾಗದು. ಇವುನು ಇಂಗ್ಲೀಸಲ್ಲಿ ಮಾಡ್ತನೆ ದೊಡಪ್ಪ ಸಂಜಾಯ್ತು ಅಂದ್ರೆ ಇಷ್ಟವಾದೊರ್‍ನ ಬೆಡ್‌ರೂಮಿಗೆ ಕರಿತನಂತೆ. ಗಂಡಸಾಗಿದ್ರೆ ನೀನೇ ಈಶ್ವರ, ನಾನೇ ಪಾರ್ವತಿ ಅಂತನಂತೆ. ಹೆಂಗಸಾಗಿದ್ರೆ ನಾನೇ ಪರಮೇಶ್ವರ, ನೀನೇ ಜಗದೇಶ್ವರಿ ಅಂತನಂತೆ. ಅದ್ಕು ಮದ್ಲು ವಯಾಗ್ರ ತಗಂಡಿರ್ತಿದ್ದಂತೆ."

"ವಯೋಗ್ರ ಅಂದ್ರೇನು?"

"ಹಿಂದೆ ಜೆ.ಎಚ್. ಪಟೇಲ್ರು ವಿಷಯ ಮಾತಾಡು ವಾಗ ವಯಾಗ್ರ ವ್ಯಾಲೆ ದೀಟ್ಯೆಲಾಗಿ ಚರ್ಚೆ ಮಾಡಿದ್ವಿ ದೊಡಪ್ಪ, ಅದೊಂದು ಬಿಳಿ ಬಣ್ಣದ ಮಾತ್ರೆ. ಅದ ತಗಂಡ್ರೆ ಯಂತ ಮನುಸ್ಯ ಕೋಳಿ ಹುಂಜನಂಗಾಯ್ತನೆ."

"ಸರಿಯಪ್ಪ, ಆಸ್ರಮದಲ್ಲಿ ಕೋಳಿಹುಂಜನಿಗೇನು ಕೆಲಸ?"

"ನಿತ್ಯಾನಂದ ಇದ್ದಿದ್ದು ಆಶ್ರಮ ಅಲ್ಲ ದೊಡಪ್ಪ, ಅದೊಂದು ಸೆಕ್ಸ್ ವರ್ಕ್ ಕೇಂದ್ರ. ಅಂದ್ರೆ ಹೆಣ್ಣು ಮತ್ತು ಗಂಡು ಸೂಳೆರಿದ್ದ ವಟಾರ. ಅವುರಿಗೆಲ್ಲಾ ಲೀಡ್ರು ಈ ನಿತ್ಯಾನಂದ. ಬಿಳಿಬಟ್ಟೆಲಿದ್ರೆ ಜನ ಡವುಟು ಮಾಡ್ತರೆ ಅಂತಾ ಕಾವಿ ಹಾಕತಿದ್ದ. ಯಾಕೆ ಅಂದ್ರೆ ಕಾದಿ ಮರೆಲಿ ಏನು ಬೇಕಾದ್ರು ಮಾಡಿ ಜಯಿಸಿಕೊಬವುದು."

"ನಿಜ ಕಣೊ ವಾಟಿಸ್ಸೆ. ಇತ್ತೀಚೆಗಂತೂ ಇವುರ ಹಾವಳಿ ಜಾಸ್ತಿಯಾಗಿ ಬುಡ್ತು. ಮುಂದಿನ ಚುನಾವಣೇಲಿ ನೇರವಾಗೇ ಬಂದು ಕ್ಯಾನುವಾಸು ಮಾಡ್ತರೆ."

"ಮಾಡದೆ ಏನು ಎಡೂರಪ್ಪ ದುಡ್ಡು ಕೊಟ್ಟಿಲ್ಲವೇನೊ ಉಗ್ರಿ? ಅವುನ್ಯಾರೊ ವಬ್ಬ ಸ್ವಾಮಿ ಯಂಗಾಡ್ತನೆ ಅಂದ್ರೆ ಕೋತಿಗೆ ಯಂಡ ಕುಡಿಸಿದಂಗಾಡ್ತನೆ. ಅವುನಿಗೆ ಎಡೂರಪ್ಪ ಎಷ್ಟು ಕೊಟ್ಟಿರಬವುದು ಲ್ಯಕ್ಕಹಾಕು."

"ಕೊಟ್ಟೋರು ಈಸಗಂಡೋರು ಲ್ಯಕ್ಕ ಹಾಕಿಲ್ಲ, ನಾನ್ಯಾಕೆ ಹಾಕ್ಲೊ. ಈ ಟೈಮಲ್ಲಿ ಎಡೂರಪ್ಪ ಇರಬೇಕಾಗಿತ್ತು."

"ಇದ್ರೇನು ಮಾಡತಿದ್ದ?" ಎಂದಳು ಜುಮ್ಮಿ.

"ಏನೂ ಮಾಡ್ತಿರಲಿಲ್ಲ ಕಣಕ್ಕ. ನಿತ್ಯಾನಂದನಿಗೆ ಸಪೋರ್ಟು ಮಾಡಿಬುಡೊನು. 'ನಿತ್ಯಾನಂದ ಏನು ಮಾಡಬಾರ್ದು ಮಾಡಿಲ್ಲ, ಯಲ್ಲಾ ಮಾಡದ್ನೆ ಅವುರು ಮಾಡಿರದು. ನೀವು ನಿಮ್ಮ ಮನೆಲಿ ಮಾಡಲ್ವ?' ಅಂದು ಬುಡೋನು. ಆಗ ಏನು ಮಾಡಕ್ಯಾಯ್ತಿರಲಿಲ್ಲ, ಅದೇ ನಮ್ಮ ಸದಾನಂದ ಗೌಡನ್ನ ನೋಡು, ಅರೆಸ್ಟು ಮಾಡಿಸಿಬುಟ್ಟ ಅತ್ತಗೆ."

"ಯಾಕೆ ಮಾಡಿಸಿದ ಗೊತ್ತೇನೊ?"

"ಗೊತ್ತು ಕಣೊ ಉಗ್ರಿ. ಜನ ನಿತ್ಯಾನಂದನ ತರ ಸರಕಾರ ಅದೆ ಅಂತ ತಿಳಕತ್ತರೆ ಅಂತ ಅರೆಸ್ಟು ಮಾಡಸ್ಯಾನೆ. ಅದ್ನೂ ನಗಾಡಿಕಂಡು ಹೇಳಿದಾಗಲೇ ನಾನು ಡವುಟು ಮಾಡಿದ್ದೆ, ಅಂತೂ ಹಿಡಿಸ್ಯಾಕಿದ ಅತ್ತಗೆ."

"ಈಗೇನು ಮಾಡ್ತರ್ಲ ಅವುನ್ನ?"

"ನನ್ನ ಕೇಳಿದ್ರೆ ಆ ನನ್ನ ಮಗನಿಗೆ ಒಂದು ಮದುವೆ ಮಾಡಿ ಆಯುರ್ವೇದಿಕ್ ಮಾತ್ರೆ ಅಂಗಡಿ ಇಟ್ಟುಕೊಡದು ವಳ್ಳೆದು. ಯಾಕೆ ಅಂದ್ರೆ ವಯಾಗ್ರಾ, ಅಫೀಮು ಇಂಥಾ ಪದಾರ್ಥ ಕೊಟ್ಟು ಅಭ್ಯಾಸಾಗ್ಯದೆ."

"ಸರಿಯಾಗೇಳ್ದ ತಲರಟೆ" ಎಂದಳು ಜುಮ್ಮಿ.

"ನೋಡಕ್ಕ ಅವುನ ಮ್ಯಾಲೆ ಏನೇನು ದೂರವೆ ಅವುನ್ನಲ್ಲ ತಗಂಡು ತನಿಖೆ ಮಾಡಿ ಕೇಸಾಕ್ತರೆ. ಸಾಮಾನ್ಯವಾಗಿ ಅವುನಿಂದ ತೊಂದರೆ ಅನುಭವಿಸಿದೋರು ಕೋರ್ಟಿಗೆ ಬಂದು ಸಾಕ್ಷಿ ಹೇಳಬೇಕು. ಅಷ್ಟೊತ್ತಿಗೆ ಭಾಳ ಜನ ಸತ್ತೋಗಿರತರೆ. ಇನ್ನ ಕೆಲವರಿಗೆ ಹುಚ್ಚು ಬಂದಿರತದೆ."

"ಅದ್ಯಾಕ್ಲ ಹುಚ್ಚು ಬಂದತೊ?"

"ಇಸಿಸಿ, ಅವುನತ್ರ ಇದ್ದೊರ್‍ಯಲ್ಲ ಅರೆಬರೆ ಹುಚ್ಚುರು ಕಣಕ್ಕ, ಅವುಕೆ ಇವುನು ವಯಾಗ್ರ, ಅಫೀಮು, ಗಾಂಜಾ ತಿನ್ನಿಸಿ ಮಡಿಗ್ಯವುನೆ. ಅವು ಇಂತ ಆಶ್ರಮದಲ್ಲಿರಕ್ಕೇ ಸರಿ. ಯಂಗೋ ಮೇಂಟೇನ್ ಮಾಡಬವುದು. ಆದ್ರೆ ಬೀದಿಗೆ ಬಂದ್ರೆ ಪೂರಾ ತಲಿ ಕೆಟ್ಟೋಯ್ತದೆ."


"ಅವುಳ್ಯಾರೊ ಸಿನುಮಾ ನಟನೂ ಅಲ್ಲಿಗೋಯಿತ್ತಿದ್ಲಂತೆ ನಿಜವೆ?"

"ಅವುಳ್ಯಾರೊ ಏನೂ. ಅವುಳಂಥೋರು ಬೇಕಾದೊಟು ಜನ ಹೋಯಿತ್ತಿದ್ರು. ಅಂಥಾ ಸಿದ್ಧಗಂಗೆ ಸ್ವಾಮಿ, ಚುಂಚನಗಿರಿ ಸ್ವಾಮಿ ಹೋಗಿ ಅವುನು ಆಶ್ರಮ ಕಟ್ಟಕ್ಕೆ ಆಶೀರ್ವಾದ ಮಾಡ್ತರೆ. ನಮ್ಮ ದ್ಯಾವೇಗೌಡ್ರು ಹೋಗಿ ಕಾಲಿಗೆ ಬಿದ್ದು ಬತ್ತರೆ ಅಂದ್ರೆ ಉಳದೋರದು ಯಾವ ಲ್ಯಕ್ಕ?"

"ಯತ್ತ ಮುಂದಾಗೋದ್ರು ದ್ಯಾವೇಗೌಡುಂದ ತಂದೇ ತತ್ತಿ ಅಲವೆ?"

"ದೊಡಪ್ಪ ಗಾಡಪ್ಪಾಮಿಸ್ ದ್ಯಾವೇಗೌಡ್ರು ನಿತ್ಯಾನಂದನ ಕಾಲಿಗೆ ಬಿದ್ದ ಬಂದ್ರು. ಹುಡುಗಾಗಿದ್ದಾಗ ನಿತ್ಯಾನಂದನಂಗೇ ಕಾಣತಿದ್ದ ಎಸ್ಸೆಂ ಕೃಷ್ಣ ಹೆಡತಿ ಸಮೇತ ಹೋಗಿ ಹಣೆಗೆ ವಿಭೂತಿ ಹಚಗಂಡು ಬಂದಿದ್ದ ಇಂತವುರ ಸಪೋರ್ಟಿನಿಂದ ನಿತ್ಯಾನಂದ ಕೋಟ್ಯಾಧಿಪತಿಯಾದ. ಈಗ ಅದೇ ದುಡ್ಡು ಖರ್ಚು ಮಾಡಿ ಬಚಾವಾಗಬವುದು. ನಾನಿನ್ನು ಬತ್ತಿನಿ!"


...ರಳಿಗೆ ನೇತು ಬಿದ್ದ ದ್ವಂದ್ವ



...ಲ್ಲರೂ ಆಶೆಪಡುವ ವಿದಾಯ ಯಾವುದು? ಅರ್ಥಪೂರ್ಣ ಜೀವನ ... ಸುಖ, ದುಃಖ, ದುಗುಡ, ಉದ್ವೇಗ, ಸ್ಫೂರ್ತಿ ಎಲ್ಲವನ್ನೂ ಅನುಭವಿಸಿ ...ಲ್ಲಿ 'ಇನ್ನು ಸಾಕು' ಎಂದು ಕಣ್ಣುಮುಚ್ಚುವುದು. ಮನುಷ್ಯರ ಜೀವನ ಹಲವಾರು ...ಗಳನ್ನು ಪಡೆದಿದೆ. ಈ ಪದರಗಳಲ್ಲಿ ಮುಖ್ಯವಾದವು ಅನ್ನ, ಬಟ್ಟೆ, ವಸತಿ ...ಗಳಿಗೆ ಕೊರತೆ ಇಲ್ಲದಂತೆ ನೆಮ್ಮದಿಯಾಗಿರುವುದು. ಆದರೆ ಅವು ದೊರೆತೊಡನೆ ...ಸುಗಳು, ಖ್ಯಾತಿ, ಪ್ರೇಮ ಮುಂತಾದವು ಬೇಕಾಗುತ್ತದೆ. ಮನುಷ್ಯ ಸಂತನಂತೂ ... ಹಾಗೆಂದು ಮೇಲೂ ಹೋಗದೆ, ಕೆಳಗೂ ಇಳಿಯದೆ ಸುವರ್ಣ ಮಧ್ಯಮ ...ಕೊಳ್ಳುವ ಬದುಕು ಅವನಿಗೆ ಸರಿಹೋಗುವುದಿಲ್ಲ. ಎಲ್ಲಕ್ಕಿಂತ ಮುಖ್ಯವಾಗಿ ಪ್ರಜ್ಞೆ ಎನ್ನುವುದು ಅವನಿಗೆ ...ನಿಂದಲೇ ಅಂಟಿಕೊಂಡು ಬಂದದ್ದು. ಪ್ರಜ್ಞಾವಂತನಾಗುವುದು ಸುಖದ ಸ್ಥಿತಿ ಎಂದು ಧೈರ್ಯವಾಗಿ ...ಲಾಗುವುದಿಲ್ಲ, ಇಚ್ಛಾಮರಣಿಗಳು ನನ್ನಂಥವರಿಗೆ ಇವತ್ತಿಗೂ ವಿಚಿತ್ರ ಜೀವಿಗಳು. ಇಡೀ ಬದುಕಿನಲ್ಲಿ ...ಷ್ಯರ ದ್ವಂದ್ವಗಳನ್ನು, ಸಾಧ್ಯತೆಗಳನ್ನು, ಕಾತರಗಳನ್ನು ನೋಡುತ್ತಲೇ ಬೆಳೆದ ಎಲ್ಲ ಕಲಾವಿದರಿಗೂ ಪ್ರಜ್ಞೆ ...ಯ. ಹಾಗೆಯೇ ಅದೇ ದುರಂತ–ಟಾಲ್‌ಸ್ಟಾಯ್ ಸತ್ತಾಗ ಅವನಿಗೆ ಎಂಭತ್ತೆರಡು ವರ್ಷ. ಆತ ಕಂಡದ್ದನ್ನು ... ಜನ ಮನುಷ್ಯರು ಕಂಡಿರಲಿಕ್ಕಿಲ್ಲ, ಕಾಮ, ಪ್ರೇಮ, ಏಕಾಂಗಿತನ, ಒಂದು ಹಳ್ಳಿಯಂತಿರುವ ತುಂಬು ...ಂಬ, ಸಾವಿರಾರು ಎಕರೆ ಆಸ್ತಿ, ಇಡೀ ಜಗತ್ತನ್ನು ಆವರಿಸಿದ್ದ ಖ್ಯಾತಿ... ಆತ ಸಾಯುವ ಮುನ್ನ ...ಯಿಂದ ತಪ್ಪಿಸಿಕೊಂಡು ಓಡಿಹೋದ. ರೈಲಿನಲ್ಲಿ ಕೂತು ಗುರಿಯೇ ಇಲ್ಲದೆ ಹೊರಟುಹೋಗಿಬಿಡಬೇಕೆಂದು ...ದ್ದ, ಆದರೆ ಆತನ ಕುಟುಂಬ ಮತ್ತು ಸ್ನೇಹಿತರು ಬಿಡಲಿಲ್ಲ, ರೈಲ್ವೇ ಸ್ಟೇಷನ್‌ನಲ್ಲೇ ಅವನನ್ನು ತಡೆದರು. ...ಸೋಲ್ಪ, ನಿರಾಶೆಯಿಂದ ಕುಂದಿಹೋಗಿದ್ದ, ಅವನು ಮಲಗಿದ್ದ ರೈಲ್ವೇ ಸ್ಟೇಷನ್ನಿನ ಕೊಠಡಿ ಪತ್ರಕರ್ತರ, ...ಡೋಜಕರ, ಅಭಿಮಾನಿಗಳ ಜಾತ್ರೆಯಾಯಿತು. ಟಾಲ್‌ಸ್ಟಾಯ್ ಇದನ್ನೆಲ್ಲ ನೋಡಿ ಬೇಸರಗೊಂಡ. ...ಯಿಂದ ಏಳಲೂ ಅವನಲ್ಲಿ ಶಕ್ತಿ ಇರಲಿಲ್ಲ, ಆತ ಸಾವಿನ ಹತ್ತಿರ ಇದ್ದಾನೆಂದು ಎಲ್ಲರಿಗೂ ಗೊತ್ತಿತ್ತು; ...ಸ್ಟಾಯ್ ಕೂಡ ಸಾಯುವುದಕ್ಕಾಗಿ ಮನಸ್ಸು ಮಾಡಿ ಅದರಿಂದ ಸಾವನ್ನು ಪಡೆಯಲಾಗದೆ ಸೂರ್ಯನ ..., ಬದುಕಿನ ಸ್ಪಂದನ ಬಿಟ್ಟುಕೊಡಲಾಗದೆ ಉಳಿದಿದ್ದ ಅಲ್ಪಸ್ವಲ್ಪ ಪ್ರಾಣ ಬಳಸಿಕೊಂಡು ಗೊಣಗಿದ: ...ವುದು ತುಂಬಾ ಕಷ್ಟ.'

...ಸಿನ ಸ್ಥಿತಿಯಲ್ಲಿ ಹೆಸರಾಂತ ಚಿತ್ರಕಾರ ಪಿಕಾಸೋ ಹುಚ್ಚನಂತಾದ. ಎದುರಿಗೆ ಸಿಕ್ಕ ತನ್ನೆಲ್ಲ ಚಿತ್ರಗಳನ್ನು ... ಹಾಳೆ, ಎಲ್ಲರಿಗೆ ಬೈದು, ಲೋಟಪಾತ್ರೆಗಳನ್ನು ಎಸೆದು ರಂಪ ಮಾಡಿ...ಕಣ್ಣು ಮುಚ್ಚಿದ.

ಸರ್ಕಾರಿ ನೃತ್ಯ



ನಾನು ಹೇಳುವುದನ್ನೆಲ್ಲ ನೀವು ನಿರೀಕ್ಷಿಸುವುದಾದರೆ ... ನನ್ನ ವ್ಯಕ್ತಿತ್ವ ಸರಿಯಾಗಿ ಸಂವೇದಿಸುತ್ತಿಲ್ಲ ಎಂದು ಅರ್ಥ. ಮೊನ್ನೆ ಶನಿವಾರ ಗೆಳೆಯರೊಬ್ಬರು ಬಂದು, 'ನ್ಯಾಷನಲ್ ಗೇಮ್ಸ್‌ನ ಉದ್ಘಾಟನೆ ನಡೆಯುತ್ತಿದ್ದಾಗ ನೀವು ಟೆನ್ನಿಸ್ ನೋಡ್ತಾ ಇದ್ದೀರಲ್ಲ?' ಅಂದು ನಾನು ಶಂಕರದಯಾಳ ಶರ್ಮರ ಭಾಷಣ ಕೇಳುವಂತೆ ಮಾಡಿದ. 'ಆಟದಲ್ಲಿ ಗೆಲ್ಲುವುದು ಮುಖ್ಯವಲ್ಲ...' ಎಂದು ಮುಂತಾಗಿ ಹೇಳಿದ ಅಧ್ಯಕ್ಷ ಶರ್ಮರ ಮಾತನ್ನು ಎಲ್ಲೋ ಕೇಳಿದಂತಿತ್ತು, ಒಲಂಪಿಕ್ಸ್ ಬಗ್ಗೆ ಮಾತಾಡುವವರೆಲ್ಲ ಹೇಳುವುದು ಇದನ್ನೇ. ಇಂಥ ಕ್ಲೀಷೆಗಳಿಲ್ಲದಿದ್ದರೆ ಅಧ್ಯಕ್ಷರಾಗಿ ಏಗುವುದು ಹೇಗೆ? ಅದಿರಲಿ. ಆಮೇಲೆ ಬಂದ ಪುಟಾಣಿಗಳ ಡ್ರಿಲ್, ಡಾನ್ಸ್, ಕುಣಿತ, ಬೆಳೆದವರ ನೃತ್ಯ ಇತ್ಯಾದಿಯನ್ನು ನೋಡಿದೆ. ನಾನು ಆದಷ್ಟೂ ಪೂರ್ವಗ್ರಹವಿಲ್ಲದೆ ಎಲ್ಲವನ್ನು ಮೆಚ್ಚಲು ಯತ್ನಿಸಿದೆ. 'ಪರವಾಗಿಲ್ಲ, ಚೆನ್ನಾಗಿ ಹಾರಾಡ್ತಿದ್ದಾರೆ' ಅನ್ನಿಸಿತು. ಆದರೆ ಅದೇನೋ ಸಂದೇಹ ನನ್ನಲ್ಲಿತ್ತು. ಏನೆಂದು ನೋಡಿಕೊಳ್ಳುತ್ತಿದ್ದಂತೆ ತಿಳಿಯಿತು. ಸರ್ಕಾರ ಏರ್ಪಡಿಸಿದ ಕಲೆಯಲ್ಲಿ ಒಂದು ರೀತಿಯ ವಿಕಾರ ಇರುತ್ತದೆ; ಅನುಕರಣ ಇರುತ್ತದೆ. ಒಲಂಪಿಕ್ಸ್ ಕ್ರೀಡೆಗಳನ್ನು ಉದ್ಘಾಟನೆ ಮಾಡಿದಂತೆಯೇ ಇಲ್ಲಿ ಮಾಡಲೆಳಸುವ, ಅಲ್ಲಿಯ ಕ್ರೀಡಾಪಟುಗಳಂತೆಯೇ ಇಲ್ಲಿಯ ಹುಡುಗರು ವರ್ತಿಸಲೆಳಸುವ, ಅಗತ್ಯವಿರಲಿ, ಇಲ್ಲದಿರಲಿ, ಓಕುಳಿಯಲ್ಲಿ ಆಡಿದಂತೆ ಕಾಣುವ, ಎಲ್ಲದಕ್ಕೆ ಕೋಟ್ಯಂತರ ಖರ್ಚು ಮಾಡಿ ಹೊಗಳಿಕೆ ಗಿಟ್ಟಿಸಲೆಳಸುವ, ಸರ್ಕಾರಿ ಕಾರ್ಯದರ್ಶಿಗಳು, ಕ್ರೀಡಾ ನಿರ್ದೇಶಕರು ಕಲೆಯನ್ನೆಲ್ಲ ಅರಿತಂತೆ ಆಡುವ.....ಈ ಗೋಳನ್ನು ನೋಡುತ್ತಾ ನಗೆಬಂತು. ಕಲೆ ಒಂದು ರೀತಿಯಲ್ಲಿ ವೈಯಕ್ತಿಕವಾದದ್ದು, ಇನ್ನೊಂದು ವಿಜ್ಞಾನಕ್ಕಿಂತ ವಸ್ತುನಿಷ್ಠವಾದದ್ದು. ಬರೀ ವೈಯಕ್ತಿಕವಾದರೆ ರೋಗಗ್ರಸ್ತವಾಗುತ್ತದೆ, ಪೂರ್ತಿ ವಸ್ತುನಿಷ್ಠವಾದರೆ ಲದ್ದಾಗುತ್ತದೆ. ಹೀಗಾಗಿ ಪ್ರತಿಮಾ ಬೇಡಿ, ಪ್ರತಿಭಾ ಪ್ರಹ್ಲಾದ್ ಮುಂತಾದವರು ಎಷ್ಟೇ ಪ್ರಯತ್ನಿಸಿದರೂ ಅವರ ಕಲೆ ವಿಕಾರವಾಗಿಯೇ ಉಳಿಯುತ್ತದೆ.

ಇದು ನಿಜವಿರಬಹುದು. ಇಂಥವರಲ್ಲಿ ನನ್ನ ಮಾತು ನಿಜವಿರಲೇಬೇಕೆನ್ನುವ ಹಟ ನನಗಿಲ್ಲ, ಹಸಿದಾದ ಸಂಜೆಯ ಪ್ರದರ್ಶನವನ್ನು ನೋಡಿದಾಗ ನನ್ನಲ್ಲಿ ಆದ ತೊಳಲಾಟವನ್ನು ಮಾತ್ರ ವಿಶ್ಲೇಷಿಸುತ್ತಿದ್ದೇನೆ. ಈ ದೇಶದಲ್ಲಿ ಮಕ್ಕಳಿಗೆ ಒಂದು ಬ್ಯಾಡ್ಮಿಂಟನ್ ಕೋರ್ಟ್, ಟೆನ್ನಿಸ್ ಕೋರ್ಟ್ ಇಲ್ಲ, ಹೈಸ್ಕೂಲ್‌ನಲ್ಲಿ ಯಾರೂ ಆಟವನ್ನು ಗಂಭೀರವಾಗಿ ತೆಗೆದುಕೊಳ್ಳುವುದಿಲ್ಲ, ನಮ್ಮ ದೇಶ ಇಡೀ ಜಗತ್ತಿನಲ್ಲಿ ಕ್ರೀಡೆಯ ದೃಷ್ಟಿಯಿಂದ ಕೂಡ ದರಿದ್ರ ದೇಶ. ಇಂಥಲ್ಲಿ ಈ ಪ್ರದರ್ಶನ ನನ್ನಲ್ಲಿ ವಿಚಿತ್ರ ಭಾವನೆ ಮೂಡಿಸಿರಬೇಕು.

ಗಂಧದೆಣ್ಣೆ ಸಾಬೂನು ಮಾಡಲಾಗದ ಕಾರ್ಯದರ್ಶಿಗಳು ನೃತ್ಯ, ಸಂಗೀತಕ್ಕೆ ಕೈಹಾಕಿ ಕೋಟಿಗಟ್ಟಲೆ ಖರ್ಚು ಮಾಡುವುದರಲ್ಲಿ ನಾನರಿಯದ ಯಾವುದೋ ಗುಟ್ಟು ಇರಬಹುದಲ್ಲವೇ?

ಜೂನ್ 11, 1997



ಎಚ್.ಎಲ್. ಕೇಶವಮೂರ್ತಿ

ಅಣಕ

ಲಕ್ಷಲಕ್ಷ ಸಂಬಳದೋರ ಮಾತಾಡ್ಸಕಾಯ್ತದ

ಸುಮ್ಮನೆ ಹೇಳಬಾರದು. ಸರ್ಕಾರಿ ಆಸ್ಪತ್ರೆಯ ಕೆಲವು ವೈದ್ಯರುಗಳಿಗೆ ಖಾಸೆ ಕಷ್ಟ ಆಗದೆ. ಪಾಪ ಅದೇನೇನೋ ಓದಿಕೊಂಡಿರ್ತಾರೆ. ಅದಕ್ಕೆ ತಕ್ಕ ಸಂಬಳಾನೂ ಕೊಡ್ತಿದೀವಿ ಅಂತ ಸರ್ಕಾರ ತಿಳ್ಕೊಂಡಿದೆ. ತಿಂಗಳು ತಿಂಗಳಿಗೆ ಲಕ್ಷಲಕ್ಷಾನೇ ಕೊಡುತ್ತಿರಬಹುದು. ಅದು ಏನೇನೂ ಸಾಲದು. ತಮ್ಮ ಓದಿಗೆ, ಸೇವೆಗೆ ತಕ್ಕ ಪ್ರತಿಫಲ ಅಲ್ಲವೇ ಅಲ್ಲ ಅನ್ನೊ [illegible] ಅವರನ್ನ ಹಿಂಡಿ ಹಿಪ್ಪೆಕಾಯಿ ಮಾಡ್ತಿದೆ. ಮುಂದೆ [illegible] ದಿವಸ ಜಾಕ್‌ಪಾಟ್ ಹೊಡೆದರೂ [illegible]ಡೀಬಹುದು ಅಂತ ಕಾಯ್ತಾ ಕೂರುವಂತಿಲ್ಲ. ಯಾಕಿಂದ್ರೆ ಅವರು ಮೊದಲೇ ಡಾಕ್ಟರು ಅಲ್ಲವಾ, ಅವರಿಗೆ ಗೊತ್ತದೆ. ಆಯುಸ್ಸು ಅನ್ನೋದು ಯಾರೂ ಹೇಳಿದ ಹಾಗೆ ಕೇಳುವುದಿಲ್ಲ. ಈ ಗಳಿಗೇಲಿ ಚೆನಾಗಿದ್ದೋನು ಮರುಗಳಿಗೆಗೆ ಗೊಟಕ್ ಅಂದು ಶಿವನ ಪಾದಾರವಿಂದ ಸೇರಬಹುದು ಅಂತಾವ. ಮನೆ, ಮಠ, ಆಸ್ತಿ-ಪಾಸ್ತಿ ಮಾಡದೆ ಹಂಗೇ ತಾವ್ತಾ ಹೋಗಿಬಿಟ್ಟರೆ ಮಡದಿಮಕ್ಕಳ ಪಾಡೇನು? ಆ ಬಡಪಾಯಿಗಳು ಬೀದಿಗೆ ಬೀಳ್ತಾವಲ್ಲ ಅನ್ನೋ ಚಿಂತೆ ಅವರನ್ನು ಕಾಡುತ್ತಿದೆ. ಆದರೂ ಓದಿದವರಲ್ಲವಾ, ಶಿಸ್ತು ಬಿಡುವಲ್ರು. ಒಂಭತ್ತು ಗಂಟೆಗೆ ಕೆಲಸಕ್ಕೆ ಹಾಜರಾಗಬೇಕು ಅನ್ನುತ್ತಲ್ಲಾ ಕಾನೂನು. ತಲೆ ಹೋಗುವ ಕೆಲಸ ಇರಲಿ. ಬಿಟ್ಟುಬರ್ತಾರೆ. ಚಾಕುರೀಕಾಗಿ ಬಂದವರೆ ಹಾಜರಾತಿ ಹಾಕ್ತಾರೆ. ಇದಾಯ್ತಾ, ಆಮೇಲೆ ಕರ್ತವ್ಯಪ್ರಜ್ಞೆ ಅವರನ್ನು ಕಾಡುವುದಕ್ಕೆ ಪ್ರಾರಂಭಿಸುತ್ತೆ. ಪಾಪ ಎಷ್ಟೊಂದು ರೋಗಿಗಳು ತಮ್ಮ ಶುಶ್ರೂಷೆಗಾಗಿ ಕಾಯ್ತಿದಾರೋ, ತಾವು ಹೋಗಿ ಅವರನ್ನು ನೋಡದೆ ಇದ್ದರೆ ಏನೇನು ಅನಾಹುತ ಆಗಿಬಿಡುತ್ತೋ ಅಂತಾವ ನೇರವಾಗಿ ಅಲ್ಲಿಂದ ಖಾಸಗಿ ನರ್ಸಿಂಗ್ ಹೋಂಗೆ ಧಾವಿಸುತ್ತಾರೆ. ರೋಗಿಗಳ ಶುಶ್ರೂಷೆಯನ್ನು ಏನು ಮುತುವರ್ಜಿಯಿಂದ ಮಾಡ್ತಾರೆ ಅಂತೀರಿ. ಛೇ ಅದನ್ನ ನೋಡೋಕೆ ಎರಡು ಕಣ್ಣು ಸಾಲದು. ರೋಗಿಯಾಗಿ ಅನುಭವಿಸಿದರೇ ಅದು ಮನದಟ್ಟಾಗೋದು.

ಅರೆ ಸರ್ಕಾರಿ ಆಸ್ಪತ್ರೆಗೆ ರೋಗಿಗಳು ಬರುವುದಿಲ್ಲವೆ ಅಂದರೆ ಬರ್ತಾರೆ. ಖಂಡಲಗ ಬರ್ತಾರೆ. ಹಾಗಾದರೆ ಅವರ ಶುಶ್ರೂಷೆ ಯಾರು ಮಾಡ್ತಾರೆ ಅಂದ್ರೆ... ತಲೆ ಇದ್ದವರು ಕೇಳುವ ಪ್ರಶ್ನೆಯೇ ಇದು ಅಂತೀನಿ... ಸರ್ಕಾರಿ ಆಸ್ಪತ್ರೆ ವೈದ್ಯರುಗಳೇನು ಕೃಷ್ಣ ಪರಮಾತ್ಮ ಕೆಟ್ಟು ಹೋದರಾ. ಆ ಕೃಷ್ಣ ಬಹುರೂಪ ತಾಳಿ ಏಕಕಾಲದಲ್ಲಿ ಎಲ್ಲೆಲ್ಲೊ, ಯಾರ ಯಾರ ಜೊತೇನೊ ಇರುತ್ತಿದ್ದನಂತೆ. ಇವರು ಪಾಪ ಮನುಷ್ಯರು. ಬಹುರೂಪಿಗಳಲ್ಲ, ಎರಡೂ ಕಡೆ ಇರುವುದಕ್ಕೆ ಹೇಗೆ ಸಾಧ್ಯ ಹೇಳಿ. ಅದಕ್ಕೇ ಒಂದು ಕಡೆ ಸೇವೆಯನ್ನು ತೃಪ್ತಿಕರವಾಗಿ ಸಲ್ಲಿಸಿ ಸಾರ್ಥಕತೆ ಪಡೆಯುತ್ತಾರೆ! ಮತ್ತೆ ಸರ್ಕಾರಿ ಆಸ್ಪತ್ರೆ ರೋಗಿಗಳ ಗತಿ ಏನು ಅಂದರೆ ಏನೋ ಅವರವರ ಹಣೇಲಿ ಬರದಂಗೆ ಆಗುತ್ತೆ, ಒಂದು ವೇಳೆ ಬದುಕಲೇಬೇಕು ಅನ್ನೊ ಆಸೆ ಇದ್ದರೆ ವೈದ್ಯರಿರೋ ಕಡೇನೆ ಹೋಗಬೇಕಪ್ಪಾ! ಅಲ್ಲೂ ನೋಡಲ್ಲ ಅಂದ್ರೆ ವೈದ್ಯರ ತಪ್ಪು, ವೈದ್ಯರು ಇರುವಲ್ಲಿಗೆ ಹೋಗದೆ ಅವರೇ ಇಲ್ಲಿಗೆ ಬರಲಿ ಅಂತ ಸರ್ಕಾರಿ ಆಸ್ಪತ್ರೆ ಅಂಗಳದಲ್ಲೇ ಕುಂತರೆ ಯಾರು ತಪ್ಪು ಅಂತೀನಿ!... ಛೇ ಏನು ರೋಗಿಗಳಪ್ಪಾ...

ಹಿಂಗೆ ವೈದ್ಯರುಗಳು ತಮ್ಮ ಕರ್ತವ್ಯ ಪರಿಪಾಲನೆ ಮಾಡಿ ತಾವು ಕಲಿತ ವಿದ್ಯೆಗೆ ಮರ್ಯಾದೆ ತರುತ್ತಿದ್ದರೂ ತಾವೇ ಮಹಾ ತಿಳಿವಳಿಕಸ್ಥರು ಅಂತ ತಿಳಿದಿರೋ ಕೆಲವು ತಲೆತಿರುಕ ಮುಂಡೇವು ಇದನ್ನೇ ತಪ್ಪು ಅಂತ ಕುಂತವೆ. ಅಲ್ರಪಾ ಏನ್ರಪಾ ತಪ್ಪು ಕಂಡ್ರಿ ನೀವು? ದಿನಾಲೂ ಆಸ್ಪತ್ರೆಗೆ ಬರಾದಿಲ್ವಾ ಅಂದ್ರೆ ಬರ್ತಾರೆ. ಅನುಮಾನ ಇದ್ದರೆ ಹಾಜರಾತಿ ಪುಸ್ತಕ ನೋಡಿ. ರೋಗಿಗಳ ಶುಶ್ರೂಷೆ ಮಾಡಲ್ಲವಾ ಅಂದರೆ ಅದ್ನೂ ನಿಯತ್ತಾಗೇ ಮಾಡ್ತಾ ಅವ್ರೆ. ಇನ್ನೇನ್ರಪ್ಪ ಬೇಕು ಅಂದ್ರೆ ಅದು ಆಗದಂತೆ. ಸರ್ಕಾರಿ ಆಸ್ಪತ್ರೆ ಡಾಕ್ಟರು ಸರ್ಕಾರಿ ಆಸ್ಪತ್ರೇಲೇ ಚಿಕಿತ್ಸೆ ನೀಡಬೇಕು ಅಂತಾರೆ. ಇದೊಳ್ಳೆ ಕತೆ ಆಯಿತಲ್ಲ, ಮಸಲ ಯಾರೋ ಒಬ್ಬರಿಗೆ ತುರ್ತು ಚಿಕಿತ್ಸೆ ನೀಡಬೇಕು ಅನ್ನಿ. ನೀಡದಿದ್ದರೆ ರೋಗಿಯ ಪ್ರಾಣಕ್ಕೆ ಅಪಾಯ. ಆಗ ಏನು ಮಾಡಬೇಕು ವೈದ್ಯರು? ನಾನು ಸರ್ಕಾರಿ ವೈದ್ಯ, ಆಸ್ಪತ್ರೆಗೆ ತಗಂಬನ್ನಿ, ಅಲ್ಲೇ ಚಿಕಿತ್ಸೆ ನೀಡ್ತೀನಿ. ಇಲ್ಲಿ ನೋಡೋದೆ ಇಲ್ಲ ಅನ್ನಕಾಯ್ತದ? ರೋಗಿನೇ ಫನಾ ಆಗ್ತಾನಪ್ಪ ಆಗೇನು ಮಾಡಬೇಕು? ಎಲ್ಲಿ ಅನುಕೂಲವೋ ಅಲ್ಲೇ ಚಿಕಿತ್ಸೆ ನೀಡುವುದು ಧರ್ಮ ಅಂದ್ರೆ ಕೇಳೊಲ್ಲರು. ನಿಗದಿಪಡಿಸಿದ ಸಮಯದಲ್ಲಿ ಸರ್ಕಾರಿ ಆಸ್ಪತ್ರೆಯಲ್ಲಿ ಇರಬೇಕು ಅಂತ ಮೊಂಡುವಾದ ಮಾಡ್ತಾ ಕುಂತ್ಕತವೆ. ಏನೋ ದಡ್ಡ ಮುಂಡೇವು ಯರ್‍ರಾಬಿರ್‍ರಿ ಮಾತಾಡ್ತವೆ ಬಿಸಾಕಾನ ಅವರ ಮಾತ ಅಂದ್ರೆ ಇದು ಆಗಲೇಬೇಕು ಅಂತ ಚಂಡಿ ಹಿಡಿದೊ, ಚಳವಳಿ, ಪಳವಳಿ ಅಂತೆಲ್ಲ ಕೂಗಾಡಿದೊ. ಸರ್ಕಾರದ ಕಿವಿಗೂ ಇದು ಮುಟ್ಟಿತು. ಹಿಂಗೆ ಹಾರಾಡೋರ ಎಷ್ಟು ಕಂಡಿಲ್ಲ ಅದು. ನೀವೇಳಿದಂಗೆ ಮಾಡ್ತೀವಿ ಕನ್ರಯ್ಯಾ. ಬಯೋಮೆಟ್ರಿಕ್ ಸಿಸ್ಟಮ್ ಹಾಕ್ತೀವಿ. ಡಾಕ್ಟರುಗಳು ಬೆಳಿಗ್ಗೆ ಬಂದಾಗ ಸಂಜೆ ಹೋಗುವಾಗ ಇದರಲ್ಲಿ ಹಾಜರಾತಿ ದಾಖಲ್ಮಾಡಬೇಕು ಅಂತ ತಿಪ್ಪೆ ಸಾರಿಸಿತು. ಈ ಪೆದ್ದು ಮುಂಡೇವು ಇದ್ವಲ್ಲ ಮುಖ ಮೊರದಗಲ ಮಾಡಿಕೊಂಡು ನಮ್ಮ ಪ್ರತಿಭಟನೆಗೆ ಸಿಕ್ಕ ಜಯ ಅಂದುಕೊಂಡು ಕುಣಿದಾಡಿದೊ!

ವೈದ್ಯರುಗಳಿಗೆ ಕೊಂಚ ತ್ರಾಸಾಯಿತು. ಆಸ್ಪತ್ರೆ ದರ್ಶನನ್ನ ದಿನಕ್ಕೆ ಒಂದು ಸಲ ಮಾಡುತ್ತಿದ್ದವರು ಎರಡು ಸಲ ಮಾಡಬೇಕಾಯಿತು. ಬೆಳಗ್ಗೆ ಒಂದು ಸಲ ಬಯೋಮೆಟ್ರಿಕ್ ಸಾಧನದಲ್ಲಿ ಬೆರಳು ತೋರಿಸಿ ಕಡೀತಿದ್ದರು. ಮತ್ತೆ ನಾಲ್ಕು ಗಂಟೆಗೆ ಎಲ್ಲೋ ಇದ್ದವರು ತರಾತುರೀಲಿ ಬಂದು ಬೆರಳು ತೋರಿಸಬೇಕಾಯ್ತು!

ತಾವು ಚಾಪೆ ಕೆಳಗೆ ತೂರುವ ಪ್ರವೀಣರಾದರೆ ಈ ವೈದ್ಯರಾದರೋ ರಂಗೋಲಿ ಕೆಳಗೆ ತೂರುವ ಚಾಣಾಕ್ಷರು ಎಂಬ ಸತ್ಯದ ಅರಿವು ಈ ದಡ್ಡ ಮುಂಡೇವುಗಳಿಗೆ ತಡವಾಗಿ ಅರ್ಥ ಆಯಿತು. ಎಲಾ ಎಲಾ ಇದೇನು ಹಿಂಗೆ ಉಲ್ಟಾ ಹೊಡೀತಿದೆಯಲ್ಲ ನಮ್ಮ ಪ್ಲಾನು ಅಂತಾವ ಒಬ್ಬ ದಡ್ಡ ಏನು ಮಾಡಿದ... ಹಾಜರಾತಿ ಹಾಕಿ ಕಡೀತಿದ್ದ ವೈದ್ಯರನ್ನ ನೇರವಾಗಿ "ಏನ್ಸಾರ್ ಹಂಗೆ ಬಂದು ಹಿಂಗೆ ಹೋಯ್ತಿದೀರಲ್ಲಾ, ಇದು ನ್ಯಾಯವಾ?" ಅಂತ ಕೇಳೇಬಿಟ್ಟ. ಅದೂ ಯಾರನ್ನ? ಲಕ್ಷಲಕ್ಷ ಸಂಬಳ ಎಣಿಸೊ ಡಾಕ್ಟರನ್ನ! ಯಾವನೋ ತಲೆಮಾಸಿದವನು ಹಿಂಗೆ ಕೇಳಿದ್ರೆ, ಲಕ್ಷದೋರಿಗೆ ಕೋಪ ಬರೋಲ್ವಾ? ಬಂತು. ಅದೇ ಭರಾಟೇಲಿ 'ನೀನ್ಯಾವನೋ ಕೇಳೋಕೆ' ಅಂತಾ ದಬಾಯಿಸಿದರು. ಲಕ್ಷ ಸಂಬಳದೋರ ನನ್ನಂತೋನು ಮಾತಾಡ್ಸಿದ್ದು ತಪ್ಪು ಅಂತ ತಿಳ್ಕಂಡು ಕೆಪ್ಪಗಿದ್ದರೆ ಆಯ್ತಿತ್ತು, ಆದರೆ ಕೊಬ್ಬು ನೋಡಿ. ತಿರುಗಿಸಿ ಏನೋ ಅಂದ. ಮಾತಿಗೆ ಮಾತು ಬೆಳೀತು ಗುಂಪು ಸೇರಿತು. ವೈದ್ಯರು ಬಂದರು. ಸಂಕ್ಷಿಪ್ತವಾಗಿ ಹೇಳುವುದಾದರೆ ವೈದ್ಯ ವೃಂದ ಅವಾಚ್ಯ ಶಬ್ದನಿಂದನೆ, ಹಲ್ಲೆ ದೌರ್ಜನ್ಯ ಮಾಡಿದೆ ಎಂದು ಪೋಲೀಸರಿಗೆ ದೂರು ನೀಡಿತು. ಪೋಲೀಸಿನವರೂ ನ್ಯಾಯಸ್ಥರೇ ಅಲ್ಲವಾ, ಲಕ್ಷಲಕ್ಷ ಸಂಬಳ ಎಣಿಸೋ ಸಭ್ಯ ವೈದ್ಯರು ನೀಡಿರುವ ದೂರು ಅದು. ಒಬ್ಬರೇ ಬಂದು ಕೊಟ್ಟಿಲ್ಲ, ಅಂತೋರು ಹತ್ತಾರು ಜನ ಬಂದು ನೀಡವ್ರೆ. ಅದು ಸುಳ್ಳಾಗೋಕೆ ಸಾಧ್ಯವೇ ಇಲ್ಲ ಅಂತಾವ ಕೇಸು ದಾಖಲಿಸಿ ಉದ್ಧಟತನ ತೋರಿದವನ್ನ ಜೈಲಿಗೆ ತಳ್ಳಿದರು!

ಆಸ್ಪತ್ರೆ ಸುಧಾರಣೆ ಅಂತ ದೆವ್ವ ಹಿಡಿದೋರಂಗೆ ಕುಣೀತಿದ್ದವಲ್ಲ ಅವಕ್ಕೆ ಮಲೆಯಾಳಿ ಮಂತ್ರವಾದಿಯಿಂದಲೇ ಕಟ್ಟು ಮಾಡಿಸಿದ ಹಾಗಾಯಿತು. ಯಥಾರೀತಿ ಸರ್ಕಾರಿ ಆಸ್ಪತ್ರೆ ರೋಗಿಗಳಿಗೆ 'ಹಣೆಬರಹ'ವೇ ಚಿಕಿತ್ಸೆಯಾಯಿತು. ಭವ್ಯ ಭವಿಷ್ಯದ ಕನಸು ನನಸು ಮಾಡೊ ವೈದ್ಯರ ದುಡಿಮೆ ಹೆಚ್ಚಾಯಿತು!


ಇಷ್ಟೆಲ್ಲಾ ಆಯಿತಲ್ಲಾ, ಆಮೇಲಾದರೂ ಲಕ್ಷ ಸಂಬಳದಾರರ ಸಹವಾಸಕ್ಕೆ ಹೋಗಬಾರದು ಅನ್ನೊ ಬುದ್ಧಿ ಕಲಿತವಾ ಈ ಪೆದ್ದು ಮುಂಡೇವು. ಉಹುಂ. ಸರ್ಕಾರದ ಸಂಬಳ, ಖಾಸಗಿ ಕೆಲಸ ಅಪರಾಧ ಅಂತಾನೆ ಹೇಳ್ತಿದ್ದೊ. 'ನಿಮಗ್ಯಾಕ್ರೋಬೇಕು ಇದೆಲ್ಲ, ತಪ್ಪು ಅಂತೀರಿ. ಹಂಗೆ ಆಗಲ್ರಪ್ಪ, ಏನು ಮಾಡೀರಿ' ಆಸ್ಪತ್ರೇಲೀ ಯಾಕಿರ್ಲ್ಲಿಲ್ಲ ಅಂತ ಕೇಳ್ರಿ... ಜೈಲಿಗೆ ಹಾಕ್ತಾರೆ. ಸುಮ್ಮಿರ್ರೋ? ಅಂದ್ರೂ ಕೇಳವಲ್ರು. ಅದೇನೋ ಕಡಿದು ಕಟ್ಟೆ ಹಾಕ್ತೀವಿ ಅಂದೊ. ಕೊಬ್ಬು ಮುಂದೇವಕ್ಕೆ!

ಅವತ್ತು ಏನಾಯ್ತು ಅಂತೀರಿ. ಮಧ್ಯಾಹ್ನ ಮೂರೂ ಗಂಟೆ ಆಸುಪಾಸಿನ ಸಮಯ. ಪಾಪ ಬೆಳಗ್ಗೆಯಿ ಪುರುಸೊತ್ತು ಇಲ್ಲದಂತೆ ಖಾಸಗಿ ನರ್ಸಿಂಗ್ ಹೋಂ ರೋಗಿಗಳ ಶುಶ್ರೂಷೆ ಮಾಡಿ ಮಾಡಿ ಸುಸ್ತಾಗಿದ್ದರು ವೈದ್ ಆದರೂ ಕರ್ತವ್ಯಪ್ರಜ್ಞೆ ಅಂತ ಇತ್ತಲ್ಲಾ, ನಾಲ್ಕು ಗ ಒಳಗೆ ಆಸ್ಪತ್ರೆಗೆ ಹಾಜರಾಗಿ ಹಾಜರಾತಿ ದಾಖಲಿಸಬೇ ಅಂತ ತರಾತುರಿಯಲ್ಲಿ ಬಂದರೆ... ಗೇಟಿನ ಗುಲಾಬಿಹೂವಿನೊಂದಿಗೆ ಯುವಕಯುವತಿಯರಿಂದ ಸ್ವಾ ಗುಲಾಬಿ ಹೂ ನೀಡಿ ತಡವಾಗಿ ಬಂದ ವೈದ್ಯರೊಂ ಫೋಟೋ ತೆಗೆಸಿಕೊಳ್ಳುವುದು!

ಅಲ್ಲ ಇದು ಗಾಂಧಿಗಿರಿ ಅಂತಾವೆ ಪೆದ್ದುಮುಂಡೇ ಗುಲಾಬಿ ಹೂವು ಕೊಡುವುದೇನೋ ಸರಿ. ಹಂಗೇ ಅನ್ನ ಇದರ ಜೊತೆ ಫೋಟೋ ಯಾಕೆ? ಅದನ್ನೇನು ಕ ಹಾಕಿಸಿ ಮನೇಲಿಟ್ಟುಕೊಂಡು ಪೂಜೆ ಮಾಡ್ತಾರಾ ಅ ಅಲ್ಲವಂತೆ. ಹಿಂದೆ ಬಂದು ಸ್ವಲ್ಪ ಹಿಂಗಿಂಗೆ ವೈದ್ಯರು ನಡೆದುಕೊಳ್ತಿದಾರೆ ಅಂತಾ ಡಿಸಿ ಸಾಹೇಬರಿಗೆ ಹೇಳಿ ಅವರು ನಿಮ್ಮತ್ರ ದಾಖಲೆ ಏನಿದೆ ಅಂತ ಕೇಳಿದ್ರ ದಾಖಲೆಗಂತೆ!

ಸರ್ಕಾರದ ಸಂಬಳ ತೆಗೆದುಕೊಂಡು ಖಾಸಗಿ ನರ್ಸಿಂ ಹೋಂಗಳಲ್ಲಿ ನಿಷ್ಠೆಯಿಂದ ಕರ್ತವ್ಯನಿರತರಾಗಿದ್ದ ಮಹಾಶಯರುಗಳಿಗೆ ಇದರಿಂದ ಬಹಳ ಬೇ ಆಗಿದೆಯಂತೆ. ಕೆಲವರಂತೂ ಕೆಂಡಮಂಡಲ ಆಗಿದ್ದಾರೆ ಈ ಪುಂಡುಪೋಕರಿಗಳ ವಿರುದ್ಧ ಮುಷ್ಕರಾನೇ ಹೂಡಬೇ ಅಂತಿದ್ದರಂತೆ. ಅಯ್ಯೋ ರಾಮನೆ, ಏಯ್ ಡಾಕುಟ್ರೆ ಮಾಡಿಗೀಡೀರ ಕಣ್ರಿ. ಜನ ಬಲೇ ಕೆಟ್ಟೋಗವ್ರೆ ಖಾಸಗಿ ಆಸ್ಪತ್ರೆಗಳಲ್ಲಿನ ನಿಮ್ಮ ಕರ್ತವ್ಯ ಅರ್ಥಮಾಡಿಕೊಳ್ಳುವ ಪ್ರಬುದ್ಧತೆ ಅವರಿಗಿನ್ನೂ ಬಂ ಕಣ್ರಿ. ನಿಮ್ದೇ ತಪ್ಪು ಅಂತಾವೆ. ಅವಮಾನ ಆಯ ಅಂತ ನೀವೇನೂ ತಲೆತಗ್ಗಿಸೋಹಂಗಿಲ್ಲ, ಅವರೇನು ಗಾಂಧಿಗಿರಿ ಮಾಡಕ್ಕೆ ಬರ್ತಾರಾ? ಒಂದು ದಿನ ಮಾ ಮುಗೀತಪ್ಪ, ಒಂದು ದಿನ ಆದ ಅವಮಾನಾನೆ ದೊ ಮಾಡುತ್ತಾ ಕುಂತರೆ ಆಯ್ತದಾ.

ಯಾವ್ದೋ ದುರ್ಬಲ ಮನಸ್ಸಿನೋವು ಅವ ಆಯಿತು ಅಂತ ಆತ್ಮಹತ್ಯೆ ಮಾಡಿಕೊಳ್ಳಬಹುದು. ವೈದ್ಯ ನೀವು ಅದನ್ನ ತಡೆಯೋಕೆ ಪ್ರಯತ್ನಿಸಬೇಕು! ಫೋಟೋ ಪ್ರೂಫ್ ಅದಲ್ಲ ಅನ್ನೋದ ಮರೆತು ಡಿಸಿ ಸಾಹೇಬರೂ ಅನುಭವಸ್ಥರೇ ಅಲ್ಲವಾ. ಲಕ್ಷಲಕ್ಷ ಸ ಎಣಿಸೋ ನಿಮ್ಮ ವಿರುದ್ಧ ನಿಲ್ತಾರಾ? ಇಲ್ಲ, ಹಂ ಬಹಿರಂಗವಾಗಿ ಹೇಳೋಕಾಗಲ್ಲ, ಅದು ಅವರ ಸಂ ಅದಕ್ಕೇನು ಮಾಡ್ತಾರೆ? ಶಿಸ್ತಿನ ಕ್ರಮ ಜರುಗಿಸ್ತೀನಿ ಅಂ ಜರುಗಿಸಲ್ಲ, ಇದೆಲ್ಲ ನೀವು ತಿಳಿದಿರೋದೇಯ. ಒ ವೇಳೆ ತಲೆಕೆಟ್ಟು ಜರುಗಿಸಿಯೇ ಬಿಟ್ಟರು ಅನ್ನಿ, ಅ ನಿಭಾಯಿಸೋದ ಲಕ್ಷಲಕ್ಷ ಸಂಬಳೋದ ಹೇಳಿಕೊಡಬೇಕಾ...!



ಈ ಪತ್ರ ನೀವು ಪ್ರಕಟಿಸುವುದಿಲ್ಲವೆಂದು ಗೊತ್ತಿದೆ...

ಬ್ರಾಹ್ಮಣರು ಬ್ರಾಹ್ಮಣೇತರರೊಂದಿಗೆ ಸಹಪಂಕ್ತಿ ಭೋಜನ ಮಾಡಬಾರದೆಂದು ಶ್ರೀ ಪೇಜಾವರ ಶ್ರೀಗಳವರು ಹೇಳಿರುವುದಾಗಿ ಕನ್ನಡಪ್ರಭದ ಹೊರತು ಬೇರೆ ಯಾವ ಪತ್ರಿಕೆಯಲ್ಲಿಯೂ ವರದಿಯಾಗಿಲ್ಲ, ಹೊಸದಿಗಂತದಲ್ಲಿಯಂತೂ ಸಹಪಂಕ್ತಿ ಭೋಜನವನ್ನೇ ಮಾಡಬಹುದೆಂದು ಶ್ರೀಗಳವರು ಹೇಳಿರುವರೆಂದೇ ವರದಿಯಾಗಿದೆ. ಸಹಪಂಕ್ತಿ ಭೋಜನ ಮಾಡಬಾರದೆಂದು ಶ್ರೀಗಳವರು ಹೇಳಿರುವುದಾಗಿ ಕನ್ನಡಪ್ರಭದ ವರದಿಯು ದಿ. 21 ರಂದೇ ಶ್ರೀಗಳವರ ಗಮನಕ್ಕೆ ಬಂದಿದೆ. ಕೂಡಲೇ ದಿ. 22ರ ಸಂಚಿಕೆಯಲ್ಲಿ ತಾನು ಖಂಡಿತವಾಗಿಯೂ ಹಾಗೆ ಹೇಳಿಲ್ಲ, ಸಹಪಂಕ್ತಿ ಭೋಜನಕ್ಕೆ ನಮ್ಮ ವಿರೋಧವಿಲ್ಲವೆಂದೇ ತಾನು ಹೇಳಿರುವುದಾಗಿ ಶ್ರೀಗಳವರು ಸ್ಪಷ್ಟಪಡಿಸಿದ್ದಾರೆ. ಶ್ರೀಗಳವರ ಭಾಷಣದ ವೀಡಿಯೊದಿಂದಲೂ ಇದನ್ನು ತಿಳಿಯಬಹುದು. ಹೀಗಿದ್ದರೂ ಉದ್ದೇಶಪೂರ್ವಕವಾಗಿ ಶ್ರೀಗಳವರ ಬಗ್ಗೆ ಸುಳ್ಳು ಆಪಾದನೆ, ಅಪಪ್ರಚಾರವನ್ನು ನಿಮ್ಮ ಪತ್ರಿಕೆಯು ಮಾಡುತ್ತಿರುವುದು ಸರಿಯೇ? ಶ್ರೀಗಳವರ ಬಗ್ಗೆ ನೀವು ಮಾಡುತ್ತಿರುವ ಇಂತಹ ಸುಳ್ಳು ಆರೋಪ ಹಾಗೂ ನಿಂದನೆಗಳಿಂದ ಜನರಿಗೆ ಶ್ರೀಗಳ ಬಗ್ಗೆ ಸಹಾನುಭೂತಿಯು ಹೆಚ್ಚಾಗುವುದಲ್ಲದೆ ಕಡಿಮೆಯಾಗುವುದಿಲ್ಲ, ಇಂತಹ ಅಸತ್ಯ ಟೀಕೆ, ಆರೋಪಗಳಿಂದ ನಿಮ್ಮ ಯಾವ ಉದ್ದೇಶವೂ ಸಿದ್ಧವಾಗುವುದಿಲ್ಲ, ನಮ್ಮ ಈ ಪತ್ರವನ್ನು ನೀವು ಪ್ರಕಟಿಸುವುದಿಲ್ಲವೆಂದು ನಮಗೆ ಗೊತ್ತಿದೆ. ಆದರೂ ಇಂತಹ ಸುಳ್ಳು ಆಪಾದನೆಯನ್ನು ಮಾಡುವ ವಿರುದ್ಧವಾಗಿ ನಿಮ್ಮ ಸಾಕ್ಷಿಪ್ರಜ್ಞೆ ಜಾಗೃತವಾಗಲೆಂದು ಈ ಪತ್ರವನ್ನು ಬರೆಯುತ್ತಿದ್ದೇವೆ.

ಶ್ರೀಗಳವರು ಯಾವ ಬಡ್ಡಿ ವ್ಯವಹಾರಗಳನ್ನು ನಡೆಸುತ್ತಿಲ್ಲ, ಅವರ ಪಾದಕಾಣಿಕೆ, ಟ್ರಸ್ಟಿನ ಹಣ ಎಲ್ಲವೂ ರಾಷ್ಟ್ರೀಕೃತ ಬ್ಯಾಂಕಿನಲ್ಲಿಯೇ ಇದೆ.


ಇನ್ನೂ ಅನೇಕ ಅಸತ್ಯ ಸಂಗತಿಗಳನ್ನು ನಿಮ್ಮ ಪತ್ರಿಕೆಯಲ್ಲಿ ಪ್ರಕಟಿಸಿದ್ದೀರಿ. ನಿಮಗೆ ನಿಜವಾಗಿಯೂ ಸತ್ಯವನ್ನು ತಿಳಿಯುವ ಪ್ರಾಮಾಣಿಕ ಕಳಕಳಿಯಿದ್ದರೆ ಶ್ರೀಗಳವರನ್ನು ಸಂದ ವಾಸ್ತವ ಸಂಗತಿಯನ್ನು ಅರಿತುಕೊಂಡು ಚರ್ಚಿಸಬಹು ಅದಕ್ಕೆ ಸೂಕ್ತ ಏರ್ಪಾಡು ಮಾಡಬಹುದು. ಸತ್ಯ ತಿಳಿಯಲು ಮನಸ್ಸಿಲ್ಲದೆ ಬರೇ ಆರೋಪ ನಿಂದನೆ ನಿಮ್ಮ ಉದ್ದೇಶವಾಗಿದ್ದರೆ ನಾವೇನು ಮಾಡಲು ಸಾ

"ಸತ್ಯಕ್ಕೆ ಜಯವಾಗಲಿ."

ಶ್ರೀಗಳವರ ಬಗ್ಗೆ ನೀವು ಮಾಡಿರುವ ಮಿಥ್ಯಾರೋ ಮತ್ತು ನಿಂದನೆಗಳಿಂದ ನಿಮಗೆ ಮನಃ ಸಂತೋಷವ ಬಹುದು. ಆದರೆ ನಿಮ್ಮ ಅಂತಃಸಾಕ್ಷಿಯು ಮಾತ್ರ ನಿಮ ಕುಟುಕುತ್ತಿರುವುದರಲ್ಲಿ ಸಂಶಯವಿಲ್ಲ, ಶ್ರೀಗಳವರಿಗೆ ಬಳಸಿದ ಕೆಟ್ಟ ಶಬ್ದಗಳನ್ನು ಮದ್ಯ ಮಾಂಸಗಳ ಪರಿತ್ಯಾ ಲಿಂಗ ದೀಕ್ಷೆಗೆ ಅನಿವಾರ್ಯವೆಂದಿರುವ ಬಸವಣ್ಣರವ ನೀವು ಬಳಸುತ್ತೀರಾ...?

-ಸುಬ್ರಹ್ಮಣ್ಯ. ಕಾರ್ಯದ
ಪೇಜಾವರ





ಘನತೆಗೆ ತಕ್ಕ ಗಾಂಭೀರ್ಯ


ಪ್ರೀತಿಯ ಇಂದಿರಾ ಲಂಕೇಶ್‌ರವರಿಗೆ,

ನಿಮ್ಮ ಆತ್ಮಕಥನ 'ಹುಳಿಮಾವಿನ ಮರ' ಓದಿ ನಿಮಗೆ ಈ ಪತ್ರ ಬರೆಯುತ್ತಿದ್ದೇನೆ. ಇತ್ತೀಚಿನ ದಿನಗಳಲ್ಲಿ ಅನೇಕ ಆತ್ಮಕತೆಗಳು ಬಂದಿವೆ. ನಿಮ್ಮದು ಅತ್ಯಂತ ಸರಳವಾಗಿಯೂ ಪ್ರಾಮಾಣಿಕ ಬರಹವಾಗಿಯೂ ಮೂಡಿಬಂದಿದೆ. ಕೆಲವು ಕಡೆಗಳಲ್ಲಿ ಒಂದೇ ಒಂದು ಸಾಲಾದರೂ ತುಂಬಾ moving ಆಗಿದೆ. ನಿಮ್ಮ ಬರಹ ಆತ್ಮೀಯ ಸ್ನೇಹಿತರೊಡನೆ ಮಾತಾಡಿದಂತೆ ಆಪ್ತವಾಗಿದೆ ಹಾಗೂ ನಿಮ್ಮ ಮತ್ತು ಲಂಕೇಶ್‌ರವರ ಘನತೆಗೆ ತಕ್ಕಂತೆ ಗಾಂಭೀರ್ಯದಿಂದ ಕೂಡಿದೆ. ನನ್ನ ಪ್ರೀತಿಯ ಮೆಚ್ಚುಗೆಯನ್ನು ಸ್ವೀಕರಿಸಿ. 'ಹುಳಿಮಾವಿನ ಮರ' ಪುಸ್ತಕ ರೂಪದಲ್ಲಿ ಬರುವುದನ್ನು ಕಾಯುತ್ತಿದ್ದೇನೆ.-ಪದ್ಮ ಶ್ರೀರಾಮ್, ಮೈಸೂರು

...ಗ್ಗಡೆಯವರನ್ನೇ 'ಶೂಟ್' ಮಾಡಲು ಯತ್ನಿಸಿದಾಗ!

...ಮೊನ್ನೆ ಹಲವು ಸಿನಿಮಾ ಪತ್ರಕರ್ತರನ್ನು ಧರ್ಮಸ್ಥಳಕ್ಕೆ ಕರೆದುಕೊಂಡು ...ಗಲಾಗಿತ್ತು. ಅಲ್ಲಿ ಹೊಸ ಹುಡುಗರು ನಿರ್ಮಿಸುತ್ತಿರುವ 'ಅಲೆ' ಎಂಬ ಚಿತ್ರದ ...ಕರಣವಿತ್ತು. ಹಾಗಂತ ಈ ಹೊಸ ಹುಡುಗರ ಮೇಲೆ ಕುತೂಹಲ ಅಥವಾ ...ವಾದ ಪ್ರೀತಿಯಿಂದ ಪತ್ರಕರ್ತರು ಅಷ್ಟು ದೂರ ಹೋಗಿರಲಿಲ್ಲ. ಈ 'ಅಲೆ' ...ಲ್ಲಿ ಧರ್ಮಸ್ಥಳದ ಧರ್ಮಾಧಿಕಾರಿ ವೀರೇಂದ್ರ ಹೆಗ್ಗಡೆಯವರು ನಟಿಸುತ್ತಿದ್ದಾರೆ ... ಭಾರೀ ಪ್ರಚಾರ ಮಾಡಿದ್ದರಿಂದ ಬಹುತೇಕ ಪತ್ರಕರ್ತರು ಮತ್ತು ಟಿ.ವಿ ...ನಲ್‌ನವರು ಅಲ್ಲಿಗೆ ಹೋಗಿದ್ದರು.

...ಹೆಗ್ಗಡೆಯವರು ಈ ಹಿಂದೆ - ಅಂದರೆ 30 ವರ್ಷಗಳ ಹಿಂದೆ - ಡಾ. ...ಕುಮಾರ್ ಅಭಿನಯದ 'ಶ್ರಾವಣ ಬಂತು' ಚಿತ್ರದಲ್ಲಿ ಒಮ್ಮೆ ಕಾಣಿಸಿಕೊಂಡಿದ್ದರು.



...ಬಿಟ್ಟರೆ ಆನಂತರ ಯಾವತ್ತೂ ಅವರು ಬೆಳ್ಳಿ ಪರದೆಯ ಮೇಲೆ ಯಾವ ...ರುಲ್ಲೂ ಕಾಣಿಸಿಕೊಂಡವರೇ ಅಲ್ಲ. ಈ ಬಾರಿ 'ಅಲೆ' ಚಿತ್ರದಲ್ಲಿ ...ಕ-ನಾಯಕಿಯರು ಮದುವೆಯಾಗುವ ದೃಶ್ಯಕ್ಕೆ ಹೆಗ್ಗಡೆಯವರು ಆಶೀರ್ವಾದ ...ವುದನ್ನು ಚಿತ್ರತಂಡ ಚಿತ್ರೀಕರಿಸಲಿದೆ ಎಂದು ಪತ್ರಕರ್ತರಿಗೆ ಮೊದಲೇ ಹೇಳಿದ್ದರು.

...ಅಲ್ಲಿ ಹೋದ ನಂತರ ನಡೆದದ್ದೇ ಬೇರೆ. ಈ ಚಿತ್ರದ ನಿರ್ಮಾಪಕ ಕಿರಣ್‌ಕುಮಾರ್ ... ನಿರ್ದೇಶಕ ದತ್ತು ಆರಂಭದಲ್ಲಿ ನೇತ್ರಾವತಿ ನದಿ ತೀರದಲ್ಲಿ ಪತ್ರಿಕಾಗೋಷ್ಠಿ ... "ಹೆಗ್ಗಡೆಯವರು ನಟಿಸುವುದನ್ನು ಒಪ್ಪಿಕೊಂಡ ನಂತರ ನಾವೆಲ್ಲ ಪುಳಕಿತರಾಗಿದ್ದೇವೆ" ... ಹೇಳಿದರು. ಅಲ್ಲೇ ನೇತ್ರಾವತಿ ನದಿ ತೀರದಲ್ಲಿ ಫೈಟಿಂಗ್ ದೃಶ್ಯವೊಂದರ ...ಕರಣದ ನಂತರ ಚಿತ್ರತಂಡ ವೀರೇಂದ್ರ ಹೆಗ್ಗಡೆಯವರ ಮನೆಗೆ ತಲುಪಿತು.

...ಅಲ್ಲಿ ಆರಂಭದಲ್ಲಿ ವೀರೇಂದ್ರ ಹೆಗ್ಗಡೆಯವರ ಕೈಯಲ್ಲಿ ಚಿತ್ರದ ನಿರ್ಮಾಪಕರು ...ರಾ ಸ್ವಿಚ್ ಆನ್ ಮಾಡಿಸಿದರು. ಆಗಲೇ ಪತ್ರಕರ್ತರಿಗೆಲ್ಲ ಯಾಕೋ ಸಂಶಯ ...ವಾಯಿತು. ಬೆಳಗಿನ ಪತ್ರಿಕಾಗೋಷ್ಠಿಯಲ್ಲಿ 45 ದಿನಗಳ ಚಿತ್ರೀಕರಣ ಮುಗಿದಿದೆ ... ಘೋಷಿಸಿದ ನಂತರ ಇವರು ಮತ್ತೆ ಕ್ಯಾಮರಾ ಸ್ವಿಚ್ ಯಾಕೆ ಆನ್ ಮಾಡಿಸಿದರು ಎಂಬುದೇ ಸಂಶಯಕ್ಕೆ ಮೂಲ ಕಾರಣವಾಯಿತು. ಅಷ್ಟೊತ್ತಿಗೆ ಒಬ್ಬ ಛಾನಲ್‌ನವನು ಹೆಗ್ಗಡೆಯವರಿಗೆ ಒಂದು ಪ್ರಶ್ನೆಯನ್ನು ಕೇಳಿಯೇಬಿಟ್ಟ. "ಸಾರ್! 'ಶ್ರಾವಣ ಬಂತು' ಚಿತ್ರದಲ್ಲಿ ಕಾಣಿಸಿಕೊಂಡ ನಂತರ ಈಗ ಈ ಚಿತ್ರದಲ್ಲಿ ಅಭಿನಯಿಸುತ್ತಿರುವ ಬಗ್ಗೆ ನಿಮಗೇನು ಅನ್ನಿಸುತ್ತದೆ" ಎಂದು ಕೇಳಿದಾಗ ಹೆಗ್ಗಡೆಯವರು ಸ್ವಲ್ಪ ಗಲಿಬಿಲಿಗೊಂಡರೂ ಸುಧಾರಿಸಿಕೊಳ್ಳುತ್ತಾ "ನಾನು ಖಂಡಿತವಾಗಿಯೂ ಈ ಚಿತ್ರದಲ್ಲಿ ನಟಿಸುವುದಿಲ್ಲ. ಧರ್ಮಸ್ಥಳಕ್ಕೆ ಬಂದ ಈ ಚಿತ್ರತಂಡಕ್ಕೆ ಶುಭ ಹಾರೈಸುವುದು ನನ್ನ ಕರ್ತವ್ಯ" ಎಂದು ಚುಟುಕಾಗಿ ಉತ್ತರಿಸಿದರು.


ಇಷ್ಟಾದರೂ ಹೆಗ್ಗಡೆಯವರ ಮನಃಸ್ಥಿತಿಯನ್ನು ಅರಿಯದ ಚಿತ್ರತಂಡ ನಾಯಕ-ನಾಯಕಿಯರನ್ನು ಕರೆಸಿ ಹೆಗ್ಗಡೆಯವರಿಂದ ಆಶೀರ್ವಾದ ಮಾಡುವ ದೃಶ್ಯಕ್ಕೆ ರೆಡಿ ಮಾಡಿಕೊಳ್ಳುತ್ತಿದ್ದರು. ಇದನ್ನು ನೋಡಿದ ಹೆಗ್ಗಡೆಯವರು ಕೂಡಲೇ ಎಚ್ಚೆತ್ತುಗೊಂಡು "ಇದನ್ನೆಲ್ಲ ನಾನು ಮಾಡಲು ಸಾಧ್ಯವಿಲ್ಲ" ಎಂದು ಹೇಳಿ ಜಾಗ ಖಾಲಿ ಮಾಡಿದರು.

ಹೀಗೆ ಹೆಗ್ಗಡೆಯವರು ಜಾಗ ಕಾಲಿ ಮಾಡಿದ ನಂತರವೇ ಎಲ್ಲರಿಗೂ ಗೊತ್ತಾದದ್ದು ಚಿತ್ರತಂಡ ಸುಳ್ಳು ಹೇಳಿದೆಯೆಂದು. ಆಗ ಪತ್ರಕರ್ತರಲ್ಲಿ ಚಿತ್ರತಂಡದವರು ಕ್ಷಮೆ ಯಾಚನೆ ಮಾಡುವ ನಾಟಕಗಳೂ ನಡೆದವು. ಅಂದು ಸಂಜೆ ಹೆಗ್ಗಡೆಯವರನ್ನು ಭೇಟಿಯಾಗಿ ಅವರಲ್ಲೂ ಚಿತ್ರತಂಡ ಕ್ಷಮೆ ಯಾಚಿಸಿತಂತೆ. ಇವರ ತಪ್ಪನ್ನು ಮನ್ನಿಸಿದ ಹೆಗ್ಗಡೆಯವರು "ನಿಮಗೆ ಒಳ್ಳೆಯದಾಗಲಿ. ಮುಂದೆಯೂ ನನ್ನ ಅಗತ್ಯವಿದ್ದರೆ ನಾನು ನಿಮ್ಮ ಜೊತೆ ಇರುತ್ತೇನೆ" ಎಂದು ಶುಭ ಹಾರೈಸಿದರಂತೆ.

ವಾಸ್ತವವಾಗಿ ಚಿತ್ರದ ನಿರ್ಮಾಪಕ ಕಿರಣ್ ಅಥವಾ ನಿರ್ದೇಶಕ ದತ್ತು ಹೆಗ್ಗಡೆಯವರನ್ನು ತಮ್ಮ ಚಿತ್ರರಲ್ಲಿ ನಟಿಸುವ ಬಗ್ಗೆ ಸಂಪರ್ಕಿಸಲೇ ಇಲ್ಲವಂತೆ. ಈ ಮಧ್ಯೆ ಯಾವುದೋ ಒಬ್ಬ ಲೋಕಲ್ ವ್ಯಕ್ತಿ "ಇದನ್ನೆಲ್ಲ ನಾನು ಮಾಡಿಸಿಕೊಡುತ್ತೇನೆ" ಎಂದು ಹೇಳಿದ್ದರಿಂದ ಚಿತ್ರತಂಡ ಆತನನ್ನೇ ನಂಬಿ ಈ ಎಲ್ಲ ಏರ್ಪಾಡು ಮಾಡಿತ್ತಂತೆ. ಅಕಸ್ಮಾತ್ ತಂಡ ಯೋಚಿಸಿದ್ದಂತೆ ನಡೆದಿದ್ದರೆ ಇಬ್ಬರ ನಿಜಜೀವನದಲ್ಲಿ ಒಂದು ದೊಡ್ಡ ಅವಾಂತರವೇ ನಡೆದುಹೋಗುತ್ತಿತ್ತು. ಹೆಗ್ಗಡೆಯವರು ಖಾಸಗಿಯಾಗಿ ಹೇಳಿದ ಪ್ರಕಾರ "ನಾನು ಆ ನಟನಟಿಗೆ ಆಶೀರ್ವಾದ ಮಾಡಿದ್ದೇ ಆದರೆ ಅವರಿಬ್ಬರು ನಿಜಜೀವನದಲ್ಲೂ ದಂಪತಿಗಳಾಗಿಯೇ ಮುಂದುವರಿಯಬೇಕಾಗುತ್ತಿತ್ತು."

ರೀಲ್ ಲೈಫ್‌ನ ಮದುವೆಗೂ ರಿಯಲ್ ಲೈಫ್‌ನ ಮದುವೆಗೂ ತುಂಬಾ ವ್ಯತ್ಯಾಸವಿರುವುದು ಆ ಚಿತ್ರತಂಡಕ್ಕೆ ಈಗ ಗೊತ್ತಾಗಿದೆ. ಆದರೆ ಆ ಸರಳ ಜ್ಞಾನವನ್ನು ಪಡೆಯಲು ಅವರು ತೆರಬೇಕಾದ ಬೆಲೆ ಮಾತ್ರ ಬಹಳ ದೊಡ್ಡದಾಯಿತು.

'ಅಲೆ' ಚಿತ್ರದಲ್ಲಿ ಹರ್ಷಿತ ಪೂಣಚ್ಚ ನಾಯಕಿಯಾಗಿಯೂ ಹೊಸ ನಟ ಅನುಷ್ ನಾಯಕನಾಗಿಯೂ ಕಾಣಿಸಿಕೊಳ್ಳುತ್ತಿದ್ದಾರೆ. ಹೊಸಬರ ಈ ಚಿತ್ರ ದೊಡ್ಡ ದೊಡ್ಡ ಸ್ಟಾರ್‌ಗಳ ಚಿತ್ರಗಳಿಗಿಂತಲೂ ವಿಭಿನ್ನವಾಗಿ ವಿವಾದದ ಅಲೆ ಸೃಷ್ಟಿಸಿರುವುದು ತಮಾಷೆಯಾಗಿದೆಯಲ್ಲವೇ?



ಆಷಾಢಕ್ಕೆ ಹೆದರಿ...

'ಯಾರೇ ಕೂಗಾಡಲಿ' ಎಂಬ ಹೊಸ ಚಿತ್ರದ ಮುಹೂರ್ತವನ್ನು 13ರಂದು ಯಾವುದೇ ಸದ್ದುಗದ್ದಲವಿಲ್ಲದೆ, ಅಬ್ಬರವಿಲ್ಲದೆ ರಾಜ್ ಸಂಸ್ಥೆಯವರು ತಮ್ಮ ಹೊಸ ಮನೆಯಲ್ಲಿ ಮಾಡಿದ್ದಾರೆ. ಈ ಚಿತ್ರದಲ್ಲಿ ಪುನೀತ್ ರಾಜ್‌ಕುಮಾರ್ ನಾಯಕನಟನಾಗಿ ನಟಿಸುತ್ತಿದ್ದಾರೆ. ಚಿತ್ರದ ನಿರ್ದೇಶನದ ಜವಾಬ್ದಾರಿಯನ್ನು ತಮಿಳಿನ ಖ್ಯಾತ ನಿರ್ದೇಶಕ ಸಮುದ್ರ ಘನಿ ನಿರ್ವಹಿಸಲಿದ್ದಾರೆ. ಅಂದಹಾಗೆ ಈ ಚಿತ್ರ ಅವರದೇ ನಿರ್ದೇಶನದ 'ಪೊರಾಲಿ' ಎಂಬ ಚಿತ್ರದ ರೀಮೇಕ್. ಅಂದರೆ ಇದೇ ಮೊದಲ ಬಾರಿಗೆ ಮೂಲ ಚಿತ್ರದ ನಿರ್ದೇಶಕನನ್ನೇ ಗಾಂಧಿನಗರದ ಹೆಡ್‌ಆಫೀಸ್‌ನವರು ಕನ್ನಡಕ್ಕೆ ಕರೆತಂದಿದ್ದಾರೆ.

ಇದೇ 20 ರಿಂದ ಆಷಾಢ ಆರಂಭವಾಗುತ್ತಿರುವುದರಿಂದ ದಿಢೀರನೆ ಈ ಮುಹೂರ್ತವನ್ನು ವಜ್ರೇಶ್ವರಿ ಸಂಸ್ಥೆಯವರು ಮಾಡಿಮುಗಿಸಿದ್ದಾರೆ. ಇದೇ ರೀತಿ ಆಷಾಢಕ್ಕೆ ಹೆದರಿ ಅನೇಕ ನಿರ್ಮಾಪಕರು ಸದ್ದುಗದ್ದಲವಿಲ್ಲದೆ ತಮ್ಮ ಚಿತ್ರದ ಮುಹೂರ್ತವನ್ನು ಮಾಡಿ ಮುಗಿಸಿದ್ದುಂಟು. ಅಂದರೆ ಮುಹೂರ್ತ ಮಾಡಿದ ನಂತರ ಆಷಾಢದಲ್ಲಿ ಚಿತ್ರೀಕರಣವನ್ನು ಮುಂದುವರಿಸುವುದು ಚಿತ್ರರಂಗದವರ ವರಸೆ. ಇದು ಪ್ರತಿ ವರ್ಷವೂ ಆಷಾಢಕ್ಕೆ ಮೊದಲು ಗಾಂಧಿನಗರದಲ್ಲಿ ನಡೆಯುವ ಒಂದು ಮಾಮೂಲಿ ಸಂಗತಿ.

ಕನ್ನಡ ಚಿತ್ರರಂಗ ನಿಜಕ್ಕೂ ಅಭಿವೃದ್ಧಿ ಹಾದಿಯಲ್ಲಿದೆಯೇ?

...ಇತ್ತೀಚೆಗೆ ಗಾಂಧಿನಗರದಲ್ಲಿ ನಡೆಯುತ್ತಿರುವ ಘಟನಾವಳಿಗಳನ್ನು ಗಮನಿಸಿದರೆ ... ಚಿತ್ರರಂಗದಲ್ಲಿ ಒಂದಿಷ್ಟು ಒಳ್ಳೆಯ ಕೆಲಸಗಳು ಆಗುತ್ತಿವೆ ಎಂಬ ...ನೆ ಬರುತ್ತದೆ. ಅದರಲ್ಲೂ ಮಾಧ್ಯಮಗಳಲ್ಲಿ ನೋಡಿದ್ದನ್ನೋ-ಓದಿದ್ದನ್ನೋ ...ರುವ ಜನ ಗಾಂಧಿನಗರದಲ್ಲಿ ಅನೇಕಾನೇಕ ಅದ್ಭುತಗಳು ನಡೆಯುತ್ತಿವೆ ...ೇ ಭಾವಿಸಿರುತ್ತಾರೆ.

...ಆದರೆ ಕನ್ನಡ ಚಿತ್ರರಂಗದ ಒಳಗಿರುವವರ ಪ್ರಕಾರ ಕನ್ನಡ ಚಿತ್ರರಂಗದ ... ಪರಿಸ್ಥಿತಿ ನೀರ ಮೇಲಿನ ಗುಳ್ಳೆಯಂತಿದೆ. ಆದ್ದರಿಂದ ಗಾಂಧಿನಗರದ ...ಕ ವ್ಯವಸ್ಥೆ ಯಾವುದೇ ಕ್ಷಣದಲ್ಲಿ ಪಾತಾಳಕ್ಕೆ ಕುಸಿಯಬಹುದು.

...ಇತ್ತೀಚೆಗೆ ಗುಣಾತ್ಮಕವಾಗಿ ಯಾವುದೇ ಚಿತ್ರ ಅಂತಹ ಸದ್ದು ...ಿಲ್ಲ, ಬಾಕ್ಸ್ ಆಫೀಸ್‌ನಲ್ಲಿ ಹಳೆಯ ದಾಖಲೆಗಳನ್ನು ಧೂಳೀಪಟ ...ದ ಚಿತ್ರಗಳೂ ಬಿಡುಗಡೆಗೊಂಡಿಲ್ಲ. ಬದಲಾಗಿ ಒಂದು ಚಿತ್ರ ...ಭವಾಗುವ ಮೊದಲೇ ಯಾವ ನಟಿ ಈ ಚಿತ್ರಕ್ಕೆ ಆಯ್ಕೆಯಾಗುತ್ತಾಳೆ ...ಬುದರ ಬಗ್ಗೆಯೇ ಟಿ.ವಿ. ಚಾನೆಲ್‌ಗಳಲ್ಲಿ ಮತ್ತು ಪತ್ರಿಕೆಗಳಲ್ಲಿ ...ತ್ವ ಚರ್ಚೆಗಳು ನಡೆಯುತ್ತವೆ. ಕೊನೆಗೆ ಇತರೆ ಚಿತ್ರೋದ್ಯಮಗಳಿಂದ ...ವಳೋ ಒಬ್ಬಳು ನಾಯಕಿ ಕನ್ನಡ ಚಿತ್ರರಂಗಕ್ಕೆ ಬರುವುದು ... ಆಗುತ್ತಿದ್ದಂತೆ ಅದು ಪ್ರಪಂಚದ ಎಂಟನೆ ಅದ್ಭುತ ಎಂಬ ...ಯಲ್ಲಿ ಆಕೆಯ ಬಗ್ಗೆ ಅರ್ಧರ್ಧ ಗಂಟೆ ಟಿವಿ ಚಾನೆಲ್‌ಗಳಲ್ಲಿ ...ದಿಯಾಗುತ್ತದೆ. ದಿನಪತ್ರಿಕೆಗಳೂ ಆ ನಾಯಕಿಯ ...ಟೋಗಳನ್ನು ಮುಖಪುಟದಲ್ಲೇ ಛಾಪಿಸುತ್ತವೆ.

...ಇಂತಹದ್ದನ್ನೆಲ್ಲ ಕನ್ನಡ ಚಿತ್ರರಂಗದ ಅಭಿವೃದ್ಧಿ ಎಂದು ಹೇಗೆ ...ಸಲು ಸಾಧ್ಯ?

...ಉದಾಹರಣೆಗೆ ಇತ್ತೀಚೆಗೆ ವೀಣಾ ಮಲ್ಲಿಕ್ ಎಂಬ ನಟಿ ...ದ 'ಡರ್ಟಿ ಪಿಕ್ಚರ್'ನಲ್ಲಿ ನಟಿಸುತ್ತಾಳೆ ಎಂಬುದು ಬಹುದೊಡ್ಡ ...ಯಾಗಿ ಮಾಧ್ಯಮಗಳಲ್ಲಿ ವರದಿಯಾಯಿತು. ಪಾಕಿಸ್ತಾನ ...ಲದ ವೀಣಾ ವಿಮಾನ ನಿಲ್ದಾಣದಲ್ಲಿ ಇಳಿದಕೂಡಲೇ ...ಯಾಗ್ರಾಹಕರು ತಾ ಮುಂದು, ನಾ ಮುಂದು ಎಂದು ಆಕೆಯ ...ಟೋ ಕ್ಲಿಕ್ಕಿಸಿದರು. ಆನಂತರ ಆಕೆ ಫೋಟೋ ಸೆಷನ್‌ಗಾಗಿ ...ಯಾದಾಗಲೂ ಕೆಲವು ಟಿ.ವಿ. ಚಾನೆಲ್‌ಗಳು ಅದು ಮುಖ್ಯ ...ರ ಎಂಬಂತೆ ಅದನ್ನು ನೇರ ಪ್ರಸಾರ ಮಾಡಿದರು. ಕೆಲವು ...ಗಾರರು ಫೋಟೋ ಸೆಷನ್ ನಡೆಯುತ್ತಿದ್ದಾಗಲೇ ಆಕೆಯನ್ನು ... ಬೇಡಿ ಆಕೆಯ ಸಂದರ್ಶನ ಪಡೆದು ಮರುದಿನದ ಪತ್ರಿಕೆಯ ...ಖಪುಟದಲ್ಲೇ ಅದನ್ನು ಪ್ರಕಟಿಸಿದರು. ಮರುದಿನ ಆಕೆಯ ...ಕಾಗೋಷ್ಠಿಯನ್ನೂ ದೃಶ್ಯ ಮಾಧ್ಯಮದವರು ನೇರ ಪ್ರಸಾರ ...ಿದರು.

...ನಮ್ಮ ಮಾಧ್ಯಮದವರು ಆಕೆಯ ಬಗ್ಗೆ ಇಷ್ಟೆಲ್ಲ ಉತ್ಸಾಹ ...ಿದ್ದರಿಂದ ಪ್ರೇಕ್ಷಕರಲ್ಲಿ ಆಕೆ ನಟಿಸಲಿರುವ ಚಿತ್ರದ ಬಗ್ಗೆ ...ರ ನಿರೀಕ್ಷೆ ಹುಟ್ಟುವುದು ಸಹಜ. ಆದರೆ ನಿಜವಾಗಿಯೂ ...ವೀಣಾ ಮಲ್ಲಿಕ್ ಪ್ರತಿಭಾವಂತ ನಟಿಯೇ? ಈಕೆಗೆ ಇಷ್ಟೊಂದು ...ರ ಕೊಡುವ ಅಗತ್ಯವಿತ್ತೆ?

...ಈ ವೀಣಾ ಮಲ್ಲಿಕ್ ಆರಂಭದಿಂದಲೂ ವಿವಾದಗಳ ...ಮೂಲಕವೇ ಸುದ್ದಿ ಮಾಡಿದವಳು. ಯಾವುದೋ ಒಂದು ವಿದೇಶಿ ಮ್ಯಾಗಜೀನ್‌ಗೆ ...ನವಾಗಿ ಪೋಸ್ ಕೊಟ್ಟಳು ಎಂಬ ಸುದ್ದಿ ಹರಡಿದ್ದರಿಂದ ಆಕೆಯ ...ದ್ಯ ಪಾಕಿಸ್ತಾನದ ಮುಲ್ಲಾಗಳು ಬಹಿಷ್ಕಾರ ಹಾಕಿದರು. ಆಕೆ ಮುಂಬೈಗೆ ...ಬಂದು ಸಿನಿಮಾಗಳಲ್ಲಿ ನಟಿಸುವ ಬಗ್ಗೆ ಆಸಕ್ತಿ ತೋರಿದಳು. ಒಂದೆರಡು ಸಿನಿಮಾಗಳಲ್ಲಿ ಚಿಕ್ಕಪುಟ್ಟ ಪಾತ್ರಗಳನ್ನೂ ಆಕೆ ನಿರ್ವಹಿಸಿದಳು. 'ಬಿಗ್ ಬಾಸ್' ಎಂಬ ರಿಯಾಲಿಟಿ ಶೋನಲ್ಲಿ ಭಾಗವಹಿಸಿದ ಈಕೆ ಅಲ್ಲಿಂದ ಹೇಳದೇ, ಕೇಳದೇ ಓಡಿಹೋಗಿ ಮತ್ತೆ ಸುದ್ದಿ ಮಾಡಿದಳು. ಇದೆಲ್ಲದರ ಮಧ್ಯೆ ಸ್ವಲ್ಪ ದಿನಗಳ ಕಾಲ ಪಾಕಿಸ್ತಾನದ ಕ್ರಿಕೆಟರ್ ಒಬ್ಬನ ಜೊತೆ ಗಾಸಿಪ್ ಕಾಲಂಗಳಲ್ಲಿ ಕಾಣಿಸಿಕೊಂಡಳು. ಇಂತಹ ಸುದ್ದಿಸುಬ್ಬಕ್ಕ ಈಗ ಕನ್ನಡಕ್ಕೆ ಬಂದಿದ್ದಾಳೆ. ಇವಳನ್ನು ಕನ್ನಡಕ್ಕೆ ಕರೆತರಲು ನಿರ್ಮಾಪಕರು ತಮ್ಮ ಜೇಬಿನಿಂದ ಖರ್ಚು ಮಾಡಿರುವುದು ಬರೋಬ್ಬರಿ 75 ಲಕ್ಷ ರೂ. ಮಾತ್ರ.



ಈ ವೀಣಾ ಮಲ್ಲಿಕ್ ನಮ್ಮ ಯಾವುದೇ ಕನ್ನಡದ ನಾಯಕಿಯರಿಗಿಂತ ಸುರಸುಂದರಿಯಲ್ಲ. ಅಷ್ಟೇ ಯಾಕೆ, ಒಬ್ಬ ನಾಯಕಿಗೆ ಬೇಕಾದಂತಹ ಮೈಕಟ್ಟು ಅಥವಾ ಗ್ಲಾಮರ್ ಕೂಡ ಈಕೆಯಲ್ಲಿಲ್ಲ. ಇಂತಹ 'ಅಭಿನೇತ್ರಿ' ಕನ್ನಡ ಚಿತ್ರರಂಗಕ್ಕೆ ಬರುವ ಮೂಲಕ ಅದೇನು ಅಭಿವೃದ್ಧಿ ಸಾಧ್ಯ? ಆದರೂ ಇಂತಹ ನಟಿಯರ ಬಗ್ಗೆ ನಮ್ಮ ಮಾಧ್ಯಮದವರು ದೊಡ್ಡ ಗುಲ್ಲು ಹಬ್ಬಿಸಿರುವುದನ್ನು ಕಂಡ ಪ್ರೇಕ್ಷಕನಿಗೆ ನಾಳೆ ಈಕೆ ನಟಿಸಿರುವ ಚಿತ್ರವನ್ನು ನೋಡಿ ನಿರಾಶೆ ಆಗಲೂಬಹುದು.

ವೀಣಾ ಮಲ್ಲಿಕ್‌ಳಂತೆ ಗಾಂಧಿನಗರಕ್ಕೆ ಕಾಲಿಡುವ ಮುನ್ನವೇ ಸುದ್ದಿ ಮಾಡಿದ ಮತ್ತೊಬ್ಬಳೆಂದರೆ ಸನ್ನಿ ಲಿಯೋನ್. ಈಕೆ ನಿರ್ದೇಶಕ ಪ್ರೇಮ್ ನಟಿಸುತ್ತಿರುವ 'ಪ್ರೇಮ್ ಅಡ್ಡ' ಎಂಬ ಚಿತ್ರದ ಐಟಂ ಸಾಂಗ್‌ವೊಂದರಲ್ಲಿ ಕಾಣಿಸಿಕೊಳ್ಳುತ್ತಾಳೆ ಎಂದು ಭಾರೀ ಪ್ರಚಾರ ಮಾಡಲಾಯಿತು. ಆದರೆ ಸನ್ನಿ ತನ್ನ ಟ್ವಿಟರ್‌ನಲ್ಲಿ "ನಾನು ಯಾವುದೇ ಕಾರಣಕ್ಕೂ ಕನ್ನಡ ಚಿತ್ರರಂಗದಲ್ಲಿ ನಟಿಸುವುದಿಲ್ಲ, ನನ್ನನ್ನು ಯಾರೂ ಸಂಪರ್ಕಿಸಿಲ್ಲ" ಎಂದು ಹೇಳಿದಳು. ಆಕೆಯ ಹೇಳಿಕೆ ಬಗ್ಗೆ ಪ್ರೇಮ್ "ನಾವು ಆಕೆಯ ಮ್ಯಾನೇಜರ್‌ನ್ನು ಸಂಪರ್ಕಿಸಿದ್ದೆವು. ಆತ ಒಪ್ಪಿಗೆಯನ್ನು ಕೂಡ ಕೊಟ್ಟಿದ್ದ, ಅವಳು ನನ್ನ ಚಿತ್ರದಲ್ಲಿ ಖಂಡಿತವಾಗಿಯೂ ನಟಿಸುತ್ತಾಳೆ" ಎಂದು 'ಸ್ಪಷ್ಟೀಕರಣ' ನೀಡಿದ್ದೂ ಮತ್ತೆ ಪ್ರಚಾರ ಪಡೆಯಿತು.

ಭಾರತದ ಸಂಜೋತೆಯಾದ ಈ ಸನ್ನಿ ಲಿಯೋನ್ ಬೆಳೆದದ್ದು ಕೆನಡಾ ದೇಶದಲ್ಲಿ. ಈಕೆ ಹೆಸರು ಮಾಡಿದ್ದು ಮೈಮೇಲೆ ಒಂದಿಂಚೂ ಬಟ್ಟೆ ಇಲ್ಲದೆ ಸೆಕ್ಸ್ ('ದೇವರ') ಸಿನಿಮಾಗಳಲ್ಲಿ 'ನಟಿ'ಸುವ ಮೂಲಕ! ಇಂತಹ 'ಅಮೋಘ' ನಟಿಯೊಬ್ಬಳನ್ನು ಕನ್ನಡಕ್ಕೆ ತರಲೇಬೇಕೆಂದು ಪ್ರೇಮ್ ಹಠ ಹಿಡಿದದ್ದು, ಆಕೆ ಬರುತ್ತಿರುವ ಸುದ್ದಿಯನ್ನು ರಂಜನೀಯವಾಗಿ ಮಾಧ್ಯಮಗಳು ವರದಿ ಮಾಡಿದ್ದು ಅಸಹ್ಯ ಮತ್ತು ಅಚ್ಚರಿ ಎರಡನ್ನೂ ಹುಟ್ಟಿಸುತ್ತದೆ.

ಇದೇರೀತಿ ಇತ್ತೀಚೆಗೆ ದೊಡ್ಡ ಸುದ್ದಿ ಮಾಡಿದ ಮತ್ತೊಬ್ಬ ನಟಿ ತಮಿಳಿನ ಶ್ರೇಯಾ ಶರಣ್. ಉತ್ತರ ಪ್ರದೇಶದ ಶ್ರೇಯಾ ಹೆಸರು ಮಾಡಿದ್ದು ತಮಿಳು ಮತ್ತು ತೆಲುಗು ಚಿತ್ರರಂಗದಲ್ಲಿ. ರೂಪಾ ಅಯ್ಯರ್ ನಿರ್ದೇಶಿಸಲಿರುವ, ರಮ್ಯಾ ನಟಿಸಬೇಕಿದ್ದ 'ಚಂದ್ರ' ಚಿತ್ರಕ್ಕೆ ಶ್ರೇಯಾ ಆಯ್ಕೆಯಾಗಿದ್ದಾಳೆ. ಈಕೆ ಈ ಚಿತ್ರಕ್ಕೆ ಸಂಬಂಧಿಸಿದಂತೆ ಕರ್ನಾಟಕದಲ್ಲಿ ಕಾಲಿಡುವುದಕ್ಕೂ ಸುಮಾರು ಎರಡು ತಿಂಗಳುಗಳಿಂದ "ಶ್ರೇಯಾ ಶರಣ್ ಕನ್ನಡಕ್ಕೆ ಬರುತ್ತಿದ್ದಾಳಂತೆ" ಎಂಬ ಸುದ್ದಿ ಮಾಧ್ಯಮಗಳಲ್ಲಿ ರಾರಾಜಿಸುತ್ತಿತ್ತು. ಕೊನೆಗೂ ಆಕೆ ಚಿತ್ರದ ಮುಹೂರ್ತಕ್ಕಾಗಿ ಬೆಂಗಳೂರಿಗೆ ಬಂದೇಬಿಟ್ಟಾಗ ಮಾಧ್ಯಮದವರು ಮತ್ತು ಛಾಯಾಗ್ರಾಹಕರು ಆಕೆಗೆ ಮುತ್ತಿಗೆ ಹಾಕಿದರು. ಆಕೆ ಪತ್ರಿಕಾಗೋಷ್ಠಿಯಲ್ಲಿ ಒಂದೇ ಒಂದು ಶಬ್ದ ಮಾತನಾಡದಿದ್ದರೂ ಟಿ.ವಿ. ಚಾನೆಲ್‌ನವರು ಈಕೆಯ ಸುತ್ತಲೇ ಒಂದೊಂದು ಗಂಟೆ ಕಾರ್ಯಕ್ರಮಗಳನ್ನು ಬಿತ್ತರಿಸಿದವು.

ಈ ಮೂರೂ ಘಟನೆಗಳು ಕೇವಲ ಒಂದು ತಿಂಗಳ ಕಾಲಾವಧಿಯಲ್ಲಿ ನಡೆದವು. ಟಿವಿ ಮತ್ತು ಪತ್ರಿಕೆಗಳನ್ನು ಓದಿದ ಜನರಿಗೆ ಇವರ ಆಗಮನದಿಂದಾಗಿ ಕನ್ನಡ ಚಿತ್ರರಂಗ ಉದ್ಧಾರವಾಗುತ್ತದೆ ಎಂಬ ಭಾವನೆ ಬರುವುದು ಸಹಜ. ಆದರೆ ಗಾಂಧಿನಗರದ ಪಂಡಿತರ ಪ್ರಕಾರ ಈ ಸುದ್ದಿಗಳು, ಪ್ರಚಾರಗಳು ಯಾವ ರೀತಿಯಲ್ಲೂ ಸಿನಿಮಾದ ಅಭಿವೃದ್ಧಿಗೆ ಸಹಾಯವಾಗುವುದೇ ಇಲ್ಲ. ಬದಲಾಗಿ ಇದೆಲ್ಲವೂ ಒಂದು ರೀತಿಯ ನೀರ ಮೇಲಿನ ಗುಳ್ಳೆ ತರಹ ಎಂದು ಅವರು ಹೇಳುತ್ತಾರೆ.

ಬೇರೆ ಚಿತ್ರೋದ್ಯಮದ ತಾರೆಯರಿಗೆ ದುಬಾರಿ ಬೆಲೆ ಕೊಟ್ಟು ಅವರನ್ನು ಕನ್ನಡಕ್ಕೆ ಆಮದು ಮಾಡಿಕೊಳ್ಳುವ ನಿರ್ಮಾಪಕರ ಕ್ರೇಜಿಗೆ ಏನೆನ್ನಬೇಕೋ ಗೊತ್ತಿಲ್ಲ. ಈ ಹಿಂದೆ ತಮ್ಮ ಚಿತ್ರ ಬಿಡುಗಡೆಯಾಗುವ ಸಂದರ್ಭದಲ್ಲಿ ನಿರ್ಮಾಪಕರು ಭಾರೀ ಪ್ರಚಾರವನ್ನು ಮಾಡಿ ಜನ ಥಿಯೇಟರ್‌ಗೆ ಬರುವಂತೆ ನೋಡಿಕೊಳ್ಳುತ್ತಿದ್ದರು. ಆದರೆ ಈಗ ಒಳ್ಳೆ ಸಿನಿಮಾ ಮಾಡುವ ಬದಲು ಸಿನಿಮಾ ಆರಂಭವಾಗುವ ಮೊದಲೇ ಪುಕ್ಕಟೆ ಪ್ರಚಾರವನ್ನು ಪಡೆಯುವ ಒಂದು ಹೊಸ ಟ್ರೆಂಡ್ ಕನ್ನಡದಲ್ಲಿ ಆರಂಭವಾಗಿದೆ.

ಅಂದಹಾಗೆ, ಆಮದಾಗುತ್ತಿರುವ ನಟಿಯರಿಗಷ್ಟೇ ನಮ್ಮ ಮಾಧ್ಯಮಗಳಲ್ಲಿ ಅದ್ದೂರಿಯ ಪ್ರಚಾರ ಮೀಸಲಾಗಿದೆ. 'ಅಣ್ಣಾ ಬಾಂಡ್' ಚಿತ್ರದಲ್ಲಿ ಬಾಲಿವುಡ್‌ನ ಜಾಕಿಶ್ರಾಫ್ ನಟಿಸಿದಾಗ ಆತನಿಗೆ ಇಂತಹ ಅದ್ದೂರಿ ಸ್ವಾಗತ ಸಿಕ್ಕಿರಲಿಲ್ಲ. ಅಷ್ಟೇ ಅಲ್ಲ, ಭಾರತೀಯ ಚಿತ್ರರಂಗಕ್ಕೆ ಆಸ್ಕರ್ ಪ್ರಶಸ್ತಿಯನ್ನು ತಂದುಕೊಟ್ಟ ಎ.ಆರ್.ರೆಹಮಾನ್ ಮೊನ್ನೆ 'ಗಾಡ್‌ಫಾದರ್' ಎಂಬ ಕನ್ನಡ ಚಿತ್ರಕ್ಕೆ ಉಚಿತವಾಗಿ ಸಂಗೀತ ನೀಡಿದ್ದರೂ ಅದನ್ನು ನಮ್ಮ ಮಾಧ್ಯಮಗಳು ದೊಡ್ಡ ಸುದ್ದಿ ಮಾಡಲಿಲ್ಲ.

ಒಂದಂತೂ ಸ್ಪಷ್ಟ. ಕೇವಲ ಪ್ರಚಾರದಿಂದ ಅಥವಾ ಪರಭಾಷಾ ನಟಿಯರ ಬಿಂದಾಸ್ ಮೈಮಾಟದ ಪ್ರದರ್ಶನದಿಂದ ಯಾವುದೇ ಚಿತ್ರ ಗೆಲ್ಲುವುದು ಕಷ್ಟ. ಅದನ್ನು ನಮ್ಮ ಕನ್ನಡ ಚಿತ್ರರಂಗದವರು ಆದಷ್ಟು ಬೇಗ ಅರಿತುಕೊಂಡರೆ ಅವರೂ ಮತ್ತು ನಮ್ಮ ಚಿತ್ರರಂಗ ನಿಜಕ್ಕೂ ಅಭಿವೃದ್ಧಿಯಾಗುತ್ತವೆ....

—ಶೆಣೈ

Registered No.KA/RNP/BGS/2036/2011-13 Posted at : GPO, Bangalore-01. Fri/Saturday R B P LANKESH, Kannada Weekly Price Rs. 14/- 27-06-2012 RNI No. KARKAN200



ತ್ರಿಶೂಲನ ವೀಣಾ ಪ್ರಲಾಪ

'ಡರ್ಟಿ ಪಿಕ್ಚರ್' ಮುಹೂರ್ತದ ಸಂದರ್ಭದಲ್ಲಿ ನಿರ್ದೇಶಕ ತ್ರಿಶೂಲ್ ಅತ್ಯಂತ ಭಾವಾವೇಷದಿಂದ ನಟಿಯರಾದ ನಿಖಿತಾ ಮತ್ತು ಪೂಜಾ ಗಾಂಧಿ ವಿರುದ್ಧ ಆರೋಪಗಳನ್ನು ಹೊರಿಸಿದ್ದು ಮಾತ್ರವಲ್ಲ, ಪಾಕಿಸ್ತಾನದ ವಿವಾದಾತ್ಮಕ ನಟಿ ವೀಣಾ ಮಲ್ಲಿಕ್‌ಳನ್ನು ಬಾಯ್ತುಂಬಾ ಹೊಗಳಿದ್ದು ಹಾಸ್ಯಾಸ್ಪದವಾಗಿತ್ತು.

ತ್ರಿಶೂಲ್ ಪ್ರಕಾರ ಆತನ ಸಿನಿಮಾದಲ್ಲಿ ವೀಣಾ ಮಲ್ಲಿಕ್ ನಟಿಸುತ್ತಿರುವುದೇ ದೊಡ್ಡ ಹೆಗ್ಗಳಿಕೆ ಅಂತೆ. ಅಷ್ಟೇ ಅಲ್ಲ, ತನ್ನ ಚಿತ್ರದಲ್ಲಿ ನಟಿಸಲು ಆತ ನಿಖಿತಾರನ್ನು ಸಂಪರ್ಕಿಸದಿದ್ದರೂ ಆಕೆಯೇ ತಾನು ಈ ಪಾತ್ರವನ್ನು ನಿರ್ವಹಿಸುತ್ತೇನೆ ಎಂದು ತ್ರಿಶೂಲ್‌ನನ್ನು ಸಂಪರ್ಕಿಸಿದ್ದರಂತೆ. ಅವರಿಬ್ಬರ ನಡುವೆ ಬಹುತೇಕ ಮಾತುಕತೆ ಮುಗಿದನಂತರ ಚಿತ್ರದ ಹೆಸರಿನ ಜೊತೆಗೆ ಕಾಣಿಸಿಕೊಳ್ಳುವ ಟ್ಯಾಗ್‌ಲೈನ್ 'ಸಿಲ್ಕ್‌ಸ್ಮಿತಾ ಹಾಟ್ ಮಗಾ' ಬಗ್ಗೆ ನಿಖಿತಾ ಆಕ್ಷೇಪ ವ್ಯಕ್ತಪಡಿಸಿದರಂತೆ. ಅದನ್ನು ತೆಗೆಯಬೇಕು ಎಂಬುದೇ ಆಕೆಯ ಮುಖ್ಯ ಬೇಡಿಕೆಯಾಗಿತ್ತಂತೆ. ಆದರೆ ಇದಕ್ಕೆ ಒಪ್ಪದ ತ್ರಿಶೂಲ್ ಆಕೆಯನ್ನು ಕೈಬಿಟ್ಟನಂತೆ.

ಪೂಜಾ ಗಾಂಧಿ ಜೊತೆಗೂ ಇದೇ ರೀತಿ ಮಾತುಕತೆ ಮುಗಿದ ನಂತರ ಸಂಭಾವನೆ ವಿಷಯದಲ್ಲಿ ತ್ರಿಶೂಲ್‌ಗೂ, ಆಕೆಗೂ ಸಣ್ಣ ಭಿನ್ನಾಭಿಪ್ರಾಯ ಉಂಟಾಯಿತಂತೆ. ತ್ರಿಶೂಲ್ ಪ್ರಕಾರ ಆಕೆ ಮಾಮೂಲಿ ಪಡೆಯುವ ಸಂಭಾವನೆಗಿಂತ ಎರಡು ಪಟ್ಟು ಹೆಚ್ಚಿನ ಸಂಭಾವನೆಯನ್ನು ಕೇಳಿದಳಂತೆ. ಈ ಕಾರಣಕ್ಕಾಗಿಯೇ ಪೂಜಾ ಗಾಂಧಿಗೂ ತ್ರಿಶೂಲ್ ತನ್ನ ಚಿತ್ರದಿಂದ ಗೇಟ್‌ಪಾಸ್ ಕೊಟ್ಟನಂತೆ.

ಅಂದಹಾಗೆ, ಪಾಕಿಸ್ತಾನದ ವಿವಾದಾತ್ಮಕ ನಟಿ ವೀಣಾ ಮಲ್ಲಿಕ್ ಅವರಿಗೆ ನಿರ್ಮಾಪಕ ವೆಂಕಟಪ್ಪನವರು 75 ಲಕ್ಷ ರೂಪಾಯಿ ಸಂಭಾವನೆ ನೀಡಲು ಒಪ್ಪಿಕೊಂಡಿರುವುದು ಗುಟ್ಟಾಗೇನೂ ಉಳಿದಿಲ್ಲ. ಇದರ ಜೊತೆಗೆ ಮುಖ್ಯ ದೃಶ್ಯವೊಂದರಲ್ಲಿ ಆಕೆ ಬಿಕಿನಿಯಲ್ಲಿ ಕಾಣಿಸಿಕೊಳ್ಳಲು ಒಪ್ಪಿಕೊಂಡಿರುವುದೂ ಜಗಜ್ಜಾಹೀರಾಗಿದೆ. ಅಂದರೆ ನಿಖಿತಾ ಅಥವಾ ಪೂಜಾ ಗಾಂಧಿ ಈ ರೀತಿ ಬಿಕಿನಿಯಲ್ಲಿ ಕಾಣಿಸಿಕೊಳ್ಳಲು ಒಪ್ಪದೇ ಈ ಪಾತ್ರವನ್ನು ರಿಜೆಕ್ಟ್ ಮಾಡಿದರು ಎಂಬುದು ಗಾಂಧಿನಗರದಲ್ಲಿ ಚರ್ಚೆಯಾಗುತ್ತಿರುವ ವಿಷಯ.

ಇಂತಹ ಮುಖ್ಯ ವಿಷಯವನ್ನು ಬದಿಗಿಟ್ಟು, ಕನ್ನಡದ ನಟಿಯರ ಮೇಲೆ ನಿರ್ದೇಶಕ ತ್ರಿಶೂಲ್ ಗೂಬೆ ಕೂರಿಸುವುದು ಖಂಡಿತವಾಗಿಯೂ ಸರಿಯಲ್ಲ. ಈಗಾಗಲೇ ವಿದೇಶಿ ಮ್ಯಾಗಜಿನ್ ಒಂದಕ್ಕೆ ನಗ್ನವಾಗಿ ಪೋಸ್ ಕೊಟ್ಟಿರುವ ವೀಣಾ ಮಲ್ಲಿಕ್ ನಟನೆಗಿಂತ ಇಂತಹ ಕಾರಣಕ್ಕಾಗಿಯೇ ಸುದ್ದಿಯಲ್ಲಿರುವ ನಟಿ ಎಂಬುದು ಎಲ್ಲರಿಗೂ ಗೊತ್ತು. ಈಗ ಈಕೆಗೆ ತನ್ನ ಮೈಮಾಟದ ಪ್ರದರ್ಶನದ ಜೊತೆಗೆ ತನ್ನ ನಟನಾ ಪ್ರತಿಭೆಯನ್ನು ಪ್ರದರ್ಶಿಸುವ ಸುವರ್ಣಾವಕಾಶ ದೊರೆತಿದೆ. ಇಂತಹ ಒಂದು ಹಾಟ್ ನಟಿಯಿಂದ ನಟನೆಯನ್ನು ನಿರ್ದೇಶಕ ತ್ರಿಶೂಲ್ ಹೇಗೆ ಪಡೆಯುತ್ತಾರೋ ನೋಡಬೇಕು.



'ರಾಯಣ್ಣ'ನ ಸುತ್ತ ರಾಜಕೀಯ

ಕನ್ನಡ ಚಿತ್ರರಂಗದ ಅತ್ಯಂತ ಅದ್ದೂರಿ ಚಿತ್ರ ಎಂಬ ಹೆಗ್ಗಳಿಕೆಯ 'ಕ್ರಾಂತಿವೀರ ಸಂಗೊಳ್ಳಿ ರಾಯಣ್ಣ' ಚಿತ್ರ ಈಗ ವಿವಾದದಲ್ಲಿ ಸಿಲುಕಿಕೊಂಡಿದೆ. ನಾಗಣ್ಣ ನಿರ್ದೇಶನದ ಈ ಐತಿಹಾಸಿಕ ಚಿತ್ರಕ್ಕೆ ಸುಮಾರು 20 ಕೋಟಿಗಿಂತಲೂ ಹೆಚ್ಚು ಹಣವನ್ನು ನಿರ್ಮಾಪಕರು ಖರ್ಚು ಮಾಡಿದ್ದಾರೆ ಎನ್ನಲಾಗಿದೆ. ಈತನಕ ಈ ಚಿತ್ರದ ಬಗ್ಗೆ ಕರ್ನಾಟಕ ರಾಜ್ಯಾದ್ಯಂತ ಭಾರೀ ನಿರೀಕ್ಷೆ ಮತ್ತು ಕುತೂಹಲ ಕೂಡ ಇದ್ದದ್ದು ನಿಜ. ಆದರೆ ಈಗ ಸಂಗೊಳ್ಳಿ ರಾಯಣ್ಣನ ಅಭಿಮಾನಿಗಳು ಈ ಚಿತ್ರದ ಕಥೆಯ ಬಗ್ಗೆ ಮತ್ತು ಸಂಗೊಳ್ಳಿ ರಾಯಣ್ಣನನ್ನು ಚಿತ್ರಿಸಿದ ಬಗ್ಗೆ ತಮ್ಮ ಅಸಮಾಧಾನವನ್ನು ವ್ಯಕ್ತಪಡಿಸಿದ್ದಾರೆ.

ಅಂದಹಾಗೆ, ಸಂಗೊಳ್ಳಿ ರಾಯಣ್ಣನ ಅಭಿಮಾನಿಗಳು ಹೇಳಿರುವುದು ಇಷ್ಟು: "ನಿಜಜೀವನದಲ್ಲಿ ಸಂಗೊಳ್ಳಿ ರಾಯಣ್ಣ ಮದುವೆಯಾಗಿರಲಿಲ್ಲ, ಆದರೆ ಚಿತ್ರದಲ್ಲಿ ಸಂಗೊಳ್ಳಿ ರಾಯಣ್ಣನಿಗೆ ಮದುವೆ ಮಾಡಲಾಗಿದೆ. ಅಷ್ಟೇ ಅಲ್ಲ, ಸಂಗೊಳ್ಳಿ ರಾಯಣ್ಣ ಯಾವತ್ತೂ ಕುದುರೆಯೇರಿ ಯುದ್ಧ ಮಾಡಿದವರೇ ಅಲ್ಲ, ಆತ ಏನಿದ್ದರೂ ಗೆರಿಲ್ಲಾ ತಂತ್ರಗಾರಿಕೆಯ ಯುದ್ಧದಲ್ಲಿ ನೈಪುಣ್ಯ ಪಡೆದಿದ್ದರೇ ವಿನಃ ಈತರಹ ಯುದ್ಧ ಮಾಡಿದ ದಾಖಲೆಗಳಿಲ್ಲ, ಅಷ್ಟೇ ಅಲ್ಲ, ಸಂಗೊಳ್ಳಿ ರಾಯಣ್ಣ ಚಿತ್ರದಲ್ಲಿ ನಾಯಕಿ ಜೊತೆ ಕುಣಿದು ಕುಪ್ಪಳಿಸುವ ದೃಶ್ಯಗಳಿರುವುದು ಕೇಳಿಬಂದಿದೆ." ಈ ಎಲ್ಲ ಸಂಗತಿಗಳು ಚಿತ್ರದಲ್ಲಿ ಮೂಡಿಬಂದದ್ದು ನಿಜವೇ ಆದಲ್ಲಿ ಖಂಡಿತವಾಗಿಯೂ ಇದು ಸಂಗೊಳ್ಳಿ ರಾಯಣ್ಣರ ವ್ಯಕ್ತಿತ್ವಕ್ಕೆ ಅಪಮಾನ ಮಾಡಿದಂತೆ ಎಂದು ಅವರೆಲ್ಲ ಆರೋಪಿಸಿದ್ದಾರೆ.

ಸಾಧಾರಣವಾಗಿ ಒಂದು ಕಾದಂಬರಿ ಅಥವಾ ಕಥೆಯನ್ನು ಸಿನಿಮಾ ಮಾಡುವಾಗ ನಿರ್ದೇಶಕ ದೃಶ್ಯಮಾಧ್ಯಮಕ್ಕೆ ಹೊಂದುವಂತೆ ಕೆಲವು ಸ್ವಾತಂತ್ರ್ಯವನ್ನು ತೆಗೆದುಕೊಂಡು ಸಣ್ಣಪುಟ್ಟ ಬದಲಾವಣೆಯನ್ನು ಮಾಡುವುದು ಸಹಜ. ಆದರೆ ಐತಿಹಾಸಿಕ ಚಿತ್ರಗಳಲ್ಲೂ ಕೂಡ ಅದೇ ರೀತಿಯ ಸ್ವಾತಂತ್ರ್ಯ ನಿರ್ಮಾಪಕನಿಗೆ ಇರುತ್ತದೆಯೇ ಎಂಬುದೇ ಈಗ ಚರ್ಚೆಯ ವಿಷಯವಾಗಿದೆ. ಏಕೆಂದರೆ ಸಂಗೊಳ್ಳಿ ರಾಯಣ್ಣನ ಅಭಿಮಾನಿಗಳು ಎತ್ತಿರುವ ಪ್ರಶ್ನೆಗಳು ಮೇಲ್ನೋಟಕ್ಕೆ ಸರಿ ಎಂದು ಕಾಣಿಸುತ್ತದೆ. ಒಬ್ಬ ಐತಿಹಾಸಿಕ ನಾಯಕನನ್ನು ಕುರಿತು ಚಲನಚಿತ್ರವನ್ನು ನಿರ್ಮಿಸುವಾಗ ಖಂಡಿತವಾಗಿಯೂ ನಿರ್ಮಾಪಕ, ನಿರ್ದೇಶಕನಾದವರು ಸಾಕಷ್ಟು ಮುನ್ನೆಚ್ಚರಿಕೆಯನ್ನು ತೆಗೆದುಕೊಳ್ಳಲೇಬೇಕಾಗುತ್ತದೆ. ಏಕೆಂದರೆ ನಮ್ಮ ರಾಜ್ಯದ ಇತಿಹಾಸ, ಸಂಸ್ಕೃತಿಯನ್ನು ದೃಶ್ಯಮಾಧ್ಯಮದಲ್ಲಿ ತೋರಿಸಿದಾಗ ಜನಸಾಮಾನ್ಯರು ಅದನ್ನೇ ನಂಬುವ ಸಾಧ್ಯತೆಯೂ ಇದೆ. ಈ ಹಿನ್ನೆಲೆಯಲ್ಲಿ ಸಂಗೊಳ್ಳಿ ರಾಯಣ್ಣನ ಬಗ್ಗೆ ಹುಟ್ಟಿಕೊಂಡಿರುವ ಈ ವಾದ ನಿಜಕ್ಕೂ ಕುತೂಹಲಕಾರಿಯಾಗಿದೆ.

ಈ ಹಿಂದೆ ಶಿವರಾಜ್‌ಕುಮಾರ್ ಅಭಿನಯದ 'ಗಂಡುಗಲಿ ಕುಮಾರರಾಮ' ಚಿತ್ರವನ್ನು ಆರಂಭಿಸಿದಾಗಲೂ ಇಂತಹ ಸಣ್ಣಪುಟ್ಟ ವಿವಾದಗಳು ತಲೆದೋರಿದ್ದವು. ಚಿತ್ರ ಬಿಡುಗಡೆಯಾದ ನಂತರವಂತೂ 'ಕುಮಾರರಾಮ'ನನ್ನು ಚಿತ್ರಿಸಿದ ಬಗ್ಗೆ ಅನೇಕರು ತಮ್ಮ ಅಸಮಾಧಾನವನ್ನು ವ್ಯಕ್ತಪಡಿಸಿದ್ದರು. ಅದಕ್ಕಿಂತ ಮುಖ್ಯವಾಗಿ 'ವೀರಮದಕರಿ' ಎಂಬ ಚಿತ್ರವನ್ನು ಆರಂಭಿಸಿದಾಗ ಆ ಹೆಸರನ್ನಿಡುವ ಬಗ್ಗೆಯೇ ಖ್ಯಾತ ಲೇಖಕ ಬಿ.ಎಲ್.ವೇಣು ಮತ್ತು ಇನ್ನಿತರರು ತಮ್ಮ ತೀವ್ರವಾದ ಅಸಮಾಧಾನವನ್ನು ವ್ಯಕ್ತಪಡಿಸಿದ್ದರು. ಕಮರ್ಷಿಯಲ್ ಚಿತ್ರಗಳಿಗೆ ಐತಿಹಾಸಿಕ ವ್ಯಕ್ತಿಗಳ ಹೆಸರನ್ನಿಡುವುದರಿಂದ ಜನರನ್ನು ತಪ್ಪು ಹಾದಿಗೆ ಎಳೆದಂತಾಗುತ್ತದೆ.ಎಂಬುದು ಅವರ ವಾದವಾಗಿತ್ತು.

ಅಂತೂ-ಇಂತೂ ಇತ್ತೀಚೆಗೆ ಬಿಡುಗಡೆಗೆ ತಯಾರಾಗಿರುವ ಬಹುತೇಕ ಎಲ್ಲ ಕನ್ನಡ ಚಿತ್ರಗಳು ಒಂದಲ್ಲ ಒಂದು ವಿವಾದದಲ್ಲಿ ಸಿಲುಕಿಕೊಳ್ಳುತ್ತಿರುವುದೇ ಒಂದು ರೀತಿಯ ಆಶ್ಚರ್ಯ ಅನ್ನಿಸುತ್ತಿದೆ.

ಕೂಲಿಂಗ್ ಪೇಪರ್ ಇಲ್ಲದಕ್ಕೆ ಗರ

ವಾಹನಗಳಿಗೆ 'ಕೂಲಿಂಗ್ ಪೇಪರ್' ಅನ್ನು ಹಾಕಬಾರದೆಂಬ ಸುಪ್ರೀಂಕೋರ್ಟ್‌ನ ಆಜ್ಞೆಯಿಂದಾಗಿ ಅತ್ಯಂತ ಹೆಚ್ಚು ತೊಂದರೆಗೀಡಾಗಿರುವವರು ಯಾರು ಗೊತ್ತೇ? ನಮ್ಮ ತಾರಾಮಣಿಗಳು!

ಈ ಕೂಲಿಂಗ್ ಪೇಪರ್‌ಅನ್ನು ತೆಗೆದ ನಂತರ ನಾಯಕ-ನಾಯಕಿಯರು ಆರಾಮಾಗಿ ಕಾರಿನಲ್ಲಿ ಓಡಾಡಲು ಸಾಧ್ಯವಾಗುತ್ತಿಲ್ಲ, ಈಗಾಗಲೇ ಒಂದೆರಡು ಕಡೆಯಲ್ಲಿ ದರ್ಶನ್ ಅಭಿಮಾನಿಗಳು ಅವರು ಕಾರಿನಲ್ಲಿ ಹೋಗುತ್ತಿರುವುದನ್ನು ಗುರುತಿಸಿ ಅವರ ಕಾರನ್ನು ನಿಲ್ಲಿಸಿ ಅವರಿಗೆ ಹಾರ ಹಾಕಿ ತಮ್ಮ ಅಭಿಮಾನವನ್ನು ವ್ಯಕ್ತಪಡಿಸಿದ್ದಾರೆ. ಹಾಗೆಯೇ ಗೋಲ್ಡನ್ ಸ್ಟಾರ್ ಗಣೇಶ್ ಕೂಡ ಮೊನ್ನೆ ಅಭಿಮಾನಿಗಳ ಇಂತಹದ್ದೇ ಪ್ರೀತಿಗೆ ಪಾತ್ರರಾಗಿದ್ದಾರೆ. ಅವರು ಕಾರಿನಲ್ಲಿ ಪ್ರಯಾಣಿಸುತ್ತಿದ್ದಾಗ ಅವರನ್ನು ನೋಡಿದ ಅಭಿಮಾನಿಗಳು ಅವರು ಕಾರಿನಿಂದ ಇಳಿಯಲೇಬೇಕು ಎಂದು ಒತ್ತಾಯಿಸಿ ಅವರಿಗೆ ಶೇಕ್‌ಹ್ಯಾಂಡ್ ಮಾಡಿದ ನಂತರ ಕಳುಹಿಸಿದ್ದಾರೆ.



ಈ ಪ್ರಸಂಗಗಳು ನಡೆದಾಗ ಸಣ್ಣಮಟ್ಟದಲ್ಲಿ ಟ್ರಾಫಿಕ್ ಜಾಮ್ ಆಗಿದ್ದು ಕೂಡ ನಿಜ.

ನಾಯಕರ ಪರಿಸ್ಥಿತಿ ಹೀಗಾದರೆ ನಾಯಕಿಯರಿಗೆ ಇನ್ನೂ ದೊಡ್ಡ ತೊಂದರೆಯಾಗಿದೆ. ಸದ್ಯಕ್ಕೆ ಕನ್ನಡ ಚಿತ್ರರಂಗದಲ್ಲಿ ಹಾಟ್ ತಾರೆಯೆನಿಸಿರುವ ರಾಗಿಣಿ ಕೂಡ ಈ ಕೂಲಿಂಗ್ ಪೇಪರ್ ತೆಗೆದ ನಂತರ ಅಭಿಮಾನಿಗಳ ಹುಚ್ಚು ಪ್ರೀತಿಗೆ ಬಲಿಯಾಗಿದ್ದಾಳೆ. ಮೊನ್ನೆ ಈಕೆ ತನ್ನ ವಾಹನದಲ್ಲಿ ಸಾಗುತ್ತಿದ್ದಾಗ ಆಕೆಯನ್ನು ನೋಡಿದ ಅಭಿಮಾನಿಗಳು ಎರಡೂ ಬದಿಯಲ್ಲಿ ಬೈಕ್‌ಗಳಲ್ಲಿ ಆಕೆಯ ವಾಹನವನ್ನು ಹಿಂಬಾಲಿಸುತ್ತ ಹೋದರಂತೆ. ಇದರಿಂದ ಕಸಿವಿಸಿಗೊಂಡ ರಾಗಿಣಿಗೆ ಏನು ಮಾಡಬೇಕೆಂದು ತಿಳಿಯಲೇ ಇಲ್ಲವಂತೆ. ಆದರೂ ಸುಮಾರು ದೂರದತನಕ ಆಕೆಯ ವಾಹನದ ಎರಡೂ ಬದಿಯಲ್ಲಿ ಬೈಕ್‌ನಲ್ಲಿ ಬರುತ್ತಿದ್ದ ಪಡ್ಡೆ ಹುಡುಗರು ಒಂದು ರೀತಿಯಲ್ಲಿ ಆಕೆಯ ಸೆಕ್ಯೂರಿಟಿ ಜವಾನರಂತೆ ಕಾಣಿಸಿದರಂತೆ. ಕೊನೆಗೆ ಅವರಿಗೇ ಬೇಸರವಾಯಿತೋ ಏನೊ? ರಾಗಿಣಿಯನ್ನು ಅರ್ಧ ದಾರಿಗೇ ಬಿಟ್ಟು ಈ ಅಭಿಮಾನಿಗಳು ತಮ್ಮ ತಮ್ಮ ದಾರಿಯನ್ನು ಹಿಡಿದರಂತೆ.

ಇದು ತಾರೆಯರು ಎದುರಿಸುತ್ತಿರುವ ಸಣ್ಣಪುಟ್ಟ ಕಿರಿಕಿರಿಗಳಾದರೆ, ನಮ್ಮ ನಿರ್ದೇಶಕರು ಸುಪ್ರೀಂ ಕೋರ್ಟಿನ ಈ ಆಜ್ಞೆಯಿಂದ ಬಹಳ ಸಂತೋಷವಾಗಿದ್ದಾರೆ. ಏಕೆಂದರೆ ಸಾಧಾರಣವಾಗಿ ಶೂಟಿಂಗ್ ಸಂದರ್ಭದಲ್ಲಿ ನಾಯಕ-ನಾಯಕಿಯರು ಒಟ್ಟಿಗೆ ಯಾವುದಾದರೊಂದು ಕಾರಲ್ಲಿ ಕುಳಿತುಕೊಂಡು ಸರಸವಾಡುವುದು ಸಾಮಾನ್ಯ. ಇಂತಹ ಸಂದರ್ಭದಲ್ಲಿ ಅವರಿಬ್ಬರನ್ನು ಶಾಟ್‌ಗೆ ಕರೆಯುವ ಧೈರ್ಯ ನಿರ್ಮಾಪಕನಿಗಾಗಲಿ, ನಿರ್ದೇಶಕನಿಗಾಗಲಿ ಇರುವುದೇ ಇಲ್ಲ, ಹೀಗೆ ನಾಯಕ-ನಾಯಕಿಯರು ಕಾರಿನಲ್ಲಿ ಕುಳಿತು ಚಕ್ಕಂದವಾಡಿ ತಮಗೆ ಬೇಸರವೆನಿಸಿದ ನಂತರವೇ ಅವರಾಗಿಯೇ ಚಿತ್ರೀಕರಣಕ್ಕೆ ಹಾಜರಾಗುತ್ತಾರೆ. ಈಗ ಸುಪ್ರೀಂ ಕೋರ್ಟ್‌ನ ಕೃಪೆಯಿಂದಾಗಿ ಈ ನಾಯಕ-ನಾಯಕಿಯರ ಸರಸಸಲ್ಲಾಪ, ಚಕ್ಕಂದಗಳಿಗೆ ಫುಲ್‌ಸ್ಟಾಪ್ ಹಾಕಿದಂತಾಗಿದೆ.

- ಶೆಣೈ





PRINTER, PUBLISHER, PROPRIETOR AND EDITOR : GAURI LANKESH, No. 9, E.A.T.Street, Basavanagudi, Bangalore-4, Phone : 266764
Fax : 26604536, E-mail :lankesh70@rediffmail.com